ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 25th March 1969

The House met in the Assembly Chamber, Vidhana Soudha, Bangalore at Thirty Minutes past Eight of the Clock.

Mr. SPEAKER (SRI S. D. KOTHAVALE) in the Chair.

Budget Estimates for 1969-70—Demands for Grants

DEMAND No. 27

39. Miscellaneous, Social and Developmental Organisations

Smt. BASAVARAJESWARI (Deputy Minister for Social Welfare).—Sir, on the recommendation of the Governor, I beg to move :

> "That a sum not exceeding Rs. 7,26,57,000 be granted to the Government to defray the charges which will come in course of payment during the financial year for the period ending 31st day of March 1970, in respect of Miscellaneous, Social and Development Organisations."

Mr. SPEAKER.—Motion moved :

> "That a sum not exceeding Rs. 7,26,57,000 be granted to the Government to defray the charges which will come in course of payment during financial year for the period ending 31st day of March 1970, in respect of Miscellaneous, Social and Development Organisations."

The Demand is before the House for discussion. The debate has to be initiated by Sri Jayaprakash Narayan. Before he commences, I would like to say that 3 hours are allotted for this Demand. With great difficulty we could find time for this demand. Today we are again meeting at 1 P.M. Probably the hon. Minister will require one hour to reply. So there are two hours left for hon. Members to speak on the Demand. So the speeches may please be brief. The number of speakers may be regulated by the whips of both the sides of the House and particularly Harijan Members may be given chances to speak. Sri Jayaprakash Narayan will take 15 minutes only.

† ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರಸಿ).—ಸನ್ಮಾನ್ಯ ಅಧ್ಯಕ್ಷರೇ, ಧರಣಿ ಸತ್ಯಾಗ್ರಹದ ದಿನ ಆರಂಭವಾಗಬೇಕಾದಂಥ ಈ ಡಿಮ್ಯಾಂಡ್, ನತದೃಷ್ಟ ಜನಾಂಗದ ಉದ್ಧಾರಕ್ಕಾಗಿ ಏನು ಕಾರ್ಯಕ್ರಮ ನಡೆಯಬೇಕಾಗಿತ್ತೋ ಅದು ಅವತ್ತು ಆಗದೆ ಆ ಡಿಮ್ಯಾಂಡ್ ಈ ದಿವಸ ಪ್ರಾತಃಕಾಲ 10-15 ನಿಮಿಷಗಳಲ್ಲಿ ತಡವಾಗಿ ಮಂಡನೆಯಾಗಿದೆ. ಆದರೆ ಇದರಲ್ಲಿ ಯಾವ ಜನಾಂಗ ಇಡೀ ರಾಷ್ಟ್ರದ ಬೆನ್ನುಮೂಳೆಯಾಗಿದೆಯೋ, ಯಾವ ಒಂದು ಜನಾಂಗ ಇಡೀ ರಾಷ್ಟ್ರಕ್ಕೆ ಸಂಪನ್ಮೂಲಗಳನ್ನು ಉತ್ಪತ್ತಿ ಮಾಡುತ್ತದೋ, ಏನು ಈ ಸಮಾಜವಾದ ನೀತಿಯನ್ನು ಆಚರಿಸಿಕೊಂಡು ಈ ಕಾಂಗ್ರೆಸ್ ಸರಕಾರ ತನ್ನ ನೀತಿಯನ್ನು ಆಚರಣೆ ಮಾಡಿತ್ತೋ ಅಂತಹ ನೀತಿ ಈ ಡಿಮ್ಯಾಂಡಿನಲ್ಲಿ ಇಲ್ಲದೇ ಇರುವುದರಿಂದ ಇದನ್ನು ನಾನು ವಿರೋಧಿಸುತ್ತಾ, ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಮಾಡಲು ಪ್ರಾರಂಭಿಸುತ್ತೇನೆ.

ಸ್ವಾಮಿ, ಈ ಸಮಾಜ ಕಲ್ಯಾಣ ಇಲಾಖೆಯ ವಿಷಯವಾಗಿ ಹೇಳುತ್ತೇನೆ. ಇದಕ್ಕೆ ಇರತಕ್ಕಂಥ ಸಿಬ್ಬಂದಿವರ್ಗ, ಇಬ್ಬರು ಮಂತ್ರಿಗಳು, ಇದಕ್ಕೆ ಒಂದು ದೊಡ್ಡ ಇಲಾಖೆ ಅವಶ್ಯಕವಿದೆಯೋ ಎನ್ನುವ ಅಂಶವನ್ನು ಈ ದಿವಸ ನಾವು ಯೋಚನೆ ಮಾಡಬೇಕಾಗಿದೆ. 39. ಮಿಸಿಲೇನಿಯಸ್—ಸೋಷಿಯಲ್ ವೆಲ್‌ಫೇರ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್—ಇದರಲ್ಲಿ 7,26,57,000 ರೂಪಾಯಿಗಳನ್ನು ಕೇಳಿದ್ದಾರೆ. ಈ ಡಿಮ್ಯಾಂಡಿನಲ್ಲಿ ಕೇವಲ ಷೆಡ್ಯೂಲ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್ ಉದ್ಧಾರಕ್ಕಾಗಿ 1,79,20,000 ರೂಪಾಯಿಗಳನ್ನು ಮಾತ್ರ ಅಳವಡಿಸಿರತಕ್ಕಂಥಾದ್ದು. 40 ಲಕ್ಷ ಹರಿಜನರ ಹಾಗೂ ಗಿರಿಜನರ ಹಿತವನ್ನು ಕಾಪಾಡುವುದಕ್ಕಾಗಿ ಮತ್ತು ಸುಮಾರು ಸೇಕಡ 30 ರಷ್ಟು ಹಣವನ್ನು ರಾಜ್ಯದಲ್ಲಿ ಹಿಂದುಳಿದ ವರ್ಗದವರ ಹಿತವನ್ನು ಸಾಧಿಸುವುದಕ್ಕಾಗಿ ಇಟ್ಟಿದ್ದಾರೆ. ಆದರೆ ಈ ರಾಜ್ಯದ ಆದಾಯ ಖರ್ಚು ಯೋಚನೆ ಮಾಡಿದರೆ, 213 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಈ ರಾಜ್ಯ ಸರ್ಕಾರ ಹರಿಜನರ ಕಲ್ಯಾಣಕ್ಕಾಗಿ ಕೇವಲ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳನ್ನು ನಾನ್—ಪ್ಲಾನ್ ಸ್ಕೀಮಿನಲ್ಲಿಯೂ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಪ್ಲಾನ್ ಸ್ಕೀಮಿನಲ್ಲಿಯೂ ಖರ್ಚು ಮಾಡುವ ಇವರ ರೀತಿನೀತಿ ನೋಡಿದರೆ, ಈ ಸಮಾಜ ಕಲ್ಯಾಣ ಇಲಾಖೆಯನ್ನು ಇವರು ಕಡೆಗಣ್ಣಿನಲ್ಲಿ ಕಂಡಿದ್ದಾರೆ ಹರಿಜನ ಕಲ್ಯಾಣ ಸಮಸ್ಯೆಯೇ ರಾಷ್ಟ್ರದ ಕಲ್ಯಾಣ ಸಮಸ್ಯೆ ಎಂಬುದಾಗಿ ಹೇಳುತ್ತಿದ್ದ ಮಹಾತ್ಮ ಗಾಂಧಿಯವರ ಆದೇಶಗಳನ್ನು ಕಾರ್ಯಗತ ಮಾಡುವಲ್ಲಿ ಇವರು ಲೋಪ ಮಾಡಿದ್ದಾರೆ ಅದನ್ನು ಸರಿಪಡಿಸಬೇಕು.

ಇನ್ನೊಂದು ವಿಷಯ. ಹರಿಜನರ ಕಲ್ಯಾಣವೆಂಬುದು ಪರಿಶಿಷ್ಟವರ್ಗದವರ ಕಲ್ಯಾಣ ಯಾವುದೇ ಭಿಕ್ಷೆಯಲ್ಲ. ರಾಜ್ಯಾಂಗದ ನಿಯಮಾವಳಿಯ ಪ್ರಕಾರ ರಾಜ್ಯಾಂಗದ ಹಕ್ಕುಬಾಧ್ಯತೆಗಳ ವಿಶೇಷ ರಿಯಾಯಿತಿಗಳನ್ನು ಇವರಿಗೆ ಕೊಡದೇ ಹೋದರೆ, ರಾಜ್ಯಾಂಗಕ್ಕೇ ಅಪರಾಧ ಮಾಡಿದಂತಾಗುತ್ತದೆ. ಕಳೆದ 20 ವರ್ಷಗಳಿಂದಲೂ ಸರ್ಕಾರ ಇದನ್ನು ಐಚ್ಛಿಕ ಕರ್ತವ್ಯವಾಗಿ ಪರಿಗಣಿಸಿದೆಯೇ ಹೊರತು ಇದನ್ನು ಅಧಿಕೃತ ಕರ್ತವ್ಯವಾಗಿ ಪರಿಗಣಿಸಲಿಲ್ಲ. ಆದ್ದರಿಂದ ಈ ರಾಜ್ಯದ ಕಲ್ಯಾಣವಾಗಬೇಕಾದರೆ, ಈ ರಾಜ್ಯ ರಾಮರಾಜ್ಯವಾಗಬೇಕಾದರೆ ನಿರುದ್ಯೋಗಿ ಹಾಗೂ ಕೂಲಿಗಾರರ ಮತ್ತು ರೈತವರ್ಗದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕು. ಈ ಸರ್ಕಾರ ಹರಿಜನರ ಹಿತವನ್ನು ಸಾಧಿಸುವುದಕ್ಕೆ ಬದಲಾಗಿ ಅವರನ್ನು ಅಧೋಗತಿಗೆ ತರತಕ್ಕ ನೀತಿಯನ್ನು ಹಾಕಿಕೊಂಡಿದ್ದಾರೆಂದು ಇದರಲ್ಲಿ ಗೊತ್ತಾಗುತ್ತದೆ. ಮಾನ್ಯ ಅರ್ಥಮಂತ್ರಿಗಳು 39 ಪುಟಗಳುಳ್ಳ ತಮ್ಮ ಭಾಷಣವನ್ನು ಬಡ್ಜೆಟ್ ಭಾಷಣವಾಗಿ ಮಂಡಿಸಿದ್ದಾರೆ. ಆದರೆ ಒಂದು ವಾಕ್ಯವನ್ನಾದರೂ ಈ ಪರಿಶಿಷ್ಟವರ್ಗ ಹಾಗೂ ಈ ಪರಿಶಿಷ್ಟ ಜನಾಂಗಗಳ ಹಿತಕ್ಕಾಗಿ ಏನು ಮಾಡಿದ್ದಾರೆ, ಇನ್ನೂ ಏನು ಮಾಡಬೇಕಾಗಿದೆ, ಇವರ ಆರ್ಥಿಕ ಪರಿಸ್ಥಿತಿ ಹೇಗೆ, ಇವರ ವಿದ್ಯಾಭ್ಯಾಸ ಪರಿಸ್ಥಿತಿ ಹೇಗೆ ಎಂಬ ಬಗ್ಗೆ ಇವರು ಹೇಳಲಿಲ್ಲ. ನಾನು ಅದಕ್ಕಾಗಿ ಅತ್ಯಂತ ದುಃಖದಿಂದ ಹೇಳಬೇಕಾಗಿದೆ. ಈ ಮನೆಯಲ್ಲಿ 31 ಜನ ಸದಸ್ಯರು ಇದ್ದಾರೆ. ಹರಿಜನರ ಪೈಕಿ 29 ಜನರು ನಿಮ್ನವರ್ಗ, ಇಬ್ಬರು ನಿಮ್ನ ಪಂಗಡದವರು, ಕೌನ್ಸಿಲ್‌ನಲ್ಲಿ 5 ಜನ ಸದಸ್ಯರು, ಹೀಗೆ 35-36 ಜನರು ಇದ್ದಾರೆ. ಆ ದಿವಸ ಧರಣೀ ಸತ್ಯಾಗ್ರಹ ಮಾಡಿದ್ದಾರೆ 213 ಕೋಟಿ ರೂಪಾಯಿಗಳಲ್ಲಿ ಸುಮಾರು 8-10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಇವರ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ವಿದ್ಯಾಭ್ಯಾಸ ಪ್ರಗತಿಗೆ ವಿಶೇಷವಾದಂಥ ಯೋಜನೆಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರದ ಮಂತ್ರಿಮಂಡಲದಲ್ಲಿ ಶೇಕಡ 18 ರಷ್ಟು ನಿಮ್ನವರ್ಗದವರಿಗೆ ಕೊಡುವುದಕ್ಕೆ ಯೋಗ್ಯತೆ ಇಲ್ಲದೇ ಇರುವ ಈ ಜನ ನಿಜವಾಗಿ ಸರ್ಕಾರದ ಉದ್ಯಮಗಳಲ್ಲಿ ಹಾಗೂ ಸರ್ಕಾರದ ಕಾರ್ಖಾನೆಗಳಲ್ಲಿ

† Indicates that the speeches or remarks have not been revised by the member concerned.

ಸೇಕಡ 18 ರಷ್ಟು ಇವರಿಗಾಗಿ ಖರ್ಚು ಮಾಡುತ್ತಾರೆಯೋ ಎಂದು ನಾನು ಕೇಳಬೇಕಾಗಿದೆ. 1942ನೇ ಇಸವಿಯಲ್ಲಿ ವಿದ್ಯಾಭ್ಯಾಸ ಚಳುವಳಿ ಮೈಸೂರು ರಾಜ್ಯದಲ್ಲಿ ಮಾನ್ಯ ಶ್ರೀ ಸಿ. ಆರ್. ರೆಡ್ಡಿಯವರ ಕಾಲದಲ್ಲಿ ಆಯಿತು. ಆಗ ಅಷ್ಟಾಗಿ ವಿದ್ಯಾಭ್ಯಾಸ ಪ್ರಗತಿ ಆಗಲಿಲ್ಲ. ಈ ದಿವಸ ರಾಜ್ಯದಲ್ಲಿ ಸೇಕಡ 25·4ರಷ್ಟು ವಿದ್ಯಾಭ್ಯಾಸ ಪ್ರಗತಿಯಾಗಿದ್ದರೂ ಅದರಲ್ಲಿ ನಿಮ್ನವರ್ಗ ಮತ್ತು ನಿಮ್ನ ಪಂಗಡದವರ ವಿದ್ಯಾಪ್ರಗತಿ ಕೇವಲ ಸೇಕಡ ಐದರಷ್ಟು ಇದೆ. ಈ ತಾರತಮ್ಯವನ್ನು ಸರಿಪಡಿಸಬೇಕಾದರೆ, ರಾಜ್ಯದ ವಿದ್ಯಾಭ್ಯಾಸ ಪ್ರಮಾಣ ಹೆಚ್ಚಬೇಕಾದರೆ ದುರ್ಬಲ ವರ್ಗದವರಿಗೆ ವಿಶೇಷವಾದಂಥ ರೀತಿಯಲ್ಲಿ ಹೆಚ್ಚುಹೆಚ್ಚು ಬಾಲಮಂದಿರಗಳನ್ನು, ಮತ್ತು ಪ್ರೈಮರಿ ವಿದ್ಯಾಮಂದಿರಗಳನ್ನು ಸ್ಥಾಪನೆ ಮಾಡಬೇಕು. ವಿದ್ಯಾ ಇಲಾಖೆಯಲ್ಲಿ ಸುಮಾರು 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಇವರಿಗಾಗಿ 8-10 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆ ಏನೂ ಇಲ್ಲ. ಎಲ್ಲಿ ನೋಡಿದರೂ ಹರಿಜನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡುತ್ತೇವೆ ಎನ್ನುವ ರಾಜ್ಯದಲ್ಲಿದ್ದರೂ, 5ರಿಂದ 14ನೇ ವಯಸ್ಸಿನಲ್ಲಿರತಕ್ಕ ಅನೇಕ ಹೆಣ್ಣು ಮತ್ತು ಗಂಡು ಮಕ್ಕಳು ಇಂತಹ ಬರಗಾಲ ಪರಿಸ್ಥಿತಿಯಲ್ಲಿ ಬೀದಿ ಬಿಕಾರಿಗಳಾಗಿದ್ದಾರೆ. ಅಂತಹವರು ಈಗ ಸುಮಾರು 5 ಲಕ್ಷ ಮಕ್ಕಳು ಇದ್ದಾರೆ. ಅವರಿಗೆ ಸಾಕಷ್ಟು ವಿದ್ಯಾಭ್ಯಾಸವೇ ಇಲ್ಲ. ಅಂತಹವರ ಬಗ್ಗೆ ಸರ್ಕಾರ ವಿಶೇಷವಾದಂಥ ಯೋಜನೆ ಮಾಡಬೇಕು. ಗಾಂಧಿ ಶತಮಾನೋತ್ಸವ ಆಚರಿಸುವ ಕಾಲದಲ್ಲಿ 5 ವರ್ಷದಿಂದ 14 ವರ್ಷಗಳ ವಯಸ್ಸಿನೊಳಗೆ ಇರುವ ಎಲ್ಲಾ ಹೆಣ್ಣು ಮತ್ತು ಗಂಡು ಮಕ್ಕಳಿಗೋಸ್ಕರ ಬಾಲ ಮಂದಿರಗಳನ್ನೂ, ವಿಮೆನ್ ಮತ್ತು ಚೈಲ್ಡ್ ವೆಲ್‌ಫೇರ್ ಸೆಂಟರುಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ, ತಾಲ್ಲೂಕಿನಲ್ಲಿಯೂ ಕೇಂದ್ರ ಸಹಾಯದಿಂದ ಇನ್ನೂ ಹೆಚ್ಚು ಹೆಚ್ಚಾಗಿ ತೆಗೆದರೆ ವಿದ್ಯಾಭ್ಯಾಸ ಮಟ್ಟ ಹೆಚ್ಚಾಗುತ್ತದೆ. ಆ ರೀತಿ ಮಾಡಿದರೆ ನಿಜವಾಗಿಯೂ ಹರಿಜನ ಕಲ್ಯಾಣವಾಗುತ್ತದೆ. ಹೆಚ್ಚುಹೆಚ್ಚು ಫ್ರೀ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳನ್ನು ತೆರೆಯಬೇಕು. ವಿದ್ಯಾಶಾಲೆಗಳು ಇರುವ ಕಡೆ ವಿಮೆನ್ ವೆಲ್‌ಫೇರ್ ಸೆಂಟರುಗಳನ್ನು ಮತ್ತು ಬಾಲಮಂದಿರಗಳನ್ನು ತೆಗೆಯುವ ವ್ಯವಸ್ಥೆ ಮಾಡಬೇಕು. ಮತ್ತೊಂದು ವಿಷಯ. ಕಾಲೇಜು ವಿದ್ಯಾಭ್ಯಾಸದ ವಿಷಯದಲ್ಲಿ ಈ ಸರ್ಕಾರ ಸಂಪೂರ್ಣವಾಗಿ ಹರಿಜನ ಮತ್ತು ಗಿರಿಜನ ಕಲ್ಯಾಣವನ್ನು ಸಾಧನೆ ಮಾಡುತ್ತಾ ಇಲ್ಲ. 1942ನೇ ಇಸವಿಯಲ್ಲಿ ಕೇಂದ್ರ ಸರ್ಕಾರ ವಿದ್ಯಾರ್ಥಿ ವೇತನ ಹೊಸದಾಗಿ ನೀಡುವುದಕ್ಕೆ ಪ್ರಾರಂಭಿಸಿತು. ಡಾ. ಅಂಬೇಡ್ಕರ್ ಅವರ ಕಾಲದಲ್ಲಿ ಅಂದರೆ 1947ನೇ ಇಸವಿಯಲ್ಲಿ ಇಡೀ ಸಂಸ್ಥಾನಕ್ಕೆ ಅದು ಅನ್ವಯವಾಗಿತ್ತು. 27 ರೂಪಾಯಿಗಳನ್ನು ವಿದ್ಯಾರ್ಥಿವೇತನ ರೂಪದಲ್ಲಿಯೂ, 40 ರೂಪಾಯಿಗಳನ್ನು ಹಾಸ್ಟಲ್ ಚಾರ್ಜಸ್ ರೂಪದಲ್ಲಿ ಕೊಡುತ್ತಿದ್ದರು. ಈಗಲೂ ಅಷ್ಟೇ ಇದೆ. ಅದೇ ರೀತಿಯಲ್ಲಿ ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲ್ ವಿದ್ಯಾಭ್ಯಾಸ ಮಾಡುವ ನಿಮ್ನವರ್ಗ ಹಾಗೂ ನಿಮ್ನ ಪಂಗಡದವರಿಗೂ ಇತ್ತು. ಆದರೆ ಮಿಡಲ್ ಸ್ಕೂಲ್‌ನಲ್ಲಿ ಇತರರಿಗೆ 3 ರೂಪಾಯಿಗಳಿತ್ತು. ಹೈಸ್ಕೂಲಿನವರಿಗೆ 7½ ರೂಪಾಯಿಗಳಿತ್ತು. 1969ನೇ ಇಸವಿಯಲ್ಲಿ ನಾವು ಈಗ ಬಂದರೂ ಕೂಡ ಅದೇ ದರ ಇವೆ, ಹಾಸ್ಟಲಿಗೆ ಗ್ರಾಂಟು ಕೊಡುವ ರೀತಿಯಲ್ಲಿಯೂ ಹಾಗೆ ಇದೆ. ಸಮಾಜ ಕಲ್ಯಾಣ ಇಲಾಖೆಯವರು 30 ರೂಪಾಯಿಗಳ ಗ್ರಾಂಟು ಕೊಟ್ಟರೆ ವಿದ್ಯಾ ಇಲಾಖೆಯಲ್ಲಿ ಕೇವಲ 25 ರೂಪಾಯಿಗಳನ್ನು ಕೊಟ್ಟು ತಾರತಮ್ಯ ಮನೋಭಾವ ಮಾಡಿದ್ದಾರೆ. ಎಲ್ಲಿಯವರೆಗೆ ಹರಿಜನರ ವಿದ್ಯಾಭ್ಯಾಸ ಪ್ರಗತಿಯಾಗುವುದಿಲ್ಲವೋ ಅಲ್ಲಿಯವರೆಗೆ ಈ ರಾಜ್ಯವಾಗಲೀ, ಅಥವಾ ಈ ರಾಷ್ಟ್ರವಾಗಲೀ ಮುಂದುವರಿಯುವುದಿಲ್ಲ. ರಾಜ್ಯಾಂಗದಲ್ಲಿರುವ ಹಕ್ಕುಭಾಧ್ಯತೆ ಎಲ್ಲಿಯವರೆಗೂ ದೊರೆಯುವುದಿಲ್ಲವೋ ಅಲ್ಲಿಯವರೆಗೂ ಅವರ ಮಟ್ಟ ಅಧೋಗತಿಯಲ್ಲಿರುತ್ತದೆ. ಈಗ ಅವರಿಗೆ ಚೇತನ ಶಕ್ತಿ ಬಂದಿದೆ. ಒಂದಲ್ಲ, ಒಂದು ದಿವಸ ಈ ಮುಂದಗಾಮಿ ಸರ್ಕಾರವನ್ನು ಹೊರದೂಡಲು ಇವರ ಮೇಲೆ ಚಳುವಳಿ ಮಾಡುವ ಕಾಲ ಬರುತ್ತದೆ. ಆದ್ದರಿಂದ ಇವರು ಅದನ್ನು ಯೋಚನೆ ಮಾಡಬೇಕು. ಈ ದಿವಸ ಈ ಕಾಂಗ್ರೆಸ್ ಸರ್ಕಾರ ಹರಿಜನರಿಂದಲೇ ತನ್ನ ಬಲವನ್ನು ತೆಗೆದುಕೊಂಡಿದ್ದು. ಈಗ ಕೇವಲ 27 ಜನರು ಇದ್ದಾರೆ. ಮುಂದಿನ ಚುನಾವಣೆಯಲ್ಲಿ ವಿರೋಧಪಕ್ಷದ ನಾಯಕರಾಗುವ ಕಾಲ ಬರುತ್ತದೆ. ನೀವು ಮಾಡುವ ನೀತಿಯಲ್ಲಿ ನಿಜವಾಗಿ ಹರಿಜನರ ಪ್ರಗತಿಯಾಗುವ ನೀತಿಯನ್ನು ಮಾಡುತ್ತಾ ಇಲ್ಲ. ವಿದ್ಯಾಭ್ಯಾಸದ ವಿಷಯ ಇಷ್ಟಾಯಿತು.

ಇನ್ನು ಅಸ್ಪೃಶ್ಯತೆಯ ನಿವಾರಣೆಯ ವಿಷಯ. ಈ ರಾಷ್ಟ್ರಕ್ಕೆ ಮಹಾತ್ಮಗಾಂಧಿಯವರು ಒಂದು ಮಾತನ್ನು ಹೇಳಿದರು, ಅಸ್ಪೃಶ್ಯತೆಯನ್ನು ಅಳಿಯದಿದ್ದರೆ ಗಳಿಸಿದ ಸ್ವಾತಂತ್ರ್ಯ ಉಳಿಯುವುದಿಲ್ಲವೆಂದು. ನೀವು ಯಾವತ್ತಾದರೂ ನಿಜವಾಗಿ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಇದನ್ನು ಯೋಚನೆಮಾಡಿದ್ದೀರಾ ? ಈಗನಾದರೂ ಈ ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ಇದರ ಬಗ್ಗೆ ವಿಶೇಷವಾಗಿ ಯೋಚನೆಮಾಡಲು ಪ್ರಾರಂಭಿಸಿದ್ದಾರೆ. ಹಿಂದೆ ಸಭೆಗಳಲ್ಲಿ ಕಾನ್‌ಫರೆನ್ಸ್‌ಗಳಲ್ಲಿ, ಸಹಪಂಕ್ತಿ ಭೋಜನಗಳನ್ನು ಮಾಡುವಾಗ ಮತ್ತು ಇಂಟರ್ ಕ್ಯಾಸ್ಟ್ ಮ್ಯಾರೇಜಸ್ ಮಾಡಿಕೊಳ್ಳು

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ವಾಗ ಉತ್ತೇಜನವನ್ನು ಕೊಡುತ್ತಿದ್ದರು. ಯಾರು ಹಿಂದುಳಿದ ವರ್ಗದವರು ಇದ್ದಾರೆಯೋ ಅವರನ್ನು ಪತ್ರಿಕೋದ್ಯಮಿಗಳನ್ನಾಗಿ ಮಾಡಿ. ಅವರಿಗೆ ಇರತಕ್ಕ ಕುಂದುಕೊರತೆಗಳನ್ನೂ ರಾಜ್ಯ ಮತ್ತು ರಾಷ್ಟ್ರದ ಮಟ್ಟದಲ್ಲಿ ಪ್ರಕಟಣೆಮಾಡಿ ಅವರಿಗೆ ಉತ್ತೇಜನ ಕೊಡಬೇಕು. ಇನ್ನು ಗಾಂಧಿ ಶತಮಾನೋತ್ಸವ ಕಾಲದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಜನಗಳಿಗೆ ಇದನ್ನು ಪ್ರಚಾರ ಮೂಲಕ, ಪ್ರಕಟಣೆಗಳ ಮೂಲಕ, ಸಮ್ಮೇಳನಗಳ ಮೂಲಕ ಜಾರಿಗೆ ತರುವುದು ಒಳ್ಳೆಯದು. ಆದರೆ ನಮ್ಮ ಜನಾಂಗದವರ ವಿಶ್ವಾಸವನ್ನು ಗಳಿಸಿರತಕ್ಕ ಒಂದು ನೀತಿಯನ್ನು ನೀವು ತಡೆಗಟ್ಟು ವುದು ಅನ್ಯಾಯ. ಈ ವರ್ಷದಿಂದ ಮತ್ತೆ ಅದನ್ನು ಜಾರಿಗೆ ತರಬೇಕು. ಅದಕ್ಕಾಗಿ ಸಮ್ಮೇಳನ ಗಳನ್ನು, ಮತ್ತು ಪ್ರಚಾರಕರನ್ನು ನೇಮಿಸಬೇಕು. ಕೇವಲ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರುಗಳಿಂದ ಈ ಪ್ರಚಾರಕಾರ್ಯ ಎಂದೂ ನಡೆಯುವುದಿಲ್ಲ. ಇವರ ಸೋಷಿಯಲ್ ಅಂಡ್ ಇಕನಾಮಿಕ್ ಅಭಿವೃದ್ಧಿಯಾಗಬೇಕಾದರೆ, ಪ್ರತಿಯೊಂದು ಕಡೆಯಲ್ಲಿಯೂ ಹರಿಜನ ಸೇವಕ ಸಂಘ ಮತ್ತು ಭಾರತ ಸೇವಾ ಸಮಾಜ ಸಂಘಗಳು ಕೆಲಸಮಾಡುವಂತೆ ಮಾಡಬೇಕು. ಹಾಗೆಯೇ ನಮ್ಮ ದೇಶದಲ್ಲಿ ಮಹಾತ್ಮ ಗಾಂಧಿಯವರಿಂದ ನೇಮಕವಾದ ಅನೇಕ ಸಂಘಗಳು ಈಗ ಇವೆ. ಅಂಥ ಸಂಸ್ಥೆಗಳಿಗೆ ವಿಶೇಷವಾದ ಗ್ರಾಂಟನ್ನು ಕೊಡುತ್ತಿದ್ದರು, ಅದನ್ನು ಕೂಡ ನಿಲ್ಲಿಸಿ ಬಿಟ್ಟಿದ್ದಾರೆ. ಆದ್ದರಿಂದ ಅದನ್ನು ಕೂಡ ಕೊಟ್ಟು ಅವುಗಳ ಮೂಲಕ ಪ್ರಚಾರ ನಡೆಸಿ, ಅವರ ನೈತಿಕ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸುಧಾರಿಸುವಂತೆ ಮಾಡಬೇಕು. ಇವತ್ತು ಅಸ್ಪೃಶ್ಯತೆಯ ನಿವಾರಣೆ ಎಂಬುದು ಕೇವಲ ಪುಸ್ತಕದ ಬದನೇಕಾಯಿಯಾಗಿದೆ. ಪೋಲೀಸ್ ಇಲಾಖೆ ಅದಕ್ಕೆ ಗಮನವೇ ಕೊಡುತ್ತಾ ಇಲ್ಲ. ಇವತ್ತು ದೇವಸ್ಥಾನಗಳಿಗೆ, ಮನೆಗೆ, ಹೋಟೇಲಿಗೆ ಯಾರನ್ನೂ ಬಿಡುತ್ತಿಲ್ಲ. ಇದಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಇನ್ನೂ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮದ್ಯಪಾನ ವಿಚಾರದಲ್ಲಿ, ಮಹಾತ್ಮಾ ಗಾಂಧೀಜಿಯವರ ಶತಮಾನೋತ್ಸವದ ವರ್ಷದಲ್ಲಿ, ನೀವು ಮಾಡಿದಂತದ್ದು ದೊಡ್ಡ ಕೊಲೆ. ಹರಿಜನ ಗಿರಿಜನರ ಪ್ರಗತಿಯನ್ನು ಸಾಧಿಸುವುದಕ್ಕೆ ಇದು ಎಷ್ಟು ಮಟ್ಟಿಗೆ ಸಹಾಯಕವಾಗಿದೆ, ಎಂಬುದನ್ನು ನೋಡಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಮದ್ಯಪಾನವನ್ನು ಸಡಿಲಿಸಿ, ಹರಿಜನರ ಕೇರಿಯಲ್ಲಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದ ಹಾಗೆ, ಅವರ ಉದ್ಧಾರ ಆಗದ ಹಾಗೆ ಅವರು ಬೀದಿಯ ಭಿಕಾರಿಗಳಾಗುವ ಹಾಗೆ ಮಾಡಿದ್ದಾರೆ. ಈ ಮದ್ಯಪಾನ ನೀತಿಯನ್ನು ವಿರೋಧಮಾಡುವುದಲ್ಲದೆ, ಇದನ್ನು ಮಾರತಕ್ಕ ಅಂಗಡಿಗಳನ್ನು ಮೊದಲು 1970ರೊಳಗೆ ಸುಟ್ಟು ಹಾಕಿದರೆ, ನಿಮಗೆ ಬುದ್ಧಿ ಬರುತ್ತದೆ. ಇವತ್ತು ಈ ಹೆಂಡ ಮತ್ತು ಸಾರಾಯಿಗಳನ್ನು ಆರೋಗ್ಯ ಕೆಡತಕ್ಕ ರೀತಿಯಲ್ಲಿ ಮಾರುತ್ತಿದ್ದಾರೆ, ಬ್ರಾಂಡಿ ಮತ್ತು ಬೀರುಗಳನ್ನು ಪ್ಯಾಕ್ ಮಾಡಿ ಮಾರುವ ಹಾಗೆ ಮಾರುವುದಕ್ಕೆ ಏರ್ಪಾಟು ಮಾಡುತ್ತೇವೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಆಶ್ವಾಸನೆಯನ್ನು ಕೊಟ್ಟರು. ಹಾಗಿದ್ದರೆ ನಾಗರೀಕತೆಯ ಮಟ್ಟ ಬರುತ್ತದೆ. ಈಗ ಕೊಡತಕ್ಕ ರೀತಿಯಲ್ಲಿ ಆರೋಗ್ಯ ಕೆಡುತ್ತದೆ, ಮತ್ತು ಅದನ್ನು ತಡೆಗಟ್ಟಬೇಕು. ಇವತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ 7 ವರ್ಷದೊಳಗೆ ಇದನ್ನು ರದ್ದು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇವರು ರಾಜಕೀಯದಲ್ಲಿ ಆ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಹರಿಜನ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಗ್ರಾಂಟು ಕೊಟ್ಟು ಅನುಕೂಲ ಮಾಡಿಕೊಡಬೇಕು. ಇನ್ನು ಸರ್ಕಾರಿ ಉದ್ಯೋಗಗಳಲ್ಲಿ 20 ವರ್ಷವಾದರೂ ಇವರು ಒಂದು ದ್ರೋಹವನ್ನೇ ಮಾಡಿದ್ದಾರೆ. ಇವತ್ತು 15 ಪರ್‌ಸೆಂಟ್ ಕೂಡ ನೇಮಕ ಇಲ್ಲ. ಅದಕ್ಕೆ ಸರಿಯಾಗಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಅಳವಡಿಸಿಕೊಂಡಿಲ್ಲ; ಕಾನೂನು ಬದ್ಧವಾದ ಡೈರೆಕ್ಟ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿಲ್ಲ. 10 ಸಾವಿರ ಲೋಕಲ್ ಕ್ಯಾಂಡಿಡೇಟ್ಸ್ ನೇಮಕ ಮಾಡಿಕೊಂಡಿದ್ದಾರೆ. ಅದರಲ್ಲಿ 15 ಪರ್‌ಸೆಂಟ್ ಕೂಡ ಈ ಜನರು ಇಲ್ಲ. ಇಂಥ ದ್ರೋಹಗಳನ್ನು ಯೂನಿಟ್ ಆಫೀಸರ್ಸ್ ಮಾಡುತ್ತಿದ್ದಾರೆ. ಆದ್ದರಿಂದ ಪ್ರತಿ ಇಲಾಖೆಯಲ್ಲೂ ಶೇಕಡಾ 15 ರಷ್ಟಾದರೂ ಇವರಿಗೆ ನೇಮಕಾತಿಯನ್ನು ಕೊಡಬೇಕು. ನಿರುದ್ಯೋಗಿಗಳಾದ ಗ್ರಾಜ್ಯುಯೇಟ್ಸ್ ಡಿಪ್ಲೊಮಾ ಹೋಲ್ಡರ್ಸ್, ಎಸ್. ಎಸ್. ಎಲ್. ಸಿ. ಪಾಸಾಗಿರತಕ್ಕಂತವರು ಸಾವಿರಾರು ಜನರು ಇದ್ದಾರೆ. ಅವರೆಲ್ಲರಿಗೂ ಕೆಲಸವನ್ನು ಒದಗಿಸಕೊಡಬೇಕು. ರಾಜ್ಯಾಂಗ ಬದ್ಧವಾದ ಇವರ ನೀತಿ ಏನಿದೆ ಅದನ್ನು ಇವರು ಪಾಲನೆ ಮಾಡುತ್ತಾ ಇಲ್ಲ. ಸಬ್ ಇನ್‌ಸ್ಪೆಕ್ಟರ್ ನೇಮಕದಲ್ಲಿ 60 ರಲ್ಲಿ 5 ಜನರನ್ನು ತೆಗೆದುಕೊಳ್ಳುತ್ತಾರೆ. ಅದನ್ನು ಇವರು ಏಕೆ ಮಾಡಬೇಕು ? ಪಿ. ಎಸ್. ಸಿ. ಗೆ ಬೇರೆ ಎಲ್ಲಾ ರೆಫರ್ ಮಾಡಿದ ಹಾಗೆ ಇದನ್ನೂ ಅವರಿಗೆ ಏಕೆ ರೆಫರ್ ಮಾಡಬಾರದು ? ಮಾನ್ಯ ರಾಚಯ್ಯನವರು ಮಂತ್ರಿಮಂಡಲದಲ್ಲಿ ಇದ್ದರೂ ಇವರ ಹಿತವನ್ನು ಸಾಧಿಸು

ವುದಿಲ್ಲ ಏಕೆ ? ಜೊತೆಗೆ ರಾಮಕೃಷ್ಣ ಅವರೂ ಸೇರಿದ್ದಾರೆ. ಇವರಿಗೆ ಉದ್ಯೋಗದಲ್ಲಿ ಹಣಸಹಾಯದಲ್ಲಿ ಇಂಥ ನಿಮ್ನ ವರ್ಗದವರಿಗೆ ಸಹಾಯ ಮಾಡಲು ಶಕ್ತಿ ಇದೆ. ಆದರೆ ಮಾಡುತ್ತಾ ಇಲ್ಲ. ಏನೋ ಕಾಂಗ್ರೆಸ್‌ನವರ, ಮಾನ್ಯ ನಿಜಲಿಂಗಪ್ಪನವರ ವರಪ್ರಸಾದದಿಂದ ಜೀವನಮಾಡು ವುದಕ್ಕೆ ಮಂತ್ರಿಮಂಡಲಕ್ಕೆ ಬಂದಿದ್ದಾರೆ ಎಂದು ಕಾಣುತ್ತದೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಜೀವನ ಮಾಡುವುದಕ್ಕೆ ಮಂತ್ರಿ ಯಾಗಿ ಬಂದಿಲ್ಲ. ದೇವರು ಸಾಕಷ್ಟು ಕೊಟ್ಟಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಕೇವಲ ಒಂದೂವರೆ ಕೋಟಿಗೆ ಒಂದು ಇಲಾಖೆ ಎಂದರೆ ಏನು ? ಏಕೆ ಇದರ ಪ್ರಾಧಾನ್ಯತೆಯನ್ನು ರಕ್ಷಣೆ ಮಾಡಿಕೊಂಡಿಲ್ಲ ! ಮಾಡಿದ ತತ್ವವನ್ನು ಪಾಲನೆ ಮಾಡಿ, ಜನರ ಹಿತವನ್ನು ಸಾಧಿಸಬೇಕೆಂದು ಹೇಳುತ್ತೇನೆ. ನಮ್ಮ ರೆವೆನ್ಯೂ ಮಂತ್ರಿಯವರು, ಶಾಸನಬದ್ಧವಾಗಿ ಶೇಕಡಾ 50 ಭಾಗ ಜಮೀನನ್ನು ನಿಮ್ನವರ್ಗದವರಿಗೆ ಕೊಟ್ಟು ಬಿಡುತ್ತೇವೆ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಸೂಚನೆಕೊಟ್ಟಿದ್ದೇವೆಂದು ಹೇಳಿದರು. ಆದರೆ ಇವತ್ತಿನ ದಿವಸ ಇವರು ಅಂಕಿ ಅಂಶಗಳನ್ನು ತರಿಸಿದ್ದಾರೆಯೇ, ಆ ರೀತಿ ಕೊಟ್ಟಿದ್ದಾರೆಯೇ ಎಂದು ಕೇಳುತ್ತೇನೆ. ಆ ಕಾರ್ಯವನ್ನು ಇವರು ಪರಿಶೀಲನೆ ಮಾಡಬೇಕು. ಅದರಲ್ಲಿಯೂ ಅವರಿಗೆ ದ್ರೋಹ ಮಾಡಿದ್ದಾರೆ. ಅದನ್ನು ಎಲ್ಲೆಲ್ಲಿ ಕೊಡಬೇಕು, ಹಾಗೆ ಕೊಡುವುದಕ್ಕೆ ಕಡ್ಡಾಯವಾದ ಕಾನೂನನ್ನು ಜಾರಿಗೆ ತರಬೇಕು. ಸೆಂಟ್ರಲ್ ಸ್ಟ್ಯಾನ್ಡರ್ಡ್ ಸ್ಕೀಮ್ಸ್ ಏನಿತ್ತು, ಅದನ್ನು ರದ್ದು ಮಾಡಿದ್ದಾರೆ. ಅದನ್ನು ಪುನಃ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಈ ಒಂದು ಸ್ಕೀಮಿನೊಳಗೆ ಕೇವಲ 20 ಸಂಸಾರಗಳಿಗೆ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಹೆಚ್ಚು ಹೆಚ್ಚು ಜನರಿಗೆ ಸಹಾಯ ಮಾಡುವಂತೆ, ಕೋ ಆಪರೇಟಿವ್ ಸಂಸ್ಥೆಗಳನ್ನೂ, ಫಾರ್ಮಿಂಗ್ ಸೊಸೈಟಿಗಳನ್ನೂ ಸ್ಥಾಪನೆ ಮಾಡಬೇಕು. ಹಾಗೆ ಮಾಡಿ, ಅವರಿಗೆ ಉಳುಮೆ ಸಾಮಾನುಗಳನ್ನು ಹೆಚ್ಚು ಹೆಚ್ಚು ಕೊಡಬೇಕು. ಅದರೊಳಗೆ, ಹಿಂದುಳಿದವರ ರಿಹ್ಯಾಬಿಲಿಟೇಷನ್ ಮತ್ತು ಅಗ್ರಿಕಲ್ಚರಲ್ ಕಾಲೋನಿಯ ಲ್ಯಾಂಡ್‌ಲೆಸ್ ಲೇಬರ್‌ಗೆ ಒಂದು ಸ್ಕೀಮ್ ಇತ್ತು. ಅದಕ್ಕೆ ಹನ್ನೊರಡೂವರೆ ಕೋಟಿ ರೂಪಾಯಿ ಮೂರನೆ ಪ್ಲಾನಿನಲ್ಲಿ ಕೊಟ್ಟರೂ ಅದನ್ನು ಲ್ಯಾಪ್ಸ್ ಮಾಡಿದ್ದಾರೆ. ಅದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತರಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಹರಿಜನ ಹೆಣ್ಣುಮಕ್ಕಳ ವಿದ್ಯಾಭ್ಯಾಸ. ಇದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಪ್ರತಿ ಜಿಲ್ಲೆಗಳಲ್ಲೂ ಹಾಸ್ಟೆಲುಗಳನ್ನು ಮಾಡಬೇಕು ಮತ್ತು ಗಂಡು ಮಕ್ಕಳಿಗೆ 25 ರೂಪಾಯಿ ಕೊಟ್ಟರೆ, ಇವರಿಗೆ 55 ರೂಪಾಯಿ ಕೊಡಬೇಕು. ಅವರಿಗೆ ಎಲ್ಲಾ ವಿಧವಾದ ಸಲಕರಣೆಗಳನ್ನು ಕೊಟ್ಟು ಅನುಕೂಲವನ್ನು ಮಾಡಿಕೊಡಬೇಕು. If men are educated and if women are educated, the whole family will be educated.

9-00 A.M.

ಇನ್ನು ವಸತಿ ವಿಷಯದಲ್ಲಿ ಹೇಳುತ್ತೇನೆ. 1945 ನೇ ಸಾಲಿನಿಂದ ಹರಿಜನರಿಗಾಗಿ ಮನೆ ಗಳನ್ನು ಕಟ್ಟಿಸಿಕೊಡುವ ವಿಷಯದಲ್ಲಿ ಒಂದು ಯೋಜನೆ ಜಾರಿಗೆ ಬಂದಿದೆ. ಇದಕ್ಕಾಗಿ ಸರ್ಕಾರದ ವರು ಪ್ರತಿ ಜಿಲ್ಲೆಗೂ ಒಂದೂವರೆ ಲಕ್ಷದಿಂದ ಮೂರು ಲಕ್ಷ ರೂಪಾಯಿಗಳವರೆಗೆ ಗ್ರಾಂಟ್ ಕೊಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದವರು ಇದನ್ನೇ ದೊಡ್ಡದಾಗಿ ಮಾಡಿಕೊಂಡು ಹರಿಜನರ ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮನೆಗಳನ್ನು ಕಟ್ಟುವುದಕ್ಕಾಗಿ ಸರ್ಕಾರದವರು ಎಲ್. ಐ. ಸಿ. ಯಿಂದ ಮೂರೂವರೆ ಕೋಟಿ ರೂಪಾಯಿಗಳನ್ನು ತಂದಿದ್ದಾರೆ. ಈ ಬಗ್ಗೆ ಇರತಕ್ಕ 350 ಸೊಸೈಟಿಗಳಲ್ಲಿ 85 ಸೊಸೈಟಿಗಳು ಮಾತ್ರ ಕೆಲಸ ಮಾಡುತ್ತಿವೆ. ಉಳಿದ ಸೊಸೈಟಿಗಳು ಡಿಫಾಲ್ಟ್ ಆಗಿದೆ. ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಳ್ಳಲು 3 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಅವರು ಭಿಕ್ಷೆ ಎತ್ತತಕ್ಕ ಜನ. ಕೂಲಿ ಮಾಡತಕ್ಕ ಜನ. ಅವರು ಕಂತು ಕಟ್ಟಲು ದುಡ್ಡನ್ನು ಎಲ್ಲಿಂದ ತರಬೇಕು ? ಅವರಿಗೆ ತಿಂಗಳಿಗೆ 300 ರೂಪಾಯಿಗಳ ಕಂತನ್ನು ಕಟ್ಟುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಹರಿಜನರಿಗೆ ರಾಜ್ಯಾಂಗಬದ್ಧವಾದ ಕೆಲವು ಹಕ್ಕುಗಳು ಇವೆ ಎಂದು ಹೇಳುತ್ತೀರಿ, ಅದು ನಿಜ ಇದ್ದರೆ ಇವರ ಉದ್ಧಾರದ ಬಗ್ಗೆ ಸರಿಯಾದ ಯೋಜನೆಗಳನ್ನು ಹಾಕಿ ಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರತಿವರ್ಷ ಇಂತಿಷ್ಟು ಮನೆಗಳನ್ನು ಕಟ್ಟಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡರೆ ಇನ್ನು 10-15 ವರ್ಷಗಳಲ್ಲಿ 8 ಲಕ್ಷ ಮನೆಗಳನ್ನಾದರೂ ಕಟ್ಟಿಸಬಹುದು. ಈ ರೀತಿಯ ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಎಲ್ಲಿಯವರೆಗೆ ಹರಿಜನರಿಗಾಗಿ ಗೃಹನಿರ್ಮಾಣ ಕಾರ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಹರಿಜನರ ಏಳಿಗೆಯಾಗುವುದಿಲ್ಲ. ಇದಕ್ಕಾಗಿ ಇದುವರೆಗೆ ಮೂರೂವರೆ ಕೋಟಿ ರೂಪಾಯಿಗಳು ಖರ್ಚಾಗಿದೆ. ಇನ್ನೂ ಹಣ ಬೇಕೆಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದ ಹತ್ತಿರ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದವರು ಜಾಗ್ರತೆಯಾಗಿ ಮತ್ತೆ ಮೂರೂವರೆ ಕೋಟಿ ರೂಪಾಯಿಗಳನ್ನು ಈ ಬಾಬಿಗಾಗಿ ಕೊಟ್ಟು ಇನ್ನೂ ಹೆಚ್ಚಿನ ಮನೆಗಳನ್ನು ಕಟ್ಟಿಸಿಕೊಳ್ಳಲು ವ್ಯವಸ್ಥೆ ಮಾಡಬೇಕು. ಹರಿಜನರಿಗಾಗಿ ಎಲ್ಲಿಯವರೆಗೆ ಅನ್ನ, ಬಟ್ಟೆ, ಮತ್ತು ವಸತಿಯನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುವ ಶಕ್ತಿ ಈ ಸರ್ಕಾರಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ತಾವು ಸರ್ಕಾರದ ಪ್ರತಿನಿಧಿಗಳಾಗಲು ಅಥವಾ ಪ್ರಜಾ ಸರ್ಕಾರದ ಆಡಳಿತ ನಡೆಸಲು ಅರ್ಹರಾಗುವುದಿಲ್ಲ. ಈ ಮೂರು ಸಮಸ್ಯೆಗಳನ್ನು ಬಿಡಿಸುವುದಕ್ಕೆ ಅದರಲ್ಲೂ ನಿಮ್ಮ ವರ್ಗದವರ ಸಮಸ್ಯೆಗಳನ್ನು ಬಿಡಿಸುವುದಕ್ಕೆ ತಾವು ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ನಿಮ್ಮ ವರ್ಗದವರ ಅನುಕೂಲಕ್ಕೋಸ್ಕರ ವಿದ್ಯಾರ್ಥಿನಿಲಯಗಳನ್ನು ಸರ್ಕಾರದವರು ಕಟ್ಟಿಸಿದ್ದಾರೆ. ಈ ಕಟ್ಟಡಗಳನ್ನು ನೋಡಿದರೆ ದನದ ಕೊಟ್ಟಿಗೆಗಳಂತೆ ಇವೆ. ಯಾವ ವಿಧವಾದ ರಿಪೇರಿ ಕೆಲಸವನ್ನೂ ಸಹ ಮಾಡಿಸುತ್ತಿಲ್ಲ. ಈ ಕಟ್ಟಡಗಳ ರಿಪೇರಿ ಮಾಡಿಸಲು ಯಾವ ಒಂದು ಯೋಜನೆಯನ್ನೂ ಕೂಡ ಸಂಬಂಧಪಟ್ಟ ಇಲಾಖೆಯವರು ಹಾಕಿಕೊಂಡಿಲ್ಲ. ಇನ್ನು ಮುಂದೆಯಾದರೂ ಕೂಡ ಡೈರೆಕ್ಟರ್ ಆಫ್ ಕೊಲೇಜಿಯೇಟ್ ಎಜುಕೇಷನ್ ಅವರು ಈ ಕಟ್ಟಡಗಳ ರಿಪೇರಿ ಬಗ್ಗೆ ಒಂದು ವಿಶೇಷ ರೀತಿಯಿಂದ ಹಣವನ್ನು ಖರ್ಚು ಮಾಡಬೇಕು.

ನಿಮ್ಮ ವರ್ಗದವರ ಅನುಕೂಲಕ್ಕಾಗಿ ಲೈಬ್ರರಿಗಳನ್ನಾಗಲೀ, ರೀಡಿಂಗ್ ರೂಮ್‌ಗಳನ್ನಾಗಲೀ, ಫರ್ನಿಚರ್‌ಗಳನ್ನಾಗಲೀ ಅಥವಾ ಇನ್ನಾವುದೇ ಸೌಕರ್ಯಗಳನ್ನಾಗಲೀ ಸರ್ಕಾರದವರು ಒದಗಿಸಿಕೊಟ್ಟಿಲ್ಲ. ಈಗ ಇರುವ ರೀಡಿಂಗ್ ರೂಮ್‌ಗಳು ದನದ ಕೊಟ್ಟಿಗೆ ರೂಪದಲ್ಲಿ ಇವೆ. ಈ ರೀತಿ ಇದ್ದರೆ ಅವರು ಯಾವ ರೀತಿ ಮುಂದೆ ಬರಲು ಸಾಧ್ಯವಾಗುತ್ತದೆ ? ನಾನು ಈ ವಿಷಯವನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಅವರು ನಿಜವಾಗಿಯೂ ಬಹಳ ಕಷ್ಟ ಪಡುತ್ತಿದ್ದಾರೆ.

ಗಾಂಧಿ ಶತಾಬ್ದಿಯ ಸವಿನೆನಪಿಗಾಗಿ, ನೀವು ಹರಿಜನರ ಉದ್ಧಾರಕರಾಗಿದ್ದರೆ, ಈ ಕಾಂಗ್ರೆಸ್ ಸರ್ಕಾರ ನಿಜವಾಗಿಯೂ ಹರಿಜನರ ಹಿತವನ್ನು ಸಾಧಿಸಬೇಕೆಂದು ಇದ್ದರೆ ಈ ಅಸ್ಪೃಶ್ಯತಾ ನಿವಾರಣೆಗಾಗಿ ಒಂದು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರದವರು ತಯಾರು ಮಾಡಿ, ಡಾಕ್ಟರ್ ಕೆ. ವಿ. ಪುಟ್ಟಪ್ಪನವರು ಹೇಳಿರುವ ಹಾಗೆ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಕೊಡಬೇಕು, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕಮ್ಯೂನಿಟಿ ಸೆಂಟರ್ ಬಿಲ್ಡಿಂಗ್‌ಗಳನ್ನು ಗಾಂಧೀಜೀ ಅವರ ಹೆಸರಿನಲ್ಲಿ ತೆರೆಯಬೇಕು ಮತ್ತು ಬಾಲಮಂದಿರಗಳನ್ನು ಸಹ ತೆರೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಹರಿಜನರಿಗೆ ಬೇರೆ ಬಾವಿ ಇರಬೇಕೇ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹರಿಜನರಿಗಾಗಿಯೇ ಒಂದು ಪ್ರತ್ಯೇಕವಾದ ಬಾವಿ ಕಟ್ಟಿಸುವುದು ಅಥವಾ ಪ್ರತ್ಯೇಕವಾದ ಕಾಲೋನಿಗಳನ್ನು ತೆರೆಯುವುದು ರಾಜ್ಯಾಂಗ ಬದ್ಧವಾದುದಲ್ಲ. ಎಲ್ಲರೂ ಒಂದೇ ಬಾವಿಯ ನೀರನ್ನು ಉಪಯೋಗಿಸಬೇಕು. ಪ್ರತ್ಯೇಕ ಬಾವಿಗಳನ್ನು ನಿರ್ಮಾಣ ಮಾಡಿದರೆ ಅದು ಅಸ್ಪೃಶ್ಯತಾ ನಿವಾರಣೆಯಾಗುವುದಕ್ಕೆ ಮಾರ್ಗದರ್ಶಕವಾಗುವುದಿಲ್ಲ. ಆದ್ದರಿಂದ ಇವರನ್ನು ಯಾವಾಗಲೂ ಒಟ್ಟಿಗೆ ಸೇರಿಸಿಕೊಂಡು ಎಲ್ಲರೂ ಒಟ್ಟಾಗಿ ಬಾಳತಕ್ಕ ಮಾರ್ಗವನ್ನು ಸರ್ಕಾರದವರು ನಿರ್ಮಿಸಬೇಕು. ಇವತ್ತಿನ ದಿವಸ ಮಂತ್ರಿಮಂಡಲದಲ್ಲಿಯೂ ಕೂಡ ಇವರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ. ಇದೂ ಕೂಡ ಒಂದು ದ್ರೋಹ. ಸರ್ಕಾರೀ ಉದ್ಯೋಗಗಳಲ್ಲಿ ಇವರಿಗೆ 18 ಪರ್‌ಸೆಂಟ್ ಪಡೆಯಲು ಸ್ಥಾನಗಳನ್ನು ಕೊಡುತ್ತಿಲ್ಲ. ಇದೂ ಕೂಡ ಒಂದು ದ್ರೋಹ. ಪಾನ ನಿರೋಧವನ್ನು ಸಡಿಲಗೊಳಿಸಿರುವುದೂ ಕೂಡ ಒಂದು ದ್ರೋಹ.

ಶ್ರೀ ಬಿ. ರಾಚಯ್ಯ.—ದ್ರೋಹ ಎಂಬ ಪದ ಅನ್‌ಪಾರ್ಲಿಮೆಂಟರಿ ಪದವಾಗುತ್ತದೆ, ಅದನ್ನು ಮಾನ್ಯ ಸದಸ್ಯರು ವಾಪಸ್ ತೆಗೆದುಕೊಳ್ಳುವಂತೆ ಅಧ್ಯಕ್ಷರು ಹೇಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅದು ಅನ್‌ಪಾರ್ಲಿಮೆಂಟರಿ ಪದವಲ್ಲ. ಆ ಪದವನ್ನು ಹಿರಿಯ ಪಾರ್ಲಿಮೆಂಟ್ ಸದಸ್ಯರುಗಳೂ ಕೂಡ ಉಪಯೋಗ ಮಾಡಿದ್ದಾರೆ.

ಇನ್ನು ಪ್ರೀ ಮೆಟ್ರಿಕ್ ಸ್ಕಾಲರ್‌ಷಿಪ್‌ಗಳನ್ನು ಸಮಾಜ ಕಲ್ಯಾಣ ಇಲಾಖೆಯವರು ಮಾರ್ಚ್ 31ನೇ ತಾರೀಖಿನ ದಿವಸ ಕೊಡುತ್ತಿದ್ದಾರೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶಾಲೆ ಆರಂಭವಾದಾಗಲೇ ಈ ಹಣವನ್ನು ಹುಡುಗರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದವರು ಕೂಡ ಸ್ಕಾಲರ್‌ಷಿಪ್‌ಗಳನ್ನು ಕಳೆದ 20 ವರ್ಷಗಳಿಂದ ಒಂದೇ ರೀತಿಯಲ್ಲಿ ಕೊಡುತ್ತಿದ್ದಾರೆ. ಈ ಹಣವನ್ನು ಈಗ ಎರಡು ಪಟ್ಟು ಜಾಸ್ತಿ ಮಾಡಬೇಕು. ಸರ್ಕಾರಿ ಕಾರ್ಖಾನೆಗಳಲ್ಲಿಯೂ ಕೂಡ ನಿಮ್ನ ವರ್ಗದವರಿಗೆ ಮತ್ತು ನಿಮ್ನ ಪಂಗಡದವರಿಗೆ ಸೇಕಡ 18 ಪರ್‌ಸೆಂಟ್ ಉದ್ಯೋಗವನ್ನು ಕೊಡಬೇಕು. ಈಗ ಈ ಪದ್ಧತಿ ಜಾರಿಯಲ್ಲಿ ಇಲ್ಲ. ಅದನ್ನು ಸರ್ಕಾರದವರು ಕೂಡಲೇ ಕಾರ್ಯಗತ ಮಾಡಬೇಕು. ಸರ್ಕಾರದ ಪ್ರತಿಯೊಂದು ಕೈಗಾರಿಕೆಗಳಲ್ಲಿಯೂ ಕೂಡ ಇವರಿಗೆ ಮೀಸಲು ಸ್ಥಾನಗಳನ್ನು ಇಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಎಲ್ಲಕ್ಕೂ ಮಿಗಿಲಾಗಿ ರಾಜ್ಯದ ಲಿಟರಸಿ ಶೇಕಡ 25.4 ಇದೆ. ನಿಮ್ನ ಪಂಗಡದವರದ್ದು ಸೇಕಡ 5 ಮಾತ್ರ ಇದೆ. ಈ ಶೇಕಡ 5ನ್ನು 25ಕ್ಕೆ ಹೆಚ್ಚಿಸುವುದಕ್ಕೆ ಸರ್ಕಾರದವರು ವಿಶೇಷವಾದ ಯೋಜನೆಯನ್ನು ಕೈಗೊಳ್ಳಬೇಕು.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ತಾಲ್ಲೂಕ್ ಮಂಡಲಿಯ ಅಧ್ಯಕ್ಷರನ್ನು ಎಕ್ಸ್-ಅಫಿಷಿಯೋ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ. ಇದು ಕಾನೂನು ಬದ್ಧವಲ್ಲ. ಇದು ಕೋ ಆಪರೇಟಿವ್ ರೂಲ್ಸ್‌ಗೆ ವಿರುದ್ಧವಾಗುತ್ತದೆ. ಇದು ಏನಾದರೂ ಹೈಕೋರ್ಟಿಗೆ ಹೋದರೆ ಅವರು ಸರ್ಕಾರಕ್ಕೆ ಛೀಮಾರಿ ಮಾಡುತ್ತಾರೆ. ಆದ್ದರಿಂದ ಈಗಿನ ಕ್ರಮವನ್ನು ತೆಗೆದುಹಾಕಿ ಚುನಾಯಿತರಾದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ಚುನಾಯಿತರಾದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದರೆ ಒಂದು ಪಕ್ಷ ಹಣದ ದುರುಪಯೋಗವಾಗಬಹುದು ಎಂಬ ಭಾವನೆ ಸರ್ಕಾರಕ್ಕೆ ಇದ್ದರೆ ಅಫಿಷಿಯಲ್ ಸೆಕ್ರೆಟರಿ ಅವರನ್ನು ಅಲ್ಲಿ ಇಟ್ಟು ಸರಿಯಾದ ಆಡಳಿತ ನಡೆಯುವಂತೆ ಏರ್ಪಾಡು ಮಾಡಿ. ಇದರ ಜೊತೆಗೆ ಕಾರ್ಪೊರೇಷನ್ನಿಗೆ ಇನ್ನೂ 3–4 ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟು ಇನ್ನೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಮತ್ತು ಆ ಮೂಲಕ ಹರಿಜನರಿಗೆ ಹೆಚ್ಚಿನ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಹರಿಜನರಿಗೆ ಪಂಪ್‌ಸೆಟ್ಟುಗಳು ಸರಿಯಾಗಿ ಸಿಗುತ್ತಿಲ್ಲ. ಪಂಪ್ ಸೆಟ್ಟುಗಳನ್ನು ಕೊಂಡುಕೊಳ್ಳಲು ಹರಿಜನರಿಗೆ ಬ್ಯಾಂಕ್‌ಗಳು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈಗ ಯಾವ ರೀತಿ ಸಮಾಜಕಲ್ಯಾಣ ಇಲಾಖೆಯವರು ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳನ್ನು ಮಾಡುತ್ತಿದ್ದಾರೋ ಅದೇ ರೀತಿ ಯಾರಾದರೂ ಅರ್ಹತೆ ಪಡೆದಿರತಕ್ಕ ಹರಿಜನ ರೈತರು ಇದ್ದರೆ ಅವರಿಗೆ ಕೂಡಲೇ ಪಂಪ್‌ಸೆಟ್ಟುಗಳನ್ನು ಕೊಡತಕ್ಕ ಯೋಜನೆಯನ್ನು ಜಾರಿಗೆ ತರಬೇಕು. ಮತ್ತು ನೀರಾವರಿ ಬಾವಿಗಳನ್ನು ತೋಡಿಸಲು ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡಬೇಕು. ಮಹಾತ್ಮಗಾಂಧಿಯವರ ಹೆಸರಿನಲ್ಲಿ ಈ ರಾಜ್ಯದ ಆಡಳಿತವನ್ನು ನಡೆಸುತ್ತಿರುವ ಈ ಸರ್ಕಾರ ಹರಿಜನರ ಉದ್ಧಾರಕ್ಕಾಗಿ ಕಳೆದ 20 ವರ್ಷಗಳಿಂದ ಅನೇಕ ಪ್ರಗತಿಪರ ಕೆಲಸಗಳನ್ನು ಮಾಡಿದೆ. ಅದು ಇನ್ನೂ ಹೆಚ್ಚಾಗಬೇಕು. ಇಷ್ಟರವರೆಗೆ ಹರಿಜನರ ಉದ್ಧಾರಕ್ಕಾಗಿ ತೆಗೆದಿಡುತ್ತಿದ್ದ ಹಣ ಸರಿಯಾಗಿ ಖರ್ಚಾಗದೆ ಲ್ಯಾಪ್ಸ್ ಆಗುತ್ತಿತ್ತು. ಆದರೆ ಈ ವರ್ಷ ಆ ರೀತಿ ಲ್ಯಾಪ್ಸ್ ಆಗುವುದನ್ನು ತಡೆಗಟ್ಟಿದ್ದಾರೆಂದು ನನಗೆ ತಿಳಿದು ಬಂತು. ಸ್ಟೇಟ್ ಸೆಕ್ಟಾರ್‌ನಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹರಿಜನರಿಗಾಗಿ ತೆಗೆದಿಟ್ಟಿದ್ದ ಹಣದಲ್ಲಿ 27 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 13 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 37 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಅದೇ ರೀತಿ ಸೆಂಟ್ರಲ್ ಸೆಕ್ಟಾರ್‌ನಲ್ಲಿ ತೆಗೆದುಕೊಂಡರೆ, ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 33 ಲಕ್ಷ ರೂಪಾಯಿಗಳು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 9 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಈ ರೀತಿ ಪ್ರತಿವರ್ಷವೂ ಲಕ್ಷಗಟ್ಟಲೆ ಹಣ ಲ್ಯಾಪ್ಸ್ ಆಗುತ್ತಿದೆ. ಆದರೆ ಈ ವರ್ಷ ನಮ್ಮ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಉಪಮಂತ್ರಿಗಳಾದ ಶ್ರೀಮತಿ ಬಸವರಾಜೇಶ್ವರಿಯವರು ತಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆಸಿಕೊಂಡು ಮೀಟಿಂಗ್ ನಡೆಸಿ ಒಂದು ಕಾಸೂ ಕೂಡ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಸೂಚನೆ ಕೊಟ್ಟಿರುವುದರಿಂದ ಈ ವರ್ಷ ಎಲ್ಲಾ ದುಡ್ಡು ಖರ್ಚಾಗಿದೆ ಎಂದು ಕಂಡುಬಂದಿದೆ. ಈ ಇಲಾಖೆಗೆ 3–4 ಕೋಟಿ ರೂಪಾಯಿಗಳ ಖರ್ಚಿದೆ. ಇದು ಸಾಲದು. ಈ ಇಲಾಖೆಗೆ ಸರ್ಕಾರದವರು 6–7 ಕೋಟಿ ರೂಪಾಯಿಗಳನ್ನಾದರೂ ಕೂಡ ಒದಗಿಸುವ ಏರ್ಪಾಡು ಮಾಡಬೇಕು. ಈ ಮೂಲಕ ಹರಿಜನರ ಉದ್ಧಾರವಾಗುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು. ಮತ್ತು ಹರಿಜನರ ಹಿತರಕ್ಷಣೆ ಮಾಡಿ ಅವರ ಕಲ್ಯಾಣ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಸಾಧಿಸಬೇಕು. ಇವರಿಗೆ ರಾಜ್ಯಾಂಗ ಬದ್ಧವಾದ ಎಲ್ಲಾ ಹಕ್ಕುಗಳನ್ನು ಕೂಡ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಹರಿಜನರ ವಿಷಯದಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ವಹಿಸಿ ಅವರ ಉದ್ಧಾರಕ್ಕಾಗಿ ಇನ್ನೂ ಹೆಚ್ಚಿನ ಹಣವನ್ನು ಖರ್ಚುಮಾಡುವುದರ ಮೂಲಕ ಗಾಂಧೀಜೀಯ ಶತಾಬ್ದಿ ವರ್ಷವನ್ನು ಹರಿಜನರ ಉದ್ಧಾರಕ್ಕಾಗಿ ಉಪಯೋಗಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಚಂಪಾಬಾಯಿ ಭೋಗಾಳೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯಮುಂದೆ ಇಟ್ಟಿರತಕ್ಕ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೆಲವು ಸಲಹೆಗಳನ್ನು ಹೇಳಲು ಇಚ್ಛಿಸುತ್ತೇನೆ. ಕಾನ್‌ಸ್ಟಿಟ್ಯೂಷನ್ ಪ್ರಕಾರ ಹರಿಜನರನ್ನು ಉದ್ಧಾರಮಾಡುವ ಸಲುವಾಗಿ ಸರ್ಕಾರದವರು ಒಂದು ಪಟ್ಟಿಯನ್ನು ತಯಾರು ಮಾಡಿದ್ದಾರೆ. ಅದರಂತೆ ಸರ್ಕಾರದವರು ಹರಿಜನರಿಗೆ ಸವಲತ್ತುಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಈಗ ಸರ್ಕಾರದವರು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಏನು ಹಣವನ್ನು ಒದಗಿಸಿ ಯಾವರೀತಿ ಕೆಲಸಮಾಡುತ್ತಿದ್ದಾರೆಯೋ ಆ ಪ್ರಕಾರ ಅದು ಆಗುವುದಾದರೆ 100 ವರ್ಷ ಗಳು ಮುಗಿದರೂ, 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅಸ್ಪೃಶ್ಯತೆ ನಿವಾರಣೆಯಾಗುತ್ತದೆಯೇ ಎಂಬ ಸಂಶಯ ಬರುತ್ತದೆ. ಅದಕ್ಕೆ ಸಂಬಂಧಪಟ್ಟ ಯೋಜನೆಗಳು ಕುಂಠಿತವಾಗುತ್ತಿವೆ. ಮಹಾತ್ಮ ಗಾಂಧೀಜಿಯವರ ಆತ್ಮಕ್ಕೆ ಶಾಂತಿ ಸಿಕ್ಕದೆ ಕಳಂಕ ಬರುತ್ತಿದೆ. ಅದನ್ನು ಹೋಗಲಾಡಿಸುವುದಕ್ಕೆ ನಮ್ಮ ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದು ನಾನು ಕಳ ಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕಾಗಿದ್ದರೆ ಪ್ರತಿಯೊಂದು ಯೋಜನೆಯಲ್ಲಿಯೂ ಅದನ್ನು ಅಳವಡಿಸಿಕೊಂಡು ಕೆಲಸ ಮಾಡಿ ಈ ಅಸ್ಪೃಶ್ಯತೆ ಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು, ಮತ್ತು ಅದನ್ನು ಕಾರ್ಯಗತ ಮಾಡಬೇಕು ಎಂದು ನಾನು ಹೇಳುತ್ತೇನೆ. ಹರಿಜನರು ಹಿಂದುಳಿದವರು ಅವರು ಮುಂದುವರಿಯ ಬೇಕು, ಅವರಿಗೆ ಪ್ರೋತ್ಸಾಹವನ್ನು ಕೊಡಬೇಕು ಎಂದು ಹೇಳಿ ಅವರಿಗೆ ಸವಲತ್ತುಗಳನ್ನು ಸರ್ಕಾರದವರು ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಪ್ರತಿಯೊಂದು ಯೋಜನಾ ವೆಚ್ಚ ದಲ್ಲಿಯೂ ಹರಿಜನರಿಗೆ ಶೇಕಡಾ 15 ರಷ್ಟನ್ನು ಮೀಸಲಾಗಿಡಬೇಕು. 29 ಜನ ಮಂತ್ರಿಗಳೂ ಕೂಡ ಅಸ್ಪೃಶತೆಯನ್ನು ನಿವಾರಣೆ ಮಾಡಬೇಕು, ಹರಿಜನರ ಉದ್ಧಾರ ಮಾಡಬೇಕು ಎಂದು ಮನಸ್ಸು ಮಾಡಿದರೆ ಆಗ ಹರಿಜನರ ಉದ್ಧಾರವಾಗುತ್ತದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಹರಿಜನರ ಉದ್ಧಾರವಾಗಬೇಕಾದರೆ ಅವರಿಗೆ ಭೂಮಿಯನ್ನು ಕೊಡಬೇಕು ಎಂದು 1957 ನೇ ಇಸವಿಯಲ್ಲಿ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ. ಆದರೆ ಆ ಪ್ರಕಾರ ಹರಿಜನರಿಗೆ ಭೂಮಿಯನ್ನು ಕೊಡುತ್ತಿಲ್ಲ. ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ, ಹರಿಜನರಿಗೆ ಭೂಮಿಯನ್ನು ಕೊಡಬೇಕೆಂದು ಏನು ಕಾನೂನನ್ನು ಮಾಡಿದ್ದೀರಿ ಆ ಪ್ರಕಾರ ಅವರಿಗೆ ಜಮೀನನ್ನು ಕೊಡಬೇಕು; ಅವರನ್ನು ಉದ್ಧಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ನಮ್ಮ ಭಾಗದಲ್ಲಿ ಒಂದು ಯೋಜನೆಗೆ ಒಂದು ಲಕ್ಷ 30 ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಇದು ಸಂತೋಷದ ವಿಷಯ. ಆದರೆ ಇದರಲ್ಲಿ ಏನು ಸಂಶಯ ಬರುತ್ತದೆ ಎಂದರೆ ಅಲ್ಲಿ ಬರೀ ಒಂದು ನಕಲಿ ಕೆಲಸ ನಡೆಯುತ್ತಿದೆ. ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಯೋಜನೆಗೆ ಒಂದು ಲಕ್ಷ 30 ಸಾವಿರ ರೂಪಾಯಿಗಳನ್ನು ಏನೋ ಕೊಟ್ಟಿದ್ದಾರೆ. ಆದರೆ ಇದರಲ್ಲಿ ಎಲ್ಲಿ ದೋಷವಾಗುತ್ತಿದೆ ಎಂದರೆ ಆ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಅದರ ಸಿಬ್ಬಂದಿ ವರ್ಗದವರಿಗೇ ಶೇಕಡಾ 50 ರಷ್ಟು ಹಣ ಖರ್ಚಾಗುತ್ತದೆ. ಇನ್ನು 50 ಪರ್ಸೆಂಟ್ ಮಾತ್ರ ಯೋಜನೆಗಾಗಿ ಖರ್ಚಾಗುತ್ತದೆ. ಹೀಗಾದರೆ ಅಗ್ರಿಕಲ್‌ಚರಲ್ ಸೆಕ್ಟಾರ್ ಹೇಗೆ ಮುಂದುವರಿಯುತ್ತದೆ ?

ಇದೇರೀತಿ ಈಗ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಹರಿಜನರು ಮತ್ತು ಅನು ಸೂಚಿತ ಆದಿಮ ಜಾತಿಗಳ ಉದ್ಧಾರದ ಸಲುವಾಗಿ ಯೋಜನೆಗಳನ್ನು ಕಾರ್ಯಗತ ಮಾಡುವ ದೃಷ್ಟಿಯಿಂದ ಆ ಇಲಾಖೆಗೆ ಡೈರೆಕ್ಟರು, ಅಸಿಸ್ಟೆಂಟ್ ಡೈರೆಕ್ಟರು, ರಿಜಿಸ್ಟ್ರಾರರು ಮುಂತಾದ ಆಫೀಸರುಗಳನ್ನು ನೇಮಕ ಮಾಡಿದ್ದಾರೆ. ಅವರ ಸಲುವಾಗಿ ಇಂಥಾ ಯೋಜನೆಗಳನ್ನು ಮಾಡಿ ದರೆ ಹರಿಜನರ ಉದ್ಧಾರವಾಗುವುದಿಲ್ಲ. ಹರಿಜನರು ಮುಂದುವರಿಯಬೇಕಾದರೆ ಸರ್ಕಾರದವರು

ಹಾಕಿದಂತಹ ಯೋಜನೆಯನ್ನು ಕಾರ್ಯಗತ ಮಾಡುವಂಥಾ ವಿಶ್ವಾಸ ಆ ಅಧಿಕಾರಿಗಳಿಗೆ ಇಲ್ಲದೇ ಹೋದರೆ ನಿಜವಾಗಿಯೂ ಆ ಯೋಜನೆಗಳು ಯಶಸ್ವಿಯಾಗುವುದಿಲ್ಲ. ಹರಿಜನರ ಉದ್ಧಾರಕ್ಕಾಗಿ ಸರ್ಕಾರದವರು ಒದಗಿಸುವಂಥಾ ಹಣ ಯಾವರೀತಿಯಿಂದಲೂ ಲ್ಯಾಪ್ಸ್ ಆಗುವುದಕ್ಕೆ ಅವಕಾಶವನ್ನು ಕೊಡಕೂಡದು. ಎಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಮಾಡುವುದಕ್ಕೆ ಅವಕಾಶ ಇದೆ ಅಂಥಾ ಕಡೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಈ ಯೋಜನೆಗೆ ಕೊಟ್ಟಂಥಾ ಹಣ ಲ್ಯಾಪ್ಸ್ ಆಗದಹಾಗೆ ನೋಡಿಕೊಂಡರೆ ಅದರಿಂದ ಹರಿಜನರನ್ನು ಉದ್ಧಾರ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹರಿಜನರಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದರ ಸಲುವಾಗಿ ಇದಷ್ಟುಮಟ್ಟಿಗೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಒಂದೆರಡು ವಿಚಾರಗಳನ್ನು ನಾನು ಹೇಳುತ್ತೇನೆ. ಹರಿಜನರ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡುವುದರಿಂದ ಅವರ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಅದರ ಸಲುವಾಗಿ ಹರಿಜನರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡತಕ್ಕಂಥ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮಹಾತ್ಮ ಗಾಂಧಿಯವರ ಶತಾಬ್ದಿ ವರ್ಷವನ್ನು ಆಚರಿಸುವಂಥಾ ವರ್ಷದಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ 50 ಮಕ್ಕಳು ಇರತಕ್ಕಂಥ ಪ್ರತಿಯೊಂದು ಊರಿಗೂ ಹಾಸ್ಟಲನ್ನು ತೆರೆದು ಅವರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡುವುದಾದರೆ ಹರಿಜನರ ಉದ್ಧಾರವಾಗುತ್ತದೆ.

ನಮಗೆ ಸ್ವರಾಜ್ಯ ಬಂದು 22 ವರ್ಷಗಳಾಯಿತು. ಸರ್ಕಾರದವರು ಪ್ರತಿಯೊಂದು ಅಡ್ವರ್ಟೈಜ್‌ಮೆಂಟ್ ಕೊಡುವುದನ್ನು ರೇಡಿಯೋ ಮುಖಾಂತರ ಕೊಡುತ್ತಾರೆ, ಪತ್ರಿಕೆಗಳ ಮುಖಾಂತರ ಅಡ್ವರ್ಟೈಜ್‌ಮೆಂಟ್ ಕೊಡುತ್ತಾರೆ, ಆದರೆ ಹರಿಜನರಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಾಪಗ್ಯಾಂಡ ಮಾಡಲು ನಾಲ್ಕು ಜನಗಳನ್ನು ನೇಮಿಸಿ ಸರಿಯಾಗಿ ಪ್ರಚಾರ ಮಾಡಿದ್ದಾರೆಯೇ ? ಅದರ ಸಲುವಾಗಿ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಹರಿಜನರಿಗೆ ಸರ್ಕಾರದ ಕಡೆಯಿಂದ ಏನು ಸೌಲಭ್ಯ ಸಿಕ್ಕುತ್ತದೆ, ಏನು ಯೋಜನೆ ಮಾಡಿದ್ದಾರೆ, ಎನ್ನುವುದನ್ನು ಸರ್ಕಾರದವರು ಅಡ್ವರ್ಟೈಜ್ ಮಾಡಬೇಕು. ಗಾಂಧಿ ಶತಾಬ್ದಿಯನ್ನು ಆಚರಿಸತಕ್ಕ ವರ್ಷದಲ್ಲಿ ಹರಿಜನರಿಗೆ ಸಂಬಂಧಪಟ್ಟ ಪ್ರಾಪಗ್ಯಾಂಡ ಮಾಡಿ ಹರಿಜನರನ್ನು ಉದ್ಧಾರಮಾಡತಕ್ಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈ ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಮುಖ್ಯ ಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಸೆಕ್ರೆಟರಿಗಳು ಎಲ್ಲರೂ ಕೂಡಿಕೊಂಡು ಒಂದು ಯೋಜನೆಯನ್ನು ತಯಾರುಮಾಡಿ ಅದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇದರ ಬಗ್ಗೆ ಈಗ 10-12 ವರ್ಷಗಳಿಂದಲೂ ಅಸೆಂಬ್ಲಿಯಲ್ಲಿ ಹೇಳಿ ಹೇಳಿ ಸಾಕಾಯಿತು. 'ಆಡಿದ್ದೇ ಆಡೋ ಕಿಸುಬಾಯಿ ದಾಸ' ಎನ್ನುವ ಹಾಗಾಗಿದೆ. ಈ ರೀತಿ ಈ ವಿಚಾರದಲ್ಲಿ ಉದಾಸೀನ ಮಾಡುವುದಾದರೆ ನಿಜವಾಗಿಯೂ ಇದು ಬಹಳ ಅಧೋಗತಿಗೆ ಹೋಗುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಹರಿಜನರಿಗೆ ಸಂಬಂಧಪಟ್ಟ ಹಾಗೆ ಪ್ರತಿಯೊಂದೂ ಪ್ರಾಪಗ್ಯಾಂಡ ಮಾಡಬೇಕು. ಮತ್ತು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಒಂದು ಸ್ಪೆಷಲ್ ಯೋಜನೆ ಮಾಡಿ 19 ಜಿಲ್ಲೆಗಳಿಗೂ ಡೈರೆಕ್ಟರು ಮತ್ತು ಅಸಿಸ್ಟೆಂಟ್ ಡೈರೆಕ್ಟರುಗಳನ್ನು ಕಳುಹಿಸಿ, ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ಕಳುಹಿಸಿ ಅಸ್ಪೃಶ್ಯತಾ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅವಶ್ಯ ಬಿದ್ದರೆ ಸ್ಪೆಷಲ್ ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ನೇಮಕಮಾಡಿ ಆ ಕೆಲಸವನ್ನು ಮಾಡಿಸಬೇಕು. ಡೆವಲಪ್‌ಮೆಂಟ್ ಯೋಜನೆಯಲ್ಲಿ ಒಂದು ಸ್ಪೆಷಲ್ ಯೋಜನೆಯನ್ನು ಮಾಡಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಮಾಡುವುದಾದರೆ ಹರಿಜನರ ಉದ್ಧಾರ ಆದೀತು, ಆ ಜನಾಂಗ ಬೆಳೆದೀತು ಎಂದು ನಾನು ಹೇಳುತ್ತೇನೆ. ವಿರೋಧಪಕ್ಷದವರು ಸರ್ಕಾರದವರು ಹೇಳಿದ್ದಕ್ಕೆ ವೋಟು ಹಾಕುವುದಕ್ಕೆ ನೀವು ಇಲ್ಲಿ ಕುಳಿತುಕೊಂಡಿದ್ದೀರಿ ಎಂದು ನಮ್ಮನ್ನು ಕುರಿತು ಹೇಳಿದರು. ಅದು ಸರಿಯಲ್ಲ. ನಮ್ಮ ಹಿಂದೆ ಲಕ್ಷ ಜನ ಇದ್ದಾರೆ. ಲಕ್ಷ ಜನಗಳ ಪ್ರತಿನಿಧಿಯಾಗಿ ನಾವು ಇಲ್ಲಿಗೆ ಬಂದಿರುವಾಗ ಅವರ ಹಕ್ಕು ಬಾಧ್ಯತೆಗಳನ್ನು ಅವರ ಹಿತವನ್ನು ಕಾಪಾಡುವುದರ ಸಲುವಾಗಿ ನಾವು ಕೆಲಸಮಾಡುತ್ತಿದ್ದೇನೆ.

ತಾಲ್ಲೂಕು ಸೋಷಿಯಲ್ ವೆಲ್‌ಫೇರ್ ಆಫೀಸರು ಮತ್ತು ಸೋಷಿಯಲ್ ವೆಲ್‌ಫೇರ್ ಬೋರ್ಡು ಎಂದು ಬೇರೆ ಬೇರೆ ಏತಕ್ಕೆ ಮಾಡಬೇಕು? ಒಂದೇ ಸ್ಕೀಮನ್ನು ಏತಕ್ಕೆ ಮಾಡಬಾರದು ಎಂದು ಕೇಳುತ್ತೇನೆ. ಈ ಇಲಾಖೆಯಲ್ಲಿ ಜೀಪುಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಅನ್ಯಾಯ

(ಶ್ರೀಮತಿ ಚಂಪಾಬಾಯಿ ಭೋಗಾಳೆ)

ವಾಗಿ ಖರ್ಚುಮಾಡುತ್ತಿದ್ದಾರೆ. ಇಷ್ಟು ಖರ್ಚು ಮಾಡಿದರೂ ಕೂಡ ಹಳ್ಳಿಗಳ ಏಳಿಗೆಯಾಗಿಲ್ಲ. ಮತ್ತು ಹಳ್ಳಿಗಳ ಅಭಿವೃದ್ಧಿಗಾಗಿ ಒಂದು ಪೈಸೆಯನ್ನೂ ಸಹ ಖರ್ಚು ಮಾಡಿಲ್ಲ. ಈ ಇಲಾಖೆಯಿಂದ ಹರಿಜನರ ಉದ್ಧಾರಕ್ಕಾಗಿ ನಿಜವಾಗಿಯೂ ಕೂಡ ಒಂದು ಪೈಸೆಯನ್ನೂ ಸರಿಯಾಗಿ ಖರ್ಚು ಮಾಡಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಹರಿಜನರ ಉದ್ಧಾರಕ್ಕಾಗಿ ಇಟ್ಟಿರುವ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಖರ್ಚು ಮಾಡದೆ ಹಣವೆಲ್ಲಾ ಲ್ಯಾಪ್ಸ್ ಆಗುತ್ತಿದೆ. ಇನ್ನು ಮುಂದೆ ಈ ರೀತಿ ಲ್ಯಾಪ್ಸ್ ಆಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈ ರೀತಿ ಹಣ ಲ್ಯಾಪ್ಸ್ ಆದರೆ ಮಹಾತ್ಮಗಾಂಧಿಯವರಿಗೆ ಕಳಂಕ ತಂದಂತಾಗುತ್ತದೆ ಎಂದು ಹೇಳುತ್ತೇನೆ. ಆದಕಾರಣ ಹರಿಜನರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡುವುದು ಸರ್ಕಾರದ ಜವಾಬ್ದಾರಿ ಎಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ : ಹರಿಜನರಿಗಾಗಿ ಈ ಸಮಾಜ ಕಲ್ಯಾಣ ಇಲಾಖೆಯವರು ಕೆಲವೊಂದು ಹಾಸ್ಟಲ್‌ಗಳನ್ನು ಇಟ್ಟಿದ್ದಾರೆ. ಈ ಹಾಸ್ಟಲ್‌ನಲ್ಲಿರುವ ಇನ್‌ಸ್ಪೆಕ್ಟರ್ ಅವರು 25 ಹುಡುಗರು ಇದ್ದರೆ 35 ಜನ ಹುಡುಗರು ಇದ್ದಾರೆಂದು ಗ್ರಾಂಟ್ ತೆಗೆದುಕೊಂಡು ಹಣವನ್ನು ತಿಂದುಹಾಕುತ್ತಿದ್ದಾರೆ. ಗ್ರಾಂಟ್ ಕೊಡುವ ವಿಚಾರದಲ್ಲಿ ಜಿಲ್ಲಾಧಿಕಾರಿಯವರೇ ಚೇರ್‌ಮನ್ ಇದ್ದಾರೆ. ಡೆವಲಪ್‌ಮೆಂಟ್ ಆಫೀಸರ್ ಅವರೇ ಗ್ರಾಂಟ್ ಕೊಡುವವರಾಗಿದ್ದಾರೆ. 10 ರೂಪಾಯಿಗಳನ್ನು ಖರ್ಚು ಮಾಡಿದರೆ 20 ರೂಪಾಯಿಗಳ ಲೆಕ್ಕ ತೋರಿಸಿ ಉಳಿದ ಹಣವನ್ನು ಕಿಸೆಗೆ ಹಾಕಿಕೊಳ್ಳುತ್ತಿದ್ದಾರೆ. ಈ ರೀತಿಯಿಂದ ಹಣ ಮಾಯವಾಗುವುದನ್ನು ಸರ್ಕಾರದವರು ತಪ್ಪಿಸಬೇಕು. ಇದೇ ರೀತಿ ಮುಂದುವರೆದರೆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಮತ್ತು ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ನಡೆಯುವುದಿಲ್ಲವೆಂದು ಹೇಳುತ್ತೇನೆ. ಈ ಅನ್ಯಾಯ ತಡೆಗಟ್ಟಲು ಮಂತ್ರಿಗಳು ಆಗಾಗ್ಗೆ ಅಲ್ಲಿಗೆ ಭೇಟಿ ಕೊಟ್ಟು ತನಿಖೆ ಮಾಡಬೇಕು. ಇವತ್ತಿನದಿವಸ ಸರ್ಕಾರದವರು ನಡೆಸುತ್ತಿರುವ ಸಂಸ್ಥೆಗಳಿಗಿಂತ ಖಾಸಗಿಯವರು ನಡೆಸುತ್ತಿರುವ ಸಂಸ್ಥೆಗಳೇ ಚೆನ್ನಾಗಿ ನಡೆಯುತ್ತಿವೆ. ಖಾಸಗೀ ಸಂಸ್ಥೆಗಳು ನಡೆಸತಕ್ಕ ಹಾಸ್ಟೆಲುಗಳಲ್ಲಿರುವ ಹುಡುಗರಿಗೆ 20 ರೂಪಾಯಿ ಗ್ರಾಂಟ್ ಕೊಟ್ಟು ಸರ್ಕಾರೀ ಸಂಸ್ಥೆಗಳಲ್ಲಿರುವ ಹುಡುಗರಿಗೆ 30 ರೂಪಾಯಿ ಗ್ರಾಂಟು ಕೊಟ್ಟರೂ ಕೂಡ ಖಾಸಗಿಯವರೇ ಹಾಸ್ಟೆಲ್ಲುಗಳನ್ನು ಚೆನ್ನಾಗಿ ನಡೆಸುತ್ತಿದ್ದಾರೆ. ಖಾಸಗೀ ಸಂಸ್ಥೆಗಳ ಮೇಲೆ ಏನಾದರೂ ಸ್ವಲ್ಪ ಅಲಿಗೇಷನ್ ಬಂದರೆ ಸರ್ಕಾರದವರು ಆ ಸಂಸ್ಥೆಯನ್ನೇ ಮುಚ್ಚುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಇದು ಸರಿಯಲ್ಲ. ಇನ್ನು ಜನರಲ್ ಹಾಸ್ಟಲ್‌ಗಳಲ್ಲಿ ಶೇಕಡ 5 ರಂತೆ ಹರಿಜನರಿಗೆ ಸೀಟು ಕೊಡಬೇಕೆಂಬ ನಿಯಮವಿದೆ. ಆ ನಿಯಮದಂತೆ ಸೇರಿಸಿಕೊಳ್ಳುತ್ತಾರೆ. ಪರೀಕ್ಷೆ 4 ತಿಂಗಳು ಇದೆ ಎನ್ನುವಾಗ ಆ ಹುಡುಗರನ್ನು ಹೊರಕ್ಕೆ ಹಾಕುತ್ತಿದ್ದಾರೆ. ಇದರಿಂದ ಆ ಹುಡುಗರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಹರಿಜನ ವಿದ್ಯಾರ್ಥಿಗಳು ಇದ್ದಾರೆಂದು ಹಾಸ್ಟಲ್‌ನವರು ಸರ್ಕಾರದಿಂದ ಗ್ರಾಂಟ್ ತೆಗೆದುಕೊಂಡು ತಿಂದುಹಾಕುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ನಿಗಾವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕನ್‌ಸ್ಯೂಮರ್ ಹೋಲ್‌ಸೇಲ್ಸ್ ಸೊಸೈಟಿಗಳು ಇವೆ. ಇಲ್ಲಿ 100 ಕ್ಕೆ 15 ರಂತೆ ಹಿಂದುಳಿದವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ನಿಯಮವಿದ್ದರೂ ಕೂಡ ಅಲ್ಲಿಯವರು ತಮಗೆ ಬೇಕಾದ ತಮ್ಮ ಪಂಗಡದವರನ್ನೇ ತೆಗೆದುಕೊಳ್ಳುತ್ತಿದ್ದಾರೆ. ಈ ಕಾರಣದಿಂದ ಹರಿಜನರಿಗೆ ಸಿಗಬೇಕಾದ ಯಾವ ಸವಲತ್ತುಗಳೂ ಕೂಡ ಸಿಗುತ್ತಿಲ್ಲ. ಗೊಬ್ಬರ ಸಿಗುತ್ತಿಲ್ಲ ಎತ್ತುಗಳು ಸಿಗುತ್ತಿಲ್ಲ. ಹರಿಜನರಿಗೆ ಒಂದು ಪರ್‌ಸೆಂಟ್ ಕೂಡ ಸಹಾಯ ಸಿಗುತ್ತಿಲ್ಲ. ಆದಕಾರಣ ಸಮಾಜಕಲ್ಯಾಣ ಇಲಾಖೆಯವರು ಈ ಕಡೆಗೆ ಸ್ವಲ್ಪ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಯಾವ ಬ್ಯಾಂಕ್‌ಗಳಿಂದ, ಮತ್ತು ಕೋ-ಆಪರೇಟಿವ್ ಸೊಸೈಟಿಗಳಿಂದ ಎಷ್ಟೆಷ್ಟು ಹಣವನ್ನು ಕೊಡಿಸಿದ್ದೀರಿ ಎಂಬುದನ್ನು ಮಂತ್ರಿಗಳು ಹೇಳಬೇಕು. ಈ ರೀತಿಯಿಂದ ಹರಿಜನರನ್ನು ಕಡೆಗಣಿಸಬಾರದು. ಪ್ರತಿ ಇಲಾಖೆಯವರೂ ಕೂಡ ಮನಸ್ಸು ಮಾಡಿದರೆ ಈ ಹರಿಜನರ ಉದ್ಧಾರವಾಗುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ. ಹರಿಜನರ ಉದ್ಧಾರಕ್ಕಾಗಿ 27 ಸ್ಕೀಮ್‌ಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಎಲ್ಲವೂ ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಈ ಬಾಬಿಗಾಗಿ ಇಟ್ಟಿರುವ ಹಣವನ್ನು ಹೆಗ್ಗಣಗಳು ತಿನ್ನುವಂತೆ ಆಗುತ್ತದೆ. ಈ ರೀತಿ ಆಗದಂತೆ ಸರ್ಕಾರದವರು ನೋಡಿಕೊಂಡು ಎಲ್ಲಾ ಕೆಲಸಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ಮಾತನಾಡಿರತಕ್ಕಂಥ ಶ್ರೀಮಾನ್ ಜಯಪ್ರಕಾಶನಾರಾಯಣ್ ಅವರು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದೇ ರೀತಿ ಶ್ರೀಮತಿ ಚಂಪಾಬಾಯಿ ಭೋಗಳೆ ಅವರು ಸಹ ಚೆನ್ನಾಗಿ ಹೇಳಿದರು. ಅವರು ಹೇಳಿದ್ದು ಒಪ್ಪತಕ್ಕ ವಿಚಾರವಾಗಿದೆ. ನಮ್ಮ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಬಡ್ಜೆಟ್ ಮಂಡಿಸುವಾಗ ಅದರಲ್ಲಿ ಸರ್ಕಾರದ ವತಿಯಿಂದ ನಡೆಯುವ ಇಲಾಖೆಗಳ ಕಾರ್ಯವ್ಯಾಪ್ತಿಯ ಬಗ್ಗೆ ಮತ್ತು ಆಯಾ ಇಲಾಖೆಗಳಿಗೆ ಒದಗಿಸಿರುವ ಹಣ ಮುಂತಾದ ವಿವರಗಳನ್ನು ಕೊಟ್ಟಿದ್ದಾರೆ. ಈ ಬಡ್ಜೆಟ್ ಪುಸ್ತಕವನ್ನು ಬಹಳ ನಿಗಾ ಇಟ್ಟು ನೋಡಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಚಟುವಟಿಕೆಗಳು ಏನು, ಈ ಇಲಾಖೆಗಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದಾರೆ ಮತ್ತು ಸರ್ಕಾರದವರು ಈ ಇಲಾಖೆಯ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ ಎಂಬ ಬಗ್ಗೆ ಒಂದು ಚಕಾರ ಶಬ್ದವನ್ನೂ ಕೂಡ ಪ್ರಸ್ತಾಪವಮಾಡಿಲ್ಲ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಪ್ರಸ್ತಾಪ ಮಾಡಬೇಕೆಂದು ಕಾನೂನು ಇದೆಯೇನು ?

ಶ್ರೀ ಜಿ. ದುಗ್ಗಪ್ಪ.—ಕಾನೂನು ಇಲ್ಲ. ಈ ಜನಾಂಗದವರ ಬಗ್ಗೆ ಈ ಸರ್ಕಾರಕ್ಕೆ ಎಷ್ಟು ಅಭಿಮಾನ ಇದೆ ಮತ್ತು ಯಾರ ಉದ್ಧಾರಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೋ, ಅವರ ಬಗ್ಗೆ ಎಷ್ಟು ಅಭಿಮಾನ ಇದೆ ಎಂಬುದು ಇದರಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಬಡ್ಜೆಟ್‌ನ ಪುಟ 17ರಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಈ ರೀತಿ ಹೇಳಿದ್ದಾರೆ.

> "ನೃತ್ಯ, ನಾಟಕ, ಸಂಗೀತ ಅಕಾಡೆಮಿಯು ನಿರ್ವಹಿಸುತ್ತಿರುವ ಕೆಲಸ ಸ್ತುತ್ಯವಾಗಿದೆ. ಈ ಸಂಸ್ಥೆಗಳು ತಮ್ಮ ಕಾರ್ಯಕಲಾಪಗಳನ್ನು ಇನ್ನಷ್ಟು ವಿಸ್ತಾರವಾಗಿ ನಿರ್ವಹಿಸುವಂತಾಗಲು ಅವುಗಳ ಅನುದಾನವನ್ನು ರೂ. 2 ಲಕ್ಷದಷ್ಟು ಹೆಚ್ಚಿಸಿದೆ"

ಎಂಬುದಾಗಿ ಇವತ್ತು ಸರ್ಕಾರದವರು ದೊಡ್ಡ ದೊಡ್ಡ ಕಾಮಗಾರಿ ಕೆಲಸಗಳಿಗೆ ದುಡ್ಡಿಲ್ಲವೆಂದು ಹೇಳುತ್ತಾರೆ, ಪ್ರೈಮರಿ ಸ್ಕೂಲ್‌ಗಳ ಕಟ್ಟಡಕ್ಕೆ ದುಡ್ಡಿಲ್ಲವೆಂದು ಹೇಳುತ್ತಾರೆ, ಸಮಾಜ ಕಲ್ಯಾಣ ಇಲಾಖೆಗೆ ದುಡ್ಡಿಲ್ಲವೆಂದು ಹೇಳುತ್ತಾರೆ, ಮತ್ತು ಅತ್ಯವಶ್ಯಕವಾದಂಥ ಬೇಡಿಕೆಗಳಿಗೆ ದುಡ್ಡಿಲ್ಲವೆಂದು ಹೇಳುತ್ತಾರೆ. ಆದರೆ ನೃತ್ಯ, ನಾಟಕ ಮತ್ತು ಸಂಗೀತಕ್ಕೆ ಮೆಚ್ಚಿ 2 ಲಕ್ಷ ರೂಪಾಯಿಗಳನ್ನು ಹೆಚ್ಚು ಕೊಟ್ಟಿದ್ದಾರೆ. ಇದು ಸರ್ಕಾರದ ನೀತಿಯಾದರೆ ಈ ಸಮಾಜ ಕಲ್ಯಾಣ ಇಲಾಖೆಯ ಮೇಲನವರಾಗಲೀ ಅಥವಾ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಾಗಲೀ ಯಾವ ಕಾರಣದಿಂದ ಇಲ್ಲಿ ಭಾಷಣ ಮಾಡಬೇಕು ಮತ್ತು ಈ ಭಾಷಣದ ಪ್ರತಿಕ್ರಿಯೆ ಎಷ್ಟುಮಟ್ಟಿಗೆ ಸರ್ಕಾರದ ಮೇಲಾಗುತ್ತದೆ ಎಂಬುದನ್ನು ಯಾರು ಬೇಕಾದರೂ ಊಹಿಸಬಹುದು. ಈ ಒಂದು ಸರ್ಕಾರದ ನೀತಿ ಸಾಧುವಾದುದಲ್ಲವೆಂದು ನಾನು ಉದ್ದೇಶಪೂರ್ವಕವಾಗಿಯೇ ಒತ್ತಿ ಹೇಳುತ್ತೇನೆ. ಸರ್ಕಾರದವರು ಹೇಳುವುದು ಒಂದು ಕಾರ್ಯತಃ ಮಾಡುವುದು ಒಂದು ಆಗುತ್ತಿದೆ ಎಂದು ಹೇಳುತ್ತೇನೆ. ಹರಿಜನರ ಮತ್ತು ಹಿಂದುಳಿದವರ ಬಗ್ಗೆ ಅನೇಕ ಪ್ರಸ್ತಾಪಗಳು ಇವೆ. ಮುಖ್ಯವಾಗಿ ನಮ್ಮ ರಾಜ್ಯಾಂಗದಲ್ಲಿ ಇವರ ಬಗ್ಗೆ ಕೆಲವೊಂದು ಹಕ್ಕುಬಾಧ್ಯತೆಗಳಿವೆ. ಈ ರಾಜ್ಯಾಂಗದಲ್ಲಿ ಈ ಪರಿಶಿಷ್ಟ ವರ್ಗಕ್ಕೆ ಅಂದರೆ ಈ ನತದೃಷ್ಟ ವರ್ಗಕ್ಕೆ ಕೆಲವೊಂದು ಸವಲತ್ತುಗಳನ್ನು ಕೊಡಲಾಗಿದೆ. ಆ ಸವಲತ್ತುಗಳು ಸರಿಯಾಗಿ ಕಾರ್ಯಗತವಾಗುತ್ತಿವೆಯೋ ಇಲ್ಲವೇ ಎನ್ನುವುದನ್ನು ಸರಕಾರದಲ್ಲಿ ಅಧಿಕೃತವಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಮಂತ್ರಿಗಳು ನೋಡಿಕೊಳ್ಳಬೇಕು. ಮಂತ್ರಿಮಂಡಲದಲ್ಲಿರತಕ್ಕ ಪರಿಶಿಷ್ಟವರ್ಗದ ಪ್ರತಿನಿಧಿಗಳಾಗಿರುವ ಇಬ್ಬರು ನನ್ನ ಸ್ನೇಹಿತರು. ವೈಯಕ್ತಿಕವಾಗಿ ಈ ಮನೆಯ ಸದಸ್ಯರಾಗಿಲ್ಲದಿದ್ದರೆ ಅವರು ಇಂದು ಇಲ್ಲಿ ಮಂತ್ರಿಸ್ಥಾನದಲ್ಲೇ ಇರುತ್ತಿರಲಿಲ್ಲ. ಇನ್ನೊಂದು ಪ್ರಬಲವಾದ ಕಾರಣದಿಂದಲೂ ಇವರು ಇಲ್ಲಿದ್ದಾರೆ. ಇವರು ಪರಿಶಿಷ್ಟ ವರ್ಗದ ಪ್ರತಿನಿಧಿಗಳಾಗಿರುವುದರಿಂದ ಇವರಿಬ್ಬರೂ ಮಂತ್ರಿಗಳಾಗಿದ್ದಾರೆ. ಇವರು ಯಾವ ವರ್ಗದಿಂದ ಬಂದಿರುತ್ತಾರೋ ಅಂತಹ ವರ್ಗದ ಜನರನ್ನು ಮುಂದೆ ತರುವುದರಲ್ಲಿ ಒಂದು ದೊಡ್ಡ ತಪ್ಪು ಮಾಡಿದ್ದಾರೆ ಎಂದು ಹೇಳುವ ವಿಚಾರ ಅಲ್ಲ. ಇದನ್ನು ಸ್ವಲ್ಪ ನಿಧಾನವಾಗಿ ಯೋಚನೆ ಮಾಡಿ, ನಮ್ಮ ಮಂತ್ರಿಮಂಡಲ, ಬಹು ಮುಖ್ಯವಾದ ಎರಡು ಕೆಲಸಗಳನ್ನು ನಿರ್ವಯಿಸಬೇಕು.

(ಶ್ರೀ ಜಿ. ದುಗ್ಗಪ್ಪ)

9-30 A. M.

ಹರಿಜನರ ಅಭಿವೃದ್ಧಿ ಕಾರ್ಯಗಳಿಗಾಗಿ ಸರಕಾರದವರು ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿ ಅವರ ಕಲ್ಯಾಣಕ್ಕೋಸ್ಕರ ಕೋಟಿ ರೂಪಾಯಿಗಳು ಬೇಕೆಂದು ಕೇಳುವ ಆವಶ್ಯಕತೆ ಇಲ್ಲ. ಇವರನ್ನು ಸಾಮಾನ್ಯ ಪ್ರಜೆಯಂತೆ ನೋಡಿ ಅವರ ಅಭಿವೃದ್ಧಿಗಾಗಿ ಖರ್ಚು ಮಾಡಿದರೆ ಅವರಿಗೆ ಅದರಿಂದ ಸ್ವಲ್ಪ ಲಾಭವಾಗುತ್ತಿತ್ತು. ಅಷ್ಟುಮಟ್ಟಿನ ಖರ್ಚು ಮಾಡಿಲ್ಲ ಎಂದು ಹೇಳಲು ಎಷ್ಟೋ ಅಂಕಿ ಅಂಶಗಳಿವೆ. ವೈಯಕ್ತಿಕವಾಗಿ ಈ ವರ್ಗದವರ ಅಭಿವೃದ್ಧಿಗಾಗಿ 2, 5 ಅಥವಾ ಹತ್ತು ಕೋಟಿ ಖರ್ಚು ಮಾಡಬಹುದು, ಇದರಲ್ಲಿ ಒಂದು ಕೋಟಿಯಷ್ಟು ಹಣವನ್ನು ಕೋಆಪರೇಟೀವ್ ಸೊಸೈಟಿಗಾಗಿ ಖರ್ಚು ಮಾಡಬಹುದು. ಆದರೆ ಈ ಜನರ ಮಟ್ಟವನ್ನು ಸುಧಾರಿಸಲು ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಮಾಡಿದರೂ ಇದಕ್ಕೆ ಸರಿಯಾದ ಯೋಜನೆಯನ್ನು ಹಾಕಿಕೊಂಡಿಲ್ಲ. ಇದರಿಂದ ಈ ನತದೃಷ್ಟ ಜನರಿಗೆ ತಕ್ಕ ಪ್ರತಿಫಲ ದೊರಕಿದೆಯೋ ಎಂದು ನಾನು ಈ ಮಂತ್ರಿಗಳನ್ನು ಕೇಳುತ್ತೇನೆ. ನಾವು ಮಾಡತಕ್ಕ ಕೆಲಸದಿಂದ ಈ ನತದೃಷ್ಟ ಜನಕ್ಕೆ ಕಲ್ಯಾಣವಾಗಬೇಕು ಎಂದು, ಇತರ ಬಡ ಜನರನ್ನು ಯಾವ ರೀತಿ ಅಭಿವೃದ್ಧಿ ಮಾಡುತ್ತಿದ್ದಾರೆಯೋ ಅದೇ ರೀತಿ ಮಾಡಿದರೆ, ಇವರ ಅಭಿವೃದ್ಧಿ ಆಗುತ್ತದೆ. ಆದರೆ ಹರಿಜನರ ಕಲ್ಯಾಣಕ್ಕೋಸ್ಕರ ಪ್ರತ್ಯೇಕವಾಗಿ ಇಲಾಖೆ ಮಾಡಿ ಖರ್ಚು ಮಾಡುವ ಆವಶ್ಯಕತೆ ಇಲ್ಲ. ಉದಾಹರಣೆಯಾಗಿ ಹೇಳುವುದಾದರೆ, ಕುಡಿಯುವ ನೀರಿನ ಬಾವಿಗಾಗಿ ಹರಿಜನರಿಗೋಸ್ಕರ ಪ್ರತ್ಯೇಕವಾಗಿ ಹಣ ಕೇಳತಕ್ಕದ್ದು ತಪ್ಪು ಎಂದು ನನ್ನ ಭಾವನೆ. ಇದು ಸಲ್ಲದು, ಪ್ರತಿಯೊಬ್ಬರಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದು ಸರಕಾರದ ಕರ್ತವ್ಯ. ಇದರಲ್ಲಿ ಹರಿಜನರಿಗೆ, ಗಿರಿಜನರಿಗೆ ಎಂದು ಬೇರೆ ಯೋಜನೆಗಳು ಇರಬೇಕಾಗಿಲ್ಲ. ಕುಡಿಯುವ ನೀರನ್ನು ಕೊಡಲು ಬಾವಿಗಳನ್ನು ಮಾಡಿಸಿಕೊಡುವುದು ಸರಕಾರದ ಕರ್ತವ್ಯ. ಹರಿಜನರಿಗಾಗಿಯೇ ಬಾವಿಗಳನ್ನು ಪ್ರತ್ಯೇಕವಾಗಿ ಮಾಡಲು ದುಡ್ಡು ಕೊಡಬೇಂದು ಕೇಳುವುದು ಮೂರ್ಖತನ. ಇತರ ಸಾಮಾನ್ಯ ಪ್ರಜೆಯಂತೆಯೇ, ಅವರಿಗೂ ಹಣ ಕೊಡಬೇಕು. ಪ್ರತ್ಯೇಕವಾಗಿ ಅವರಿಗೆ ಹಣ ಕೇಳುವುದು ಸರಿಯಲ್ಲ. ಅವನಿಗಿರತಕ್ಕ ಪ್ರೈಮರಿ ನೆಸಸಿಟೀಸ್ ಆಫ್ ಲೈಫ್‌ಗೆ ಹಣ ಬೇಡಿ. ಯಾರ ಹೆಸರಿನಲ್ಲಿ ನೀವು ಮಂತ್ರಿಗಳಾಗಿ ಬಂದಿದ್ದರೋ ಅವರ ಉದ್ಧಾರಕ್ಕಾಗಿ ಕೆಲಸಗಳನ್ನು ಮಾಡಿ. ಇನ್ನೊಂದು ಐದು ವರ್ಷಕ್ಕೊಂದು ಸಾರಿ ಯೋಜನೆಗಳನ್ನು ಮಾಡುವಾಗ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಷೆಡ್ಯೂಲು ವರ್ಗದವರಿಗೆ ಅಭಿವೃದ್ಧಿ ಮಾಡುವಾಗ ಯಾವ ಯಾವ ಕೋಮುಗಳನ್ನು ಆ ವರ್ಗದಲ್ಲಿ ಸೇರಿಸಬೇಕು ಎನ್ನುವುದನ್ನು ಕೇಂದ್ರ ಸರಕಾರದವರು ರಾಜ್ಯ ಸರಕಾರದವರನ್ನು ಕೇಳುತ್ತಾರೆ. ಇವರ ಅಭಿಪ್ರಾಯ ಪಡೆದು ಇದನ್ನು ಪರಿಷ್ಕರಿಸುತ್ತಾರೆ. ನಮ್ಮ ರಾಜ್ಯ ಸರಕಾರದ ಅಭಿಪ್ರಾಯವನ್ನು ಕೂಡ ಕೇಂದ್ರ ಸರಕಾರ ತೆಗೆದುಕೊಂಡು ಒಂದು ಪಟ್ಟಿಯನ್ನು ಆಖೈರಾಗಿ ಮಾಡುತ್ತಾರೆ. ನನಗೆ ಗೊತ್ತಿರುವ ಮಟ್ಟಿಗೆ ನಮ್ಮ ಇಂಡಿಯಾ ದೇಶದ ಎಲ್ಲ ಸರಕಾರಗಳಲ್ಲೂ ಒಂದು ತತ್ವ ಏನಿರುತ್ತದೆ ಎಂದರೆ ಯಾರು ಈ ಅಸ್ಪೃಶ್ಯತೆ ಎಂಬ ಕಳಂಕದಿಂದ ತೊಂದರೆಗೆ ಈಡಾಗಿರುತ್ತಾರೋ ಅವರನ್ನು ಮಾತ್ರ ಈ ಪಟ್ಟಿಯಲ್ಲಿ ಸೇರಿಸಬೇಕು ಎಂಬ ತತ್ವವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆ ತತ್ವವನ್ನು ಒಪ್ಪಿಕೊಂಡು ಸರಕಾರ ಒಂದು ಪಟ್ಟಿ ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸುತ್ತದೆ. ಈ ಮಧ್ಯದಲ್ಲಿ ಯಾವುದೋ ರಾಜಕೀಯ ಕಾರಣದಿಂದ ಇಲ್ಲಿಯವರೆಗೆ ಅಸ್ಪೃಶ್ಯತೆ ಎಂಬ ಏನು ಒಂದು ಕಳಂಕವಿತ್ತೋ ಇದನ್ನು ಬಿಟ್ಟು ಬರೀ ಹಿಂದುಳಿದ ವರ್ಗಗಳವರನ್ನು ಮಾತ್ರ ಇದರಲ್ಲಿ ಸೇರಿಸಬೇಕು ಎಂದು ಕಳುಹಿಸಿದ್ದಾರೆ. ಎಂದು ಕೇಳುತ್ತೇನೆ. ಇದು ಸಾಧುವಾದ ನೀತಿಯಲ್ಲ. ಈ ದೇಶದಲ್ಲಿ ಎಲ್ಲರೂ ಒಂದೇ ರೀತಿಯ ನೀತಿಯನ್ನು ಅನುಸರಿಸಬೇಕು ಎಂದು ಇರುವಾಗ, ಇದರಲ್ಲಿ ಹಿಂದುಳಿದ ವರ್ಗದವರನ್ನು ಸೇರಿಸಬೇಕೆಂದು ಮಾಡಿದರೆ, ಒಂದು ಕೋಮಿನವರನ್ನು ಇನ್ನೊಂದು ಕೋಮಿನ ಮೇಲೆ ಎತ್ತಿ ಕಟ್ಟಿದಂತಾಗುವುದಲ್ಲದೆ, ಅವರಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಕೊಡುತ್ತದೆ. ಇಂತಹ ಕೆಲಸಗಳನ್ನು ಮಾಡಬೇಡಿ. ಇದು ಘಾತಕವಾದ ನೀತಿ. ಇತ್ತೀಚೆಗೆ ಪುನಃ ಇದನ್ನು ಪರಿಶೀಲನೆಗೆ ತೆಗದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಇದೂ ಸರಿಯಲ್ಲ. 1952ನೇ ಇಸವಿಯಿಂದ ನನ್ನ ಮಿತ್ರರಾಗಿರುವ ಶ್ರೀಮಾನ್ ರಾಚಯ್ಯನವರು ಇಂದು ಮಂತ್ರಿಗಳಾಗಿರಬಹುದು. ಆದರೆ ಅವರಿಗೆ ನಮ್ಮ ಜನಾಂಗದ ನೋವು ಏನಿದೆ ಎನ್ನುವುದು ಇವೊತ್ತು ಕಾಣದೆ ಇರಬಹುದು. ಅವರು ಈ ಜನಾಂಗದ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿರುವವರು ಎನ್ನುವುದನ್ನು ಅವರು ಮರೆಯಬಾರದು, ಮರೆತರೆ ನಿಮಗೆ ಮಾತ್ರ ಧಕ್ಕೆಯಾಗುವುದಿಲ್ಲ. ನಿಜವಾಗಿ ಯಾರ ಅಸ್ಪೃಶ್ಯತೆಯನ್ನು ದೂರ ಮಾಡಬೇಕೆಂದು ಇದ್ದೀರೋ ಅವರಿಗೆ ದ್ರೋಹ ಮಾಡಿದಂತಾಗುತ್ತದೆ. ನಾವು ರಾಜಕೀಯದಲ್ಲಿ ಅಸ್ಪೃಶ್ಯತೆಯನ್ನು ಅಳಿಸಿಹಾಕುತ್ತೇವೆ ಎಂದು ವಾದ

ಮಾಡುವವರೂ ಇದ್ದಾರೆ. ಇದರ ಬಗ್ಗೆ ಇಲ್ಲಿ ನಾನು 'ಸ್ಪ್ಯಾನ್' ಎನ್ನುವ ಪತ್ರಿಕೆಯಲ್ಲಿ ಒಬ್ಬರು ನೀಗ್ರೋ ಲೀಡರ್ ಏನು ಹೇಳಿದ್ದಾರೆ ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತೇನೆ.

> "We seek no just legal equality ; not just equality as right and theory ; but as a fact and as a result."

ಇಂತಹ ಒಬ್ಬ ನೀಗ್ರೋ ಮಹನೀಯ ಮಹಾನಾಯಕನಾಗಿರುವಾಗ ಹೇಳಿದಂತಹ ಮಾತುಗಳು ಎಲ್ಲರಿಗೂ ಮಾರ್ಗದರ್ಶನವಾಗಲಿ ಎಂದು ಹೇಳುತ್ತೇನೆ. ಇನ್ನು ಈ ಇಲಾಖೆಗಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. 1936 ನೇ ಇಸವಿಯಿಂದಲೂ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ಮತ್ತು ಇದರಿಂದ ಏನೇನು ಸಾಧಿಸಿದ್ದಾರೆ ಮತ್ತು ಯಾವುದಕ್ಕೋಸ್ಕರ ಖರ್ಚು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಇಲ್ಲಿ ವಿಚಾರ ಮಾಡಿದರೆ, ನಮ್ಮವರು ಇಬ್ಬರು ಮಂತ್ರಿಗಳಾಗಿದ್ದಾರೆ ಹಾಗೂ ಕೆಲವರು ಬೇರೆ ಮೆಂಬರುಗಳಾಗಿರಬಹುದು. ಇದರಿಂದ ಯಾವ ಪ್ರಗತಿಯನ್ನೂ ಸಾಧಿಸಿದಂತಾಗುವುದಿಲ್ಲ. ಬಡ ಪ್ರಜೆಗಳಿಗಾಗಿ ಕೋಟಿಗಟ್ಟಲೆ ಖರ್ಚು ಮಾಡುತ್ತಿರುವಾಗ ಬಂಗಿ ಕಾಲೋನಿಯಲ್ಲಿರುವ ಜನಗಳಿಗಾಗಿ ಸುಮಾರು ಹತ್ತು ವರ್ಷಗಳಿಂದ ಏನೂ ಮಾಡಿಲ್ಲ. ಅವರು ಈಗ್ಗೆ ಹತ್ತಿಪ್ಪತ್ತು ವರ್ಷಗಳಿಂದ ಹೇಗೆ ಇದ್ದಾರೋ ಇಂದೂ ಹಾಗೇ ಇದ್ದಾರೆ. ಇಲ್ಲಿರುವ ಎಷ್ಟೋ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಬಹುದಾಗಿತ್ತು. ಇದರಲ್ಲಿ ಎಷ್ಟು ಜನರಿಗೆ ಏನು ಸೌಕರ್ಯಗಳನ್ನು ಕೊಡಲಾಗಿದೆ ಮತ್ತು ಎಷ್ಟು ಮಕ್ಕಳು ವಿದ್ಯಾವಂತರಾಗಿದ್ದಾರೆ ಎಂದು ಹೇಳಲು ಯಾವುದಾದರೂ ಅಂಕಿ ಅಂಶಗಳಿವೆಯೇ ? ಇಂತಹ ಪ್ರಗತಿಯನ್ನು ಇಲ್ಲಿ ಸಾಧಿಸಿದ್ದರೆ ಅದನ್ನು ನಾನೂ ಒಪ್ಪಬಹುದು. ಇಂತಹ ಪರಿಶಿಷ್ಟ ವರ್ಗಗಳ ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟು ಅನುಕೂಲಮಾಡಲು ಏನಾದರೂ ಯೋಜನೆ ಮಾಡಿದ್ದೀರಾ ? ಇದನ್ನು ಮಾಡಲು ಯಾವುದಾದರೂ ಒಂದು ಯಾರ್ಡ್‌ಸ್ಟಿಕ್ ಅಂದರೆ ಒಂದು ಅಳತೆಯಕೋಲನ್ನು ಇಟ್ಟು ಕೊಂಡಿದ್ದಾರೆಯೇ ಎಂದು ಕೇಳಬೇಕಾಗಿದೆ.

ಇದು ಗಾಂಧಿ ಶತಾಬ್ದಿಯ ವರ್ಷ ಎಂದು ಎಲ್ಲ ದೇಶಗಳಲ್ಲಿಯೂ ಆಚರಿಸುತ್ತಿದ್ದಾರೆ. ಸರಕಾರದವರೂ ಇದಕ್ಕಾಗಿ ಹಣವನ್ನು ಖರ್ಚು ಮಾಡುತ್ತಾರೆಂದು ಕಾಣುತ್ತದೆ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳ ಪ್ಲಾನು ಹಾಗು ಎಸ್ಟಿಮೇಟುಗಳನ್ನು ಮಾಡುತ್ತಿದ್ದಾರೆ. ಇಂತಹ ಗಾಂಧಿಶತಮಾನೋತ್ಸವಗಳನ್ನು ಮಾಡುವಾಗ ಭಂಗೀ ಕಾಲೋನಿಗಳನ್ನು ಉತ್ತಮಪಡಿಸಲು ಇಲ್ಲಿರುವ ಜನಕ್ಕೆ ಮನೆಗಳನ್ನು ವಾಸಕ್ಕೆ ಕಟ್ಟಿಸಿಕೊಡಬಹುದು, ಗಾಂಧಿಯವರ ಬಗ್ಗೆ ಚಲನ ಚಿತ್ರಗಳನ್ನು ತೋರಿಸಬೇಕು ಎಂದು ಮಾಡುತ್ತಿದ್ದಾರೆ, ಗಾಂಧೀಜಿಯವರ ಬಗ್ಗೆ ಭಾಷಣಮಾಲೆ ಇತ್ಯಾದಿಗಳನ್ನು ಮಾಡಲು ಲಕ್ಷಾಂತರ ರೂಪಾಯಿಗಳನ್ನು ಸರಕಾರ ಖರ್ಚು ಮಾಡುತ್ತಿದ್ದಾರೆ. ನಾನು ಸರಕಾರವನ್ನು ಕೇಳುವುದು ಇವರು ಗಾಂಧೀಜಿಯವರ ಬಗ್ಗೆ ಬಹು ದೊಡ್ಡದಾಗಿ ಹೇಳುತ್ತಿರುವಾಗ ಗಾಂಧಿ ಕುಟೀರಗಳನ್ನು ಮಾಡಬೇಕೆಂದು ಇರುವ ಕುಟೀರಗಳನ್ನು ಭಂಗಿ ಕಾಲೋನಿಯಲ್ಲೂ ಮಾಡಲು ಏಕೆ ಪ್ರಯತ್ನ ಮಾಡಬಾರದು ? ವೈಯಕ್ತಿಕವಾಗಿ ನನಗೆ ಗೊತ್ತಿರುವಹಾಗೆ ನಮ್ಮ ದೇಶದಲ್ಲಿ ಗಾಂಧಿಯವರ ಬಗ್ಗೆ ಅವರು ಪ್ರವಾಸ ಮಾಡುವಾಗ ಭಂಗಿ ಕಾಲೋನಿಗಳಿಗೆ, ಸ್ವೀಪರುಗಳು ವಾಸ ಮಾಡತಕ್ಕ ಸ್ಥಳಗಳಿಗೆ ಭೇಟಿ ಕೊಡುತ್ತಿದ್ದರು. ಆ ನೆನಪಿಗಾಗಿಯಾದರೂ ಸಹ, ಮಹಾತ್ಮ ಗಾಂಧೀಜಿಯವರು ಯಾವ ಯಾವ ಸ್ಥಳಗಳಿಗೆ ಭೇಟಿ ಕೊಡುತ್ತಿದ್ದರೋ ಅಂಥ ಕಾಲೋನಿಗಳಲ್ಲಾದರೂ, ಪ್ರಾರ್ಥನಾ ಮಂದಿರಗಳನ್ನು, ಭಜನೆ ಮಂದಿರಗಳನ್ನು ಕಟ್ಟಿಸಿ ಗಾಂಧಿ ಸಾಹಿತ್ಯವನ್ನು ಅಲ್ಲಿ ಇಡಿ. ಹೊರಗಡೆಯಿಂದ ಭಾಷಣಕಾರರೆಲ್ಲ ಹೋಗಿ ಭಂಗಿ ಕಾಲೋನಿಯಲ್ಲಿ ಭಾಷಣ ಮಾಡಲಿ, ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ, ಗಾಂಧಿ ಹೆಸರಿನಲ್ಲಿ ಮಾಡತಕ್ಕ ಎಲ್ಲ ಕಾರ್ಯಕ್ರಮಗಳನ್ನೂ, ಭಂಗಿ ಕಾಲೋನಿಯಲ್ಲಿ ಮಾಡಿ. ಆದರೆ ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ, ದೇಶದ ಮೂಲೆ ಮೂಲೆಯಲ್ಲಿ ಎಲ್ಲಿಯೇ ಹೋಗಿ ನೋಡಲಿ ಆದಿಕರ್ನಾಟಕರು ಮತ್ತು ಭಂಗಿಗಳು ಎಲ್ಲಿದ್ದಾರೆ ಅವರ ಮನೆಗಳ ಪಕ್ಕದಲ್ಲಿ ಹೆಂಡದ ಅಂಗಡಿಗಳನ್ನು ತೆರೆದಿದ್ದಾರೆ. ನಾನು ಹೇಳುವುದು ಸರಿಯೋ ಅಲ್ಲವೋ ಎನ್ನುವುದಕ್ಕೆ ಒಂದು ರಿಪೋರ್ಟು ತರಿಸಲಿ. ಸರ್ಕಾರದ ಅಧಿಕೃತ ಪ್ರತಿನಿಧಿ ಯಾರಾದರೂ ನನ್ನ ಜೊತೆಯಲ್ಲಿ ಬರಲಿ, ನಾನು ತೋರಿಸತ್ತೇನೆ. ಬೆಂಗಳೂರು, ಮೈಸೂರು, ಎಲ್ಲಿ ಬೇಕಾದರೂ ಬನ್ನಿ, ಹೆಂಡದ ಅಂಗಡಿಗಳು ಎಲ್ಲಿವೆ ಎಂದು ತೋರಿಸುತ್ತೇನೆ. ಹರಿಜನರ ಇಬ್ಬರು ಪ್ರತಿನಿಧಿಗಳನ್ನು ಹೊಂದಿರತಕ್ಕ ಸರ್ಕಾರ ಯಾರ ಬೆಂಬಲವನ್ನು ಪಡೆದು ಸರ್ಕಾರ ನಡೆಸುತ್ತಿದೆ, ಅವರಿಗೋಸ್ಕರ ಸರ್ಕಾರ ಮಾಡಿಸತಕ್ಕ ಕಾರ್ಯಕ್ರಮವೇನೆಂದರೆ ಅವರ ಮನೆಗಳ ಪಕ್ಕದಲ್ಲಿ ಹೆಂಡದ ಅಂಗಡಿಗಳನ್ನು ತೆರೆಯುವುದು. ಒಬ್ಬ ಸಂಸಾರಿ ತಾನು ಬಹಳ ಅಮೂಲ್ಯವಾದ, ಬಹಳ ಪ್ರಿಯವಾದ ವಸ್ತುವನ್ನು ಅಥವಾ ಹಣ್ಣನ್ನು ತಂದಾಗ ಅದನ್ನು ಹೆಂಡತಿ ಮಕ್ಕಳಿಗೆ

(ಶ್ರೀ ಜಿ. ದುಗ್ಗಪ್ಪ)

ಸಮನಾಗಿ ಹಂಚಿ ತಿನ್ನತಕ್ಕದ್ದು ಪದ್ಧತಿ. ಹರಿಜನರಿಗೆ ಮತ್ತು ಭಂಗಿಗಳಿಗೆ ಬಹಳ ಆಪ್ಯಾಯಮಾನವಾದುದು ಹೆಂಡ. ಅದಕ್ಕಿಂತಲೂ ಆಪ್ಯಾಯಮಾನವಾದುದು ಅವರಿಗೆ ಯಾವುದು? ಅದನ್ನು ಅವನು ತನ್ನ ಹೆಂಡತಿ ಮಕ್ಕಳೊಡನೆ ಹಂಚಿಕೊಳ್ಳುವುದು ಸ್ವಾಭಾವಿಕ. ಅವನು ಹೆಂಡವನ್ನು ಕುಡಿದು, ಒಂದು ಬಾಟಲ್ ತೆಗೆದುಕೊಂಡು ಬಂದು ಮಕ್ಕಳಿಗೆ ಸ್ವಲ್ಪ ಕೊಡುವುದಲ್ಲದೆ ಹೆಂಡತಿಯನ್ನೂ ಕುಡಿಯಲು ಹೇಳುತ್ತಾನೆ. ಹೆಂಡತಿ ಏನಾದರೂ ಕುಡಿಯುವುದಿಲ್ಲವೆಂದರೆ ಅವಳಿಗೆ ಒದೆ ಬೀಳುತ್ತದೆ. ಇದರ ಅರ್ಥವೇನು? ತಾನು ಕೆಡುವುದಲ್ಲದೆ ಸರ್ಕಾರದ ನೀತಿಯಿಂದ ಈ ಪೀಳಿಗೆಯೇ ಹಿಂದೆ ಹೋದ ಹಾಗೆ ಆಯಿತು 20 ವರ್ಷಗಳಿಂದ ಏನು ಪ್ರಗತಿಯನ್ನು ಸಾಧಿಸಿದ್ದೆವು ಅದು 20 ವರ್ಷಗಳ ಹಿಂದಕ್ಕೆ ಹೋದ ಹಾಗೆ ಆಯಿತು. ಈ ನೀತಿ ಸಾಧುವಾದುದಲ್ಲ, ಇದನ್ನು ಸರ್ಕಾರದವರು ಪುನರ್ವಿಮರ್ಶೆ ಮಾಡಲೇ ಬೇಕು.

ಹರಿಜನ ಗಿರಿಜನರ ನಿಜವಾದ ಪ್ರಗತಿಯಾಗಬೇಕಾದರೆ ಏನು ಮಾಡಬೇಕು ಎಂದರೆ ಅವರಿಗೆ ಹೆಂಡ, ಗಳ, ಮನೆಗೆ ಕೊಡತಕ್ಕ ಸಾಲ, ಗ್ರಾಂಟ್ ವಗೈರೆಯನ್ನು ದಯವಿಟ್ಟು ನಿಲ್ಲಿಸಿ. ಇದರಿಂದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ. ಇದಲ್ಲದೆ ಇನ್ನೂ ಏನೇನು ಯೋಜನೆಗಳಿವೆಯೋ ಅವುಗಳನ್ನೆಲ್ಲ ದಯವಿಟ್ಟು ನಿಲ್ಲಿಸಿ. ಈ ಜನರ ವಿದ್ಯಾಭಿವೃದ್ಧಿಗಾಗಿ, ಅವರ ಪ್ರಗತಿಗಾಗಿ ಹಣವನ್ನೆಲ್ಲ ಮೀಸಲು ಮಾಡಿ, ಹಾಸ್ಟಲುಗಳನ್ನು ತೆರೆಯಿರಿ, ಸ್ಕಾಲರ್‌ಷಿಪ್‌ಗಳನ್ನು ಕೊಡಿರಿ, ಈ ವರ್ಗದ ಪ್ರತಿಯೊಬ್ಬ ವಿದ್ಯಾರ್ಥಿಯೂ 'ಸಹ ನಾನು ಕಲಿಯುವುದಕ್ಕೆ ಒಂದು ಪಾಠಶಾಲೆಗೆ ಹೋದರೆ ಸರ್ಕಾರದಿಂದ ನನಗೆ ನೆರವು ದೊರೆಯುತ್ತದೆ' ಎನ್ನತಕ್ಕ ಭಾವನೆ ಬರಬೇಕು. ಇಂಥ ಒಂದು ಪದ್ಧತಿಯನ್ನು ಜಾರಿಗೆ ತಂದು, ಈ ವರ್ಗಕ್ಕೆ ಸೇರಿದ ಯಾವ ವಿದ್ಯಾರ್ಥಿಯೇ, ಆಗಲಿ ಪಾಠಶಾಲೆಗೆ ಹೋದರೆ ಸರ್ಕಾರದಿಂದ ನೆರವು ದೊರೆಯುತ್ತದೆ ಎನ್ನುವ ಭಾವನೆ ಇದ್ದರೆ ಸಾಕು, ಇನ್ನು ಯಾವುದೂ ಬೇಡ. ನಿಮ್ಮ ಎಲ್ಲ ವಿಶಿಷ್ಟ ಯೋಜನೆಗಳೂ ಬಂದ ಹಾಗೆ ಆಯಿತು. ಅವರಿಗೆ ಕಣ್ಣು ಇಲ್ಲ. ಕತ್ತಲಿನಲ್ಲಿ ಒಬ್ಬ ಕುರುಡನನ್ನು ಕಳಿಸುವ ಬದಲು ಅವನಿಗೆ ಕಣ್ಣು ಬರುವಂತೆ ಮಾಡಿ, ಅವನು ಕಣ್ಣು ತೆರೆಯುವಂಥ ವಿದ್ಯೆಯನ್ನು ಕೊಡಿ, ಅದಕ್ಕೆ ಹೆಚ್ಚು ಸಹಾಯ ಮಾಡಿ, ಅಂಥ ಯೋಜನೆಗಳನ್ನು ಮಾಡಿ. ಈವೊತ್ತು ಹಾಸ್ಟಲುಗಳನ್ನು ನಡೆಸುವವರು ಅನೇಕ ಜನ ಪತ್ರ ಬರೆದಿದ್ದಾರೆ. ಸರ್ಕಾರದವರು ನಡೆಸತಕ್ಕ ಹಾಸ್ಟಲುಗಳಲ್ಲಿ ಒಬ್ಬರಿಗೆ 30 ರೂಪಾಯಿ ಪ್ರಕಾರ ಊಟ ವಗೈರೆಗಳಿಗೆ ಕೊಡುತ್ತಾರೆ. ಅದೇ ಬೇರೆ ಸಂಘ ಸಂಸ್ಥೆಗಳು ನಡೆಸತಕ್ಕ ಹಾಸ್ಟಲುಗಳಿಗೆ 25 ರೂಪಾಯಿ ಪ್ರಕಾರ ಕೊಡುತ್ತಾರೆ. ಅಲ್ಲಿನ ಹುಡುಗರು ಬೇರೆ, ಇಲ್ಲಿನ ಹುಡುಗರು ಬೇರೆಯೇ? ಸರ್ಕಾರದ ವತಿಯಿಂದ ನಡೆಸಬೇಕಾದರೆ 30 ರೂಪಾಯಿ ಬೇಕು, ಸಂಘ ಸಂಸ್ಥೆಗಳು ನಡೆಸುವಾಗ 25 ರೂಪಾಯಿ ಸಾಕು ಎಂದರೆ ಇದಕ್ಕೆ ಅರ್ಥವೇನು? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇಂಥ ಅನೇಕ ನ್ಯೂನತೆಗಳಿವೆ. ಆ ನ್ಯೂನತೆಗಳನ್ನು ಸರಿಪಡಿಸಿ, ನಿಜವಾಗಿ ಸರ್ಕಾರ ಈ ಜನಗಳ ಪ್ರಗತಿಯನ್ನು ಅನುಲಕ್ಷಿಸಿ ಎಲ್ಲ ಕೆಲಸವನ್ನು ಮಾಡುತ್ತದೆ ಎನ್ನುವುದಾದರೆ, ಅದಕ್ಕೆ ಏನಾದರೂ ಗುರುತು ಇದ್ದರೆ, ಚಿನ್ಹೆ ಇದ್ದರೆ ಈ ಇಲಾಖೆಗೆ ಖರ್ಚು ಮಾಡುವ ಹಣವನ್ನೆಲ್ಲ ಈ ವರ್ಗದ ಜನರ ವಿದ್ಯಾಭಿವೃದ್ಧಿಗಾಗಿ ಖರ್ಚು ಮಾಡಿ ಎಂದು ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಅಧ್ಯಕ್ಷರೇ, ಸೋಷಿಯಲ್ ವೆಲ್‌ಫೇರ್ ಡಿಮಾಂಡ್ ಮೇಲೆ ಒಂದೆರಡು ವಿಷಯಗಳನ್ನು ಮಾತನಾಡಬೇಕೆಂದಿದ್ದೇನೆ. ಇದುವರೆಗೂ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ವರ್ಷೇ ವರ್ಷೇ ಮಾತನಾಡಿ ನಮಗೂ ಬೇಜಾರಾಗುತ್ತಿದೆ. ಎಷ್ಟು ಸಲ ಮಾತನಾಡಿದರೂ ಇಷ್ಟೇ ಅಲ್ಲವೇ ಎಂದು ನಮ್ಮ ಮನಸ್ಸಿಗೆ ತಾಪವಾಗುತ್ತದೆ. ಹರಿಜನರ ಸಲುವಾಗಿ ನಾವು ಎಲ್ಲ ಹೇಳಿಕೊಳ್ಳುವುದಾಯಿತು, ಹರಿಜನ ಗಿರಿಜನರಿಗೆ, ಭಂಗಿ ಜನರಿಗೆ ಹೀಗೆ ಮಾಡಿರಿ, ಹಾಗೆ ಮಾಡಿರಿ ಎಂದು ಕೇಳುವುದೇ ಆಯಿತು. ಹೀಗೆಯೇ ಇನ್ನೂ ಎಷ್ಟು ವರ್ಷ ಕೇಳುವುದು? ನಮಗೆ ಸ್ವಾತಂತ್ರ್ಯ ಬಂದು ಇಲ್ಲಿಗೆ 20 ವರ್ಷಗಳ ಮೇಲಾಯಿತು. ಮಹಾತ್ಮ ಗಾಂಧಿಯವರು ಮಾಡಿದ್ದು ಇದುವರೆಗೆ ಏನೂ ನಡೆಯಲಿಲ್ಲ. ಹರಿಜನರಿಗಾಗಿ ಇದನ್ನು ಮಾಡಬೇಕು, ಅದನ್ನು ಮಾಡಬೇಕು ಎಂದು ಕೇಳಿದಾಗ್ಯೂ ಕೂಡ ಇದುವರೆಗೂ ಅದೆಲ್ಲ ಆಗಲಿಲ್ಲ. ಮಾನ್ಯ ಉಪಮಂತ್ರಿಗಳಾಗಿ ಸಮಾಜ ಖಾತೆಯಲ್ಲಿ ಶ್ರೀಮತಿ ಬಸವರಾಜೇಶ್ವರಿ ಅವರು ಇದ್ದಾರೆ. ಅವರು ದೊಡ್ಡಮನೆತನದವರು. ಅವರಿಗೆ ಹಿಂದುಳಿದ ವರ್ಗದವರಲ್ಲಿ ಅಪಾರ ಅನುಕಂಪವಿದೆ. ಹರಿಜನರಿಗೆ ಸಿಕ್ಕಬೇಕಾದ ಸವಲತ್ತುಗಳು ಯಾವುದೂ ಸಿಕ್ಕಲಿಲ್ಲ. ನಾವು ಏನಾದರೂ ಹೇಳಿದರೆ ನಮ್ಮ ಮೇಲೆ ಅಪವಾದ ಬರುತ್ತದೆ ಎಂದು ಹೇಳಿಕೊಳ್ಳದೆ ಇದ್ದೇವೆ. ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಎಂದು ನೇಮಕ ಮಾಡಿದ್ದಾರೆ. ಅವರಿಗೆ ಏನೂ ಅಧಿಕಾರ

ಕೊಟ್ಟಿಲ್ಲ. ತಮಗೆ ಇಂಟರ್‌ವ್ಯೂ ಮಾಡುವುದಕ್ಕೆ ಅಧಿಕಾರವಿಲ್ಲ, ಯಾರನ್ನಾದರೂ ನೇಮಕಮಾಡಿ ಕೊಳ್ಳುವುದಕ್ಕೆ ಅಧಿಕಾರವಿಲ್ಲ, ಗ್ರಾಂಟ್ ಕೊಡುವುದಕ್ಕೆ ಅಧಿಕಾರವಿಲ್ಲ ಎಂದು ಅವರು ಹೇಳುತ್ತಾರೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರವರ ಆಫೀಸಿನಲ್ಲಿ ನೋಡಿದರೆ ಸಿಬ್ಬಂದಿ ದೊಡ್ಡದಾಗುತ್ತಿದೆ. ಅಲ್ಲಿ ನೇಮಕವಾಗಿ ಬಂದಿರುವವರು ನಮಗೆ ಪ್ರಮೋಷನ್ ಇಲ್ಲ, ಮತ್ತೊಂದು ಅನುಕೂಲತೆ ಇಲ್ಲ ಎಂಬ ಯೋಚನೆಯಿಂದ ಇದ್ದಾರೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಪ್ರಮೋಷನ್ ಇಲ್ಲ ಎಂದು ಎಲ್ಲರೂ ಹೇಳುತ್ತಾರೆ. ಹರಿಜನರಿಗೆ ಕೊಡತಕ್ಕ ಹಕ್ಕುಬಾಧ್ಯತೆಗಳನ್ನು ಏನೇನು ಮಾಡಿ ದರೂ ಮೊದಲು ಅವು ಸರಿಯಾಗಿ ಆ ಜನರಿಗೆ ಮುಟ್ಟುವಂತೆ ಮಾಡಿ, ಅದಕ್ಕೆತಕ್ಕಂತೆ ಮಂತ್ರಿಗಳು ಸಹ ಆ ಇಲಾಖೆಯಲ್ಲಿ ಆಗಿರುವಂಥ ಅನ್ಯಾಯವನ್ನು ಮೊದಲು ಸರಿಪಡಿಸಬೇಕು ಎಂದು ಕೇಳಿಕೊಳ್ಳು ತ್ತೇನೆ. ಹರಿಜನರು, ಗಿರಿಜನರು ಮತ್ತು ಭಂಗಿ ಜನರ ಸಲುವಾಗಿ ಮನೆ ಕಟ್ಟಿಕೊಡಬೇಕು, ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕು, ಅವರಿಂದ ದೇಶೋದ್ಧಾರವಾಗುವುದು. ಅವರನ್ನು ಹಳ್ಳಿ ಗಾಡುಗಳಲ್ಲಿ ಉತ್ತಮ ಜನಾಂಗದವರು ಮುಟ್ಟುವುದಿಲ್ಲ. ಆದರೆ ಎಲ್ಲಾ ಕೆಲಸಕ್ಕೂ ಅವರು ಬೇಕು, ಅವರಿಲ್ಲದಿದ್ದರೆ ಯಾವುದೂ ಕೆಲಸವಾಗುವುದಿಲ್ಲ. ಹಳ್ಳಿಗಳಲ್ಲಿ ಯಾರೂ ಅವರನ್ನು ಹತ್ತಿರ ಬರಮಾಡಿ ಕೊಳ್ಳುವುದಿಲ್ಲ. ಬಾವಿಗಳಲ್ಲಿ ಅವರಿಗೆ ನೀರು ಸೇದಲು ಅವಕಾಶ ಕೊಡುವುದಿಲ್ಲ, ಅವರನ್ನು ಸಮಾ ರಂಭಗಳಲ್ಲಿ ಸೇರಿಸುವುದಿಲ್ಲ. ಹೀಗಾದರೆ ಅವರೇನು ಮಾಡಬೇಕು ? ಬೆಳಗಾದರೆ ಇತರ ಜನಾಂಗ ದವರ ಮನೆಗೆ ಅವರು ಹೋಗಬೇಕು. ಆದುದರಿಂದ ಅವರು ಏನು ಮಾತನಾಡುವುದಕ್ಕೂ ಶಕ್ತಿ ಯಿಲ್ಲದವರಾಗಿದ್ದಾರೆ. ಹಳ್ಳಿಗಾಡಿನಲ್ಲಿ ಅಸ್ಪೃಶ್ಯತೆ ನಿವಾರಣೆಯಾಗುವ ಬದಲು ಇನ್ನೂ ಹೆಚ್ಚಾ ಗಿದೆ. ಇದನ್ನು ನೋಡಿದರೆ ಆ ಜಾತಿಯಲ್ಲಿ ಹುಟ್ಟಬಾರದು ಎನ್ನಿಸುತ್ತದೆ. ಆದುದರಿಂದ ಸರಕಾ ರದವರು ಒಂದು ಕಾಯಿದೆ ಮಾಡಿ ಗಂಡು–ಹೆಣ್ಣು ಎಂಬ ಎರಡು ಜಾತಿ ಮಾತ್ರ ಇವೆ, ಬಾಕಿ ಕುಲ ವೆಲ್ಲಾ ಒಂದೇ ಎಂಬ ಭಾವನೆ ಬರುವಂತೆ ಮಾಡಬೇಕು. ಹರಿಜನರ ಸಲುವಾಗಿ ಜಮೀನು, ಕುರಿ ವಿದ್ಯಾಭ್ಯಾಸ ಮುಂಥಾದ್ದನ್ನೆಲ್ಲಾ ಕೊಡುತ್ತೇವೆಂದು ಹೇಳುತ್ತೀರಿ. ಆದರೆ ಅವರಿಗೆ ಅವು ಸಹ ಮುಟ್ಟುವುದಿಲ್ಲ. ಅದು ಯಾರಿಗೋ ಸೇರುತ್ತದೆ. ಇದಕ್ಕೆ ಅವಕಾಶವಿರದಂತೆ ಭದ್ರ ಮಾಡಬೇಕು. ಹರಿಜನರ ಸಲುವಾಗಿ ಒಂದು ಕೋಳಿ ಸೊಸೈಟಿ ಮಾಡಿದರು. ಆದರೆ ಅದಕ್ಕೆ ಕೊಟ್ಟ ಗ್ರಾಂಟು ಯಾರಿಗೋ ಹೋಯಿತು. ಪೂಜಾರಿಗೆ ಕಾಣಿಕೆ ಕೊಟ್ಟರೇ ಗ್ರಾಂಟು ಮುಂತಾದ್ದು ದೊರೆಯು ವುದು. ಗ್ರಾಂಟು ಕೊಟ್ಟು ಹಾಲು ಸೊಸೈಟಿ ಬೇರೆ ಸೊಸೈಟಿ ಮಾಡಿದ್ದೇವೆಂದು ಹೇಳುವುದು, ಆದರೆ ಹರಿಜನರಿಗೆ ಅದರಿಂದ ಅನುಕೂಲವಾಗುತ್ತಿಲ್ಲ. ಕೊಡುವ ಸೌಲಭ್ಯ ಹರಿಜನರಿಗೆ ನೇರವಾಗಿ ಮುಟ್ಟುವುದಿಲ್ಲ. ಯಾರು ಬೇರೆಯವರು ಪಡೆಯುವರೋ ಅವರಿಗೆ ಶಿಕ್ಷೆಮಾಡಿ ಹರಿಜನರಿಗೆ ಕೊಡು ವುದು ನೇರವಾಗಿ ಅವರಿಗೆ ಸೇರುವಂತೆ ಮಾಡಿ. ಈಗ ಶ್ರೀಮತಿ ಬಸವರಾಜೇಶ್ವರಿಯವರು ಸಮಾಜ ಕಲ್ಯಾಣ ಇಲಾಖೆಗೆ ಬಂದಿದ್ದಾರೆ, ಅವರು ಭೇಧವಿಲ್ಲದೆ ಕೆಲಸಮಾಡುತ್ತಾರೆ ಎಂದು ನಾನು ತಿಳಿದಿ ದ್ದೇನೆ. ಅವರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಇನ್ನು ಮುಂದೆ ಅವರು ಇನ್ನೂ ಚೆನ್ನಾಗಿ ಕೆಲಸಮಾಡಿ ಅನುಕೂಲ ಮಾಡಬೇಕೆಂದು ಪದೇ ಪದೇ ಕೇಳಿಕೊಳ್ಳುತ್ತೇನೆ. ಮಹಾತ್ಮ ಗಾಂಧಿಯವರು ಹೇಳಿರುವಂತೆ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯ ಉಪಸಚಿವೆಯವರಿಗೆ ಭೇದ ಭಿನ್ನತೆ ಇಲ್ಲ, ಅವರು ದೊರೆ ಮನೆತನದವರು, ಸೇವೆ ಮಾಡಬೇಕೆಂಬ ಉದ್ದೇಶದಿಂದ ಈ ಖಾತೆ ಯನ್ನು ವಹಿಸಿಕೊಂಡಿದ್ದಾರೆ, ಪೂರ್ವ ಪುಣ್ಯದಿಂದ ಅವರು ಸೇವೆಮಾಡಲು ಬಂದಿದ್ದಾರೆ. ಎಲ್ಲಾ ರೀತಿಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರು ನಮ್ಮ ಜಿಲ್ಲೆಯವರೆಂದು ನಾನು ಹೀಗೆ ಹೇಳುತ್ತಿಲ್ಲ. ಅವರು ರಾತ್ರಿ ಹಗಲು ದುಡಿಯುತ್ತಿದ್ದಾರೆ, ಇನ್ನೊಬ್ಬರು ಹಾಗೆ ಮಾಡುವುದಕ್ಕಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಅವರು ಹೇಗೆ ಕೆಲಸ ಮಾಡುವರೆಂಬುದನ್ನು ಕಣ್ಣಾರ ನೋಡಿ ದ್ದೇನೆ. ಹರಿಜನರು, ಗಿರಿಜನರು, ಭಂಗಿ ಜನರು ಮುಂತಾದವರಿಗೆ ಎಲ್ಲೆಲ್ಲಿ ಏನೇನು ಸೌಕರ್ಯ ಕೊಡಬೇಕು, ಮನೆ, ಶಾಲೆ ಎಷ್ಟು ಮಾಡಬೇಕು ಎಂದು ಮನಸ್ಸಿನಲ್ಲಿಟ್ಟುಕೊಂಡು ಸಾಕಷ್ಟು ಅನು ಕೂಲ ಕಲ್ಪಿಸಬೇಕೆಂದು ಅವರಿಗೆ ಒತ್ತಾಯ ಮಾಡುತ್ತೇನೆ. ರಿಮ್ಯಾಂಡ್ ಹೋಂ ಎಂದು ಮಾಡಿ ದ್ದಾರೆ, ಅದರಲ್ಲಿರುವ ಅಧಿಕಾರಿಗಳು ಅಲ್ಲಿಗೆ ಕೊಡುವ ಸೌಲಭ್ಯಗಳನ್ನು ತಿಂದುಹಾಕುತ್ತಾರೆ. ಹಾಗಾದರೆ ಮಕ್ಕಳಿಗೆ ಸಿಕ್ಕುವುದೇನು ? ಮಕ್ಕಳಿಗೆ ಕೊಡುವ ತಿಂಡಿ ಮುಂತಾದ್ದು ಅವರಿಗೆ ಸಿಕ್ಕು ವುದಿಲ್ಲ. ಇದಕ್ಕೆ ಹೆಚ್ಚು ಗಮನಕೊಡಬೇಕು. ನಿರ್ಲಕ್ಷಿಸಿಬಿಟ್ಟರೆ ಕೆಡುತ್ತದೆ. ಅಧಿಕಾರಿಗಳು ಮನ ಸ್ಸಿಟ್ಟು ಕೆಲಸ ಮಾಡುವಂತೆ ಎಚ್ಚರಿಕೆ ಕೊಡಬೇಕು. ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಅಧಿಕಾರಿಗಳಿಗೆ ಪ್ರಮೋಷನ್ ಇಲ್ಲ. ಎಲ್ಲಾ ಇಲಾಖೆಯವರಿಗೂ ಪ್ರಮೋಷನ್ ಕೊಡುವಾಗ ನಮ್ಮ ಇಲಾಖೆಯವರು ತಪ್ಪು ಮಾಡಿರುವುದೇನು ? ಈ ಇಲಾಖೆಯನ್ನು ಹಿಂದಕ್ಕೆ ಹಾಕುತ್ತೀರಾ ? ಎಲ್ಲಾ ಕಡೆಯೂ ಒಂದೇ ರೀತಿ ನಡೆಸಬೇಕು, ಸಮಾಜ ಕಲ್ಯಾಣ ಇಲಾಖೆಯವರಿಗೂ ಪ್ರಮೋಷನ್ ಕೊಡಬೇಕು ಎಂದು ಮನವಿ ಮಾಡುತ್ತೇನೆ, ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿರುವ ಹಣ ಎಲ್ಲಿಗೆ ಹೋಗುತ್ತದೆ ? ಮಂತ್ರಿಗಳು ಕಷ್ಟಪಟ್ಟು ಹರಿಜನರು ಮತ್ತು ಗಿರಿಜನರಿಗೆ ಕಲ್ಯಾಣವಾಗುವಂತೆ ಚೆನ್ನಾಗಿ ಕೆಲಸ ಮಾಡಬೇಕು.

(ಶ್ರೀಮತಿ ನಾಗಮ್ಮ)

ಇನ್ನೊಂದು ವಿಷಯ ಹೇಳಬೇಕಾದರೆ ಹರಿಜನರಿಗೆ ಹೌಸಿಂಗ್ ಸೊಸೈಟಿ ಇದೆ, ಮನೆಗಳಿಗೆ ಹಣ ಕೊಟ್ಟಿದ್ದಾರೆ, ಒಂದು ಮನೆಗೆ 3 ಸಾವಿರ ರೂಪಾಯಿ ಕೊಡುವರು. ಅದರಲ್ಲಿ ಅರ್ಧ ಉಚಿತವಾಗಿ ಕೊಡಬೇಕು, ಕಾರ್ಪೋರೇಷನ್ ಹೀಗೆ ಮಾಡಿದರೆ ಒಳ್ಳೆಯದು. ಮೊದಲು ಫ್ರೀ ಆಗಿ ಕೊಡುತ್ತಿದ್ದರು. ಹಾಗೆ ಸಮಾಜ ಕಲ್ಯಾಣ ಇಲಾಖೆ ಕೊಡಬೇಕು ಎಂದು ಮನವಿ ಮಾಡುತ್ತೇನೆ. ಹರಿಜನರು ಗೂಡು ಕಟ್ಟಿಕೊಂಡು ಹೊರಗಿನ ಕೆಲಸ ಮಾಡಿಕೊಂಡು ಬಂದು ಅದರಲ್ಲಿ ಸೇರಿಕೊಳ್ಳುತ್ತಾರೆ. ಅವರಿಗೆ ಸಾಕಷ್ಟು ಸಹಾಯ ಮಾಡಿದರೆ ಒಳ್ಳೆಯದು. ಹರಿಜನರಿಗೆ ಕೊಡುವುದಕ್ಕೆ ಶಕ್ತಿಯಿಲ್ಲ. ಆದುದರಿಂದ ಸಮಾಜ ಕಲ್ಯಾಣ ಇಲಾಖೆ ಅರ್ಧ ಫ್ರೀಯಾಗಿ ಕೊಡಬೇಕು. ಹರಿಜನರ ಮನೆಗಳಿಗಾಗಿ ಹೌಸಿಂಗ್ ಸೊಸೈಟಿಯಲ್ಲಿ ಅರ್ಧಭಾಗ ಫ್ರೀಯಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

10-00 A.M.

ಜಮೀನು ಕೊಡುತ್ತೇವೆ ಎಂದು ಹೇಳುತ್ತೀರಿ, 15-20 ವರ್ಷ ಆಯಿತು ಇದುವರೆಗೂ ಯಾರಿಗೂ ಕೊಟ್ಟಿಲ್ಲ. ಇದುವರೆಗೂ ನಾನು ನೋಡಿದ ಹಾಗೆ ಮೂರು ಜನರು ರೆವಿನ್ಯೂ ಮಿನಿಸ್ಟರು ಬಂದು ಆಯಿತು, ಈಗ ಬಂದವರಾದರೂ ಯಾರ‍್ಯಾರು ಹರಿಜನರು ಜಮೀನು ಮಾಡುತ್ತಾ ಇದ್ದಾರೆ ಆ ಜಮೀನನ್ನು ಅವರಿಗೇ ಫ್ರೀಯಾಗಿ ಕೊಡುವ ಹಾಗೆ ಕಾನೂನು ತಿದ್ದುಪಡಿ ಮಾಡಬೇಕು. ಸರ್ಕಾರದ ಜಮೀನನ್ನು ಅವರಿಗೆ ಹಂಚಬೇಕು ಎಂದು ಹೇಳಿ ಮನವಿ ಮಾಡಿಕೊಳ್ಳುತ್ತೇನೆ.

ಹರಿಜನರ ಗಿರಿಜನರ ಉದ್ಧಾರಕ್ಕಾಗಿ ಮೀಸಲಾಗಿಟ್ಟಿರುವ ಹಣ ಏನಿದೆ ಅದು ಲ್ಯಾಪ್ಸ್ ಆಗದಂತೆ ನೋಡಿಕೊಂಡು ಆ ಹಣದಿಂದ ಅಲ್ಪಸ್ವಲ್ಪವಾದರೂ ಕೆಲಸ ಕಾರ್ಯಗಳನ್ನು ಮಾಡಿಸಿ ಸೌಕರ್ಯವನ್ನು ಮಾಡಿಕೊಡುತ್ತಾರೆ ಎಂದು ತಿಳಿದುಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri P. B. NANDIHALI** (Uchagaon).—Mr. Speaker Sir, I wish to offer my remarks on Demand No. 27 relating to Miscellaneous, Social and Developmental Organisations amounting to Rs. 7,26,57,000 ; out of which a sum of Rs. 1,79,20,000 is reserved for the welfare of the Scheduled Castes and Scheduled Tribes and other backward classes.

I wish to oppose this Demand not because that the Demand is huge or that it is not utilised properly. I sincerely feel that the amount is so meagre that even though the concerned Minister is so enthusiastic and kind enough and even though the Director and the Assistant Directors are sympathetic and energetic, they cannot do justice to this cursed society which had been facing so many problems for centuries together. The Government must also broaden its outlook and realise that besides these Scheduled Castes and Tribes who are backward, there are also the weaker section of the population in every society ; they may be Brahmins, they may be Lingayaths ; they may belong to the farmers' class ; or they may be Maharashtrians. So, these weaker sections of the populations must also be given some extra facilities and concessions to uplift them to the level of the progressive sections of the population. Ours is a democracy and it is based on social and economic equality and justice. A person may belong to any caste. How can you ensure political justice to him ? He cannot take part in political activities unless this most important problem is solved, namely, establishment of social and economic equality. The presence of economic injustice in any caste or community is the greatest danger to

our democracy. So, the removal of economic injustice and establishment of social and economic equality is the most important thing we have to attend first. These poor and weaker sections could be found in all communities and those unfortunate sections are not getting any special treatment to improve their lot. Unless and until the Government sees that there is economic development of the weaker sections of the population and the Scheduled Castes and Tribes, there is no possibility of success to the democracy in our country.

I was listening to the speeches of my hon. friends in this House and they stated so much about this untouchability and ascribed it to non-enforcement of law. But in my hunble opinion, it is utterly impossible to solve this untouchability problem only through the implementation of rules and regulations and enacting laws and their enforcement by officers. The only way to solve this untouchability problem is by the economic development of Harijans and the economic uplift of the common people and the poor people. My opinion is that it is essentially an economic problem. It is a fact that the children of scheduled castes and tribes are not given good treatment. But compare the treatment given to those poor children of and the children Sri Rachaiah and Sri Ramakrishna. The children of Sri Rachaiah and Sri Ramakriahna are not treated like those coming from the society of Scheduled Castes and Tribes; the problem of untouchability is not with them or with their children. On the other hand, compare it with the fate of the children of the landless labourers, and the poor sections; the progressive classes certainly get a good treatment. So the root cause of this problem is economic injustice and inequality and Government's first and foremost duty is to work for the uplift of these poorer sections economically.

When we take the problem of housing, we see that the Government is sanctioning Rs. 3,000 per house to the poor Scheduled Castes and Tribes. It is well known that these people have no carts or bullocks, being very poor and economically backward; they will have absolutely no money with them, to supplement the loan sanctioned to them. I do not know how the Government expects these poor people to construct a house with minimum accommodation out of this meagre amount of Rs. 3,000. Normally, a house should consist of two or three rooms, a shed for the cattle and a store room. Another procedure is, this sum of Rs. 3.000 is given in three instalments. In the first instance, the amount of Rs. 3,000 is not sufficient for constructing a house and so, it should be enhanced to Rs. 5,000 per house. This is the minimum amount that is required for constructing a house. My second suggestion is that the amount should be given in one lumpsum to the Society concerned and the Society should disburse it in instalments. Another defect noticed in our area is, that these instalments come into the hands of these poor people in the month of March. It is unnecessary for me to say that by the time the rainy season comes, the house will have been constructed only half. So, the best thing is to go on disbursing the

(SRI P. B. NANDIHALI)

loan amount from the month of December and onwards so that the house may be complete before the rainy season breakes. The instalments must be given through Societies only and the loan amount must be released to the Societies, who in turn, should disburse them.

Another difficulty is that loan is given to a person who has got his own site. How is it possible for these people to have their own sites? They have been demanding for sites since several years. For instance, there is one Beda Scheduled Caste and Scheduled Tribes' Society functioning very satisfactorily in Belgaum District. This society has been trying for sites since so many years but it is not getting sites to its members. You know very well the position of Belgaum City. There are Sambhars, Donghis, Chamars, Bhangis and other Harijan people. Some of them are living under the trees ; they have no sites. How is it possible for them to get land from the society or from the Government? Some of them who have great influence are getting sites. This must be stopped at once. It is the duty of the Government to see that the sites are acquired for these people who have no land at all. You, Sir, know about the Maya Maruthi Scheme. I have been requesting off and on the concerned officers to reserve some under this scheme for the Scheduled Castes and Scheduled Tribes people and the landless labourers who are dying and crying and are on the roads in the city ; they have no shelter at all. But one of the officers told me that these Mahars are not in a position to construct good bungalows in that area and that that area must be developed with good bungalows. I request that some land must be reserved for these people. This type of answer is a disgrace to democracy and also to freedom. I have been repeatedly requesting the Government to release the land for these siteless people and encourage them to have their own houses.

The problem of unemployment is also very serious. The Aluminium Factory is coming up in Belgaum. So, I very strongly suggest to the Government that they must give first consideration to the landless people and the Scheduled Caste and Scheduled Tribes people who are facing unemployment for years together. While giving employment, first consideration should be given to the poorer sectios among the local people. I have been repeatedly requesting the Government that the outlook must be changed. There must be some encouragement in every field to the weaker sections whose annual income is less than Rs. 2,400.

[MR. DEPUTY SPEAKER in the Chair.]

About Revenue waste land and cultivable forest land, I have been telling the Government off and on that these lands must be released immediately. When there is a large labour force which is coming forward to do work, to leave an inch of land without cultivation is a sin and so I request the Hon'ble Revenue Minister and the Forest

Minister to release the revenue waste land, i.e. is the cultivable forest land immediately for the poorer sections and the landless labourers who have no work to do but who are prepared to do work.

Education is the only way to bring the society forward and so all the educational facilities which are being given to the Scheduled Castes and acheduled Tribes people, must be given to the weaker sections, landless labourers and other backward classes as they are also facing the same difficulties.

There has been much discussion about hostels. Two or three members have said that the Government is paying the salary of the cook and peon and also the rent and light charges in the hostels managed by the Government. My own bitter experience is that though they work honestly it is utterly impossible to give all these facilities within the meagre grant of Rs. 25 which is given by the Government, per student, So, I request the Government to increase this grant up to Rs. 40 per student per month. They must also pay the salary of the Superintendent, cook, peon, etc., and then only will it be possible to manage all these hostels in a satisfactory manner according to the rules and regulations of the Government. In the last two or three years, there is a poor management on which I am also working. They have started one hostel at Begundi in Belgaum Taluka. Only due to financial difficulty they cannot employ the Superintendent, the peon and the cook as full-time workers and they cannot have a decent building. But actually the institution is working very satisfactorily for the uplift of the common people. The then Chief Minister Mr. Jatti encouraged us to start that hostel at the time of the opening ceremony of the Belvati Village. But after that, till today, the institution is standing on its own legs and the Government has not given any kind of grant to it. I do agree that it is not possible for any private management to run a hostel very satisfactorily according to the rules and regulations of the Government within this meagre grant. But still there is great necessity to encourage such institutions which are trying for the uplift of the common people. I therefore request the Government to change their outlook and see that every encouragement, especially, financial encouragemeut is given to such hostels so that they can run satisfactorily.

I cannot express further views in the short time at my disposal and so, with these observations, I thank the Chair and conclude my speech.

† ಶ್ರೀ ಕೆ. ಪ್ರಭಾಕರ್ (ವರ್ತೂರ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದವರು ಈ ಸಭೆಯ ಮುಂದೆ ಇಟ್ಟಿರುವ ಈ ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತಹ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತಾ, ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಲು ಬಯಸುತ್ತೇನೆ. ಮೊಟ್ಟ ಮೊದಲನೆಯವಾಗಿ ಈ ಬಡ್ಜೆಟ್‌ನಲ್ಲಿರತಕ್ಕಂಥ ಅಕೌಂಟ್ ಕ್ಲಾಸಿಫಿಕೇಷನ್ ಬಗ್ಗೆ ಹೇಳುವುದಾದರೆ, ಮೊದಲು ಇಲಾಖೆವಾರಾಗಿ ಅಕೌಂಟ್‌ಗಳನ್ನು ಮಾಡಿ ಇಡುತ್ತಿದ್ದರು. ಈಗ ಅದನ್ನು 12 ಛಿದ್ರ ಛಿದ್ರ ಭಾಗಗಳನ್ನಾಗಿ ಮಾಡಿ ಕಾಯಮ್ ಆಗಿ ಇಲ್ಲದಿರುವ ರೀತಿಯಲ್ಲಿ ಅದರಲ್ಲೂ ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತಹ ಅಕೌಂಟ್‌ಗಳನ್ನು ಸರಿಯಾದ ರೀತಿಯಲ್ಲಿ ಇಡದಿರುವುದು ಒಂದು

(ಶ್ರೀ ಕೆ. ಪ್ರಭಾಕರ್)

ರೂಪದಲ್ಲಿ ತಪ್ಪು ಅಥವಾ ಸಮಂಜಸವಲ್ಲ ಎಂದು ಹೇಳಬೇಕಾಗಿದೆ. ಅನಾದರಣೆ ರೀತಿಯಲ್ಲಿ ಚೌಚೌ ಮಾಡಿ ಅಕೌಂಟ್‌ಗಳನ್ನು ಒಂದಕ್ಕೊಂದು ಸಂಬಂಧವಿಲ್ಲದಿರುವಂತೆ ಸೇರಿಸಿರುವುದು ತಪ್ಪು ಎನ್ನುವ ವಿಚಾರವನ್ನು ಮಾನ್ಯ ಜತ್ತಿಯವರ ಕಾಲದಲ್ಲಿಯೂ ಕೂಡ ನಾನು ತಿಳಿಸಿದ್ದೆ. ಆದರೆ ಯಾವ ಸುಧಾರಣೆಯೂ ಆಗಿಲ್ಲ. ಆಯಾ ಇಲಾಖೆಗೆ ಸಂಬಂಧಪಟ್ಟಂತೆ ಒಂದೇ ಅಕೌಂಟನ್ನು ಇಟ್ಟರೆ ಎಲ್ಲರಿಗೂ ಅರ್ಥವಾಗುವುದಲ್ಲದೆ ಸರ್ಕಾರಕ್ಕೂ ಕೂಡ ಇದರಿಂದ ಹೆಚ್ಚಿನ ಖರ್ಚಾಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ಆಯಾ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಖರ್ಚನ್ನು ಖಚಿತವಾಗಿ ಒಂದು ಹೆಡ್‌ನ ಕೆಳಗೆ ತೋರಿಸಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ.

ಇನ್ನು ಎರಡನೆಯದಾಗಿ ಈ ಡಿಮ್ಯಾಂಡ್‌ನ ಚರ್ಚೆಗಾಗಿ ಈ ಹೊತ್ತಿನ ದಿವಸ ಬೆಳಿಗ್ಗೆಯೇ ಈ ಸಭೆಯನ್ನು ಕರೆದಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ಮೊದಲು ಇದನ್ನು ಗಿಲಟಿನ್ ಮಾಡಿ ಮುಗಿಸುವ ಆಲೋಚನೆಯಲ್ಲಿ ಇದ್ದರೂ ಕೂಡ, ಕೆಲವು ಮಾನ್ಯ ಸದಸ್ಯರುಗಳು ಆ ರೀತಿ ಮಾಡುವುದು ಬೇಡ, ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದರ ಮೇಲೆ ಈ ದಿವಸ ಬೆಳಿಗ್ಗೆಯೇ ಈ ಸಭೆಯನ್ನು ಕರೆದಿರುವುದು ಸಂತೋಷದ ಸಂಗತಿಯಾಗಿದೆ. ಈ ಡಿಮ್ಯಾಂಡ್ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಮುಖ್ಯಮಂತ್ರಿಗಳಾಗಲೀ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಾಗಲೀ ಇದ್ದಿದ್ದರೆ ಬಹಳ ಸಂತೋಷವಾಗುತ್ತಿತ್ತು. ಇನ್ನು ಮುಂದೆ ಯಾದರೂ ಕೂಡ ಈ ರೀತಿಯಾಗಬಾರದೆಂದು ಸೂಚಿಸಬಯಸುತ್ತೇನೆ.

ಇನ್ನು ಹರಿಜನರ ಉದ್ಧಾರದ ಬಗ್ಗೆ ಮಾತನಾಡುತ್ತಾ ಹೋದರೆ ಮಾತಿನ ಸರಣಿಯೇ ಬೆಳೆಯುತ್ತಾ ಹೋಗುತ್ತದೆ. ಈ ನಮ್ಮ ದೇಶ ವೆಲ್‌ಫೇರ್ ಸ್ಟೇಟ್ ಆಗಿರುವುದರಿಂದ ಸೋಷಿಯಲ್ ಸರ್ವಿಸಸ್ ಕಡೆಗೆ ಹೆಚ್ಚಿನ ಗಮನವನ್ನು ಆಯಾ ಸರ್ಕಾರಗಳು ಕೊಡುತ್ತಾ ಬಂದಿವೆ. ಹರಿಜನರ ಉದ್ಧಾರ ಎನ್ನುವುದು ನಮ್ಮ ರಾಜ್ಯದಲ್ಲಿ ಸ್ವರಾಜ್ಯ ಹುಟ್ಟಿದ ಮೇಲೆ ಹುಟ್ಟಿದ ಕೂಸಲ್ಲ. ಹಿಂದಿನ ರಾಜಮಹಾರಾಜರ ಕಾಲದಿಂದಲೂ ಕೂಡ ಇವರ ಸೇವೆಯನ್ನು ಅವರುಗಳು ಮಾಡುತ್ತಾ ಬಂದಿದ್ದಾರೆ. ಆದರೆ ಸ್ವರಾಜ್ಯ ಬಂದಮೇಲೆ ಹರಿಜನರ ಉದ್ಧಾರದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕೆಲಸವಾಗಬೇಕು ಎನ್ನುವ ಬಗ್ಗೆ ಆಲ್ ಇಂಡಿಯಾ ಪ್ಯಾಟ್ರನ್ ಕೂಡ ಬಂತು. ಅದರಂತೆ ಮೈಸೂರು ರಾಜ್ಯವೂ ಕೂಡ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಹರಿಜನರ ಉದ್ಧಾರ ಕೇವಲ ಬಾಯಿ ಮಾತಿನಿಂದ ಮಾತ್ರ ಆಗುವುದಿಲ್ಲ, ಅದು ಕೃತಿಯಲ್ಲಿ ಆಗಬೇಕಾಗಿದೆ. ಇವತ್ತಿನ ದಿವಸ ವೀಕರ್ ಸೆಕ್ಷನ್ಸ್ ಆಫ್ ದಿ ಸೊಸೈಟಿ, ದೀನದಲಿತರು, ದರಿದ್ರರು, ಬಡವರು, ನೊಂದವರು, ಇವರುಗಳ ಬಗ್ಗೆ ನಾವುಗಳು ಒಳ್ಳೆಯ ಶಬ್ದಗಳನ್ನು ಉಪಯೋಗಿಸಿ ಸಂತೋಷಪಡುತ್ತಿದ್ದೇವೆ. ಇದು ಸಾಲದು. ಏಕೆಂದರೆ ಅದು ಬೃಹದಾಕಾರವಾದ ರಾಷ್ಟ್ರೀಯ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಬಗೆ ಹರಿಸಲು ಸರ್ಕಾರದವರು ಏನು ಒಂದು ಯೋಜನೆಗಳನ್ನು ಹಾಕಿಕೊಂಡಿದ್ದಾರೋ ಅದು ಸಾಲದು. ಮತ್ತು ಆ ಯೋಜನೆಗಳಿಗೆ ಇಟ್ಟಿರುವ ಹಣವೂ ಕೂಡ ಸಾಲದು. ಇಟ್ಟಿರುವ ಹಣವನ್ನು ಕೂಡ ಸಂಬಂಧಪಟ್ಟ ಇಲಾಖೆಯವರು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಇದನ್ನು ದುರ್ವಿಧಿ ಎಂದು ಹೇಳಿದರೆ ತಪ್ಪಾಗಲಾರದು. ಇವರಿಗೆ ಸರ್ಕಾರದವರು ಯಾವ ರೀತಿ ಸಹಾಯ ಮಾಡುತ್ತಿದ್ದಾರೆಂದರೆ ಹರಿಜನ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಸ್ಕಾಲರ್‌ಷಿಪ್ಪನ್ನು ಕೂಡ ವರ್ಷದ ಪ್ರಾರಂಭದಲ್ಲಿ ಕೊಡದೆ ವರ್ಷದ ಕೊನೆಯಲ್ಲಿ ಕೊಡುತ್ತಿರುವುದನ್ನು ನೋಡಿದರೆ ಇದಕ್ಕಿಂತಲೂ ಬೇರೆ ಉದಾಹರಣೆಯನ್ನು ಕೊಡಬೇಕಾಗಿಲ್ಲ. ಇನ್ನು ಮುಂದೆ ಈ ರೀತಿಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು ಮತ್ತು ವರ್ಷದ ಪ್ರಾರಂಭದಲ್ಲಿಯೇ ಅವರಿಗೆ ಸ್ಕಾಲರ್‌ಷಿಪ್ ಸಿಗುವಂತೆ ಏರ್ಪಾಡಾಗಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು 1966-67ರಲ್ಲಿ ಲ್ಯಾಪ್ಸ್ ಆದ 17 ಲಕ್ಷ ರೂಪಾಯಿಗಳಿಗೆ ಮತ್ತೆ 3 ಲಕ್ಷ ರೂಪಾಯಿಗಳನ್ನು ಸೇರಿಸಿ ಎಂ.ಸಿ.ಆರ್.ಪಿ. ಸ್ಕೀಮನ್ನು ಜಿಲ್ಲಾಧಿಕಾರಿಯವರು ತಯಾರು ಮಾಡಿದ್ದಾರೆ. ಈ ಸ್ಕೀಮ್ ಪ್ರಕಾರ ಇದುವರೆಗೆ ಎಷ್ಟು ಕಾಲೋನಿಗಳು ಆಗಿವೆ, ಈ ಹಣದಲ್ಲಿ ಇನ್ನೂ ಎಷ್ಟು ಹಣ ಬಾಕಿ ಉಳಿದಿದೆ ಎನ್ನುವುದನ್ನು ನೋಡುವುದಾದರೆ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಎಂಬುದನ್ನು ನಾವೇ ತಿಳಿದುಕೊಳ್ಳಬಹುದಾಗಿದೆ. ಹೊಸ ಕಾನ್ಸಿಟಿಟ್ಯೂಷನ್ ಬಂದಮೇಲೆ ಮೂರು ಪ್ಲಾನ್‌ಗಳು ಮುಗಿದ ಮೇಲೆ ಇವರಿಗಾಗಿ ತೆಗೆದಿಟ್ಟಿದ್ದ ದುಡ್ಡಿನ ಕಥೆ ಏನಾಯಿತು, ಇವರಿಗಾಗಿ ಕೊಡುವ 18 ಪರ್‌ಸೆಂಟ್ ನೌಕರಿಗಳು ಏನಾಯಿತು ಎನ್ನುವುದಕ್ಕೆ ಸರ್ಕಾರದವರು ಸಮಂಜಸವಾದ ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಭಾರತದ

ಅಧ್ಯಕ್ಷರ ಇಚ್ಛೆಯಂತೆ ವರ್ಷಕ್ಕೊಮ್ಮೆ ಈ ದೀನದಲಿತರ ಉದ್ಧಾರಕ್ಕಾಗಿ ತೆಗೆದಿಟ್ಟ ಹಣ ಎಷ್ಟರ ಮಟ್ಟಿಗೆ ಖರ್ಚಾಗಿದೆ ಮತ್ತು ಎಷ್ಟರಮಟ್ಟಿಗೆ ಇವರ ಪ್ರಗತಿಯಾಗಿದೆ ಎಂಬ ಬಗ್ಗೆ ಒಂದು ವರದಿ ತಯಾರು ಮಾಡಲು ಒಬ್ಬ ಕಮಿಷನರ್ ಅವರನ್ನು ನೇಮಕ ಮಾಡಲಾಗಿದೆ. ಇದೇ ಕೆಲಸಕ್ಕಾಗಿ ಕೆಲವು ಸಂಸ್ಥಾನಗಳಲ್ಲಿ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಕ ಮಾಡಲಾಗಿದೆ. ಇವರುಗಳು ತಯಾರು ಮಾಡುವ ವರದಿಯ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗುತ್ತದೆ. ಈ ಒಂದು ಪದ್ಧತಿಯನ್ನು ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಜಾರಿಗೆ ತರಬೇಕು. ಆ ರೀತಿ ಅವಕಾಶ ಮಾಡಿಕೊಟ್ಟರೆ ನಾವುಗಳು ಅವರ ಬಗ್ಗೆ ತಯಾರಾದಂಥ ವರದಿಯನ್ನು ಚರ್ಚೆ ಮಾಡಿ ಅದರ ಸಾಧಕಬಾಧಕಗಳನ್ನು ವಿಮರ್ಶೆ ಮಾಡುವುದಕ್ಕೆ ಅವಕಾಶವಾಗುತ್ತದೆ. ನಮ್ಮ ರಾಜ್ಯದಲ್ಲಿಯೂ ಕೂಡ ಸರ್ಕಾರದವರ ಪ್ರತಿ ಬಡ್ಜೆಟಿನಲ್ಲಿಯೂ ಕೂಡ ಇವರ ಏಳಿಗೆಗಾಗಿ ಎಷ್ಟೋ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸುತ್ತಿದ್ದಾರೆ. ಆದರೆ ಅದು ಸಾಲದು. ಅದನ್ನು ಜಾಸ್ತಿ ಮಾಡಬೇಡಿ ಎಂದು ಯಾವ ಮಾನ್ಯ ಸದಸ್ಯರೂ ಕೂಡ ಹೇಳಿಲ್ಲ. ಅದು ಸಂತೋಷದ ಸಮಾಚಾರ. ಈ ಬಗ್ಗೆ ನಾನು ಅನೇಕ ಮಾನ್ಯ ಸದಸ್ಯರುಗಳ ಬಳಿ ಸಮಾಲೋಚನೆ ಮಾಡಿದ್ದೇನೆ. ಅವರುಗಳೆಲ್ಲಾ ಇವರ ಏಳಿಗೆ ಇನ್ನೂ ವೇಗದಲ್ಲಿ ಆಗಬೇಕಾಗಿದೆ ಎನ್ನುವ ಆಶಯವನ್ನು ಉಳ್ಳವರಾಗಿದ್ದಾರೆ. ಹರಿಜನರ ಉದ್ಧಾರವಾದರೆ ಅವರಿಗೆ ಒಂದು ಕಿರೀಟ ಬರುತ್ತದೆಂದು ನಂಬುವ ಮನುಷ್ಯ ನಾನಲ್ಲ. ರಾಷ್ಟ್ರದ ಇತಿಹಾಸದಲ್ಲಿಯೇ ಇವರು ನೊಂದುಬಂದ ಜನರಾಗಿದ್ದಾರೆ. ಒಂದು ಯಂತ್ರದಲ್ಲಿ ಒಂದು ಭಾಗ ದುರ್ಬಲವಾದರೆ ಯಾವ ರೀತಿ ಅಪಘಾತವಾಗುತ್ತದೋ ಅದರಂತೆ ಹರಿಜನರ ಉದ್ಧಾರವಾಗದಿದ್ದರೆ ಇಡೀ ದೇಶ ಮುಂದುವರೆಯುವುದು ಕಷ್ಟವಾಗುತ್ತದೆ. ಹರಿಜನರು ಪ್ರಗತಿಗೆ ಬರಬೇಕೆನ್ನುವುದು ಮತ್ತು ಅವರು ಮುಂದುವರಿಯಬೇಕೆನ್ನುವುದು ಎಲ್ಲರ ಗುರಿಯಾಗಿದೆ. ಸರ್ಕಾರ ಇವರ ಬಗ್ಗೆ ಮಾಡುತ್ತಿರುವ ಕೆಲಸಗಳು ಇನ್ನೂ ವೇಗದಲ್ಲಿ ಆಗಬೇಕೆನ್ನುವುದು ಎಲ್ಲರ ಆಶಯವಾಗಿದೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಇವರ ಏಳಿಗೆಗಾಗಿ ಬಹಳ ಕೆಲಸಗಳನ್ನು ಮಾಡಿದ್ದಾರೆ. ಹರಿಜನರ ವಿದ್ಯಾರ್ಥಿನಿಲಯಗಳಿಗೆ ಕೊಡುತ್ತಿದ್ದ ಬೋರ್ಡಿಂಗ್ ಗ್ರಾಂಟನ್ನು 18 ರೂಪಾಯಿಗಳಿಂದ 25 ರೂಪಾಯಿಗಳಿಗೆ ಹೆಚ್ಚಿಸಿದರು. ಹೈಕೋರ್ಟ್ ಜಡ್ಜ್ ಒಬ್ಬರನ್ನು ನೇಮಕ ಮಾಡಿದರು. ಪಿ.ಎಸ್.ಸಿ.ಚೇರ್ಮನ್ ಒಬ್ಬರನ್ನು ನೇಮಕ ಮಾಡಿದರು. ಇಬ್ಬರು ಮಂತ್ರಿಗಳನ್ನು ತಮ್ಮ ಮಂತ್ರಿಮಂಡಲದಲ್ಲಿ ನೇಮಕ ಮಾಡಿಕೊಂಡಿದ್ದರು. ಇವೆಲ್ಲಾ ನಮಗೆ ಗೊತ್ತಿದ್ದ ವಿಷಯ. ಇದರ ಜೊತೆಗೆ ಹರಿಜನರ ಉದ್ಧಾರದ ಬಗ್ಗೆ ಯಾವ ಪಂಚಾಯಿತಿಗಳು ಚೆನ್ನಾಗಿ ಕೆಲಸ ಮಾಡುತ್ತವೋ ಅಂತಹ ಪಂಚಾಯಿತಿಗಳಿಗೆ ಬಹುಮಾನ ಕೊಡುವ ಯೋಜನೆಯನ್ನು ಸಹ ಅವರು ಜಾರಿಗೆ ತಂದರು. ಇವೆಲ್ಲಾ ಇಷ್ಟರವರೆಗೆ ಆಗಿರುವ ಕೆಲಸವಾಗಿದೆ. ಅವಕ್ಕೋಸ್ಕರ ಹೌದು ಅಂದರೆ ಹೌದೆನ್ನಿ, ಇಲ್ಲವೆಂದರೆ ಇಲ್ಲವೆನ್ನಿ. ಇನ್ನು 15 ಜನ ಗೆಜೆಟೆಡ್ ಆಫೀಸರನ್ನು ಏನೋ ಕ್ಲಾಸಿಫಿಕೇಶನ್ ತಪ್ಪು ಎಂದು, ಒಬ್ಬಿದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿದ ಹಾಗೆ, ಮನೆಗೆ ಕಳಿಸಿಬಿಟ್ಟರು. ಇವತ್ತು ಐ.ಎ.ಎಸ್. ಆಫೀಸರಿಗೆ ತರಬೇತಿ ಕೊಡುವ ಒಂದು ಸಂಸ್ಥೆಯನ್ನು ಮದ್ರಾಸಿಗೆ ಕಳಿಸಿ ಮಾಯ ಮಾಡಿಬಿಟ್ಟಿದ್ದಾರೆ.

10–30 A. M.

ಇವತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನಲ್ಲಿ, ಷುಗರ್ ಕಂಪೆನಿಯ ಕಮಿಟಿಯಲ್ಲಿ, ಇವರಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆಯೇ ಎಂದರೆ ಇಲ್ಲವೆಂದು ಹೇಳಬಹುದು. ಮೊದಲು ನಾನ್ ಕಮ್ಯೂನಲ್ ಹಾಸ್ಟೆಲ್ ಮಾಡುತ್ತೇವೆಂದು ಹೇಳಿ, 12 ಸಾವಿರ ಇದ್ದದ್ದು, ಮೂರು ಸಾವಿರಕ್ಕೆ ಕಡಿಮೆ ಮಾಡಿದಿರಿ. ಏಕ್‌ದಮ್ ಮೂರು ಸಾವಿರಕ್ಕೆ ಕಡಿಮೆ ಮಾಡಿದರೆ, ಏನು ಗತಿ? ಇವತ್ತು ಶೇಕಡಾ 25 ವಿದ್ಯಾರ್ಥಿಗಳನ್ನು ನಾನ್ ಹರಿಜನ್ಸ್ ಹಾಸ್ಟೆಲಿಗೆ ಸೇರಿಸುತ್ತೇವೆಂದು ಹೇಳುತ್ತಾರೆ. ಆದರೆ ಹಾಗೆ ಮಾಡಿಲ್ಲ. ಇಲ್ಲವೆಂದರೆ ಇಲ್ಲವೆಂದು ಹೇಳಬೇಕು. ಸರ್ಕಾರ ಒಳ್ಳೆಯದು ಮಾಡುವುದಾದರೆ ಇಂಥ ವಿಚಾರಗಳಲ್ಲಿ ಒಳ್ಳೆಯದು ಮಾಡಲೇಬೇಕು. ಸಸ್ಪೆಕ್ಟ್ ಇನ್ ದಿ ಬೋನಾಫಿಡೇಸ್. ಇವತ್ತು ಇಬ್ಬರು ಮಂತ್ರಿಗಳು ಬಂದರೆ ಕೆಲಸ ಚೆನ್ನಾಗಿ ಆಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಬುನಾದಿ ಹಾಕಿಕೊಂಡಿದ್ದೇವೆ, ಒಳ್ಳೆಯ ಅಡ್ಮಿನಿಸ್ಟ್ರೇಷನ್ ತರುತ್ತೇವೆ, ಕುಳ್ಳಗೆ ಇದ್ದೇನೆ, ಹುಡುಗ ಇದ್ದೇನೆ ಎಂದು ಅನ್ನಬೇಡಿ, ಸ್ವಲ್ಪ ಕಾದು ನೋಡಿ ಎಂದು ಹೇಳುತ್ತಿದ್ದಾರೆ. ನಾವು ಕಾದು, ಎರಡು ಮೂರು ದಿವಸ ಎಂದು ನೋಡುತ್ತಿದ್ದೇವೆ. ಇವತ್ತು ಒಂದು ಗೌರ್ನಮೆಂಟ್ ಆರ್ಡರ್ ಮಾಡಿದ್ದಾರೆ. ಈ ಐ.ಎ.ಎಸ್. ಆಫೀಸರ್ಸ್ ಎಲ್ಲಾ ಹಳ್ಳಿಗಳ ಕಡೆ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ನೋಡಿ, ಡೈರಿ ಮಾಡಿಕೊಳ್ಳಿ, ಸರ್ಕಾರಕ್ಕೆ ರಿಟರ್ನ್ಸ್ ಕಳಿಸಿ ಎಂದು ಆರ್ಡರ್ ಮಾಡಿದ್ದಾರೆ. ಈ ರೀತಿ ಎಷ್ಟು ಜನ ಅಧಿಕಾರಿಗಳು ರಿಟರ್ನ್ಸ್ ಕಳಿಸಿದ್ದಾರೆ?

(ಶ್ರೀ ಕೆ. ಪ್ರಭಾಕರ್)

ಅದನ್ನು ಈ ಮಾನ್ಯ ಸಭೆಯ ಟೇಬಲ್ ಮೇಲೆ ಇಡುತ್ತೀರಾ? ಅದರಲ್ಲಿ ಒಂದು ಖಾತೆಯಾದ್ದಾದರೂ ಸಮಂಜಸವಾಗಿ ಇದ್ದರೆ, ನಾವು ಥೇಷ್ ಎಂದು ಹೇಳುತ್ತೇವೆ. ಇವರು ಬರೆಯುವುದು ಕೇವಲ, ಏಸ್ ರಿಪೋರ್ಟೆಡ್ ಬ್ಯಾ ದಿ ಲೋಕಲ್ ಆಫೀಸರ್ ಎಂದು ಹೇಳಿಬಿಡುತ್ತಾರೆ; ಟು ದ್ಯಾಟ್ ಎಕ್ಸ್‌ಟೆಂಟ್ ದೆ ಆರ್ ವೆರಿ ಆನೆಸ್ಟ್. ಏನಾದರೂ ಹೇಳಿದರೆ, ಇಂಥ ದೊಡ್ಡ ಆಫೀಸರು ಏನಾದರೂ ಸುಳ್ಳು ಹೇಳುತ್ತಾರೆಯೇ ಎಂದು ಕೇಳಬಹುದು. ರಾಜ್ಯಪಾಲರ ಭಾಷಣವಲ್ಲಿ, ಮಾನ್ಯ ಆರ್ಥಿಕ ಸಚಿವರ ಭಾಷಣದಲ್ಲಿ ಅದರ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ.

> "50 per cent amount in all developmental plans should be kept exclusively for being spent for the welfare of these people."

ಎಂದು ಆರ್ಡರ್ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟದ ಬಜೆಟ್ ಮಾಡುತ್ತಾರಲ್ಲ, ಅದರಲ್ಲಿ 54 ಸಾವಿರ ರೂಪಾಯಿ ಇಡಬೇಕು. 10 ಸಾವಿರ ಇಡುತ್ತಾರೆ, ಅದೂ ಕೂಡ ಖರ್ಚು ಆಗುವುದಿಲ್ಲ.

> "each Department should apply its mind and in the plan of each Department there should be provision for the welfare of these people"

ಪ್ರತ್ಯೇಕ ಇಲಾಖೆ ಇದ್ದರೆ, ನಿಮಗೆ ಪ್ಲಾನಿನಲ್ಲಿ ಜಾಗ ಏಕೆ ಎಂದು ಕೇಳಬಹುದು. ಇವತ್ತು ಒಂದು ಊರಿನಲ್ಲಿ ಕೊಲೆಯಾದರೆ, ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ನಮ್ಮ ಪೋಲೀಸ್ ಇಲಾಖೆಯವರು ಬಂದು ಇನ್‌ವೆಸ್ಟಿಗೇಶನ್ ಮಾಡಬೇಕೇ ಎನ್ನುವ ಮಟ್ಟಕ್ಕೆ ಹೋಗಿದೆ. ಎಲ್ಲಾ ಇಲಾಖೆಯವರು ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿಕೊಂಡಿರಬೇಕು. ಇದನ್ನೆಲ್ಲಾ ಒಂದು ಕನ್‌ಸೋಲಿಡೇಟೆಡ್ ರಿಪೋರ್ಟಿನಲ್ಲಿ ಕೊಡಬೇಕು.

ಇನ್ನು ವಿದ್ಯಾಭ್ಯಾಸದಲ್ಲಿ ಇಂಟರ್ನಲ್ ಟ್ಯೂಶನ್ ಪದ್ಧತಿಯನ್ನು ಜಾರಿಗೆ ತರುತ್ತಾರೆ. ಸರ್ಕಾರಿ ಹಾಸ್ಟೆಲಿನಲ್ಲಿ ಬೋರ್ಡಿಂಗ್ ಅಂಡ್ ಲಾಡ್ಜಿಂಗ್ ಇದೆ. ಸಿಂಪಲ್ ಊಟ, ಸಿಂಪಲ್ ಲಿವಿಂಗ್ ಅಷ್ಟೆ. ಇತರ ಖರ್ಚುಗಳನ್ನು ಏನೂ ಕೊಡುತ್ತಾ ಇಲ್ಲ. ಅಲ್ಲೂ ಅದನ್ನು ಸ್ಟ್ಯಾಂಡರ್ಡ್ ಮಾಡಬೇಕು. ಅವರಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಒದಗಿಸಬೇಕು. ಮತ್ತು ಈ ಹೌಸಿಂಗ್ ಸಬ್ಸಿಡಿ ಹಿಂದೆ ಹೇಗೆ ಇತ್ತೋ ಅದನ್ನು ಜಾರಿಯಲ್ಲಿ ತರಬೇಕು. ಕಾರ್ಪೋರೇಶನ್ನಿನವರು, ಡಿಪಾರ್ಟ್‌ಮೆಂಟಿನವರು ಕೊಡುವುದನ್ನು ತೆಗೆಯಬಾರದು. ಅದರ ಜೊತೆಗೆ ಹೌಸಿಂಗ್ ಸಬ್ಸಿಡಿಯನ್ನು ಹಿಂದೆ ಕೊಟ್ಟ ಹಾಗೆ ಕೊಡಬೇಕು. ಆ ಮೇಲೆ ಹೌಸ್ ಬಿಲ್ಡಿಂಗ್ ಮ್ಯಟೀರಿಯಲ್ಸ್ ವಿನಿಯೋಗ ಮಾಡುವುದಕ್ಕೆ ತಾಲ್ಲೂಕು ಮಟ್ಟದಲ್ಲಿ ಒಂದು ಏಜೆನ್ಸಿಯನ್ನು ಮಾಡಬೇಕು. ಸ್ಲಮ್ ಕ್ಲಿಯರೆನ್ಸಿಗೆ ಒಂದು ಸ್ಪೆಷಲ್ ಬೋರ್ಡು ಮಾಡಬೇಕು. ಇವತ್ತು ಹರಿಜನರು ಮುಂದಿನ ಎಲ್ಲಾ ಯೋಚನೆ ಮಾಡುವ ಕಾಲ ಬಂದಿದೆ. ಇವತ್ತು ಅನೇಕರು ವಿದ್ಯಾವಂತರಾಗಿದ್ದಾರೆ. ಈ ರೀತಿ ಅವರಿಗೆ ಅನಾದರಣೆ ಮಾಡಿದರೆ ಮುಂದೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಮಾಗಡಿ ತಾಲ್ಲೂಕಿನಲ್ಲಿ ಬಚ್ಚೇನಹಟ್ಟಿ ಹಳ್ಳಿಯಲ್ಲಿ ನರಸಿಂಹಯ್ಯ ಎಂಬ ಒಬ್ಬ ವಿ.ಪಿ. ಮೆಂಬರನ್ನು ಮಾರ್ಚಿ ತಿಂಗಳಲ್ಲಿ ನಾಪತ್ತೆ ಮಾಡಿಬಿಟ್ಟರು. ಅವನ ಹೆಂಡತಿಗೆ 60 ರೂಪಾಯಿ ಕೊಟ್ಟು ಆತನನ್ನು ಸುಟ್ಟು ಹಾಕಿದ್ದಾರೆ. ಇದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇನ್‌ವೆಸ್ಟಿಗೇಶನ್ ಆಫೀಸರಿಗೆ ಕೊಟ್ಟು ಏನು ಕ್ರಮ ತೆಗೆದುಕೊಂಡರು? ನ್ಯಾಯ ಹೇಗೆ ದೊರಕಿಸಿ ಕೊಟ್ಟರು? ಇದು ಎಷ್ಟು ಮಟ್ಟಿಗೆ ನಮ್ಮ ಇನ್‌ಸೆಕ್ಯೂರಿಟಿ ಇದೆ ಎಂಬುದಕ್ಕೆ ಉದಾಹರಣೆಯನ್ನು ಹೇಳಿದೆ. ಇವತ್ತು ದೊಮ್ಮಲೂರಿನಲ್ಲಿ ಎಲ್ಲಾ ಮನೆಗಳನ್ನು ಎರಡೂವರೆ ಸಾವಿರ ರೂಪಾಯಿಗೆ ಕೊಡುವ ಪದ್ಧತಿ ಇದೆ. ಅದನ್ನು ಜಾರಿಗೆ ಕೊಡುವುದರಲ್ಲಿ ಸಬ್ಸಿಡಿ ಸೊಸೈಟಿಯವರು ಕೊಡಬೇಕು, ಕೊಟ್ಟ ಮೇಲೆ ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಕೊಡುತ್ತಾರೆ ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಬೇಗ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಇವತ್ತು ಹರಿಜನರಿಗೆ ಪ್ರತ್ಯೇಕ ಮನೆ ಹರಿಜನರಿಗೆ ಪ್ರತ್ಯೇಕ ಬಾವಿ, ಅವರಿಗೆ ಪ್ರತ್ಯೇಕ ಶಾಲೆ ಎಲ್ಲಾ ಏಕೆ ಬೇಕು? ನಮಗೆ ಪ್ರತ್ಯೇಕತೆ ಯಾವುದೂ ಬೇಡ. ಮಾನ್ಯ ನಿಜಲಿಂಗಪ್ಪನವರ ಕಾಲದ ಉಪಕಾರ ಮತ್ತು ಅಪಕಾರಗಳನ್ನು ಹೇಳಿದ್ದೇನೆ. ನನ್ನ ಮಿತ್ರರು ಕೆಲವರು ಹೇಳಿದ್ದಾರೆ; ಭೋವಿಗಳನ್ನು ಡಿ ಶೆಡ್ಯೂಲ್ ಮಾಡಬೇಕು, ಲಿಸ್ಟಿನಲ್ಲಿ ಸೇರಿಸಕೂಡದು ಎಂದು ಹೇಳಿದ್ದಾರೆ.

It is a perpetual danger to the generation. ಇದನ್ನು ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಇದು ನೆಗ್ಲೆಕ್ಟ್ ಮಾಡುವ ವಿಷಯವಲ್ಲ. ಅವರನ್ನು ಷೆಡ್ಯೂಲ್ ಕ್ಯಾಸ್ಟಿನಿಂದ ತೆಗೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಬರೆಯಬೇಕು ಆ ಮೇಲೆ ಅವರು ಬೋವಿ ಜನಾಂಗದವರಿಗೆ ಇಷ್ಟೇ ಸೀಟುಗಳನ್ನು ಕೊಡಬೇಕು, ಅವರ ಅಭಿವೃದ್ಧಿಗಾಗಿ ಇಷ್ಟೇ ಹಣವನ್ನು ಕೊಡಬೇಕು, ಇಷ್ಟು ಜನಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿ ಅವರು ಸರ್ಕಾರದಿಂದ ಸಹಾಯವನ್ನು ಪಡೆದುಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಈ ದೃಷ್ಟಿಯಿಂದ ನಾನು ಹೇಳಿದ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ಈ ಸೋಷಿಯಲ್ ವೆಲ್‌ಫೇರ್ ಖಾತೆ ಬೇರೆ ಜನಾಂಗದವರ ಕೈಯಲ್ಲಿ ಇರುವುದಕ್ಕಿಂತ ಈಗ ಮಂತ್ರಿಮಂಡಲದಲ್ಲಿರತಕ್ಕ ಹರಿಜನ ಮಂತ್ರಿಗಳಲ್ಲಿ ಯಾರಾದರೂ ಒಬ್ಬರು ಮಂತ್ರಿಗಳು ಸೋಷಿಯಲ್ ವೆಲ್‌ಫೇರ್ ಖಾತೆಯನ್ನು ತೆಗೆದುಕೊಳ್ಳುವುದು ಒಳ್ಳೆಯದು ಅನಿಸುತ್ತದೆ. ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಹರಿಜನರಿಗಾಗಿ ಒದಗಿಸುವಂಥಾ ಹಣ ಏತಕ್ಕೆ ಲ್ಯಾಪ್ಸ್ ಆಗುತ್ತದೆಯೋ ಗೊತ್ತಿಲ್ಲ. ಈ ಇಲಾಖೆಯಲ್ಲಿ ಕೆಲಸ ಚೆನ್ನಾಗಿ ನಡೆಯಬೇಕಾದರೆ ಕೆಲವರಿಗೆ ಸ್ಪೆಷಲ್ ಆಗಿ ಟ್ರೇನಿಂಗ್ ಕೊಟ್ಟು, ಟ್ರೇನಿಂಗ್ ಆದ ಆಫೀಸರುಗಳನ್ನು ಈ ಇಲಾಖೆಗೆ ಹಾಕಬೇಕು ಎಂದು ನಾನು ಹೇಳುತ್ತೇನೆ. ಮತ್ತು ಇದಕ್ಕಾಗಿ ಒದಗಿಸಿದ ಹಣವನ್ನು ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕು.

ಶಿವಮೊಗ್ಗಾದಲ್ಲಿ ಒಬ್ಬರು ಹರಿಜನ ಗೆಜೆಟೆಡ್ ಆಫೀಸರನ್ನು ಕೊಲೆ ಮಾಡಿದ ವಿಷಯ ಏನಾಯಿತು ? ಅದು ಎನ್‌ಕ್ವೈರಿ ಆಗಿದೆಯೋ, ಸ್ಪೆಸಿಫಿಕ್ ಆಗಿ ಹೇಳಿ. ಆ ಬಗ್ಗೆ ಸ್ಪೆಸಿಫಿಕ್ ಆಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿ. ಈ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸ್ವಲ್ಪ ಹ್ಯೂಮನ್ ಸಿಂಪತಿ, ಹ್ಯೂಮನ್ ಅಪ್ರೋಚ್ ಇರತಕ್ಕಂಥವರನ್ನು ನೇಮಕ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಲೋಕಯ್ಯ ನಾಯಕ್ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧ ಮಾಡುತ್ತಾ ನಾನು ನಾಲ್ಕಾರು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈ ಇಲಾಖೆಗೆ ಸರ್ಕಾರದವರು ಎಷ್ಟು ಹಣವನ್ನು ಕೇಳುತ್ತಿದ್ದಾರೆಯೋ ಅದಕ್ಕೆ ಸರಿಯಾಗಿ ಹರಿಜನ ಗಿರಿಜನರ ಮತ್ತು ದೀನದಲಿತರ ಉದ್ಧಾರ ಆಗುತ್ತಿದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ಜನಾಂಗದವರಿಗೆ ಸಂಬಂಧಪಟ್ಟ ಹಾಗೆ ಸರ್ಕಾರದ ನೀತಿ ಏನು ಇದೆ ಎಂದರೆ ಜಮೀನು ಇಲ್ಲದವರಿಗೆ ಜಮೀನು ಕೊಡುವುದು, ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು, ಇದು ಸರ್ಕಾರದ ನೀತಿ ಆಗಿದೆ. ಅದನ್ನು ಕೊಟ್ಟಮೇಲೆ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ಅವರಿಗೆ ಕೊಟ್ಟಂಥ ಜಮೀನುಗಳನ್ನು ಅವರು ಸರಿಯಾಗಿ ಇಟ್ಟುಕೊಂಡಿದ್ದಾರೆಯೇ ಹೇಗೆ ಎಂಬುದನ್ನು ನೋಡಬೇಕಾಗಿದೆ. ಈಗ ಹರಿಜನರಿಗಾಗಿ ಸರ್ಕಾರದವರು ಕೆಲವು ಕಾಲೋನಿಗಳನ್ನು ಮಾಡಿ ಅವರಿಗೆ ಇಂತಿಷ್ಟು ಜಮೀನು ಕೊಡುವುದು ಮತ್ತು ಮನೆಗಳನ್ನು ಕಟ್ಟಿಸಿಕೊಡುವುದು ಇತ್ಯಾದಿ ಕೆಲಸಗಳನ್ನು ಮಾಡಿದ್ದಾರೆ. ಈ ರೀತಿ ಹರಿಜನರಿಗೆ ಸರ್ಕಾರದವರು ಜಮೀನು ಕೊಟ್ಟ ಮೇಲೆ ಕೆಲವರು ಹೊಂಚಿ ಹಾಕಿಕೊಂಡಿದ್ದು, ಕಾಯ್ದುಕೊಂಡಿದ್ದು, ಹರಿಜನರಿಗೆ ಕೊಟ್ಟಂಥ ಜಮೀನನ್ನು ಅವರ ಹೆಸರಿಗೆ ಮಾಡಿಸಿಕೊಳ್ಳುವಂಥಾ ಪ್ರವೃತ್ತಿಯುಳ್ಳವರು ಕೆಲವರು ಇದ್ದಾರೆ. ಈ ರೀತಿಯಾಗಿ ನಮ್ಮ ಜಿಲ್ಲೆಯಲ್ಲಿ ನಡೆದಂತಹ ನಿದರ್ಶನಗಳನ್ನು ಕಳೆದ ವರ್ಷ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೇನೆ. ಮಡಕೇರಿ ತಾಲ್ಲೂಕು ಹಾಕತ್ತೂರು ಗ್ರಾಮದಲ್ಲಿ 18 ಜನ ಹರಿಜನರ ಕುಟುಂಬಗಳಿಗೆ ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಕೆಲವು ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ತಾಲ್ಲೂಕು ಬೋರ್ಡಿನಿಂದ 2700 ರೂಪಾಯಿಗಳನ್ನು ಖರ್ಚು ಮಾಡಿ ಕುಡಿಯುವ ನೀರಿನ ಬಾವಿಯನ್ನು ಕಟ್ಟಿಸಿಕೊಟ್ಟಿದ್ದಾರೆ. ಅವರೆಲ್ಲರೂ ಅನೇಕ ವರ್ಷಗಳಿಂದ ಆ ಜಮೀನಿನಲ್ಲಿ ಕೃಷಿಮಾಡಿಕೊಂಡು ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಯಾರೋ ಒಬ್ಬರು ಕಾಂಗ್ರೆಸ್ ಮಹನೀಯರ ಕಣ್ಣು ಅವರ ಮೇಲೆ ಬಿತ್ತು. ಅವರು ಆ ಹರಿಜನರಿಗೆ ಏನೋ ಆಶೆಯನ್ನು ತೋರಿಸಿ ಆ ಜಮೀನನ್ನು ಖರೀದಿ ಮಾಡುತ್ತಿದ್ದಾರೆ. ಈ ವಿಚಾರವನ್ನು ಅನೇಕ ಸಾರಿ ನಾನು ಈ ಸಭೆಯಲ್ಲಿ ಹೇಳಿದ್ದೇನೆ. ಮತ್ತು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಆ ಬಗ್ಗೆ ಇದುವರಿಗೂ ಕೂಡ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆ ಹರಿಜನರು ತಮ್ಮ ಜಮೀನನ್ನು ಮಾರುವುದಕ್ಕೆ ಜಿಲ್ಲಾಧಿಕಾರಿಗಳು ಪರ್ಮಿಷನ್ ಕೂಡ ಕೊಟ್ಟಿದ್ದಾರೆ. ಆ ಪರ್ಮಿಷನ್ ಕೊಟ್ಟಿರುವುದು ಯಾವ ರೀತಿ ಇದೆ ಎಂದರೆ "The Harijans have requested the Deputy Commissioner to accord

(ಶ್ರೀ ಎನ್. ಲೋಕಯ್ಯ ನಾಯಕ್)

sanction to alienate the above grants in favour of Sri N. G. Ahmed with a view to purchase jamma lands in murgod village belonging to Sri Tatappa muthappa.'' ಹರಿಜನರು ಆ ಜಮೀನನ್ನು ಮಾರುವುದಕ್ಕೆ ಪರ್ಮಿಷನ್ ಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಹಾಕಿದ್ದಾರೆ. ಆ ಬಗ್ಗೆ ಜಿಲ್ಲಾಧಿಕಾರಿಗಳು ಮಾಡಿರತಕ್ಕ ಆರ್ಡರ್ ಈ ರೀತಿ ಇದೆ.'' permission is therefore accorded to sell the lands mentioned in para (1) in favour of Sri N. G. Ahmed subject to the condition that the harijan applicant should be re-habilitated as required by them.'' ಎಂದು ಇದೆ. ಆಮೇಲೆ ಇನ್ನೊಂದು ಪ್ಯಾರಾದಲ್ಲಿ ಹೇಳುತ್ತಾರೆ 'Separate action many be taken to obtain sanction to the alienation' of Jamma lands on which the applicants propose to get themselves re-habilitated—ಎಂದು ಹೇಳಿದ್ದಾರೆ. ಈ ರೀತಿ ಹರಿಜನರಿಗೆ ಸರ್ಕಾರದವರು ಕೊಟ್ಟಂಥ ಆಸ್ತಿ ಪಾಸ್ತಿಗಳನ್ನು ಮಾರುವುದಕ್ಕೆ ಆರ್ಡರ್ ಮಾಡಿರುವ ಪರ್ಮಿಷನ್ ಕೊಟ್ಟಿರುವ ಜಿಲ್ಲಾಧಿಕಾರಿಗಳನ್ನು ತೂಗು ಹಾಕುತ್ತೀರಾ? ಏನು ಶಿಕ್ಷೆಯನ್ನು ಅವರಿಗೆ ವಿಧಿಸುತ್ತೀರಿ? ಇಂಥಾ ಜಿಲ್ಲಾಧಿಕಾರಿಗಳನ್ನು ಇಟ್ಟುಕೊಂಡರೆ ಸಮಾಜಕ್ಕೆ ಯಾವ ರೀತಿ ಒಳ್ಳೆಯದಾಗುತ್ತದೆ. ಈ ಒಂದು ನಿದರ್ಶನ ಮಾತ್ರವಲ್ಲ. ಇನ್ನೂ ಎಷ್ಟೋ ನಿದರ್ಶನಗಳು ಇವೆ ಮೈಸೂರು ಸಂಸ್ಥಾನದಲ್ಲಿ ಕಳೆದ 10 ವರ್ಷಗಳಿಂದ ಹರಿಜನರಿಗೆ ಸರ್ಕಾರದವರು ಎಷ್ಟೋ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಎಷ್ಟೋ ಜಮೀನುಗಳನ್ನು ಮಂಜೂರು ಮಾಡಿದ್ದಾರೆ. ಅಷ್ಟನ್ನೂ ಅವರು ಇಟ್ಟುಕೊಂಡಿದ್ದಾರೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಹರಿಜನ ಗಿರಿಜನರಿಗೆ ಒಂದು ಸಣ್ಣ ಆಶೆಯನ್ನು ತೋರಿಸಿದರೂ ಕೂಡ ಅವರು ಸುಲಭದಲ್ಲಿ ತಮ್ಮ ಜಮೀನನ್ನು ಮಾರುತ್ತಾರೆ. ಇಂಥಾ ಫ್ರೀಗ್ರಾಂಟನ್ನು ಸರ್ಕಾರದವರು ಕೊಟ್ಟೂ ಕೂಡ ಯಾವ ಪ್ರಯೋಜನವೂ ಇಲ್ಲ. ಅದ್ದರಿಂದ ಇಂಥಾ ಫ್ರೀಗ್ರಾಂಟ್ ಮುಖಾಂತರ ಹರಿಜನರಿಗೆ ಕೊಟ್ಟಂಥ ಜಮೀನನ್ನು 15 ವರ್ಷಗಳು ಆಗುವ ತನಕ ಅದನ್ನು ಬೇರೆ ಯವರಿಗೆ ಮಾರುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ ಅದು ಅವರಿಗೆ ಬೇಡದೇ ಹೋದ ಸಂದರ್ಭದಲ್ಲಿ ಸರ್ಕಾರದವರೇ ಅದನ್ನು ವಾಪಸ್ಸು ತೆಗೆದುಕೊಂಡು ಇನ್ನೊಬ್ಬರಿಗೆ ಹಂಚಬಹುದು. ಮಾರುವುದಕ್ಕೆ ಅವಕಾಶವನ್ನು ಕೊಡುವಂಥಾ ಪ್ರಾವಿಜನ್ ಇಲ್ಲ. ಈ ವಿಚಾರದಲ್ಲಿ ನಾನು ಈಗ ಎರಡು ವರ್ಷಗಳಿಂದ ಹೇಳುತ್ತಿದ್ದೇನೆ. ಈ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ಈಗ್ಗೆ ಒಂದೂವರೆ ತಿಂಗಳ ಹಿಂದೆ ಹುಣಸೂರು ಟಿಂಬರ್ ಡಿಪೋವಿನಿಂದ ಅಕ್ರಮವಾಗಿ ಮರಮುಟ್ಟುಗಳನ್ನು ಸಾಗಿಸುತ್ತಿದ್ದ 26 ಲಾರಿಗಳನ್ನು ಹಿಡಿದಿದ್ದಾರೆ. ಪ್ರತಿಯೊಬ್ಬ ಹರಿಜನರಿಗೂ ಮನೆ ಕಟ್ಟಿಕೊಳ್ಳಬೇಕಾದರೆ ಸಂಬಂಧ ಪಟ್ಟ ವಿಲೇಜ್ ಆಫೀಸರ್ಸ್ ಅವರಿಂದ ಸರ್ಟಿಫಿಕೇಟ್ ಪಡೆದು ಅದನ್ನು ಬಿ. ಡಿ. ಓ. ಮುಖಾಂತರ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಅವರಿಂದ ಹುಕುಂ ಪಡೆದು ಕೊಂಡು ಬಂದು ಅದನ್ನು ಹುಣಸೂರು ಟಿಂಬರ್ ಡಿಪೋವಿನಲ್ಲಿ ತೋರಿಸಿದರೆ ಅವರು 200 ರೂಪಾಯಿಗಳ ಬೆಲೆ ಬಾಳುವ ಮರಮುಟ್ಟುಗಳನ್ನು ಕೊಡುತ್ತಾರೆ. ಎರಡು ತಿಂಗಳ ಹಿಂದೆ ರಾಹುಕಾಲ ಬಂದಿತ್ತು ಎಂದು ಕಾಣುತ್ತದೆ, 26 ಲಾರಿಗಳ ಮರವನ್ನು ಇಂಟಲಿಜೆನ್ಸ್ ಬ್ಯೂರೋ ಅವರು ಹಿಡಿದರು. ಇದೇ ವಿಚಾರ ಮೇಲ್ಮನೆಯಲ್ಲಿಯೂ ಕೂಡ ಪ್ರಸ್ತಾಪಕ್ಕೆ ಬಂದಿತ್ತು. ಇವತ್ತಿನದಿವಸ ಹರಿಜನರ ಹೆಸರಿನಲ್ಲಿ ಕೆಲವರು ಸರ್ಟಿಫಿಕೇಟ್ ಪಡೆದುಕೊಂಡು ಹುಣಸೂರ್ ಟಿಂಬರ್ ಡಿಪೋಗೆ ಹೋಗಿ ಮರಗಳನ್ನು ಪಡೆಯುತ್ತಿದ್ದಾರೆ. ಆ ರೀತಿ ಪಡೆದ ಮರಗಳನ್ನು ಬೇರೆ ಕಡೆ ಮಾರಿಕೊಳ್ಳುತ್ತಿದ್ದಾರೆ. ಇಂತಹ ಪ್ರಕರಣಗಳು ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ಕಳೆದ ಮೂರು ವರ್ಷಗಳಿಂದ ಹರಿಜನರಿಂದ ಮನೆಗಳನ್ನು ಕಟ್ಟಿಕೊಳ್ಳಲು ಮರ ಬೇಕೆಂದು ಎಷ್ಟು ಅರ್ಜಿಗಳು ಬಂದಿವೆ ಮತ್ತು ಎಷ್ಟು ಜನರಿಗೆ ಮರಗಳನ್ನು ಕೊಡಲಾಗಿದೆ ಎಂಬುದಾಗಿ ಒಂದು ಪ್ರಶ್ನೆಯನ್ನು ಸಹ ಕೇಳಿದ್ದೇನೆ. ಈ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಸರ್ಕಾರದವರು ಹರಿಜನರಿಗಾಗಿ ಕೊಡುತ್ತಿರುವ ಮರಗಳನ್ನು ಅವರು ಉಪಯೋಗಿಸಿಕೊಂಡು ಮನೆಗಳನ್ನು ಕಟ್ಟುತ್ತಿದ್ದಾರೆಯೇ ಎಂದರೆ ಇಲ್ಲ. ಅನೇಕರು ಮರಗಳನ್ನು ತೆಗೆದುಕೊಂಡು ಮಾರಿಕೊಳ್ಳುತ್ತಿದ್ದಾರೆ. ಕಳೆದ 10 ವರ್ಷಗಳಿಂದ ಹುಣಸೂರ್ ಡಿಪೋನಲ್ಲಿ ಎಷ್ಟು ಜನ ಹರಿಜನರು ಮರಗಳನ್ನು ಪಡೆದುಕೊಂಡು ಮನೆ ಕಟ್ಟಿಕೊಳ್ಳಲು ಬಿ. ಡಿ. ಓ. ಅವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂಬ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. 100ಕ್ಕೆ 75ರಷ್ಟು ಜನರು ಬೋಗಸ್ ಸರ್ಟಿಫಿಕೇಟ್ ಪಡೆದು ಕೊಂಡು ಮರಗಳನ್ನು ಪಡೆದುಕೊಂಡು ಮಾರಾಟ ಮಾಡಿಕೊಂಡಿದ್ದಾರೆ. ಈಗ ಎರಡು ತಿಂಗಳ ಹಿಂದೆ ಮಾತ್ರ 26 ಲಾರಿ ಮರಗಳನ್ನು ಹಿಡಿದಿರುವ ಪ್ರಕರಣ ಬೆಳಕಿಗೆ ಬಂದಿದೆ. ಇನ್ನು

ಮುಂದೆ ಈ ರೀತಿ ಅನ್ಯಾಯವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಹರಿಜನ ಮತ್ತು ಗಿರಿಜನರಿಗೆ ಎಂಪ್ಲಾಯ್‌ಮೆಂಟ್ ಆಫೀಸ್‌ನಲ್ಲಿ ಶೇಕಡ 15.3ರಂತೆ ಕೆಲಸ ಕೊಡಬೇಕೆಂದು ನಿಯಮವಿದೆ. ನನ್ನ ಜಿಲ್ಲೆಯಮಟ್ಟಿಗೆ ಹೇಳುವು ದಾದರೆ ಈ ಜನರಿಗೆ ಯಾವ ಕೆಲಸಗಳೂ ಸಹ ಸಿಗುತ್ತಿಲ್ಲ. ಅನೇಕ ಜನರು ರಿಜಿಸ್ಟರ್ ಮಾಡಿಸಿ ನಂತರ ರಿನ್ಯೂ ಮಾಡಿಸುತ್ತಲೇ ಇದ್ದಾರೆ, ಆದರೆ ಇಂಟರ್‌ವ್ಯೂ ಕೂಡ ಬರುತ್ತಿಲ್ಲ. ಈ ವಿಚಾರದಲ್ಲಿ ಬಹಳ ಪುಕಾರ ಬರುತ್ತಿದೆ. ಆದಕಾರಣ ಸರ್ಕಾರದವರು ಪ್ರತಿಯೊಂದು ಇಲಾಖೆ ಯಲ್ಲಿ ಈ ಜನರು ಎಷ್ಟೆಷ್ಟು ಇದ್ದಾರೆ ಎಂಬ ಬಗ್ಗೆ ಒಂದು ಸ್ಟೇಟ್‌ಮೆಂಟ್ ತರಿಸಿಕೊಂಡು ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಮತ್ತು ಈ ವಿಚಾರದಲ್ಲಿ ಸರ್ಕಾರದವರು ಬಹಳ ಎಚ್ಚರಿಕೆಯನ್ನು ವಹಿಸಬೇಕೆಂದು ತಿಳಿಸುತ್ತಿದ್ದೇನೆ. ಈಗ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಕಾಲೋನಿಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಈ ಕಾಲೋನಿಗಳಲ್ಲಿರುವ ಮನೆಗಳಿಗೆ ಸರಿಯಾದ ಗೋಡೆ ಮತ್ತು ಹಂಚುಗಳೇ ಇರುವುದಿಲ್ಲ. ಒಂದು ಮಳೆಗಾಲ ಬಂದರೆ ಸಾಕು ಈ ಮನೆಗಳು ಬಿದ್ದುಹೋಗುತ್ತವೆ. ಚುನಾವಣೆಯ ಸಮಯದಲ್ಲಿ ಓಟನ್ನು ಪಡೆಯಲು ಈ ರೀತಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ನೀವು ಮರದ ಕೆಳಗೆ ಇದ್ದೀರಿ, ನಾವು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ, ಇನ್ನು ಯಾವ ಸರ್ಕಾರ ಬಂದರೂ ಕೂಡ ಈ ರೀತಿ ಅನುಕೂಲಗಳನ್ನು ಮಾಡಿಕೊಡುವುದಿಲ್ಲವೆಂದು ಅವರನ್ನು ಪುಸಲಾಯಿಸಿ ಅವರಿಂದ ಓಟನ್ನು ಪಡೆಯುವುದಕ್ಕೆ ಇದು ಒಂದು ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಈ ರೀತಿ ಮಾಡಿದರೆ ಸಮಾಜಕ್ಕೆ ಯಾವ ರೀತಿಯ ಅನುಕೂಲವೂ ಸಹ ಆಗುವುದಿಲ್ಲ. ಇವತ್ತಿನದಿವಸ ಸರ್ಕಾರದವರು ಹರಿಜನರಿಗೆ ಖರ್ಚುಮಾಡು ತ್ತಿರುವ ಹಣದಲ್ಲಿ ಶೇಕಡ 25ರಷ್ಟು ಕೂಡ ಅವರಿಗೆ ಸಿಗುತ್ತಿಲ್ಲವೆಂದು ಹೇಳಬೇಕಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಅಧ್ಯಕ್ಷರೇ, ಇಂದಿನದಿನ ಸರ್ಕಾರದವರು ಇಟ್ಟಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ, ಈ ಒಂದು ಸ್ವಾತಂತ್ರ್ಯ ಬಂದ ಮೇಲೆ ಅದರಲ್ಲೂ ಮುಖ್ಯವಾಗಿ ಯೋಜನೆಗಳು ಪ್ರಾರಂಭವಾದಮೇಲೆ ಕಳೆದ 17 ವರ್ಷಗಳಿಂದ ಎಷ್ಟರಮಟ್ಟಿಗೆ ಹಿಂದುಳಿದ ವರ್ಗದವರ ಕಲ್ಯಾಣವಾಗಿದೆ ಎಂಬ ವಿಷಯವಾಗಿ ನಾನು ಮಾತ ನಾಡುತ್ತಾ ಒಂದೆರಡು ಪ್ರಾಮುಖ್ಯವಾದಂಥ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಹಾತ್ಮಗಾಂಧಿ ಹಾಗೂ ಬಿ.ಆರ್. ಅಂಬೇಡಕರ ಅವರ ಮುಖಂಡತ್ವದಲ್ಲಿ ಸ್ವಾತಂತ್ರ್ಯ ಪೂರ್ವ ಭಾವಿಯಾಗಿ ಮತ್ತು ಸ್ವಾತಂತ್ರ್ಯ ಬಂದಮೇಲೆ ಈ ಒಂದು ಸಮಾಜವೆಂಬ ಏಣಿಯಲ್ಲಿ ಕೊನೆಯ ಕಾಲಿನ ಬಳಿ ಇರುವ ಜನರ ಅಭಿವೃದ್ಧಿ ಆಗದ ಹೊರತು ಸರ್ವೋದಯವಾಗುವುದಿಲ್ಲ ಎಂಬತಕ್ಕಂಥ ಒಂದು ತತ್ವವನ್ನು ಪ್ರತಿಪಾದಿಸಲಾಯಿತು. ಅದೇ ಪ್ರಕಾರ ರಾಜ್ಯಾಂಗದಲ್ಲಿ ಕೂಡ ಈ ಜನರ ಅಭಿವೃದ್ಧಿಯಾಗಬೇಕೆಂಬ ಮಾತನ್ನು ಕಾನೂನು ಬದ್ಧವಾಗಿ ಒಪ್ಪಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಕಳೆದ ಮೂರು ಯೋಜನೆಗಳ ಕಾಲದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ಈ ಜನರ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ, ಈ ಜನರಿಗೆ ಇಟ್ಟಿದ್ದ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಿಕ್ಕೆ ಆಗಲಿಲ್ಲ ಎಂಬ ಬಗ್ಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮೊದಲನೆಯ ಯೋಜನೆಯಲ್ಲಿ 4.799 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಇದ ರಲ್ಲಿ 137·890 ರೂಪಾಯಿಗಳನ್ನು ಹರಿಜನರ ಅಭಿವೃದ್ಧಿಗಾಗಿ ತೆಗೆದಿಟ್ಟಿದ್ದರು. ಆದರೆ ಇದರಲ್ಲಿ ಸುಮಾರು 100.07 ರೂಪಾಯಿಗಳು ಮಾತ್ರ ಖರ್ಚಾಯಿತು. 37.200 ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಯಿತು. ಎರಡನೆಯ ಯೋಜನೆಯಲ್ಲಿ 14.513 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಅದರಲ್ಲಿ 304.686 ರೂಪಾಯಿಗಳನ್ನು ಹರಿಜನರ ಅಭಿವೃದ್ಧಿಗಾಗಿ ಇಟ್ಟಿದ್ದರು. ಅದರಲ್ಲಿ ಸುಮಾರು 29 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. 13.966 ರೂಪಾಯಿಗಳಷ್ಟು ಲ್ಯಾಪ್ಸ್ ಆಯಿತು. ಮೂರನೆಯ ಯೋಜನೆಯಲ್ಲಿ ಸುಮಾರು 25 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಇದರಲ್ಲಿ ಹರಿಜನರ ಅಭಿವೃದ್ಧಿಗಾಗಿ 339 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. 301.98 ಲಕ್ಷ ರೂಪಾಯಿಗಳಷ್ಟು ಖರ್ಚಾಯಿತು. 37.20 ಲಕ್ಷ ರೂಪಾಯಿಗಳಷ್ಟು ಲ್ಯಾಪ್ಸ್ ಆಯಿತು. ಇದೇ ರೀತಿ ಸೆಂಟ್ರಲ್ ಸೆಕ್ಟರನ್ನು ತೆಗೆದುಕೊಂಡರೆ ಅವರು ಮೊದಲನೆಯ ಯೋಜನೆ ಯಲ್ಲಿ ಹರಿಜನರಿಗೆ ಪ್ರಾಧಾನ್ಯತೆ ಕೊಟ್ಟಿರಲಿಲ್ಲ. ಎರಡನೆಯ ಯೋಜನೆಯಲ್ಲಿ 100.925 ರೂಪಾಯಿ ಗಳ ಟೋಟಲ್ ಔಟ್‌ಲೆಯಲ್ಲಿ 67.53 ಲ ರೂಪಾಯಿಗಳನ್ನು ಹರಿಜನರಿಗೆ ಇಟ್ಟಿದ್ದರು. ಇದರಲ್ಲಿ ಸುಮಾರು 33 ಲಕ್ಷ ರೂಪಾಯಿಗಳು ಖರ್ಚಾಗದೆ ಲ್ಯಾಪ್ಸ್ ಆಯಿತು. 3ನೇ ಯೋಜನೆಯಲ್ಲಿ 46.13 ರೂಪಾಯಿಗಳಲ್ಲಿ 36 ಲಕ್ಷ ರೂಪಾಯಿಗಳು ಖರ್ಚಾಯಿತು, 9.515 ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಯಿತು. ನಾಲ್ಕನೇ ಯೋಜನೆಯಲ್ಲಿ 450 ಕೋಟಿ ರೂಪಾಯಿಗಳ ಅಂದಾಜು ಎಂದು

(ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ)

ಹೇಳುತ್ತಾರೆ. ಇದರಲ್ಲಿ ಸುಮಾರು ಆರು ಕೋಟಿಯಷ್ಟು ಹರಿಜನರ ಅಭಿವೃದ್ಧಿಗಾಗಿ ಇಟ್ಟಿದ್ದಾರೆ. ಇದರಲ್ಲಿ ಕಮಿಟೆಡ್ ಎಕ್ಸ್‌ಪೆಂಡಿಚರು 1.79 ಕೋಟಿ. 69-70ನೇ ಸಾಲಿನಲ್ಲಿ ಸುಮಾರು 70 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಇದೂ ಕೂಡ ಸರಿಯಾಗಿ ಖರ್ಚಾಗಿಲ್ಲ.

11-00 A. M.

ನಾನು ಸ್ವಲ್ಪ ಉದ್ವೇಗದಿಂದ ಇಲ್ಲಿ ಮಾತಾಡುತ್ತಿದ್ದೇನೆ ಎಂದು ತಿಳಿಯಬಾರದು. ನನ್ನ ಸ್ವಭಾವವೇ ಸ್ವಲ್ಪ ಉದ್ವೇಗದಿಂದ ಮಾತನಾಡುವುದು. ಇದಕ್ಕೆ ಕಾರಣ ಹರಿಜನರ ಅಭಿವೃದ್ಧಿ ಸರಿಯಾಗಿ ಆಗುತ್ತಿಲ್ಲ ಎನ್ನುವುದೇ ವಿನಾ ಮತ್ತೇನಿಲ್ಲ. ಇದರಲ್ಲಿ ಸವರ್ಣ ಹಿಂದುಗಳ ಮೇಲೆ ನಾನು ಏನೂ ಹೇಳುತ್ತಿಲ್ಲ. ಆದರೆ ಇಂದು ಸರ್ವಿಸ್‌ನಲ್ಲಿ ಸವರ್ಣ ಹಿಂದುಗಳು ಎಷ್ಟು ಜನರಿದ್ದಾರೆ ಮತ್ತು ಅಧಿಕಾರಿಗಳು ಎಷ್ಟು ಇದ್ದಾರೆ ಎಂದು ನೋಡಿದರೆ ಹರಿಜನರು ಶೇಕಡಾ 20 ಕ್ಕಿಂತ ಮೇಲೆ ಇಲ್ಲ. ಇತರೇ ಜನಗಳು ಶೇಕಡಾ 80 ರಷ್ಟು ಇದ್ದಾರೆ. ಇದರಿಂದ ಹರಿಜನರ ಅಭ್ಯಿದ್ಧಿಯಾದ ಹಾಗಾಯಿತೇ ಎಂದು ಕೇಳುತ್ತೇನೆ. ಮತ್ತು ಯಾರ ಮನಸ್ಸೂ ನೋಯಬೇಕು ಎಂದು ಇಲ್ಲಿ ಮಾತನಾಡುತ್ತಿಲ್ಲ. ಅಸ್ಪೃಶ್ಯತೆಯನ್ನು ಎಷ್ಟುಮಟ್ಟಿಗೆ ನಿವಾರಿಸಲಾಗಿದೆ, ಸ್ವಾತಂತ್ರ್ಯ ಬಂದ ಮೇಲೆ ಇದರಲ್ಲಿ ಎಷ್ಟುಮಟ್ಟಿಗೆ ಸುಧಾರಣೆಯಾಗಿದೆ ಎನ್ನುವುದನ್ನು ನೋಡಿದರೆ ನಮಗೆ ಮನಸ್ಸು ಬಹುಮಟ್ಟಿಗೆ ನೋವುಂಟಾಗುತ್ತದೆ. ನನ್ನ ಸ್ನೇಹಿತರಲ್ಲಿ ಹೇಳುವುದು ಬಹುಶಃ ಇಂತಹ ಸಣ್ಣ ಯೋಜನೆಗಳನ್ನು ಮಾಡಿದರೆ ಹರಿಜನರಿಗೆ ಬೆಂಬಲ ಕೊಟ್ಟ ಹಾಗಾಯಿತೇ. ಇವರನ್ನು ಅಭಿವೃದ್ಧಿ ಮಾಡುವುದು ಈ ಸಭೆಯ ಸದಸ್ಯರೆಲ್ಲರ ಪ್ರತಿನಿಧಿಗಳ ಜವಾಬುದಾರಿಯೂ ಆಗಿದೆ ಮತ್ತು ಅಂತಹ ಜವಾಬುದಾರಿ ನಮ್ಮ ಮೇಲೆಯೂ ಬಿದ್ದಿದೆ. ಈ ಸಂದರ್ಭದಲ್ಲಿ ರಾಜ್ಯಾಂಗದಲ್ಲಿ ಹರಿಜನರಿಗಾಗಿ ಕೆಲವು ಪ್ರಾವಿಷನ್‌ಗಳಿವೆ. ಅವು ಆರ್ಟಿಕಲ್ 15 ಇತ್ಯಾದಿಗಳು.

Article 15 of the Constitution prohibits discrimination on grounds of religion, race, caste, sex or place of birth.

Article 15 (4) provides for making any special provision for the advancement of any socially and educationally backward classes of citizens or for the scheduled castes and the Scheduled Tribes.

Article 16 (2) declares there should be no discrimination on grounds of religion, race, castes, sex, etc., in providing employment.

Article 16 (4) provides as follows :

> " Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

Article 19 (5) says that the State is prevented from making, imposing restrictions on the exercise of any of the rights conferred by the said sub-clauses either in the interests of the general public or for the protection of the interests of any Scheduled Tribe.

Article 46 reads as follows :

> " The State shall promote with special care the educational and economic interests of the weaker sections of the people, and, in particular of the scheduled castes and the scheduled tribes, and shall protect them from social injustice and all froms of exploitation."

Article 332 provides for reservation of seats for scheduled castes and scheduled tribes in the Legislative Assemblies of the States.

Article 338 provides for Special Officer for Scheduled Castes, Scheduled Tribes, etc.

Article 340 provides for the appointment of a Commission to investigate the conditions of backward Classes.

Article 341 and 342 say about the scheduled castes and scheduled tribes.

ಇಷ್ಟೊಂದು ಪ್ರಾವಿಷನ್‌ಗಳು ಹರಿಜನರ ಅಭಿವೃದ್ಧಿಗೋಸ್ಕರ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಸರ್ಕಾರದ ಹುದ್ದೆಗಳಲ್ಲಿ ಹರಿಜನರಿಗೆ ಯಾವ ರೀತಿಯಾಗಿ ಕೊಟ್ಟಿದ್ದಾರೆ ಎನ್ನುವುದನ್ನು ಇಲ್ಲಿ ಹೇಳುತ್ತೇನೆ.

ಹರಿಜನರು ಕ್ಲಾಸು ಒಂದರಲ್ಲಿ	...	1.89
ಕ್ಲಾಸು ಎರಡರಲ್ಲಿ	...	1.36
ಕ್ಲಾಸು ಮೂರರಲ್ಲಿ	...	6.38
ಕ್ಲಾಸು ನಾಲ್ಕರಲ್ಲಿ	...	11.36
ಇದರಲ್ಲಿ ಹರಿಜನರು ಒಂದನೇ ವರ್ಗದಲ್ಲಿ	...	0.26
ಎರಡನೇ ವರ್ಗದಲ್ಲಿ	...	0.2[illegible]
ಮೂರನೇ ವರ್ಗದಲ್ಲಿ	...	2.43
ನಾಲ್ಕನೇ ವರ್ಗದಲ್ಲಿ	...	1.10
ಇತರ ಕಮ್ಯೂನಿಟಿಗಳಲ್ಲಿ ಹೇಗಿದೆ ಎಂದರೆ		
ಒಂದನೇ ಕ್ಲಾಸಿನಲ್ಲಿ	...	97.87
ಎರಡನೇ ಕ್ಲಾಸಿನಲ್ಲಿ	...	96.40
ಮೂರನೇ ಕ್ಲಾಸಿನಲ್ಲಿ	...	93.19
ನಾಲ್ಕನೇ ಕ್ಲಾಸಿನಲ್ಲಿ	...	86.94

ತುಕೋಳ ಕಮಿಟಿಯಲ್ಲಿ ಹೇಳಿರುವಂತೆ 4800 ಜನ ಕ್ಲಾಸು ಒಂದರ ಆಫೀಸರುಗಳಿದ್ದಾರೆ 6500 ಜನ ಎರಡನೇ ದರ್ಜೆಯವರು ಇದ್ದಾರೆ, ಮೂರನೇ ದರ್ಜೆಯಲ್ಲಿ 1,46,000 ಮತ್ತು ನಾಲ್ಕನೇ ವರ್ಗದಲ್ಲಿ 82,700 ಜನರಿದ್ದಾರೆ. ಇದರಲ್ಲಿ ಬೀರಪ್ಪ ಕಮಿಟಿ ರಿಪೋರ್ಟಿನಂತೆ ಹರಿಜನರು ಈ ದೇಶದಲ್ಲಿ ಹುದ್ದೆಗಳಲ್ಲಿ ಹೇಗಿದ್ದಾರೆ ಎಂದರೆ, ಒಂದನೇ ವರ್ಗದಲ್ಲಿ 21, ಎರಡನೇ ವರ್ಗದಲ್ಲಿ 71, ಮೂರನೇ ವರ್ಗದಲ್ಲಿ 6571 ನಾಲ್ಕನೇ ವರ್ಗದಲ್ಲಿ 3952. ಒಟ್ಟು 2.4 ಲಕ್ಷದಲ್ಲಿ 10,615 ಜನರು ಹರಿಜನರು ಇದ್ದಾರೆ ಎಂದು ಬೀರಪ್ಪ ಕಮಿಟಿ ರಿಪೋರ್ಟಿನಲ್ಲಿದೆ. ಈಚೆಗೆ ಇದರಲ್ಲಿ ಸ್ವಲ್ಪ ಬದಲಾವಣೆಗಳು ಆಗಿರಬಹುದು ಮತ್ತು ಕೆಲವರು ರಿಟೈರೂ ಆಗಿರಬಹುದು. ಸೋಷಿಯಲ್ ವೆಲ್‌ಫೇರು ಇಲಾಖೆಯಲ್ಲಿ ಯಾವ ರೀತಿಯಾಗಿ ಹಿಂದುಳಿದವರಿಗೆ ಕೆಲಸ ಕೊಟ್ಟಿದ್ದಾರೆ ಎಂದು ನೋಡಿದರೆ ಎಲೆಕ್ರಿಸಿಟಿ ಬೋರ್ಡಿನಲ್ಲಿ ಒಂದನೇ ವರ್ಗದಲ್ಲಿ 444 ಜನರಿದ್ದಾರೆ, ಮೂರನೇ ವರ್ಗದಲ್ಲಿ 451 ಜನರಿದ್ದಾರೆ. ಹಾಗೆ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಕೆಲವರನ್ನು ಸ್ಕ್ಯಾವೆಂಜರು ಹಾಗೂ ಸ್ವೀಪರುಗಳು ಇದ್ದಾರೆ. ಈಗ ಪೋಲೀಸು ಕಾನ್‌ಸ್ಟೇಬಲ್‌ಗಳ ಸಂಖ್ಯೆ ನೋಡಿದರೆ ಸುಮಾರು 1,962 ಜನ ಪೋಲೀಸು ಕಾನ್‌ಸ್ಟೇಬಲ್ ಹರಿಜನರು ಮಾತ್ರ ಇದ್ದಾರೆ. ಸೆಕ್ರಟೆರಿಯಟ್‌ನಲ್ಲಿ ಎಷ್ಟು ಸಂಖ್ಯೆ ಇದೆ ಎಂದು ನೋಡಿದರೆ ಇದು ಬಹಳ ನೆಗ್ಲಿಜಿಬಲ್. ಇವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಇದರ ಮೇಲೆ ಒಂದು ಕಾಮೆಂಟು ಹೇಳಬೇಕಾಗಿದೆ. The Scheduled castes people are not wanted anywhere, but there are some people kept by Government in some Departments. ಕ್ಲಾಸು ಫೋರ್ ಗ್ರೇಡಿನಲ್ಲಿರುವ ನೌಕರರನ್ನು ಎಷ್ಟೋ ಅಧಿಕಾರಿಗಳು ಕೆಲಸಕ್ಕೆ ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ. ಇದಕ್ಕೆ ಕಾರಣ ಅಸ್ಪೃಶ್ಯತೆಯವರು ಬಂದರೆ ಮನೆಗಳಲ್ಲಿ ಕೆಲಸ ಮಾಡಲು ಆಗುವುದಿಲ್ಲ ಎಂದು ಇವರಿಗೆ ಯಾವ ಅನುಕೂಲಗಳೂ ದೊರಕುತ್ತಿಲ್ಲ. ಮತ್ತು ಸರಿಯಾದ ಪ್ರಾತಿನಿಧ್ಯವೂ ಸಿಗುತ್ತಿಲ್ಲ. ಇದರಿಂದ ಅಸ್ಪೃಶ್ಯತಾ ನಿವಾರಣೆ ಹೇಗೆ ಮಾಡಿಕೊಂಡಿದ್ದೀರಿ ಎಂದು ಕೇಳಬೇಕಾಗಿದೆ. ಮೂರನೇ ಯೋಜನೆಯಲ್ಲಿ ಬಹುಶಃ 13 ಲಕ್ಷ ಇತ್ತು ಎಂದು ಕಾಣುತ್ತೆ ಮತ್ತು ಎಲ್ಲ ಯೋಜನೆಗಳಲ್ಲಿಯೂ ಹಿಂದುಳಿದ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ವರ್ಗದವರಿಗೆ ಇಟ್ಟ ಹಣ ಸುಮಾರು 37 ಲ ದಷ್ಟು ಲ್ಯಾಪ್ಸ್ ಆಗಿದೆ. ಇದಕ್ಕಾಗಿ ಹರಿಜನರ ಉದ್ಧಾರದ ಕೆಲಸಗಳು ಹರಿಜನ ಮಂತ್ರಿಗಳ ಕೈಯಲ್ಲೇ ಇರಬೇಕು ಎಂದು ನಾನು ಹೇಳುವುದು. ಹರಿಜನರಲ್ಲದೆ ಬಾಕಿಯವರ ಕೈಯ್ಯಲ್ಲಿದ್ದರೆ ಹರಿಜನರ ಉದ್ಧಾರ ಆಗುವುದಿಲ್ಲ ಅಂತಹವರ ಕೈಯ್ಯಲ್ಲಿ ಅಧಿಕಾರ ಕೊಡಬಾರದು ಎಂದು ನಾನು ಹೇಳುತ್ತೇನೆ.

ಇನ್ನು ಸೋಷಿಯಲ್ ವೆಲ್‌ಫೇರು ಖಾತೆಯೆನ್ನುವ ಖಾತೆಯನ್ನೇ ತೆಗೆಯುವುದು ಉತ್ತಮ. ಇದನ್ನು ತೆಗೆದು ವಿದ್ಯಾ ಇಲಾಖೆಗೇ ಇಲ್ಲವೇ ಬೇರೆ ಯಾವುದಾದರೂ ಇಲಾಖೆಗೆ ಸೇರಿಸಿ ಅದರ ಮೂಲಕ ಹರಿಜನರ ಅಭಿವೃದ್ಧಿ ಕೆಲಸಗಳನ್ನು ಮಾಡುವುದು ಉತ್ತಮ. ಆದುದರಿಂದ ಇಂತಹ ವರ್ಗೀಕರಣ ಮಾಡುವುದು ಒಳ್ಳೆಯದು. ಇದರ ಜೊತೆಗೆ ಆರ್ಥಿಕವಾಗಿ ಹಿಂದುಳಿದಿರುವವರಿಗೆ ಸಾಮಾಜಿಕವಾಗಿ ಹಿಂದುಳಿದವರಿಗಾಗಿ ಎಷ್ಟೋ ಅನುಕೂಲಗಳನ್ನು ಮಾಡುತ್ತಿದ್ದಾರೆ. ಇದರ ಜೊತೆಯಲ್ಲೂ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು. ನಾನಾದರೂ ತಿಳಿದಿರುವುದು ಕಾಂಗ್ರೆಸ್ಸು ಸಂಸ್ಥೆಯವರು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಸಾಕಷ್ಟು ಕೆಲಸ ಮಾಡುತ್ತಾರೆಂದು ಇದ್ದೆ. ಅದರೆ ಇಂದು ಹಾಗೆ ಆಗಿಲ್ಲ. ಇದರಿಂದ ದೇಶದಲ್ಲಿ ರುವ ಅನ್‌ಟಚಬಿಲಿಟಿಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ನಾನು ಕೇಳುತ್ತೇನೆ. ಎರಾಡಿಕೇಷನ್ ಆಫ್ ಅನ್‌ಟಚಬಿಲಿಟಿ ಹೇಗಿದೆ ಎಂದರೆ. After independence it has become a definite programme that untouchables should remain as untouchables which is quite contrary to what is obtaining in the Constitution. ಎಷ್ಟು ಹಣ ಲ್ಯಾಪ್ಸ್ ಆಗಿದೆ ಎನ್ನುವುದಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಇದಕ್ಕಾಗಿ ನಾನು ಒಂದು ಸ್ಕೀಂ ಮಾಡಿ ಸರಕಾರದಲ್ಲಿ ಕೊಡುತ್ತೇನೆ. ಅದು ಸರಕಾರ ಒಂದು ಲ್ಯಾಂಡು ಗ್ರಾಂಟು ಕಮಿಷನ್ ಮಾಡಿ ಇದರ ಮೂಲಕ ಭೂಮಿ ಇಲ್ಲದವರಿಗೆ ಭೂಮಿ ಕೊಡಿ ಮತ್ತು ಹರಿಜನರಿಗೆ ವಾಸಕ್ಕೆ ಮನೆ ಕಟ್ಟಲು ಹಣ ಕೊಡಿ. ಈಗಾಗಲೇ ಸುಮಾರು ನಾಲ್ಕು ಕಡೆಗಳಿಂದ ಹಣ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಲ್ಯಾಂಡು ಗ್ರಾಂಟು ಕಮಿಷನ್ ಮೂಲಕವೇ ಎಲ್ಲ ಹಣವನ್ನೂ ಹರಿಜನರಿಗಾಗಿ ಕೊಡುವಂತೆ ಏರ್ಪಾಡು ಮಾಡಬೇಕು. ಇವರಿಗಾಗಿ ಕಾಲೊನಿಗಳನ್ನು ಮಾಡಿ ಸುಮಾರು 65 ಲಕ್ಷ ಕೊಟ್ಟಿದ್ದಾರೆ. ಇದರಿಂದ ಹರಿಜನರಿಗೆ ವಾಸದ ಮನೆಗಳನ್ನು ಕಟ್ಟಿ ಕೊಳ್ಳಲು ಸಹಾಯ ಮಾಡಿದ್ದಾರೆ. ಇಂದರಿಂದ ಅಸ್ಪೃಶ್ಯತೆ ನಿವಾರಣೆಯಾದಂತಾಗುತ್ತದೆಯೇ ? ಈಗ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕಾಗಿದೆ. ಈ ವರ್ಷ ಮಹಾತ್ಮ ಗಾಂಧಿಯವರ ಶತಮಾನೋತ್ಸವವನ್ನು ಮಾಡುತ್ತಾರೆ. ಬಹುಶಃ ಗಾಂಧೀಜಿಯವರ ತತ್ವವನ್ನು ಯಾವ ಮುಖಂಡರು ಪಾಲಿಸಿಕೊಂಡು ಬರುತ್ತಿಲ್ಲ. ಕಾಂಗ್ರೆಸ್ ಸಂಸ್ಥೆಯ ತತ್ವ ಗಾಂಧೀಜಿಯವರ ಜೊತೆಯಲ್ಲಿಯೇ ಹೋಯಿತು. ಎಂಬುದಾಗಿ ನಾನು ಮೊದಲೇ ಹೇಳಿದ್ದೇನೆ. ಅಸ್ಪೃಶ್ಯತೆಗೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತರುವುದಕ್ಕೆ ಒಂದು ಸ್ಪೆಶಲ್ ಪೋಲೀಸ್ ಇಟ್ಟರೆ ಒಳ್ಳೆಯದು. ಯಾಕೆಂದರೆ ಮಹಾರಾಷ್ಟ್ರದಲ್ಲಿ ಶಿವಸೇನೆ ಚಟುವಟಿಕೆಗಳು ಆದಾಗ ಸೆಂಟ್ರಲ್ ಪೋಲೀಸ್ ಇಡೀ ಮಹಾರಾಷ್ಟ್ರ ಪೋಲೀಸ್ ಬೇಡವೆಂದು ಹೇಳಿದ್ದಾರೆ. ಯಾವ ಒಂದು ರಾಜಕೀಯ ಪಕ್ಷವಾಗಲಿ, it is not above communalism ಯಾವ ಒಂದು ರಾಜಕೀಯ ಪಕ್ಷವನ್ನು ತೆಗೆದುಕೊಳ್ಳಿ. ಅದು ಜಾತೀಯತೆಯನ್ನು ಹೋಗಲಾಡಿಸಬೇಕು, ಅಸ್ಪೃಶ್ಯತೆಯನ್ನು ತೆಗೆದುಹಾಕಬೇಕೆಂಬ ಉದ್ದೇಶದಿಂದ ಮುಂದೆ ಬರುತ್ತಾ ಇಲ್ಲ. Untouchables are not only despised but they are deprived of opportunity of growth and development.

ನಾವು ಜನರಿಗೆ ಸೇವೆ ಮಾಡುತ್ತೇವೆ ಮತ್ತು ಅವರಿಗೆ ಏನೇನೋ ಆಶ್ವಾಸನೆಗಳನ್ನು ಕೊಟ್ಟು ಇಲ್ಲಿಗೆ ಚುನಾಯಿಸಿ ಬಂದಿರುತ್ತೇವೆ. ಆದರೆ ಯಾವುದೇ ಕಾರಣಗಳಿಂದ ನಾವು ಅವರಿಗೆ ಕೊಟ್ಟ ಆಶ್ವಾಸನದಂತೆ ನಡೆದುಕೊಳ್ಳಲಿಕ್ಕೆ ಸಾಧ್ಯವಿಲ್ಲದೆ ಹೋದರೆ, ಅಥವಾ ಅಧಿಕಾರದಾಲಸೆಯಿಂದ ಇನ್ನೊಂದು ಪಾರ್ಟಿಗೆ ಸೇರಿದ್ದೇ ಆದರೆ, ನಮ್ಮನ್ನು ಚುನಾಯಿಸಿರತಕ್ಕ ಜನರಿಗೆ ರೈಟ್ ಆಫ್ ರಿಕಾಲ್ ಅಧಿಕಾರವನ್ನು ನಮ್ಮ ರಾಜ್ಯದಲ್ಲಿ ಅಳವಡಿಸಬೇಕು. ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಏನೂ ಮಾಡದೇ ಇರುವಾಗ ಆ ವಿಚಾರ ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಇರಬೇಕೆನ್ನುವುದನ್ನು ಈಗಾಗಲೇ ಕೇಂದ್ರ ಸರ್ಕಾರದ ಕಮಿಟಿಯವರಿಗೆ ಬರೆದಿದ್ದೇವೆ. ಬಹುಶಃ ಇದೇ ರೀತಿಯಲ್ಲಿ ಮುಂದುವರಿಯುವುದಾದರೆ, ಹರಿಜನರ ಅಭಿವೃದ್ಧಿಯಾಗಲು ಇನ್ನೆಷ್ಟು ಕಾಲ ಬೇಕೋ ಗೊತ್ತಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಹರಿಜನರ ಮತಾಂತರ ಶೇಕಡಾ 75 ರಷ್ಟು ಆಗಿದೆ. ಆ ರೀತಿಯಾಗಿ ನಾವು ಮಾಡುವುದು ಬೇಡ. ನಾನು ಕೇವಲ ರಾಜಕೀಯಕ್ಕೋಸ್ಕರವಾಗಿ ಈ ಮಾತನ್ನು ಈ ಸಭೆಯಲ್ಲಿ

ಆಡುತ್ತಾ ಇಲ್ಲ. ಎಲ್ಲಿಯಾದರೂ ನಮಗೆ ಸಮಾನವಾದ ಗೌರವ ದೊರಕದೇ ಇರುವ ಸಂದರ್ಭದಲ್ಲಿ ನಾವು ಏಕೆ ಹಿಂದೂ ಸಮಾಜದಲ್ಲಿರಬೇಕು ? ಕೆಲವರ ಅಭಿಪ್ರಾಯ ಮುಸ್ಲೀಂ ಆದರೂ ಚಿಂತೆ ಇಲ್ಲ ವೆಂದು ಬಂದಿದೆ. ಡಾ. ಅಂಬೇಡ್ಕರ್ ಅವರು ನಮಗೆ ದಾರಿ ತೋರಿಸಿಕೊಟ್ಟಿದ್ದಾರೆ. 12 ವರ್ಷ ಗಳ ಹಿಂದೆ ನಾನು ಈ ಸಭೆಯಲ್ಲಿ ಮಾತನಾಡುತ್ತಾ ಹೇಳಿದ್ದೇನೆ, ಹರಿಜನರ ಅಭಿವೃದ್ಧಿಯಾಗಬೇಕಾ ದರೆ ಅದು ಹಿಂದೂ ಸಮಾಜದಲ್ಲಿ ಇರತಕ್ಕವರೆಲ್ಲರೂ ಸಹಕರಿಸಿ ಕೆಲಸ ಮಾಡಿದರೆ ಸಾಧ್ಯ ಎಂದು. I am not prepared to wound the feelings. I have appealed to their sentiments for the last one decade. ಅದೇ ರೀತಿ ಮುಂದುವರಿದುಕೊಂಡು ಹೋಗುವುದಾದರೆ ಸಮಾಜದಲ್ಲಿ ನಮ್ಮ ಜನರು ಏನು ಹೇಳುತ್ತಾರೆಂದರೆ, 10 ವರ್ಷಗಳು ಒಕ್ಕಲಿ ಗರ ರಾಜ್ಯಭಾರ ಮಾಡಿದ್ದಾಯಿತು, ಆಗ ಕ್ಷೇಮವಿತ್ತು, ಈಗ ಬಸವಣ್ಣನವರು ಧರ್ಮ ಅನುಸರಿ ಸುವ ಜನ ಬಂದು ಅನ್ಯಾಯ ಮಾಡಿದ್ದು ಅಷ್ಟಿಷ್ಟಲ್ಲ. ಈಗ ಕ್ರಾಂತಿ ಏಳುವ ಕಾಲ ಬರುತ್ತಾ ಇದೆ ಎಂದು. ಬೋವಿ ಜನಾಂಗದವರನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಸೇರಿಸಬಾರದೇ ? 31 ಜನ ಹರಿ ಜನ ಸದಸ್ಯರು ಒಂದು ಮೆಮೋರ್ಯಾಂಡನನ್ನು ಮಾನ ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದರೂ ಅದನ್ನು ನಿರಾಕರಿಸಿ, ಅದಕ್ಕೆ ಯಾವ ರೀತಿಯಲ್ಲಿಯೂ ಲವಲೇಶ ಗಮನಕೊಡದೆ ಡೆವಲಪ್‌ಮೆಂಟ್ ಕಮೀಷನ ನರ್ ಅವರಲ್ಲಿ ಅವರನ್ನು ಷೆಡ್ಯೂಲ್ಡ್ ಕ್ಯಾಸ್ಟಿನಲ್ಲಿಯೇ ಸೇರಿಸುವ ಹಾಗೆ ಕೇಂದ್ರ ಸರ್ಕಾರಕ್ಕೆ ಬರೆ ದಿದ್ದಾರೆ. ಹಾಗೆ ಮಾಡಿದ್ದು ಸಾಧುವಲ್ಲ. ಒಂದು ವೇಳೆ ಇದಕ್ಕೆ 15 ಜನರು ಇಲ್ಲಿ ಮತ್ತು 30-35 ಜನ ಕೇಂದ್ರದಲ್ಲಿ ವಿರೋಧವಾಗಿದ್ದರೆ, ಅದರಿಂದ ಏನಾಗುತ್ತದೆ ? ಇದನ್ನು ವಿಚಾರ ಮಾಡಬೇಕು. ನಮ್ಮ ಕೇಂದ್ರದ ಸ್ನೇಹಿತರಿಗೆ ಹೇಳುತ್ತೇನೆ, ನಮ್ಮಲ್ಲಿ ಲೆಫ್ಟ್ ಹ್ಯಾಂಡ್, ರೈಟ್ ಹ್ಯಾಂಡ್ ಎಂದು ಇಭ್ಭಾಗ ಮಾಡುವುದಕ್ಕಾಗುವುದಿಲ್ಲ. ಹರಿಜನರಲ್ಲಿ ಯಾವ ರೀತಿಯೂ ಭೇದಭಾವ ಇಲ್ಲ. ನಮಗೆ ರಾಜ್ಯಾಂಗದಲ್ಲಿರತಕ್ಕ ಹಕ್ಕು ಭಾಧ್ಯತೆಗಳು ಈಗ ಸರಿಯಾದ ರೀತಿಯಲ್ಲಿ ದೊರಕಬೇಕು. ಅದಕ್ಕಾಗಿ ಸರ್ಕಾರಕ್ಕೆ ನಾನು ಒಂದು ಅಪೀಲ್ ಮಾಡುತ್ತೇನೆ.

Only one advice to the Cabinet Ministers. You must remember the interests of Scheduled castes and tribes for whom you are there more than your position.

ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

†Sri J. P. SARWESH (Serum).—Sir, in opposing the Demands placed before the House, I would like to say a few words about the Social Welfare Department. This department is there in our State for a long time and the powers that they were enjoying some years back have been taken away. Today the status of a District Social Welfare Officers is that of a clerk under the Deputy Commissioners. In the districts of Gulbarga, Bidar and Raichur, once the District Social Welfare Officers were powerful persons and they used to solve all the problems of the scheduled castes whenever they were subjected to injustice. But, today the entire department is helpless and it is strange why we should have such a department at all. I have great respect for the hon. Minister for Social Welfare and hon. Deputy Minister for Social Welfare. But, what can they do ? They do not have finances ; they do not have schemes. Everybody knows that the problem of schedule castes is economic problem. For uplifting them, there is no programme. Unless we have programmes for the upliftment of the scheduled castes, it is no use of simply running hostels.

[MR. DEPUTY SPEAKER in the Chair]

The hostels that are run today by the Social Welfare Department can go to the Education Department. The Education Department is spending crores of rupees and why not they spend a part of their budget

(SRI J. P. SARWESH)

on the scheduled castes ? This Social Welfare Department should be entrusted only with the economic programmes. Today the hon. Chief Minister is not here and I should like him to know that by merely continuing Sri Rachiah and Sri Ramakrishna as Cabinet Ministers he should not think that the problem of scheduled castes is solved. We do not want any Minister. By merely adding two ministers to the Cabinet the problem cannot be solved. We want real schemes for the upliftment of our problem.

I have been in this House for the last several years. Several times, we have brought to the notice of the Government the grievances of the Scheduled Castes and Tribes but not one of them is solved till now. Unless land is given to the Scheduled Castes and Tribes people, we cannot say that some progressive measures are taken to improve them. In this connection, I congratulate the Ex- Minister Sri Kadidal Manjappa ; when he was the Minister, he issued a circular that wherever it was found that the weaker sections of the population were in possession of the Government land, they should not be evicted. After he left the Government, not a single circular is issued to safeguard the interests of the Scheduled Castes and Tribes in this direction. Unless the landless tillers amongst them are granted lands, the problem of these castes and tribes cannot be solved. Then consider the backwardness of these unfortunate people, What is the percentage of literacy among the Scheduled Castes and Tribes ? It is not even one per cent. The majority of them live in villages and they are used as slaves ; economically they are enslaved. So my conviction is that unless they are given land and made to stand on their own legs, the problem of the Scheduled Castes and Scheduled Tribes cannot be solved.

Now let me speak about this Co-operative Housing Scheme. The scheme to grant a sum of Rs. 3,000 is not a good scheme. The Scheduled Castes and Tribes are not at all in a position to repay the loan amount and they cannot repay them. How can they repay it when they cannot eke out their daily bread after toiling the whole day and the whole of the year ? Their wages are so poor that cannot feed even their children and given them clothes. When their economic condition is so pitiable, how can they repay Government loan ? The amount given to them for constructing houses should not be treated as loan it should be a free grant to them. I have got grounds for urging that. For thousands of years, these Scheduled Castes and Tribes have been expolited by the Hindu society. Those unfortunate people were subjugated for centuries and have undergone and are undergoing untold hardships and handicaps. I agree with my friend Sri Mallikarjunaswamy that the so-called Hindus who form 80 per cent of the population are responsible for the present plight of the Scheduled Castes and Tribes. The so-called Hindu brothers are not in a position to treat these castes and tribes as their own brothers. Several saints and reformers tried to

remove their disabilities. Raja Ram Mohan Roy and Dayanand Saraswathi, through Arya Samaj and Brahmo Samaj worked for reformation of the society. The latest to come was Mahatma Gandhi who strove for the removal of untouchability. I appeal to the hon. Members to have a heart-searching and tell whether we have been able t provide facilities to the Scheduled Castes and Tribes and improve their lot. My sincere appeal is that at least foreign missionaries may be encouraged so that they may convert them and thus uplift them. We cannot give education to these Scheduled Castes and Tribes; we have failed utterly to educate them. Don't think that just because Sri Ramakrishna and Sri Rachaiah have become Ministers and I have become an M.L.A., the problem of the Scheduled Castes and Tribes is solved.

Lastly, I want to say one thing and conclude. Every year we are representing to the Government the various problems of the landless labourers and the weaker sections. It is not that the Government is unwilling to solve them. They are not in a position to solve. In this connection, I must recall the statement of Sri Nagi Reddy in the Andhra Assembly that the Parliamentary Democracy in this country has failed, that all the time we have been hoodwinked and that realisation will dawn on the members of the weaker sections that they won't get justice and that parliamentary democracy is bogus and it is nothing but cheating and deceit. Recently, the Hon. Chief Minister promised that he would hold an enquiry into the allegations I made against a Tahsildar. I tell you that he has not sent any order for enquiry. That itself proves that all promises made on the floor of this House is nothing but cheating and deceit. The problem of the weaker sections is a very serious problem and cannot be solved unless we, the Members belonging to Scheduled Castes and Tribes, resign in a body because we have been deceived in the name of democracy or socialism. That is the only solution.

With these words, I thank the Chair and conclude.

†ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಈ ಹೊತ್ತು ನಮ್ಮ ಮುಂದೆ ಇರತಕ್ಕ ಬೇಡಿಕೆಯನ್ನು ಸ್ವಾಗತ ಮಾಡುತ್ತ ಒಂದೆರಡು ವಿಚಾರಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆ ವಿಚಾರದಲ್ಲಿ 1952ನೇ ಇಸವಿಯಿಂದಲೂ ನಾನು ನೋಡುತ್ತಿದ್ದೇನೆ. ಆದರೆ ಈ ಶಾಸನ ಸಭೆಯಲ್ಲಿ ಕೂಡ ಅಸ್ಪೃಶ್ಯತೆಯ ಕಳಂಕ ತಂದು ಒಡ್ಡಿದೆಯೋ ಏನೋ ಎನ್ನುವ ಅನುಮಾನ ಬಂತು. 1952 ರಿಂದ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲ ಪಕ್ಷಗಳ ಸದಸ್ಯರೂ, ಈ ಕಡೆ ಸದಸ್ಯರು ಸವರ್ಣೀಯರೆಲ್ಲ ಈ ಬೇಡಿಕೆ ಮೇಲೆ ಮಾತನಾಡಿ ಹರಿಜನರ ಉದ್ಧಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಆದರೆ ಈ ವರ್ಷದ ಸಭೆಯಲ್ಲಿ ಬರೀ ಹರಿಜನರಿಗೇ ಮೀಸಲಾಗಿಟ್ಟು ನಮ್ಮನ್ನೇ ಮಾತನಾಡುವುದಕ್ಕೆ ಆರಿಸಿದ್ದಾರೆ. ಹಿಂದೂದೇಶ ಉಳಿಯ ಬೇಕಾದರೆ ಹರಿಜನರನ್ನು ನಿಮ್ಮಂತಯೇ ಎಂದು ನೋಡಿಕೊಂಡು ಹಿಂದೂದೇಶವನ್ನು ಉಳಿಸ ತಕ್ಕದ್ದು ಇಲ್ಲ ಹರಿಜನರನ್ನು ದೂರೀಕರಿಸಿ ಹಿಂದೂದೇಶವನ್ನು ಹಾಳು ಮಾಡತಕ್ಕದ್ದು ಸವರ್ಣೀಯರಾದ ನಿಮ್ಮ ಮೇಲೆ ಬಿದ್ದಿದೆ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದರು. ಆದರೆ ಅಲ್ಲಿ ನಡೆಯುವುದನ್ನು ನೋಡಿದರೆ ಹರಿಜನರು ಮಾತ್ರ ಅರಣ್ಯ ರೋಧನ ಮಾಡಿಕೊಳ್ಳಲಿ ಎನ್ನುವ ಭಾವನೆ ಇದ್ದ ಹಾಗೆ ಕಾಣುತ್ತದೆ. ನಾವು ಹರಿಜನರಾಗಿ ಹುಟ್ಟಿರುವುದರಿಂದ ನಮ್ಮ ರೋದನ ಯಾವತ್ತಿಗೂ ಇದ್ದೇ ಇರುತ್ತದೆ. ಸವರ್ಣೀಯರು ಮಾತ್ರ ಈ ವಿಚಾರದಲ್ಲಿ ಮುತುವರ್ಜಿ ವಹಿಸಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಏನಾದರೂ ಒಳ್ಳೆಯ ಸಲಹೆಗಳನ್ನು ಕೊಡೋಣ ಎಂದು ಯಾರೂ ಭಾಷಣ ಮಾಡದೆ ಇರುವುದನ್ನು ನೋಡಿದರೆ ಖಂಡಿತವಾಗಿ ರಾಜ್ಯಾಂಗದ 17 ನೇ ಆರ್ಟಿಕಲ್‌ನಂತೆ ಅಸ್ಪೃಶತಾ ನಿವಾರಣೆಗೆ ಪ್ರಯತ್ನ ಮಾಡದೆ, ಈ ಶಾಸನ ಸಭೆಗೂ ಕೂಡ ಅಸ್ಪೃಶ್ಯತೆ ಅಂಟಿಕೊಂಡಿದೆಯೇನೋ ಎನ್ನುವ ಅನುಮಾನ ನನಗೆ ಬಂದಿದೆ.

(ಶ್ರೀ ಎ. ಮುನಿಯಪ್ಪ)

ಈ ಸಮಾಜ ಕಲ್ಯಾಣ ಇಲಾಖೆಯನ್ನು ಏಕೆ ಇಟ್ಟುಕೊಂಡಿದ್ದಾರೆ, ಇದನ್ನು ಅಳಿಸಿಬಿಟ್ಟು ಮುಚ್ಚಿಬಿಡುವುದು ಒಳ್ಳೆಯದು ಎಂದು ಹೇಳುವವರಲ್ಲಿ ಮೊದಲನೆಯವನು ನಾನು. ಸಮಾಜ ಕಲ್ಯಾಣ ಇಲಾಖೆಯ ವೈಖರಿಯನ್ನು ನೋಡಿದರೆ ತೆನ್ನಾಲಿ ರಾಮಕೃಷ್ಣ ಕುದುರೆಯನ್ನು ಸಾಕಿದ ಹಾಗೆ ಇದೆ. ತೆನ್ನಾಲಿ ರಾಮಕೃಷ್ಣ ಕುದುರೆಯನ್ನು ಒಂದು ಕೋಣೆಯಲ್ಲಿ ಹಾಕಿ ಪಾಲೀಸು ಜಾಸ್ತಿ ಮಾಡಿ ಮೇವು ಕಡಮೆ ಮಾಡುತ್ತಿದ್ದ. ಅದೇ ರೀತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯವರು ಪಾಲೀಸು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ, ಮೇವು ಮಾತ್ರ ಕಡಮೆ ಮಾಡುತ್ತಿದ್ದಾರೆ. 70 ಲಕ್ಷ ರೂಪಾಯಿಗಳನ್ನು ಹಂಚಿಕೆಮಾಡುವುದಕ್ಕೆ ಒಬ್ಬ ಮಂತ್ರಿಗಳು, ಒಬ್ಬ ಉಪಮಂತ್ರಿಗಳು. ದೊಡ್ಡ ಮಿನಿಸ್ಟರು ಬೆಳಗಾಂಗೆ, ಚಿಕ್ಕ ಮಿನಿಸ್ಟರು ರಾಯಚೂರು ಜಿಲ್ಲೆಗೆ, ಹೀಗಾಗಿ ಉಳಿದ ಜಿಲ್ಲೆಗಳವರಿಗೆ ತಿರುಪತಿ ಪಂಗನಾಮವಾಗಿದೆ. ಇದು ಯಾವ ನ್ಯಾಯ ? ಗಾಂಧಿ ಶತಮಾನದಲ್ಲಿರತಕ್ಕ ಈ ಸಮಾಜ ಕಲ್ಯಾಣ ಇಲಾಖೆ 8ನೇ ಶತಮಾನದ ಬಸವೇಶ್ವರನ ಕಾಲಕ್ಕಿಂತ ಒಂದು ಅಂಗುಲವೂ ಮುಂದಕ್ಕೆ ಹೋಗಿಲ್ಲ. ಬಹಳ ಹಿಂದಿನಿಂದಲೂ ಕೂಡ ಹರಿಜನರ ಕಲ್ಯಾಣಕ್ಕಾಗಿ ರಾಮಾನುಜಾಚಾರ್ಯರು ಶಂಕರಾಚಾರ್ಯರು ಇವರೆಲ್ಲ ಹರಿಜನರ ಕಲ್ಯಾಣಕ್ಕಾಗಿ ಬಹಳ ದುಡಿದಿದ್ದಾರೆ. ಆದರೆ ಗಾಂಧಿ ಶತಮಾನದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಕೇವಲ 70 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಹರಿಜನರ ಉದ್ಧಾರಕ್ಕಾಗಿ ಉಪವಾಸ ಮಾಡಿ, ಅವರು ಹಿಂದೂ ಸಮಾಜದಲ್ಲಿಯೇ ಇರಬೇಕು ಎಂದು ಶಪಥ ಮಾಡಿದಂಥ ಮಹಾತ್ಮನ ಶತಾಬ್ದಿ ವರ್ಷದಲ್ಲಿ ಕೂಡ ಹರಿಜನರ ಉದ್ಧಾರಕ್ಕಾಗಿ 70 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. 40 ಲಕ್ಷ ಜನರಿಗೆ ಒಬ್ಬೊಬ್ಬರಿಗೆ ಎಷ್ಟೆಷ್ಟು ಬರುತ್ತದೆ ಎಂದು ಲೆಕ್ಕ ಹಾಕಿಕೊಳ್ಳಿ. ಅದಕ್ಕೆ ಇಬ್ಬರು ಮಂತ್ರಿಗಳು ಬೇಕಾಗಿದೆಯೇ ?

ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ವಿಷಯದಲ್ಲಿ ಶಹಭಾಸ್‌ಗಿರಿ ಕೊಡಬೇಕು. ಏನೆಂದರೆ, 1947ರಲ್ಲಿ ಶ್ರೀ ಕೆ. ಸಿ. ರೆಡ್ಡಿಯವರ ಮಂತ್ರಿ ಮಂತ್ರಿ ಮಂಡಲದಲ್ಲಿ ಹರಿಜನರಿಗೆ ಒಂದು ಸ್ಥಾನವಿತ್ತು. ಆ ಮೇಲೆ ಶ್ರೀ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿಯೂ ಒಂದು ಸ್ಥಾನ ಕೊಟ್ಟಿದ್ದರು. ಶ್ರೀ ನಿಜಲಿಂಗಪ್ಪನವರು ತಮ್ಮ ಮಂತ್ರಿಮಂಡಲದಲ್ಲಿ ಒಬ್ಬ ಪಕ್ಕಾ ಮಂತ್ರಿ, ಇಬ್ಬರು ತುಂಡು ಮಂತ್ರಿಗಳನ್ನು ತೆಗೆದುಕೊಂಡಿದ್ದರು. ಶ್ರೀ ವೀರೇಂದ್ರ ಪಾಟೀಲರು ದೂರದರ್ಶಿಯಾಗಿ ಯೋಚಿಸಿ ಇಬ್ಬರು ಪಕ್ಕಾ ಮಂತ್ರಿಗಳು ಇಬ್ಬರು ಉಪಮಂತ್ರಿಗಳು, ಒಬ್ಬ ಡೆಪ್ಯುಟಿ ಚೇರ್‌ಮನ್ ಮತ್ತು ಈಗ ಸಭೆಯ ಅಧ್ಯಕ್ಷತೆಯನ್ನು ವಹಿಸಿರತಕ್ಕ ಹರಿಜನ ಉಪಾಧ್ಯಕ್ಷರು ಇಷ್ಟು ಜನರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಮ್ಮ ಹರಿಜನರ ಪರವಾಗಿ ನಮ್ಮ ಮುಖ್ಯಮಂತ್ರಿಗಳಿಗೆ ನಾನು ಬಹಳ ವಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಸಮಾಜವಾದದ ತತ್ವದಲ್ಲಿ ನಂಬಿಕೆಯುಳ್ಳ ನಮ್ಮ ಮುಖ್ಯ ಮಂತ್ರಿಗಳು ಬಹಳ ಧೀರತನದಿಂದ ಧೈರ್ಯವಾಗಿ ಕೆಲಸ ಮಾಡಿದ್ದಾರೆ. ಇದರಿಂದ ಹರಿಜನರ ಪರವಾಗಿ ಅವರಿಗೆ ವಂದಿಸುತ್ತೇನೆ.

11-30 A.M.

ರಾಜ್ಯಾಂಗದ ವಿಚಾರದಲ್ಲಿ ಮಲ್ಲಿಕಾರ್ಜುನಸ್ವಾಮಿಯವರು ಮತ್ತು ಪ್ರಭಾಕರ್‌ರವರು ಹೇಳಿದರು. ರಾಜ್ಯಾಂಗದ 46 ಮತ್ತು 17ನೇ ಸೆಕ್ಷನ್‌ಗಳ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯೇನು ಮಾಡಿದೆ ಎಂಬುದಕ್ಕೆ ನಮಗೆ ವರದಿ ಒಪ್ಪಿಸಬೇಕು. ಅವರು ಪ್ರಿಂಟ್ ಮಾಡಿರುವುದರಲ್ಲಿ ದುರ್ಬಲ ಜನರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿಯವರಿಗೆ ಸಾಕಷ್ಟು ಶಿಕ್ಷಣ ಸೌಲಭ್ಯ ಮತ್ತು ಆರ್ಥಿಕ ಸಹಾಯ ಮಾಡಿ ಅವರಿಗೆ ಸಾಮಾಜಿಕವಾಗಿ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು, ಅವರನ್ನು ಶೋಷಣೆ ಮಾಡುವುದನ್ನು ತಡೆಗಟ್ಟಬೇಕು, ಸರ್ಕಾರ ಇದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು 46 ನೆಯ ಸೆಕ್ಷನ್‌ನಿನಲ್ಲಿದೆ. ಆದರೆ ಅವರು ಮಾಡಿರುವುದೇನು ? ಏನೋ ಒಂದು ಅಂಕಿಅಂಶ ಪ್ರಿಂಟ್ ಮಾಡಿದ್ದಾರೆ. ರಾಜ್ಯಾಂಗದ 17ನೆಯ ಸೆಕ್ಷನ್ ಪ್ರಕಾರ ಅಸ್ಪೃಶ್ಯತೆ ಮಹಾ ಅಪರಾಧ. ಇದರ ಬಗ್ಗೆ ಎರಡನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲೇನು ಮಾಡಿದ್ದಾರೆ ಎಂಬುದನ್ನು ಹೇಳಬೇಕು. 40 ಲಕ್ಷ ಜನರ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ನಮ್ಮ ಸಹನೆಗೂ ಒಂದು ಮಿತಿ ಇದೆ. ಭೂಮಿಯತನಕ ಬಗ್ಗಬಹುದು, ಅಲ್ಲಿಂದಾಚೆಗೆ ಆಗುವುದಿಲ್ಲ. ಈಗ ರಾಜ್ಯಭಾರ ಮಾಡುವುದು ಅಷ್ಟು ಸಲೀಸಾಗಿಲ್ಲ. ಟಿಬೆಟ್ ಮತ್ತು ಸಿಲೋನ್‌ನಿಂದ ಬಂದವರಿಗೆ ಎಷ್ಟೋ ಹಣ ಖರ್ಚು ಮಾಡುತ್ತಿದ್ದಾರೆ. ಹಾಗಿರುವಾಗ ಹರಿಜನರ ವಿಚಾರದಲ್ಲಿ ನೀವೇನು ಮಾಡುತ್ತಿದ್ದೀರಿ ? ಇದನ್ನು ದೇಶದ ಪ್ರಶ್ನೆಯಾಗಿ ಪರಿಗಣಿಸಬೇಕು. ಇದಕ್ಕೆ ಕ್ಷಯರೋಗದ ಸಂಬಂಧವಿದೆ, ಹರಿಜನರನ್ನು ದೂರೀಕರಿಸಿ ಬಹಳ ದಿವಸ.

ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ, ಬಹಳ ನೊಂದ ಮನಸ್ಸಿನಿಂದ ನಾನು ಇದನ್ನು ಹೇಳುತ್ತಿದ್ದೇನೆ. ಈ ಒಂದು ಇಲಾಖೆಯ ಡೈರೆಕ್ಟರರ ಪರಿಚಯ ನನಗೆ ಚೆನ್ನಾಗಿದೆ. ಇವರ ಹಿಂದೆ ಇದ್ದ ಶಂಕರನಾರಾಯಣರಾವ್‌ರವರು ಹರಿಜನರಿಗಾಗಿ ಬಹಳವಾಗಿ ದುಡಿದಿದ್ದಾರೆಂದು ನಾನು ಕೇಳಿದ್ದೇನೆ. ಅಂಥವರ ಮಕ್ಕಳು ಈ ಇಲಾಖೆಯ ಮುಖ್ಯಾಧಿಕಾರಿಯಾಗಿ ಬಂದರೆಂದು ನಾನು ಬಹಳ ಸಂತೋಷಪಟ್ಟೆ. ಆದರೆ ಈಗ ಅವರೇಕೋ ಅವರ ತಂದೆ ನಡೆದ ರೀತಿಗೆ ವಿರೋಧವಾಗಿ ನಡೆಯುತ್ತಿದ್ದಾರೆ. ಏಕೆಂದರೆ ಬೇರೆ ಯಾವುದೂ ಇಲ್ಲದೆ ಈ ಇಲಾಖೆ—ಹರಿಜನರ ಇಲಾಖೆ ತಮಗೆ ಕೊಟ್ಟರೆಂದು ಅವರ ಮನಸ್ಸಿಗೆ ಬೇಜಾರಾಗಿರಬಹುದು. ಅವರ ತಂದೆ ಹರಿಜನರಿಗಾಗಿ ಬಹಳವಾಗಿ ದುಡಿದಿದ್ದಾರೆ. ಹರಿಜನರ ಸೇವೆ ಹರಿಯ ಸೇವೆ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಆದುದರಿಂದ 70 ಲಕ್ಷ ಖರ್ಚುಮಾಡುವುದಕ್ಕೆ ಸಿಬ್ಬಂದಿ ಮತ್ತು ಇಬ್ಬರು ಮಂತ್ರಿ ಕೊಟ್ಟಿದ್ದಾರೆ. ಎದ್ದು ಉಚ್ಚ... ಎಂದು ತೆಲುಗಿನಲ್ಲಿ ಒಂದು ಗಾದೆಯಿದೆ. ಹೆಂಗಸರು ಒಂದು ಮನೆಯಲ್ಲಿ ಸೇರಿ ಅವರ ಗಂಡಂದಿರ ಪ್ರತಾಪವನ್ನು ಹೇಳುತ್ತಿದ್ದಾಗ ಒಬ್ಬ ಹರಿಜನರ ಹೆಣ್ಣುಮಗಳು ಎತ್ತು ಉಚ್ಚೆ ಹುಯ್ಯುಕೊಂಡು ಹೋದ ದಾರಿಯಲ್ಲಿ ತಮ್ಮ ಯಜಮಾನರು ಅದನ್ನು ದಾಟಿಕೊಂಡು ಹೋದರು, ಅವರು ಅಂಥ ಪಾಳೇಗಾರರು ಎಂದು ಹೇಳಿದಳಂತೆ. ಹೀಗೆ 70 ಲಕ್ಷ ಖರ್ಚು ಮಾಡುತ್ತಿದ್ದಾರೆ. ಇದು ಸಾಕೇ ?

ಸಾಮಾಜಿಕ ವಿಚಾರ ಅನೇಕಾವರ್ತಿ ಹೇಳಿದ್ದೇನೆ, ಗೃಹಸಚಿವರು ಅದಕ್ಕೆ ಹೆಚ್ಚು ಗಮನ ಕೊಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರಿಗೆ ರಕ್ಷಣೆ ಇರಬೇಕು, ಅವರು ತಾವು ಇತರರೊಂದಿಗೆ ಬೆರೆಯಲು ಅವಕಾಶವಿರಬೇಕು. ಪ್ರತಿಯೊಂದು ಗ್ರಾಮದಲ್ಲೂ ಇಂದು ಅಸ್ಪೃಶ್ಯತೆ ಇದೆ. ಜನನಮರಣದ ಲೆಕ್ಕವನ್ನು ತಿಂಗಳಿಗೊಂದು ಸಲ ತರಿಸುತ್ತಾರೆ. ಅದನ್ನು ಕಳಿಸುವಾಗ ಏನಾದರೂ ಅಸ್ಪೃಶ್ಯತೆ ವಿಚಾರದಲ್ಲಿ ತಪ್ಪು ನಡೆದಿದೆಯೇ ಎಂಬುದನ್ನ ತಿಳಿಸಬೇಕು. ಅಸ್ಪೃಶ್ಯತೆ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ಮೂರು ತಿಂಗಳಿಗೊಂದು ಸಲ ಹರಿಜನರ ಒಂದು ಸಮಿತಿ ಸೇರುತ್ತದೆ, ಅದರ ಹೆಸರು ಅಡ್ವೈಸರಿ ಬಾಡಿ. ಅದರಲ್ಲಿ ಹರಿಜನರ ಉದ್ಧಾರಕ್ಕೆ ನಾಲ್ಕನೆಯ ಯೋಜನೆಯಲ್ಲಿ ಮಾಡಬೇಕಾದ ಕೆಲಸಗಳ ಬಗ್ಗೆ ಸಲಹೆಮಾಡಿದ್ದೇವೆ. ಆದರೆ ಈ ವಿಚಾರದಲ್ಲಿ ಸಂಬಂಧಪಟ್ಟ ಡೈರೆಕ್ಟರು ಒಂದು ಸಲ ಅದನ್ನು ಇಲ್ಲಿ ಹೇಳುವುದು ಸರಿಯಲ್ಲ, ಅಸೆಂಬ್ಲಿಯಲ್ಲಿ ಹೇಳಿ ಎಂದು ಹೇಳಿದರು. ನರಿ ಕೂಗು ಗಿರೀಗೇ ಮುಟ್ಟೀತೇ ! ಪಂಚಾಯಿತಿಗೆ ಬೇಕಾದಷ್ಟು ಹಣ ಕೊಟ್ಟಿದ್ದಾರೆ. ಅದನ್ನು ಏತಕ್ಕೆ ಖರ್ಚು ಮಾಡಿದ್ದಾರೆಂದು ಕೇಳಬೇಕು. ಈ ವಿಚಾರದಲ್ಲಿ ಬಹಳ ನಿಗಾ ಇಡಬೇಕು. ನಾವು ಕುರಿ, ಕೋಳಿ ಕೊಡಿ ಎಂದು ಕೇಳುವುದಿಲ್ಲ, ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಕೊಡಿ, ನಮಗೆ ಸಾಕಷ್ಟು ವಿದ್ಯಾಭ್ಯಾಸ ಕೊಟ್ಟರೆ ಇನ್ನೇನೂ ಬೇಡ. 1952 ರಿಂದ ವಿದ್ಯಾಭ್ಯಾಸದಲ್ಲಿ ಏನು ಸಾಧಿಸಲಾಗಿದೆ ! ಹಾಸ್ಟೆಲ್‌ಗಳು ಎಷ್ಟಾಗಿವೆ ! ವಿದ್ಯಾರ್ಥಿಗಳೆಷ್ಟಿದ್ದಾರೆ ! ಓದಿ ನಿರುದ್ಯೋಗಿಗಳಾಗಿರುವವರೆಷ್ಟಿದ್ದಾರೆ ! ಇದರ ಸರ್ವೆಯಾದರೂ ಮಾಡಿ ಡೈರೆಕ್ಟರು ಪುಣ್ಯಕಟ್ಟಿಕೊಳ್ಳಲಿ.

ಬಡವರು ಕೂಲಿಮಾಡಿ ಎಸ್. ಎಸ್. ಎಲ್. ಸಿ. ಪಾಸ್ ಮಾಡಿರುತ್ತಾರೆ. ಅವರು ನಿರುದ್ಯೋಗಿಗಳಾಗಿ ಬಿಕ್ಷಾಟನೆ ಮಾಡಿಕೊಂಡು ಅಲೆಯುತ್ತಾ ಇದ್ದಾರೆ, ಅವರ ಹೆಸರಿನಲ್ಲಿ ಇವರು ಬಾವುಟ ಅಲ್ಲಾಡಿಸಿಕೊಂಡು ಕಾರಿನಲ್ಲಿ ತಿರುಗುವುದು ಎಂದರೆ ಖಂಡಿತವಾಗಿಯೂ ದೇಶಕ್ಕೆ ಒಳ್ಳೆಯದಲ್ಲ. ಅದರಿಂದ ಜಾತಿ ಹೆಸರಿನಲ್ಲಿ ಇವರು ಮಹಾಪಾಪಕ್ಕೆ ಗುರಿಯಾಗುತ್ತಾರೆ. ಸ್ಕಾಲರ್‌ಷಿಪ್‌ಗಳನ್ನು ಎಷ್ಟು ಕೊಟ್ಟಿದ್ದೀರಿ ! ವಿದ್ಯಾರ್ಥಿಗಳು ಎಷ್ಟು ಜಾಸ್ತಿಯಾಗಿದ್ದಾರೆ ಎಂಬ ಸರ್ವೆ ಏನಾದರೂ ಮಾಡಿದ್ದೀರಾ ! ಹಿಂದೆ ಅಸ್ಪೃಶ್ಯತೆ ನಿವಾರಣೆ ಹೆಸರಿನಲ್ಲಿ ಸಮಾಜ ಸುಧಾರಕರನ್ನು ನೇಮಕಮಾಡಿದ್ದೀರಿ, ಬುದ್ಧಿ ತಿಳಿದುಕೊಳ್ಳಲು ಪ್ರಚಾರ ಕಾರ್ಯ ಮಾಡಬೇಕು ಎಂಬ ಉದ್ದೇಶದಿಂದ ಅವರನ್ನು ನೇಮಕ ಮಾಡಲಾಗಿತ್ತು. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯ ಮತ್ತು ವಸತಿಯ ಬಗ್ಗೆ 38·41 ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ, ಅದು ಏನಾಗಿದೆ ಸ್ವಾಮಿ ? ಅದರ ಬಗ್ಗೆ ಏನೊಂದು ವಿವರಣೆ ಇಲ್ಲದೇ ಸುಮ್ಮನೆ ಅಂಕಿಅಂಶಗಳನ್ನು ಕೊಡುತ್ತಾ ಹೋದರೆ ಏನು ಪ್ರಯೋಜನ ? ಸಹಕಾರ ಸಂಘಗಳ ವಿಚಾರವನ್ನು ಹೇಳಿದೆ. ಸಹಕಾರ ಸಂಘಗಳಲ್ಲಿ ಹರಿಜನರಿಗೆ ವಿಶೇಷ ಅನ್ಯಾಯವಾಗುತ್ತಾ ಇದೆ. ಸರ್ಕಾರದವರು ಕೊಟ್ಟ ಹಣದಲ್ಲಿ ಅವರಿಗಾಗಿ ಒಂದು ಪರ್ಸೆಂಟ್ ಕೂಡ ಖರ್ಚಾಗುತ್ತಾ ಇಲ್ಲ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯವರು ಯಾವ ಯಾವ ಇಲಾಖೆಯಲ್ಲಿ ಹರಿಜನರಿಗಾಗಿ ಮೀಸಲಾಗಿಟ್ಟಿರುವ ದುಡ್ಡನ್ನು ಏನು ಮಾಡಿದ್ದೀರಿ ಎಂಬ ಒಂದು ಪಟ್ಟಿಯನ್ನಾದರೂ ಮಾಡಿ ಪುಣ್ಯ ಕಟ್ಟಿಕೊಳ್ಳಿ. ಬಡಜೆಟ್ಟಿನಲ್ಲಿರತಕ್ಕ 70 ಲಕ್ಷ ರೂಪಾಯಿ ನಿಮ್ಮ ಸಂಬಳಕ್ಕೆ ಮತ್ತು ಹೆಚ್ಚಿನ ಸಿಬ್ಬಂದಿಗಾಗಿಯೇ ತೆಗೆದುಕೊಂಡು ಬಿಡಿ, ಆದಾದರೂ ತಾನೇ ಯಾಕೆ ಇರಬೇಕು?

(ಶ್ರೀ ಎ. ಮುನಿಯಪ್ಪ)

ದರಖಾಸ್ತು ವಿಚಾರದಲ್ಲಿ ಒಂದು ಮಾತು. 50 ಪರ್ಸೆಂಟ್ ಹರಿಜನರಿಗೆ ಇನ್ನು ಮಿಕ್ಕದ್ದು ಹಿಂದುಳಿದ ವರ್ಗದವರಿಗೆ ಅಂತ ಮಾಡಿರುತ್ತೀರಿ. 50 ಎಕರೆಯಲ್ಲಿ 10 ಎಕರೆ ಹೋದ ಮೇಲೆ ತಿರುಗಿ 40 ಎಕರೆ ಇರುತ್ತದೆ ಅದರಲ್ಲಿ 10 ಎಕರೆ, ಕೊಟ್ಟಮೇಲೆ 30 ಎಕರೆ ಆಗುತ್ತದೆ, ಹೀಗೆಲ್ಲಾ ಕೊಟ್ಟು ಕೊಂಡು ಹೋದ ಮೇಲೆ ಉಳಿಯುವುದಾದರೂ ಏನು ? ದರಖಾಸ್ತು ರೂಲ್ಸ್ ಪ್ರಕಾರ ಕೊಡಿ ಬೇಡ ಅನ್ನುವುದಿಲ್ಲ. ಹಿಂದಿನ ಪದ್ಧತಿಯಂತೆ ಮನೆಗಳನ್ನು ಕಟ್ಟಿಕೊಡಿ ಸ್ವಾಮಿ. ಸೊಸೈಟಿಗಳ ಮೂಲಕ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಅನ್ನುವ ಬದಲು, ಹಿಂದೆ 400 ರೂಪಾಯಿ ಗ್ರಾಂಟ್ ಕೊಟ್ಟು ಮನೆ ಕಟ್ಟಿಸುತ್ತಾ ಇದ್ದೀರಿ ಆ ಒಂದು ಸ್ಕೀಂ ಮುಂದೆಯೂ ಬರಬೇಕು. ಬೆಂಗಳೂರಿನಲ್ಲಿ ಹರಿಜನರಿಗೆ ಮನೆಗಳನ್ನು ಕಟ್ಟಿಸುತ್ತಾ ಇದ್ದೀರಿ, ದೊಂಬಳೂರಿನಲ್ಲಿ, ಶ್ರೀಮಾನ್ ನಂಜಪ್ಪನವರು ಬಹಳ ಕಷ್ಟ ಪಟ್ಟಿದ್ದಾರೆ ಆ ಮನೆಗಳನ್ನು ವಿಲೆ ಮಾಡುವುದಕ್ಕೆ, ಮೂರು ವರ್ಷದಿಂದ ಒದ್ದಾಡುತ್ತ ಇದ್ದಾರೆ. ಏಕೆ ? ಹರಿಜನರ ಕೇರಿಯನ್ನು ಬದಲಾವಣೆ ಮಾಡಿ ಅವರಿಗೆ ಆ ಮನೆಗಳನ್ನು ಅಲಾಟ್ ಮಾಡುವುದಕ್ಕೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ನೋಡಿದರೆ, ರೆವಿನ್ಯೂ ಮಿನಿಸ್ಟರ ಕಡೆ ತೋರಿಸುತ್ತಾರೆ, ರೆವಿನ್ಯೂ ಮಿನಿಸ್ಟರನ್ನು ನೋಡಿದರೆ ಮುನಿಸಿಪಲ್ ಅಡ್ಮಿನ್‌ಸ್ಟ್ರೇಷನ್ ಮಿನಿಸ್ಟರ ಕಡೆಗೆ ತೋರಿಸುತ್ತಾರೆ. ಇದು ಏನು ಸ್ವಾಮಿ ? ತ್ರಿಶಂಕುಸ್ವರ್ಗ ! ಈ ವಿಷಯದಲ್ಲಿ ಬಹಳ ಅನ್ಯಾಯವಾಗುತ್ತಾ ಇದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸುಖೀ ರಾಜ್ಯದಲ್ಲಿ ಜನರು ಸತ್‌ಪ್ರಜೆಗಳಾಗಬೇಕಾದರೆ ಮಕ್ಕಳನ್ನು ಮೊದಲಿನಿಂದಲೇ ತಿದ್ದಬೇಕು. "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ" ಅಂತ ಅನ್ನುವ ಹಾಗೆ ಈ ಜಾತಿವಾದ ಅನ್ನುವುದನ್ನು ಮೊದಲು ಮಕ್ಕಳ ಹೃದಯದಲ್ಲಿ ಅಳಿಸಬೇಕು. ಈ ಜಾತಿಯ ಆಧಾರದ ಮೇಲೆ ಮಾಡುತ್ತಾ ಇರತಕ್ಕ ಕೆಲಸಗಳಿಂದ ಅಲ್ಲೋಲ ಕಲ್ಲೋಲವಾಗುತ್ತಾ ಇದೆ. ಜಾತಿಯ ವಾದ ಮುಂದೆ ಇಟ್ಟುಕೊಂಡು ರಾಜಕೀಯ ಮಾಡುತ್ತಾ ಇದ್ದಾರೆ. ಜಾತಿಯ ವಿಚಾರ ಎತ್ತಿಕೊಂಡು ಅನೇಕ ಹೆಚ್ಚುಕಮ್ಮಿಗಳಾಗುತ್ತಿವೆ.

"ಜಾತಿ ಜಾತಿ ಎಂಬ ಮತ್ಸರವ ಬೆಳೆಸಿ ಪ್ರೇತಗಳಾದೆವಯ್ಯ,
ಭೂಮಾತೆ ಯಾವ ಜಾತಿಯಯ್ಯಾ;
ಜಗದಲ್ಲಿ ಇರುವುದು ಎರಡೇ ಜಾತಿ, ಗಂಡು ಹೆಣ್ಣು;

"ಎಂಜಲೆಂಜಲೆಂಬರಯ್ಯ ಆ ಎಂಜಲೆಂಬ ನುಡಿ ಎಂಜಲಲ್ಲವೆ;
ಹಾಲು ಕರುವಿನ ಎಂಜಲಲ್ಲವೇ;
ನದಿಯಲ್ಲಿರುವ ನೀರು ಮೀನಿನ ಎಂಜಲಲ್ಲವೇ;

ಎಂದು ಈ ರೀತಿ ಹೇಳಿರುವಾಗ ಕರ್ನಾಟಕ ಆಗಬೇಕು ಅಂತ ಹೇಳಿ ದೊಡ್ಡಮೇಟಿಯವರು ಮಾತ್ರ ಹೊಡೆದಾಡಿದವರಲ್ಲ. ಕರ್ನಾಟಕ ಅನ್ನತಕ್ಕ ಈ ದೇಶಕೆ ಆದಿಕರ್ನಾಟಕರೇ ಮೂಲ ಪುರುಷರು. ಆದ್ದರಿಂದ ಈ ಜಾತಿಗೊಂದಲ ಮಕ್ಕಳ ಹೃದಯದಲ್ಲಿ ನಾಟುವಂತೆ ಮಾಡಬಾರದು. ಅದಕ್ಕಾಗಿಯೇ ಈಗ ಜನರಲ್ ಹಾಸ್ಟೆಲುಗಳು ಇವೆ. ಇದಕ್ಕೆ ಮುಖ್ಯವಾಗಿ ಆಗಬೇಕಾದ ಕಾರ್ಯ ಎಂದರೆ ಪ್ರಚಾರ ಕಾರ್ಯ. ಪ್ರಕಟನೆ. ಪ್ರಕಟಣೆ ಎಂದರೆ ಟೆಕ್ಸ್ಟ್‌ಬುಕ್ ಬರೆಯುವಾಗ ಅಸ್ಪೃಶ್ಯತೆ ವಿಚಾರದಲ್ಲಿ, ಹರಿಜನರ ವಿಚಾರದಲ್ಲಿ, ಷೆಡ್ಯೂಲ್ ಕ್ಯಾಸ್ಟ್‌ನವರ ವಿಚಾರದಲ್ಲಿ ಹರಿಜನರ ಮಕ್ಕಳಿಗೆ ಒಂದು ಗಂಟೆ ಪಾಠ ಹೇಳಬೇಕು. ಹೇಳದಿದ್ದರೆ ಖಂಡಿತವಾಗಿಯೂ ಮುಂದೆ ದೇಶಕ್ಕೆ ಬಹಳ ಅಪಾಯವಾಗುತ್ತದೆ. ಪಠ್ಯಪುಸ್ತಕದಲ್ಲಿ ಪ್ರಚೋದನೆ, ಪ್ರಚಾರ ಮತ್ತು ಪ್ರಕಟಣೆ ಇವು ಆಗಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳಬೇಕೆಂದು ಷೆಡ್ಯೂಲ್ ಕ್ಯಾಸ್ಟ್ ಅಡ್‌ವೈಸರಿ ಬೋರ್ಡಿನಲ್ಲಿ ಹೇಳಿದ್ದೇವೆ. ಹರಿಜನರ ವಿಚಾರದಲ್ಲಿ, ಅಸ್ಪೃಶ್ಯತೆಯ ವಿಚಾರದಲ್ಲಿ ರೇಡಿಯೋದಲ್ಲಿ ಒಂದಷ್ಟು ಪ್ರಚಾರವನ್ನಾದರೂ ಮಾಡಿ ಅಂತ ಹೇಳಿ ಡೈರೆಕ್ಟರ್ ಸಾಹೇಬರನ್ನು ಕೇಳಿದರೆ 'ಊಹುಂ, ಸಾಧ್ಯವಿಲ್ಲ ಮಕ್ಕಳ ಹೃದಯದಲ್ಲಿ ಈ ಒಂದು ಅಸ್ಪೃಶ್ಯತೆ ದೂರಸರಿಯತಕ್ಕ ವ್ಯವಸ್ಥೆ ನಮ್ಮ ಕರ್ನಾಟಕ ದೇಶದಲ್ಲಿ ಆಗಬೇಕು. ಒಟ್ಟಿನಲ್ಲಿ ನೀವು ಬುದ್ಧಿವಂತರು ಬಂದಿದ್ದೀರಿ ಬಹಳ ಸಂತೋಷ, ಸಮಾಜ ಕಲ್ಯಾಣ ಮಂತ್ರಿಗಳು ಮತ್ತು ಡೆಪ್ಯೂಟಿ ಮಂತ್ರಿಗಳ ವಿಚಾರದಲ್ಲಿ ನಮಗೆ ಸಹಾನುಭೂತಿ ಇದೆ. ಆದರೆ ಅವರು ಮಾಡುತ್ತಾ ಇರುವ ಕೆಲಸದಲ್ಲಿ ನಮಗೆ ಸಮಾಧಾನ ಇಲ್ಲ, ಆದ್ದರಿಂದ ನಮ್ಮ ಈ ಒಂದು ಖಾತೆಯನ್ನು ಮಾನ್ಯ ಮುಖ್ಯಮಂತ್ರಿಗಳೇ ತೆಗೆದುಕೊಂಡರೆ ಬಹಳ ಚೆನ್ನಾಗಿರುತ್ತದೆ

ಎಂದು ನನಗೆ ಅನಿಸುತ್ತದೆ. ಅವರಿಗೆ ಬಹಳ ಕೆಲಸ ಇದೆ ನನಗೆ ಗೊತ್ತು, ಆದರೆ ಅವರು ಮುಖ್ಯ ಮಂತ್ರಿಗಳಾದ ಮೇಲೆ ನಮಗೆ ಕೊಟ್ಟಿರುವ ಸೌಲಭ್ಯ ನೋಡಿದರೆ ಈ ಒಂದು ವಿಚಾರದಲ್ಲಿ ಅವರು ಬಸವೇಶ್ವರರು, ನಾವು ಹರಳಯ್ಯ ಇದ್ದ ಹಾಗೆ ಇದ್ದೇವೆ. 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಇಬ್ಬರನ್ನು ನೇಮಕ ಮಾಡಿ ಅವರು ಏನು ಕೆಲಸ ಮಾಡಬೇಕೆಂದಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಆದ್ದರಿಂದ ಕಡೆಯದಾಗಿ ಹೇಳುತ್ತೇನೆ ಸ್ವಾಮಿ. ರಾಜ್ಯಾಂಗದ 46ನೇ ಸೆಕ್ಷನ್, 17ನೇ ಸೆಕ್ಷನ್ ಮತ್ತು 4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಇವರ ಬಗ್ಗೆ ಏನೇನು ಮಾಡಬೇಕೆಂದು ಅಡ್ವೈಸರಿ ಬಾಡಿಯಲ್ಲಿ ಸಲಹೆ ಕೊಟ್ಟಿದ್ದೇವೆ, ಅದನ್ನೆಲ್ಲಾ ಈ ಇಬ್ಬರು ಮಂತ್ರಿಗಳ ಕೈಯಲ್ಲಿ ವಹಿಸಿಕೊಡಿ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅದಕ್ಕೆ ತಕ್ಕಂತೆ ಹಾಸ್ಟಲುಗಳ ಸಂಖ್ಯೆ ಜಾಸ್ತಿಯಾಗಬೇಕು. ಆದ್ದರಿಂದ ಈ ಒಂದು ಕರ್ನಾಟಕ ದೇಶದಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರ ನಾಯಕತ್ವದಲ್ಲಿ ಮುಂದಿನ ಮೂರು ವರ್ಷದಲ್ಲಿ ಹರಿಜನರ ಉದ್ಧಾರವಾಗಿ ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಎಲ್ಲ ಜಾತಿಯವರಿಗೂ ಹೇಗೆ ಪ್ರಾಶಸ್ತ್ಯವಿತ್ತೋ ಹಾಗೆ ನಮ್ಮ ಹಿಂದುಳಿದ ಪಂಗಡದವರ ಮತ್ತು ಮುಸ್ಲಿಂರ ಹಾಗೂ ಇತರ ಬೇರೆ ಬೇರೆ ಜಾತಿಯವರೇನಿದ್ದಾರೆ ಅವರನ್ನೆಲ್ಲಾ ಒಂದು ಸಮವಾಗಿ ನೋಡಿಕೊಂಡು ಈ ಕರ್ನಾಟಕದ ಒಂದು ಕೀರ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬೆಳಗಿಸುತ್ತಾರೆ ಎಂದು ನಾನು ನಂಬಿದ್ದೇನೆ. ಇನ್ನು ಶ್ರೀ ಪ್ರಭಾಕರ್ ಅವರು ಮತ್ತು ಮಲ್ಲಿಕಾರ್ಜುನಸ್ವಾಮಿಗಳು ಆ ಬೋವಿಯವರ ವಿಚಾರದಲ್ಲಿ ಅವರನ್ನು ಷೆಡ್ಯೂಲ್ ಕ್ಯಾಸ್ಟಿನಿಂದ ತೆಗೆದುಹಾಕಬೇಕೆಂದು ಹೇಳಿದ್ದಾರೆ, ಎಲ್ಲರಿಗೂ ಒಂದೇ ಕಾನೂನು ಇರುವಂತೆ ಮಾಡಿ. ಈ ದಿವಸ ಸರ್ಕಾರದವರು ದೇಶಾದ್ಯಂತ ಒಂದು ಯೂನಿಫಾರಂ ಲಾ ಇರಬೇಕೆಂದು ಹೇಗೆ ಹೇಳುತ್ತಿದ್ದಾರೋ ಆ ತತ್ವವನ್ನು ಇಲ್ಲಿಯೂ ಅನುಸರಿಸಲಿ. ಅದನ್ನು ಬಿಟ್ಟು ಇವರನ್ನು ಅದರಲ್ಲಿ ಸೇರಿಸು ಅವರನ್ನು ಇದರಿಂದ ತೆಗೆಯಿರಿ, ಅವರನ್ನು ಸೇರಿಸಿ ಎಂದು ಅದಲುಬದಲು ಮಾಡುವುದು ಸರಿಯಾಗುದಲ್ಲ. ಇಡೀ ಇಂಡಿಯಾ ದೇಶಕ್ಕೆಲ್ಲಾ ಒಂದು ಕಾನೂನು ಇರಬೇಕು. ಕರ್ನಾಟಕ ದೇಶದಲ್ಲಿ ಹರಿಜನರನ್ನು ಬಸವೇಶ್ವರನು ಹೇಗೆ ಉದ್ಧಾರ ಮಾಡಿದನೋ ಹಾಗೇ ನಮ್ಮ ಮುಖ್ಯಮಂತ್ರಿಗಳು ಆ ಬಸವೇಶ್ವರನಾಗಿ ನಮ್ಮನ್ನು ಉದ್ಧಾರ ಮಾಡಬೇಕೆಂದು ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗಂಗಾಬೋವಿ (ಗೂಳೂರು).—ಮಾನ್ಯ ಸಭಾಧ್ಯಕ್ಷರೇ ಈ ದಿವಸ ನಮ್ಮ ಇಡೀ ರಾಜ್ಯದ ಸಮಾಜ ಕಲ್ಯಾಣಶಾಖೆಗೆ ಸಂಬಂಧಪಟ್ಟ ಬೇಡಿಕೆಗಳೇನಿವೆ, ಏನು ಈ ಸಭೆಯ ಮುಂದೆ ಅವುಗಳನ್ನು ಮಂಡಿಸಿದ್ದಾರೆ ಅವುಗಳನ್ನು ನಾವು ವಿರೋಧಿಸುತ್ತ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ನೀಡಬೇಕೆಂದಿದ್ದೇನೆ. ಈ ಡಿಮ್ಯಾಂಡುಗಳ ಬಗ್ಗೆ ಮಾತನಾಡುತ್ತಾ ಅನೇಕ ಮಾನ್ಯ ಸದಸ್ಯರು ಅನೇಕ ವಿಧವಾದ ಸಲಹೆಗಳನ್ನು ಮಂಡಿಸಿದ್ದಾರೆ. ಆದರೆ ನಾನು ಕೆಲವು ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ನಾನು ಈ ಅಸೆಂಬ್ಲಿಗೆ ಸದಸ್ಯನಾಗಿ ಇಲ್ಲಿಗೆ ಬಂದು ಎರಡು ವರ್ಷಗಳಮೇಲಾಯಿತು. ಆದರೆ ನಾನು ನೋಡಿದ್ದರಲ್ಲಿ ಇಲ್ಲಿ ಪ್ರತಿಯೊಂದು ಅಧಿವೇಶನದಲ್ಲೂ ಬರೀ ಜಾತಿಯ ವಾದವೊಂದೇ ದೊಡ್ಡದಾಗಿ ಬೆಳೆದುಕೊಂಡು ಬರುತ್ತಿದೆ. ಇಲ್ಲಿ ಕೆಲವು ಮಾನ್ಯ ಸದಸ್ಯರು ಬೋವೀ ಜನಾಂಗವನ್ನು ಷೆಡ್ಯೂಲ್ ಪಂಗಡದವರ ಲಿಸ್ಟಿನಿಂದ ತೆಗೆದುಹಾಕಬೇಕೆಂದು ಪದೇ ಪದೇ ಭಾಷಣಗಳನ್ನು ಮಾಡುತ್ತಿದ್ದಾರೆ. ಯಾರು ಈ ಸಭೆಯಲ್ಲಿ ಜಾತಿವಾದ ಹೋಗಬೇಕು ಎಂದು ವಾದಮಾಡುತ್ತಿದ್ದಾರೋ ಅಂಥವರೇ ಈ ದಿನ ಈ ಸಭೆಯಲ್ಲಿ ಜಾತಿವಾದವೆತ್ತಿ ಬೋವಿ ಜನಾಂಗವನ್ನು ಆ ಪಟ್ಟಿಯಿಂದ ತೆಗೆದುಹಾಕಿ ಎಂದು ಹೇಳುತ್ತಿದ್ದಾರೆ. ಹಾಗೆ ಹೇಳುವುದಕ್ಕೆ ಆ ಸದಸ್ಯರುಗಳಿಗೇನು ಹಕ್ಕಿದೆ? ಈ ಸಭೆಯಲ್ಲಿ ಅವರಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಇನ್ನುಳಿದ ಸದಸ್ಯರಿಗೂ ಇದೆ. ಸುಮಾರು 1918–1919 ರಲ್ಲಿ ಕಾನ್‌ಸ್ಟಿಟ್ಯೂಷನ್ ಪ್ರಕಾರವೇ ಅಂದರೆ ಆಗಿದ್ದ ಕಾನೂನುಗಳ ಪ್ರಕಾರವೇ ಈ ಬೋವಿಜನಾಂಗವನ್ನು ಆ ಷೆಡ್ಯೂಲ್ ಲಿಸ್ಟಿನಲ್ಲಿ ಸೇರಿಸಿದ್ದಾರೆ. ಆದ್ದರಿಂದ ನಮಗೂ ಆ ಒಂದು ಲಿಸ್ಟಿನಲ್ಲಿ ಇರತಕ್ಕ ಹಕ್ಕನ್ನು ಪಡೆದಿದ್ದೇವೆ. ಅದನ್ನು ನಾನೇನು ಜಾತಿವಾದಮಾಡಿ ಪಡೆದಿದ್ದಲ್ಲ. ಸರ್ಕಾರದವರೇ ಎಲ್ಲವನ್ನೂ ಆಲೋಚನೆ ಮಾಡಿ ಈ ಬೋವಿಜನಾಂಗವನ್ನು ಆ ಲಿಸ್ಟಿನಲ್ಲಿ ಸೇರಿಸಿದ್ದಾರೆ. ಆದ್ದರಿಂದ ಅವರ ಬಗ್ಗೆ ಈ ದಿವಸ ನಮ್ಮನ್ನು ಆ ಲಿಸ್ಟಿನಿಂದ ತೆಗೆದು ಹಾಕಿ ಎಂದು ಹೇಳತಕ್ಕ ಹಕ್ಕು ಹರಿಜನರಿಗಿರುವುದಿಲ್ಲ. ಆದರೆ ಹಾಗೆ ಬೋವಿ ಜನಾಂಗವನ್ನು ಆ ಒಂದು ಪಟ್ಟಿಯಲ್ಲಿ ಸೇರಿಸಿದ ನಂತರ ಈ ಜನಾಂಗಕ್ಕೆ ಪ್ರತಿಯೊಂದು ವರ್ಷದಲ್ಲೂ ಆ ಹರಿಜನರಿಗೆ ಕಾಲೋನಿಗಳನ್ನು ಹಾಸ್ಟಲುಗಳನ್ನು ಮತ್ತು ದರಖಾಸ್ತಿನಲ್ಲಿ ಉಳುವುದಕ್ಕೆ ಭೂಮಿಯನ್ನು ಮತ್ತು ಹುಡುಗರಿಗೆ ಉಚಿತವಾಗಿ ಬಟ್ಟೆ ಪುಸ್ತಕ ಮತ್ತ ಸ್ಕಾಲರ್‌ಷಿಪ್ ಇತ್ಯಾದಿಗಳನ್ನು ಒದಗಿಸಿಕೊಟ್ಟು ಅನು

(ಶ್ರೀ ಗಂಗಾಬೋವಿ)

ಕಾಲ ಮಾಡಿದಂತ ಬೋವಿ ಜನಾಂಗಕ್ಕೆ ಎಷ್ಟೆಷ್ಟು ಅನುಕೂಲಗಳು ದೊರೆತಿವೆ ಎಂಬುದನ್ನು ಅಂಕಿಅಂಶ ಒದಗಿಸಬೇಕು. ಇಲ್ಲಿರತಕ್ಕ ಹರಿಜನ ಸದಸ್ಯರು ಮಾತೆತ್ತಿದರೆ ಅಸ್ಪೃಶ್ಯತೆಯನ್ನು ತೆಗೆಯಬೇಕು ಜಾತೀಯತೆಯನ್ನು ಹೋಗಲಾಡಿಸಬೇಕು ಎನ್ನತಕ್ಕ ಜನಾಂಗದವರು ಮಾತೆತ್ತಿದರೆ ಬೋವಿ ಜನಾಂಗವನ್ನು ತೆಗೆಯಿರಿ ತೆಗೆಯಿರಿ ಎಂದು ಹೇಳುತ್ತಿರುತ್ತಾರೆ. ಹಾಗೆ ಆ ಜನಾಂಗವನ್ನು ಈ ಹರಿಜನರು ಅಷ್ಟು ಹಗೆತನದಿಂದ ನೋಡುತ್ತಿರುವುದಕ್ಕೆ ಅವರು ಈ ಹರಿಜನಾಂಗಕ್ಕೇನು ಅಂಥ ಅನಾನುಕೂಲವನ್ನುಂಟು ಮಾಡಿದ್ದಾರೆ? ಅವರಿಗೆ ಏನು ಅಂಥ ಮಾಡಬಾರದ ಅನಾಹುತಗಳನ್ನು ಮಾಡಿದ್ದಾರೆ? ಆ ಬೋವಿ ಜನಾಂಗದವರು ಇದುವರೆಗಾದರೂ ರಾಜಕೀಯದಲ್ಲಿ ಆರ್ಥಿಕದಲ್ಲಿ ಸಾಂಸ್ಕೃತಿಯಲ್ಲಿ ಎಷ್ಟು ಮುಂದುವರಿದ್ದಾರೆ ಎಂಬುದನ್ನು ಅವರು ರುಜುವಾತು ಮಾಡಲಿ. ಅವರು ಆ ಅಂಕೀಅಂಶಗಳನ್ನು ಸಭೆಯ ಮುಂದಿಡಲಿ. ಬೋವೀ ಜನಾಂಗದವರು ಈ ಎಲ್ಲಾ ಬಾಬುಗಳಲ್ಲೂ ಹಿಂದುಳಿದ್ದಾರೆ. ಅವರನ್ನು ಪಟ್ಟಿಯಿಂದ ತೆಗೆದು ಹಾಕಿ ಎಂದು ಕೇಳತಕ್ಕ ಆ ಒಂದು ಹಕ್ಕು ಮಲ್ಲಿಕಾರ್ಜುನ ಸ್ವಾಮಿಯವರಿಗಾಗಲೀ ಅಥವಾ ಆ ಪ್ರಭಾಕರ್ ಅವರಿಗಾಗಲಿ ಇರುವುದಿಲ್ಲ. ಈ ದಿವಸ ನಮ್ಮ ಹಾಗೆ ಆ ಹರಿಜನರೂ ಸರಿಸಮಾನೀಕರಾಗಿ ನಾವು ಯಾವ ಹೋಟಲಿಗೆ ಹೋಗುತ್ತಿದ್ದೇವೋ ಅವರೂ ಆ ಹೋಟಲೀಗೇ ಬರುತ್ತಿದ್ದಾರೆ, ನಾವೀದಿವಸ ಯಾವ ಡೋಬಿಗೆ ಬಟ್ಟೆಗಳನ್ನು ಒಗೆಯುವುದಕ್ಕೆ ಕೊಡುತ್ತಿದ್ದೇವೆಯೋ ಆ ಡೋಬಿಗೇ ಅವರೂ ಬಟ್ಟೆಗಳನ್ನು ಒಗೆಯುವದಕ್ಕೆ ಕೊಡುತ್ತಿದ್ದಾರೆ, ನಾವು ಯಾವ ಕ್ಷೌರದ ಷಾಪಿಗೆ ಕ್ಷೌರಕ್ಕೆ ಹೋಗುತ್ತಿದ್ದೇವೆಯೋ ಅದೇ ಷಾಪಿಗೆ ಈ ಹರಿಜನರೂ ಬರುತ್ತಿದ್ದಾರೆ. ಇಷ್ಟೆಲ್ಲಾ ಆದ ಮೇಲೂ ಅವರ ಆ ಅಸ್ಪೃಷ್ಯತೆ ಹೋಗಿಲ್ಲಾ ಅಂದಾಗ ಇನ್ನು ಆ ಅಸ್ಪೃಶ್ಯತೆ ಬೋವಿ ಜನಾಂಗದವರನ್ನು ಆ ಲಿಸ್ಟಿನಿಂದ ತೆಗೆದರೆ ಇವರು ಜಾತಿವಂತರಾಗುತ್ತಾರೆಂದು ಅವರು ತಿಳಿದಿದ್ದರೆ ಅದು ತಪ್ಪು. ಇಂಥ ವಾದಗಳಿಂದ ಇವರು ಜಾತಿಗಳನ್ನು ಅಳಿಸುವುದಕ್ಕಾಗುವುದಿಲ್ಲ. ಆದರೆ ಕೆಲವರು ಹರಿಜನ ಸದಸ್ಯರು ಮಾತನಾಡುತ್ತಾ ಬೋವಿ ಜನಾಂಗದವರೂ ನಮ್ಮ ಸ್ನೇಹಿತರೇ ಎಂದು ಬಾಯಲ್ಲಿ ಮಾತನಾಡುತ್ತ ಇದ್ದರೂ ಈ ಜಾತೀಯತೆಯ ಆಕ್ರೋಶವನ್ನು ಮಾತ್ರ ಅವರು ಕೈಬಿಟ್ಟಿಲ್ಲ. ನಾವು ಈ ಸಭೆಯಲ್ಲಿ ಸ್ವಲ್ಪ ಜನ ಸದಸ್ಯರೇ ಇರಬಹುದು. ಹರಿಜನರು ಬಹಳ ಸಂಖ್ಯೆಯಲ್ಲೇ ಇರಬಹುದು. ಇರಲಿ ಅವರು ಈ ಸಭೆಯಲ್ಲಿ 30 ಮಂದಿ ಇದ್ದಾರೆಂದ ಮಾತ್ರಕ್ಕೇ ಅವರಿಗೆ ನಮ್ಮ ಮೂವರು ಸದಸ್ಯರನ್ನು ಅವರು ನೋಡಿ ಸೈರಣೆ ಮಾಡುವುದಕ್ಕಾಗಲಿಲ್ಲಾ ಅಂದರೆ ಅವರಲ್ಲಿ ಎಷ್ಟು ಜಾತಿಮಾತ್ಸರವಿದೆ ಎಂಬುದು ಇದೊಂದರಿಂದಲೇ ಎದ್ದು ಕಾಣುತ್ತಿದೆ. ಹಾಗೆ ಸೈರಣೆ ಇಲ್ಲದ್ದರಿಂದ ನಮ್ಮ ಹಕ್ಕನ್ನು ಅವರು ಕಸಿದುಕೊಳ್ಳಲು ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಹರಿಜನರ ಸಂಖ್ಯೆ 15 ಲಕ್ಷ ಇದ್ದರೆ ನಮ್ಮ ಬೋವಿ ಜನಾಂಗ 8-9 ಲ ಇದೆ. ಹಾಗೇನಾದರೂ ಬೋವೀ ಜನಾಂಗವನ್ನು ಆ ಪಟ್ಟಿಯಿಂದ ಸರ್ಕಾರದವರು ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಿದ್ದೇ ಆದರೆ ದೇಶದಲ್ಲಿ ದೊಡ್ಡ ಕ್ರಾಂತಿಯೆದ್ದೀತು—ಅದಕ್ಕೆ ಅವಕಾಶ ಕೊಡಬೇಡಿ. ನಾವು ಇದೇ ಸಭೆಯಲ್ಲಿ 30 ಜನ ಹರಿಜನ ಸದಸ್ಯರಿದ್ದಾಗ್ಗೂ ಅವರನ್ನು ನೋಡಿ ನಾವು ಅಸೂಯತೆ ಪಡತಕ್ಕಂಥ ಹೃದಯಘಾತಕರಲ್ಲ. ಹರಿಜನರು ಈ ದಿವಸ ಈ ಸಭೆಯಲ್ಲಿ 30 ಜನ ಸದಸ್ಯರಿದ್ದಾರೆ. ಕ್ಯಾಬಿನೆಟ್ಟಿನಲ್ಲಿ ಇಬ್ಬರು ಮಂತ್ರಿಗಳಿದ್ದಾರೆ. ಒಬ್ಬರು ಈ ಸಭೆಯ ಉಪಾಧ್ಯಕ್ಷರು. ಇಷ್ಟಿದ್ದರೂ ಈ ಹರಿಜನ ಸದಸ್ಯರ ಅಸೂಯತೆ ಬೋವಿಜನಾಂಗದ ಮೇಲೆ ಬೀಳುತ್ತಿರುವುದು ತಪ್ಪಲಿಲ್ಲ. ಈ ಹರಿಜನರ ಹಾಗೇ ನಮ್ಮ ಬೋವಿ ಜನಾಂಗದಲ್ಲಿ ಜಾತಿವಾದದ ಪ್ರಕಾರ ಅಥವಾ ಈ ಒಂದು ಜಾತೀ ಆಧಾರದ ಮೇಲೆ ಎಷ್ಟು ಜನ ಬೋವಿ ಜನಾಂಗದವರಿಗೆ ಕ್ಯಾಬಿನೆಟ್ಟಿನಲ್ಲಿ ಸ್ಥಾನಗಳನ್ನು ಕೊಡಲಾಗಿದೆ? ಎಷ್ಟು ಜನರು ದೊಡ್ಡ ದೊಡ್ಡ ಅಧಿಕಾರ ಸ್ಥಾನಗಳಲ್ಲಿದ್ದಾರೆ? ಇವರಲ್ಲಿರತಕ್ಕ ವಿದ್ಯಾವಂತರ ಸಂಖ್ಯೆ ಎಷ್ಟು? ಈ ಅಂಕಿ ಅಂಶಗಳನ್ನು ಸರ್ಕಾರದವರು ಒದಗಿಸಬೇಕು. ನಮ್ಮ ಜನಾಂಗದಿಂದ ಹರಿಜನರಿಗೆ ಉಂಟಾಗಿರತಕ್ಕ ಇಕ್ಕಟ್ಟಾದರೂ ಏನು? ಈ ಎಲ್ಲಾ ವಿಚಾರಗಳಲ್ಲೂ ಬೋವಿ ಜನಾಂಗದವರು ಹರಿಜನರಿಗಿಂತ ಹಿಂದುಳಿದವರಾಗಿದ್ದಾರೆ. ಆದ್ದರಿಂದ ಈ ಹರಿಜನರ ವಾದವನ್ನು ಏನಾದರೂ ಕೇಳಿಕೊಂಡು ಬೋವಿ ಜನಾಂಗವನ್ನು ಆ ಷೆಡ್ಯೂಲ್ ಕಾಸ್ಟಿನ ಪಟ್ಟಿಯಿಂದ ತೆಗೆದಿದ್ದೇ ಆದರೆ ದೇಶದಲ್ಲಿ ದೊಡ್ಡ ಕ್ರಾಂತಿಯೇಳುವುದು ಖಂಡಿತ. ನಮ್ಮ ಜನಾಂಗ ಆ ಪಟ್ಟಿಯಲ್ಲಿ ಸೇರಿದ್ದು ಈಗಲ್ಲ. ಅದು 1918ರಿಂದಲೂ ಅದರಲ್ಲಿ ಸೇರಿದೆ. ಅದನ್ನು ಬದಲಾಯಿಸತಕ್ಕ ಹಕ್ಕು ಯಾರಿಗೂ ಇಲ್ಲ. ಬದಲಾಯಿಸಿ ಎಂದು ಹೇಳತಕ್ಕ ಹಕ್ಕೂ ಆ ಹರಿಜನರಿಗಿಲ್ಲ, ಎಂಬ ಅಂಶವನ್ನು ಅವರು ಅರಿಯಬೇಕೆಂದು ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಬೋವಿ ಜನಾಂಗದವರು ಹರಿಜನರಂತೆ ಸ್ವಾರ್ಥಿಗಳಲ್ಲ ಜಾತೀವಾದವೆಬ್ಬಿಸಿ ರಾಜಕೀಯ ಮಾಡತಕ್ಕವರಲ್ಲ. ಅವರು ಈ ದಿವಸವೇ ಇದನ್ನು

ಮರೆಯಬೇಕು. ಇನ್ನೊಂದು ಸಾರಿ ಅವರೇನಾದರೂ ಈ ಬೋವಿ ಜನಾಂಗದ ಹೆಸರನ್ನು ಎತ್ತಿದರೆ ದೊಡ್ಡ ಗೊಂದಲವೇಳುತ್ತದೆಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. ಅವರು ಹೀಗೆಲ್ಲಾ ವಾದ ಮಾಡುತ್ತಾ ಹೋದರೆ ಅಸ್ಪೃಶ್ಯತೆಯನ್ನು ತೆಗೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವರ ಜಾತೀವಾದ ಜಾತಿಮಾತ್ಸರವನ್ನು ಬೆಳೆಸುತ್ತಿದೆ ಎಂಬುದನ್ನು ಅವರು ಅರಿಯಬೇಕು. ನನಗೆ ಇನ್ನೂ ಹೆಚ್ಚು ವಿಷಯಗಳನ್ನು ಹೇಳತಕ್ಕ ಆಸೆಯಿತ್ತು ಆದರೆ ಕಾಲಾವಕಾಶ ಅಧ್ಯಕ್ಷರು ನನಗಿಷ್ಟು ಮಾತನಾಡುವುದಕ್ಕೆ ಅವಕಾಶಕಲ್ಪಿಸಿಕೊಟ್ಟುದಕ್ಕೆ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12-00 NOON

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷರೇ, ಯಾವ ಒಂದು ಹರಿಜನೋದ್ಧಾರವೆಂದು ಹೇಳುತ್ತೇವೋ ಆ ಹರಿಜನೋದ್ಧಾರ ಎನ್ನುವ ಬದಲಾಗಿ ಅಜೀರ್ಣೋದ್ಧಾರವೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈ ಅಜೀರ್ಣವೆಂಬುದು ಪರಿಶಿಷ್ಟ ಪಂಗಡಗಳಲ್ಲಿ ಉದ್ಧಾರವಾಗುತ್ತಿದೆ. ಹರಿಜನೋದ್ಧಾರವೆಂದು ಬಾಯಿಯಲ್ಲಿ ಹೇಳುತ್ತಾ ಬರೀ ಆಡಂಬರದ ಪ್ರಚಾರ ಮಾಡುತ್ತಿದ್ದಾರೆ. ಅವರು ಹಿಂದೆ ಯಾವ ಒಂದು ನಿರ್ದಿಷ್ಟ ನೀತಿಯನ್ನು ಇಟ್ಟು ಕೊಂಡಿದ್ದರೋ ಅದೇ ಒಂದು ನಿರ್ದಿಷ್ಟವಾದ ನೀತಿಯಲ್ಲಿದ್ದಾರೆಂದು ಹೇಳುವುದಕ್ಕೆ ಏನೂ ಅಡ್ಡಿ ಇಲ್ಲ. ಒಂದು ಸಾಮ್ಯ ಹೇಳುತ್ತೇನೆ. ಉದಯಪುರ ರಾಜಾಸ್ಥಾನದಲ್ಲಿ ರಾಣಾ ಪ್ರತಾಪ್ ಸಿಂಗ್ ಅವರು ತನ್ನ ರಾಜಧಾನಿ ಪ್ರತಾಪಗಢ ಪರರ ಕೈಗೆ ಹೋದಮೇಲೆ ಪುನಃ ಅದನ್ನು ನನ್ನ ವಶಕ್ಕೆ ತೆಗೆದುಕೊಳ್ಳುವವರೆಗೂ ನಾನು ಚಿನ್ನದ ತಟ್ಟೆಯಲ್ಲಿ ಊಟ ಮಾಡುವುದಿಲ್ಲ, ಎಂದು ಹಠ ಹಿಡಿದಿದ್ದರು. ಇಂತಹ ಉದಾಹರಣೆಗಳನ್ನು ನಾನಾತ್ಕಾರು ಕೊಡಬಲ್ಲೆ. ಆದರೆ ಕಾಲವಿಳಂಬವಾಗುತ್ತದೆ. ಹೀಗೆ ಹರಿಜನರ ಉದ್ಧಾರವಾಗಬೇಕು. ವಾಸ್ತವ ಪರಿಸ್ಥಿತಿ ಏನಿದೆ, ಅದಕ್ಕೆ ಮೂಲಭೂತವಾದ ಕಾರಣವೇನೆಂಬುದನ್ನು ನಾವು ಯಾರು ಇದುವರೆಗೆ ಅರ್ಥಮಾಡಿಕೊಂಡಿಲ್ಲ. ಹರಿಜನರ ಅಸ್ಪೃಶ್ಯತೆ ಹೇಗೆ ಪ್ರಾರಂಭವಾಯಿತು ? ಇದು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಾಗ ಆಗಲಿಲ್ಲ ಮುಸಲ್ಮಾನ್ ಅಥವಾ ಹಿಂದೂಗಳು ನಮ್ಮ ದೇಶಕ್ಕೆ ಬಂದಾಗ ಬಂದದ್ದಲ್ಲ, ಸಾವಿರಾರು ವರ್ಷಗಳಿಂದ ಒಂದು ಧಾರ್ಮಿಕ ಸಿದ್ಧಾಂತ ರೂಪಕ್ಕೆ ಬಂದಾಗ, ಆ ಸಮಾಜ ವ್ಯವಸ್ಥೆ ಒಂದು ಕ್ರಿಸ್ಟಾಲ್ ರೂಪದಲ್ಲಿ ಬಂದಾಗ್ಗೆ, ಈ ಅಸ್ಪೃಶ್ಯತೆ ಬಂದಿದೆ. ಇದು ಒಬ್ಬ ಗಾಂಧಿಯಿಂದ ನಿರ್ಮೂಲವಾಡಲು ಸಾಧ್ಯವಿಲ್ಲ, ಲಕ್ಷ ಗಾಂಧಿಗಳಿಂದಲೂ ಸಾಧ್ಯವಿಲ್ಲ. ನಮ್ಮಲ್ಲಿ 70 ಲಕ್ಷ ಜನರು ಇದ್ದಾರೆ. ಅವರಿಗಾಗಿ 70 ಕೋಟಿ ಖರ್ಚುಮಾಡಿದರೂ ಸವರ್ಣ ಹಿಂದೂಗಳ ಒಂದು ಸಮಾಜವನ್ನು ಹೋಗಲಾಡಿಸುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಕಾರಣವಿದೆ. ಇದರಲ್ಲಿ ಒಂದು ವೆಸ್ಟೆಡ್ ಇಂಟರೆಸ್ಟ್ ಇದೆಯೆಂದು ಹೇಳುತ್ತೇನೆ. ಇಂತಹ ಸಮಾಜ ಉಳ್ಳವರು, ಸಮಾಜ ಇಲ್ಲದೇ ಇರುವವರು ಹ್ಯಾವ್ಸ್ ಅಂಡ್ ಹ್ಯಾವ್ ನಾಟ್ಸ್ ಬಗ್ಗೆ ಏನನ್ನೂ ಮಾಡಿಕೊಡುವುದಕ್ಕೆ ಆಗುವುದಿಲ್ಲ. ಕೇವಲ ಕೊಂಚ ಜನಗಳಿಗೆ ಇದರ ಸೌಲಭ್ಯ ಇರುತ್ತದೆ. ಹರಿಜನ ಪ್ರಾಬ್ಲಂ ಏನಿದೆ ಅಸ್ಪೃಶ್ಯತೆ, ಅದು ಹಿಂದೂ ಸಮಾಜದಲ್ಲಿದೆ. ಇದನ್ನು ಹೋಗಲಾಡಿಸಬೇಕಾದರೆ ಸಮಾಜ ಕಲ್ಯಾಣ ಇಲಾಖೆಯಿಂದ ಮಾಡುವುದಕ್ಕಾಗುವುದಿಲ್ಲ. ರಾಷ್ಟ್ರಾಂಗದಿಂದ ಹೋಗಲಾಡಿಸಬೇಕು. ಈ ರೀತಿ ಭಾವನೆ ಮಾಡಿದರೆ ತಪ್ಪಾಗುತ್ತದೆ. ವೆಸ್ಟಡ್ ಇಂಟರಸ್ಟ್ ಬರುತ್ತದೆ. ಅದನ್ನು ರಾಜಕೀಯ ಸಿದ್ಧಾಂತದ ಮೇಲೆ ನಿರ್ಮೂಲ ಮಾಡಬೇಕು. ಅದೇ ವಿಷಯವಾಗಿ ಮಹಾತ್ಮಾ ಗಾಂಧೀಯವರು ಈ ರೀತಿ ಹೇಳಿದ್ದಾರೆ. "Classless society is an ideal not merely to be aimed at, but to be worked for". ಈ ಒಂದು ದೃಷ್ಟಿಯಿಂದ ಸಮಾಜ ಕಲ್ಯಾಣ ಇಲಾಖೆಗೆ ದುಡ್ಡು ಕೊಟ್ಟರೆ ಸರಿಯೆಂಬ ಭಾವನೆ ಬರುತ್ತದೆ. ನಾವು ಇದರ ಬಗ್ಗೆ ಏಕೀಕೃತದಿಂದ ಹೋರಾಟ ಮಾಡಲಿಲ್ಲವೆಂಬುದು ನಮ್ಮ ತಪ್ಪು. ಆದರೂ ಸಹ ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕ ನ್ಯೂನತೆಗಳನ್ನು ನಮ್ಮ ಮಿತ್ರರು ಈಗಾಗಲೇ ಹೇಳಿದ್ದಾರೆ. ಅದನ್ನು ಕೊಂಚಮಟ್ಟಿಗೆ ಒಪ್ಪಿಗೆಮಾಡುತ್ತಾ ಅದಕ್ಕೆ ಕೆಲವು ಸಲಹೆಗಳನ್ನು ಕೊಡುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕಾಗಿ ದುಡ್ಡು ಖರ್ಚುಮಾಡುತ್ತಾರೆ. ಆ ಬೇಡಿಕೆಯಲ್ಲಿ ಮಾತನಾಡುವಾಗ ವಾಸ್ತವಾಂಶಗಳನ್ನು ಚೆನ್ನಾಗಿ ಹೇಳಿದ್ದೇನೆ. ಹರಿಜನ–ಗಿರಿಜನರ ವಿದ್ಯಾಭ್ಯಾಸದ ಬಗ್ಗೆ ಮತ್ತು ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸುಮಾರು 8 ವರ್ಷಗಳಿಂದಲೂ ಹೇಳುತ್ತಿದ್ದೇವೆ. ಕೇವಲ 200 ರೂಪಾಯಿಗಳನ್ನು ಮರಕ್ಕೋಸ್ಕರ ಕೊಟ್ಟಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ 2 ಸಾವಿರ ರೂಪಾಯಿಗಳವರೆಗೂ ಕೊಟ್ಟಿದ್ದಾರೆ. ಇನ್ನೂ ಮನೆ ಕಟ್ಟಿಲ್ಲ. ಹಣ ಈ ರೀತಿಯಾಗಿ ಪೋಲಾಗುತ್ತಿದೆ. ಮಕ್ಕಳಿಗೋಸ್ಕರ ಒಂದು ಬಾಲಭವನ

(ಶ್ರೀ ಎಂ. ಬಸವರಾಜು)

ಮಾಡಬೇಕೆಂದು ಬಹಳ ವರ್ಷಗಳಿಂದ ಹೇಳುತ್ತಿದ್ದೇವೆ. ಇದಕ್ಕಾಗಿ ಹೆಚ್ಚಿನ ಮೊಬಲಗನ್ನು ವಿನಿಯೋಗಮಾಡಿದರೆ ಅವರೆಲ್ಲರೂ ಐ.ಎ.ಎಸ್. ಆಫೀಸರ್ಸ್ ಆಗುವುದಕ್ಕೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಜಾಗ್ರತೆಯಾಗಿ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಸರ್ಕಾರದವರಿಗೆ ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಜೊತೆಯಲ್ಲಿ ನಿರುದ್ಯೋಗ ಸಮಸ್ಯೆ. ಹರಿಜನ-ಗಿರಿಜನರಲ್ಲಿಯೂ ಈ ನಿರುದ್ಯೋಗ ಸಮಸ್ಯೆ ಇದೆಯೆಂದು ಹೇಳುವುದಕ್ಕೆ ನನಗೆ ಬಹಳ ನಾಚಿಕೆಯಾಗುತ್ತದೆ ಮತ್ತು ಬಹಳ ವಿಷಾದವಾಗುತ್ತದೆ. ಅವರಲ್ಲಿರತಕ್ಕ ವಿದ್ಯಾವಂತರ ಸಾಂಖ್ಯೆಯೇ ಕಡಿಮೆ. ಅಂದಮೇಲೆ ಅವರಲ್ಲಿಯೂ ನಿರುದ್ಯೋಗ ಸಮಸ್ಯೆ ಇದೆಯೆಂದರೆ ನನಗೆ ಆಶ್ಚರ್ಯವಾಗುತ್ತದೆ. ಕೆಲವು ಕ್ವಾಲಿಫಿಕೇಷನ್ಸ್ ಅವರಿಗೂ ಇಟ್ಟಿದ್ದಾರೆ. ಅವನ್ನು ಕೊಂಚಮಟ್ಟಿಗೆ ರಿಲ್ಯಾಕ್ಸ್ ಮಾಡಬೇಕು. ಪ್ರತಿಯೊಂದು ಉದ್ಯೋಗದಲ್ಲಿಯೂ ಹರಿಜನ-ಗಿರಿಜನರಿಗೆ ಅವಕಾಶಕೊಡಬೇಕು. ಅದೇ ರೀತಿಯಲ್ಲಿ ಅಸ್ಪೃಶ್ಯತೆಯ ವಿಚಾರವನ್ನು ರೇಡಿಯೋ ಮೂಲಕ ಹೇಳಿದರೆ ಆಗುವುದಿಲ್ಲ. ಅವರ ಮನ ಪರಿವರ್ತನೆ ಮಾಡಿದರೆ ಮಾತ್ರ ಅದು ನಿವಾರಣೆ ಆಗುತ್ತದೆ. ಅದರ ಬಗ್ಗೆ ಬಲವಂತ ಇರಬೇಕು. ಕೋಳಿಮೊಟ್ಟೆಯಿಂದ ಮರಿ ಈಚೆಗೆ ಬರಬೇಕಾದರೆ ಕಾವು ಹೇಗೆ ಬೇಕೋ ಹಾಗೆ ಈ ರೀತಿಯಾಗಿ ಒತ್ತಡ ಇದ್ದರೆ ಅಸ್ಪೃಶ್ಯತೆ ನಿವಾರಣೆಯಾಗುತ್ತದೆ. ನಾನು ಎರಡು ಸಲಹೆಗಳನ್ನು ಹೇಳುತ್ತೇನೆ. ಹಳ್ಳಿಗಳ ಶಾಲೆಗಳಲ್ಲಿ ಹರಿಜನ ಕೋಮಿಗೆ ಸೇರಿದಂಥ ಉಪಾಧ್ಯಾಯರನ್ನು ನೇಮಕವಾಡಬೇಕು. ಯಾವುದಾದರೂ ಒಂದು ವ್ಯವಹಾರಕ್ಕೆ ಹೋಗಬೇಕಾದರೆ ಹಳ್ಳಿಯ ಶ್ಯಾನುಭೋಗರ ಹತ್ತಿರ ಹೋಗಬೇಕು. ಉಪಾಧ್ಯಾಯರ ಹತ್ತಿರ ಹೋಗಬೇಕು. ಈಗ ಶಾನುಭೋಗರ ಸಂಖ್ಯೆ ಕಡಿಮೆ ಅವರು ಉಪಾಧ್ಯಾಯರ ರೂಪದಲ್ಲಿದ್ದರೆ, ಅಂತಹ ಉಪಾಧ್ಯಾಯರಲ್ಲಿ ಹರಿಜನ—ಗಿರಿಜನರ ಸಂಪರ್ಕ ಜಾಸ್ತಿಯಾಗುತ್ತದೆ. ಇದರಿಂದ ಅಸ್ಪೃಶ್ಯತೆಯ ಭಾವನೆಯೇ ಹೋಗುತ್ತದೆ. ಹರಿಜನ ಬಂಧುಗಳು ಉದ್ಧಾರವಾಗಬೇಕಾದರೆ, ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿರತಕ್ಕ ಆಸ್ಪತ್ರೆಗಳಲ್ಲಿಯೂ ಡಾಕ್ಟರುಗಳಾಗಿ, ನರ್ಸುಗಳಾಗಿ ಸೇವೆಮಾಡಬೇಕು ಎಂಬುದಾಗಿ ನಿರ್ದೇಶನ ಕೊಡಬೇಕು. ಇದಕ್ಕೆ ಹರಿಜನ ಬಂಧುಗಳು ಒಪ್ಪಿಗೆ ಕೊಡಬೇಕು. ವಿಲೇಜ್ ಅಕೌಂಟೆಂಟ್ಸ್ ಹುದ್ದೆಗಳ ಬಗ್ಗೆ ಹರಿಜನ-ಗಿರಿಜನ ಸಂಬಂಧೀಕರಿಗೆ ವಿಶೇಷವಾಗಿ ಪ್ರೋತ್ಸಾಹ ಕೊಡಬೇಕು. ಆ ಹುದ್ದೆಗಳನ್ನು ಅವರಿಗೂ ಕೊಡಬೇಕು. ಏಕೆಂದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಸವರ್ಣ ಹಿಂದುಗಳ ಜೊತೆಯಲ್ಲಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಹಳ್ಳಿಗಳಲ್ಲಿ ವಾಸಮಾಡುವಂತಹರೆಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎಂ. ಬಸವರಾಜು.—ಹಳ್ಳಿಗಳಲ್ಲಿ ಯಾರು ಮನೆ ಕಟ್ಟಿಸಿಕೊಂಡಿಲ್ಲ. ಅಂತಹವರಿಗೆ ನೀವು ಕಟ್ಟಿಸಿಕೊಡಿ. ಒಂದು ಹಳ್ಳಿಗೆ ಒಬ್ಬ ಉಪಾಧ್ಯಾಯನನ್ನು ಇಡಿ. ನಿಮ್ಮ ಹೌಸಿಂಗ್ ಬೋರ್ಡ್ ಮುಖಾಂತರ ಕಟ್ಟಿಸಿ. ಕೃಷ್ಣರಾಜನಗರದಲ್ಲಿ 26 ಹಳ್ಳಿಗಳಿವೆ. 26 ಜನ ಉಪಾಧ್ಯಾಯರು ಇದ್ದಾರೆ. ಅಂತಹ ಕಡೆಗಳಲ್ಲಿ 26 ಜನ ಹರಿಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿ. ಅವರು ಅಲ್ಲಿಗೆ ಹೋಗಲಿಕ್ಕೆ ಕಡ್ಡಾಯ ಮಾಡಬೇಕು.

ಇನ್ನು ಅವರಿಗೆ ಪ್ರತ್ಯೇಕವಾಗಿ ಲ್ಯಾಂಡ್ಸ್ ಕೊಡುವ ಪರಿಸ್ಥಿತಿ ಹೇಗಿದೆಯೆಂದರೆ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳ ಮೂಲಕ ಹರಿಜನರಿಗೆ ಕೆಲವು ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಒಂದೊಂದು ತಾಲ್ಲೂಕಿನಲ್ಲಿಯೂ ಒಂದೆರಡು ಕಾಲೋನಿಗಳನ್ನು ಮಾಡಬೇಕು. ಇದರಿಂದ ಒಂದು ಕಡೆ ಕೋ-ಆಪರೇಟಿವ್ ಸೊಸೈಟಿಗಳ ಡೆವಲಪ್‌ಮೆಂಟ್ ಆಗುತ್ತದೆ. 50 ರಿಂದ 100 ಹರಿಜನ ಸಂಸಾರಗಳು ವ್ಯವಸ್ಥಿತವಾದ ರೀತಿಯಲ್ಲಿ ಜೀವನ ಮಾಡುತ್ತಾರೆ. ಅದರಿಂದ ಒಂದು ಮಾರ್ಗದರ್ಶನವಾಗುತ್ತದೆ. ಲ್ಯಾಂಡ್‌ಗಳನ್ನು ಅವರಿಗೆ ಕೊಡುವಾಗ ಅವನ್ನು ಇನ್‌ಸ್ಟಿಟ್ಯೂಷನ್ಸ್‌ಗೆ ಕೊಡುವುದಕ್ಕೆ ಬದಲು ಕೋ-ಆಪರೇಟಿವ್ ಸೊಸೈಟಿ ಮೂಲಕ ಕೊಡಬೇಕು.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಬರೀ ಹರಿಜನರಿಗೆ ಮಾತ್ರ ಸೊಸೈಟಿ ಮೂಲಕ ಕೊಡಿ ಎಂದು ಹೇಳುತ್ತೀರೋ ಅಥವಾ ಎಲ್ಲರಿಗೂ ಕೊಡಿ ಎಂದು ಹೇಳುತ್ತೀರಾ ?

ಶ್ರೀ ಎಂ. ಬಸವರಾಜು.—ಇವತ್ತು ಹರಿಜನರಿಗೆ ಎಲ್ಲಾ ಸೌಕರ್ಯಗಳನ್ನು ಕೊಡುತ್ತೀರಿ. ಗ್ರ್ಯಾಂಟ್ ಕೊಡುತ್ತೀರಿ. ಆದರೂ ಅವರು ಸ್ವಂತ ಕಾಲಿನಲ್ಲಿ ನಿಂತುಕೊಳ್ಳುವ ಹಾಗೆ ಇಲ್ಲ. ಅದರ ಬದಲಾಗಿ ಸೊಸೈಟಿಯ ಮೂಲಕ ಮನೆಗಳನ್ನು ಅವರಿಗೆ ಕಟ್ಟಿಕೊಡುವ ಹಾಗೆ ಮಾಡಿ,

ಹರಿಜನ-ಗಿರಿಜನರಿಗೆ ಅನುಕೂಲವಾಗುವಂತೆ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿ. ಅಲ್ಲಿ ಬರತಕ್ಕ ಲಾಭವನ್ನು ವಿದ್ಯಾಭ್ಯಾಸಕ್ಕೆ ಕೊಡಿ. ಇವತ್ತು ಒಂದು ಸೊಸೈಟಿಯಲ್ಲಿ ಒಂದು ಮುಕ್ಕಾಲು ಲಕ್ಷ ರೂಪಾಯಿಗಳಷ್ಟು ಲಾಭ ಬಂತು. ಅದರಿಂದ ಅನೇಕ ಸಾವಿರ ರೂಪಾಯಿಗಳನ್ನು ಹರಿಜನರ ವಿದ್ಯಾಭ್ಯಾಸಕ್ಕಾಗಿ ದಾನ ಮಾಡಿದ್ದಾರೆ. ಆ ಮಾದರಿಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯಾಪಾರದ ದೃಷ್ಟಿಯಿಂದ ಒಂದು ಜನತಾ ಬಜಾರ್ ಮಾಡಿದರೆ, ಅದರಿಂದ ಬಂದ ಲಾಭವನ್ನು ಇತರ ವಿದ್ಯಾಭ್ಯಾಸ ಮುಂತಾದುವುಗಳಿಗೆ ಉಪಯೋಗಿಸಿಕೊಳ್ಳಬಹುದು, ಇನ್ನೊಂದು ಕೋ-ಆಪರೇಟಿವ್ ಸೊಸೈಟಿ ಫಾರ್ ಅಗ್ರಿಕಲ್ಚರಲ್ ಲೇಬರರ್ಸ್ ಮಾಡಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಹೇಳುತ್ತಿದ್ದೇನೆ. ಇದರಿಂದ ಹರಿಜನ ಮತ್ತು ಗಿರಿಜನ ಕೆಲಸಗಾರರಿಗೆ ಅನುಕೂಲವಾದ ಹಾಗೆ ಆಗುತ್ತದೆ. ಇದನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಮಾಡುವುದಕ್ಕಾಗಲಿಲ್ಲವಾದರೆ, ಪ್ರತಿಯೊಂದು ಜಿಲ್ಲೆಯಲ್ಲಾದರೂ ಮಾಡಬೇಕು.

ಇನ್ನೊಂದು ವಿಚಾರ. ಈ ಮುಜರಾಯಿ ಇಲಾಖೆಗಳಲ್ಲಿ ಹರಿಜನ ಮತ್ತು ಗಿರಿಜನರನ್ನು ನೇಮಕ ಮಾಡಬೇಕು. ಏಕೆಂದರೆ ಅಲ್ಲಿ ಬಹಳ ರೀತಿಯಲ್ಲಿ ಈ ಜನರಿಗೆ ಪ್ರವೇಶವೇ ಇಲ್ಲ. ಇದೇ ರಾಜ್ಯದ ಮಂತ್ರಿಯವರು ಒಂದು ದೇವಸ್ಥಾನಕ್ಕೆ ಹೋದಾಗ ಅದರ ಬಾಗಿಲು ಹಾಕಿದ್ದರಂತೆ. ಆದ್ದರಿಂದ ಮುಜರಾಯಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು, ನೌಕರರನ್ನು ಎಲ್ಲಾ ಹರಿಜನರಿಂದಲೇ ನೇಮಕ ಮಾಡಬೇಕು. ಇನ್ನೊಂದು ವಿಚಾರ. ಮೊದಲು ಕೊಡಗು ಮತ್ತು ಕೊಳ್ಳೇಗಾಲ 1956 ನೇ ಇಸವಿಯಲ್ಲಿ ನಮ್ಮ ರಾಜ್ಯಕ್ಕೆ ಸೇರಿದಾಗ ಅಲ್ಲಿರತಕ್ಕ ಕುರುಬ ಜನಾಂಗದವರನ್ನು ಟ್ರೈಬ್ಸ್ ಲಿಸ್ಟಿನಲ್ಲಿ ಸೇರಿಸಿದ್ದರು. 1967 ರಲ್ಲಿ ಅದನ್ನು ತಗೆದುಬಿಟ್ಟಿದ್ದಾರೆ. 1970 ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಾಗ ಈ ಕೊಡಗಿನ ಕುರುಬ ಜನರನ್ನು ಹಾಗೂ ಕೊಳ್ಳೇಗಾಲದಲ್ಲಿದ್ದಂತಹ ಜನರನ್ನು ಟ್ರೈಬ್ಸ್ ಲಿಸ್ಟಿನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಈ ಡಿಮ್ಯಾಂಡನ್ನು ಸ್ವಾಗತಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮೂರು ಬೇಡಿಕೆಗಳನ್ನು ಒಟ್ಟಿಗೆ ಸೇರಿಸಿದ್ದಾರೆ. 7 ಕೋಟಿ 26 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ. ಅದರಲ್ಲಿ ಹರಿಜನ ಗಿರಿಜನರಿಗೆ ಮತ್ತು ಇತರ ಪರಿಶಿಷ್ಟ ಜಾತಿಯವರಿಗೆ ಒಂದು ಕೋಟಿ 79 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಹಣ ಕೊಟ್ಟು ಅವರ ಕಲ್ಯಾಣ ಸಾಧಿಸುತ್ತೇವೆನ್ನುವ ಮಾತು, ಇದು ಒಂದು ರೀತಿಯಲ್ಲಿ ವಿಪರ್ಯಾಸವಾಗಿ ನಡೆದುಕೊಂಡು ಬಂದಿದೆ. ವರ್ಗರಹಿತ ವರ್ಣರಹಿತ ಸಮಾಜವನ್ನು ಸ್ಥಾಪನೆ ಮಾಡುವ ನಮ್ಮ ಗುರಿಯಾಗಿದ್ದ ಪಕ್ಷದಲ್ಲಿ ಕೆಲವು ವಿಶೇಷ ಪ್ರಯತ್ನಗಳನ್ನು ಎಲ್ಲರೂ ಮಾಡಬೇಕಾಗುತ್ತದೆ. ರಾಜಕೀಯವಾಗಿ ನಾನು ಒಂದು ಮಾತು ಹೇಳಿದರೆ, ಮಾನ್ಯ ಆಳುವ ಪಕ್ಷದವರು ನನ್ನನ್ನು ಕ್ಷಮಿಸುತ್ತಾರೆಂದು ತಿಳಿದುಕೊಂಡಿದ್ದೇನೆ. 20 ವರ್ಷಗಳಿಂದಲೂ ಇಂಥ ಜನರನ್ನು ಹರಿಜನರನ್ನು ಗಿರಿಜನರನ್ನು, ಆದಿವಾಸಿಗಳನ್ನು ಮತ್ತು ಮುಸ್ಲಿಮ್ ಜನಾಂಗದವರ ತಲೆಯ ಮೇಲೆ, ಅವರ ಭುಜದ ಮೇಲೆ ಕಾಲಿಟ್ಟು, ಈ ಕಾಂಗ್ರೆಸ್ ಅಧಿಕಾರವನ್ನು ಉಳಿಸಿಕೊಂಡು ಬಂದಿದ್ದಾರೆ. ಗಾಂಧೀ ಶತಾಬ್ದಿಯ ವರ್ಷ ಏನೊಂದು ಇಲ್ಲಿ ಮಾನ್ಯ ಸದಸ್ಯರು ಖೋತಾ ನಿರ್ಣಯ ಕಳಿಸಿದ್ದಾರೆ, ಅದಕ್ಕೆ ನಾನು ಒಂದು ಮಾತು ಸೇರಿಸುತ್ತೇನೆ. ಇವತ್ತು ಗಾಂಧೀಜಿಯ ಶತಾಬ್ದಿ ವರ್ಷದಲ್ಲಿ ನಾವೆಲ್ಲರೂ, ಸಾಮೂಹಿಕವಾಗಿ ನಮಗೆ 20 ವರ್ಷಗಳಲ್ಲಿ ಆಗಿರತಕ್ಕಂತಹ ಅನ್ಯಾಯವನ್ನು, ಸರ್ಕಾರ ಮಾಡಿರುವ ಅನ್ಯಾಯವನ್ನು ರಾಷ್ಟ್ರ್ಯಾಂಗದತ್ತವಾಗಿರತಕ್ಕಂತಹ ಹಕ್ಕುಗಳನ್ನು ರಕ್ಷಣೆ ನೀಡದೆ ವಿಫಲವಾಗಿರತಕ್ಕದ್ದನ್ನು ನಾವು ಹೇಳಬೇಕಾಗಿದೆ. ಸರ್ಕಾರ ಮಾಡಬೇಕಾದ್ದನ್ನು ಮಾಡಿಲ್ಲ. ಯೋಜನೆಯಲ್ಲಿ ಅದಕ್ಕೆ ಕೊಡಬೇಕಾದ್ದನ್ನು ಕೊಟ್ಟಿಲ್ಲ ಮತ್ತು ಕೊಡಬೇಕಾದ ಮರ್ಯಾದೆ, ಸ್ಥಾನ ಕೊಟ್ಟಿಲ್ಲ. ಇದನ್ನು ಕಾರ್ಯಗತ ಮಾಡಲು ನೇಮಕವಾದಂತಹ ಸಂಬಂಧಪಟ್ಟ ಅಧಿಕಾರ ವರ್ಗದವರು ಮನಃಪೂರ್ವಕವಾಗಿ ಕಾರ್ಯಗತ ಮಾಡಿಲ್ಲ. ನಾನು ಕೇಂದ್ರ ಇಲಾಖೆಯವರು ಬರೆದಿರತಕ್ಕಂತಹ ವರದಿಯನ್ನು ಓದಿದ್ದೇನೆ. ಆ ವರದಿಯನ್ನೂ ಕಾರ್ಯಗತ ಮಾಡುವ ಮನಸ್ಸು ಬರಲಿಲ್ಲ. ನಾನು ಹೇಳುವುದಾದರೆ, ಗಾಂಧೀಜಿಯವರ ಶತಾಬ್ದಿ ವರ್ಷ ಕಾಂಗ್ರೆಸ್ಸಿನಲ್ಲಿರತಕ್ಕಂತಹ ಮಹಾನುಭಾವರೆಲ್ಲರೂ ಜಗಜ್ಜೀವನ್‌ರಾಮ್‌ನವರಿಂದ ಹಿಡಿದು, ರಾಚಯ್ಯನವರ ತನಕ, ಎಲ್ಲರೂ ಕಾಂಗ್ರೆಸ್ಸನ್ನು ಬಿಟ್ಟು ಬಿಟ್ಟರೆ, ರಾಜಕೀಯದಲ್ಲಿ ಒಂದು ಕ್ರಾಂತಿಯಾಗುತ್ತದೆ. ಇದನ್ನು ಅವರು ಮಾಡಿದರೆ ಒಂದು ಘನತೆ, ಗೌರವ ಕೊಟ್ಟಹಾಗೆ ಆಗುತ್ತದೆ. ಅವರು ಗಂಭೀರವಾಗಿ ಇದನ್ನು ಯೋಚನೆ ಮಾಡಬೇಕು. ಅವರಿಗೆ ಸಂಬಂಧಪಟ್ಟ ವಿಚಾರ ಅದು. ಇತ್ತೀಚೆಗೆ ಸರ್ಕಾರದವರು ರಾಷ್ಟ್ರ್ಯಾಂಗದತ್ತವಾಗಿ ಮನೆ ಕೊಡುವ ವಿಷಯದಲ್ಲಿ, ಕೆಲಸಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಕೊಡುವ ವಿಚಾರದಲ್ಲಿ ಸಾಲವನ್ನು ಕೊಡುವ ವಿಚಾರದಲ್ಲಿ, ಏನು ಕಲ್ಯಾಣ ಮಾಡಿದ್ದೇವೆಂದು ಹೇಳುತ್ತಿದ್ದಾರೆ, ಅದರ ದುರ್ವಿನಿಯೋಗ ಆಗಿದೆಯೇ ಹೊರತು ಉಪಯೋಗವಾಗಿಲ್ಲ. ಇನ್ನು ಬೇರೆ ಸಮಾಜದಲ್ಲಿರುವ ಸವರ್ಣ ಹಿಂದುಗಳು ಮತ್ತು ಇತರ ಜಾತಿಯ ಜನಗಳ ಮೇಲೆಯೂ ಜವಾಬ್ದಾರಿ ಇದೆ. ಮನು ಯಾವಾಗ ಧರ್ಮಶಾಸ್ತ್ರ ಬರೆದಿರುತ್ತಾನೆ ಎಂದು ನಮಗೆ ಗೊತ್ತಿಲ್ಲ. ಅದರಲ್ಲಿ ನಾಲ್ಕು ವರ್ಣಗಳು ಇದ್ದರೆ, ನಾಲ್ಕು ವರ್ಣಗಳಲ್ಲಿಯೂ ಈ ಜನರು ಇಲ್ಲ. ಇವರು ಪಂಚಮರು; ಅಂದರೆ ಐದನೇ ವರ್ಗದವರು. ಇವರಿಗೆ ಇಂಥಿಂಥದ್ದು ಮಾಡಬೇಕು.

ಇವೊತ್ತು ನೀವು ವರ್ಣ ವರ್ಗಗಳನ್ನು ರಚನೆ ಮಾಡಿಕೊಂಡಿದ್ದೀರಿ, ನೀವು ವರ್ಷೇ ವರ್ಷೇ ಏನು ಕೆಲಸ ಮಾಡಿದ್ದೀರಿ ಅದರ ಮೇಲೆ ವರ್ಣಗಳನ್ನು ರಚನೆ ಮಾಡಿಕೊಂಡಿದ್ದೀರಿ, ಅವರಲ್ಲಿ ಯಾವ ಲೋಪ ದೋಷಗಳೂ ಇಲ್ಲ. ಡಾ. ಲೋಹಿಯಾ ಅವರು ವರ್ಣ ಮತ್ತು ವರ್ಗ ಎನ್ನುವುದಕ್ಕೆ "Caste is an immobile class, Class is a mobile caste" ಎಂದು ಹೇಳಿದ್ದಾರೆ. ಇದನ್ನು ನೀವು ವಿಚಾರ ಮಾಡಬೇಕು. ಇವೊತ್ತು ಸಮಾಜವಾದದ ಮಾತು ಹೇಳುವುದಾದರೆ ವರ್ಗಗಳನ್ನು ಮತ್ತು ವರ್ಣಗಳನ್ನು ತೊಡೆದು ಹಾಕುವಂತಹ ದಾರಿಯಲ್ಲಿ ಹೋಗದಿದ್ದರೆ ಸಮಾಜವಾದವನ್ನು ತರುವುದು ದೂರದ ಕನಸಾಗಿಯೇ ಉಳಿಯುತ್ತದೆ. ಇತ್ತೀಚೆಗೆ ನಾನು ಒಂದು ಸಾರಿ ಯಳಂದೂರಿಗೆ ಹೋಗಿದ್ದೆ. ಅಲ್ಲಿ ಸವರ್ಣ ಹಿಂದೂಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಮತ್ತು ಅಲ್ಲಿ ಹರಿಜನರಿಗೆ ಭೂಮಿ, ಕಾಣಿ ಇದ್ದುದನ್ನು ನೋಡಿದೆ. ಅವರು ರೇಷ್ಮೆ ಗೂಡನ್ನು ತೆಗೆಯುತ್ತಾ ಇದ್ದುದನ್ನು ನಾನು ನೋಡಿದೆನು. ನಾನು ರಾಜ್ಯದಲ್ಲಿ ಅನೇಕ ಕಡೆ ನೋಡಿದ್ದೇನೆ. ಆದರೆ ಇಂಥಾ ಅಪೂರ್ವವಾದ ಸವರ್ಣ ಹಿಂದೂಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದ್ದನ್ನು ನಾನು ನೋಡಲಿಲ್ಲ. ಅಲ್ಲಿ ಅವರು ಆ ರೀತಿ ಇರುವುದನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ಹಿಂದೆ ನಮ್ಮಲ್ಲಿ ಜೀತದ ಪದ್ಧತಿ ಇತ್ತು. ಆಗ ಹರಿಜನರು ಜಮೀನ್ದಾರನ ಮನೆಯಲ್ಲಿ ಜೀತ ಮಾಡುವುದರ ಜೊತೆಗೆ ಅವರ ಮನೆಗೆ ಹರಿಜನರ ಕುಟುಂಬಗಳನ್ನು ಬಳುವಳಿಯಾಗಿ ಕಳುಹಿಸುತ್ತಿದ್ದರು ಎಂದು ಹೇಳುತ್ತಾರೆ. ಹರಿಜನರು ಜಮೀನ್ದಾರನ ಮನೆಯಲ್ಲಿ ಜೀತಕ್ಕೆ ಇದ್ದುಕೊಂಡು ಅವರಿಗೆ ಗುಲಾಮನಾಗಿ ಇರುತ್ತಿದ್ದರು. ಗುಲಾಮ ಎಂದರೆ ಯಾರಿಗೆ ಯಜಮಾನನನ್ನು ಬದಲಾಯಿಸುವ ಅಧಿಕಾರ ಇರುವುದಿಲ್ಲವೋ ಅವನನ್ನು ಗುಲಾಮ ಎಂದು ಹೇಳುತ್ತಾರೆ. ಈ ರೀತಿಯ ಜೀತದ ಪದ್ಧತಿ ನಮ್ಮ ರಾಜ್ಯದಲ್ಲಿ ಈಗಲೂ ಇದೆ. ಜೀತದ ಪದ್ಧತಿಯನ್ನು ತೆಗೆಯುವುದು, ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದು ಈ ಪ್ರಶ್ನೆ ಇನ್ನೂ ಕಾಗದದ ಮೇಲೆ ಪರಿಹಾರವಾಗುತ್ತಿದೆ. ಹಳ್ಳಿಗಳಲ್ಲಿ ಅದು ಇನ್ನೂ ಜೀವಂತವಾಗಿಯೇ ಇದೆ. ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶ ಇಲ್ಲ. ಮಹಾತ್ಮ ಗಾಂಧೀಯವರು ಮಾಡಿದಂತಹ ಚಳುವಳಿ ಮತ್ತು ಬಸವಣ್ಣನವರು ಮಾಡಿದಂತಹ ಚಳುವಳಿ ಏನಿವೆ ಅವು ಇನ್ನೂ ಹಾಗೆಯೇ ಉಳಿದಿವೆ. ಆ ಚಳುವಳಿಯ ಪರಿಣಾಮ ಏನೂ ಆಗಿಲ್ಲ. ಸವರ್ಣ ಹಿಂದೂಗಳಲ್ಲಿ ಅವರ ಮನಸ್ಸು ಮತ್ತು ಹೃದಯದಲ್ಲಿ ಯಾವುದೋ ಒಂದು ಭಾಗದಲ್ಲಿ ಅಸ್ಪೃಶ್ಯತೆ ಎನ್ನುವುದು ನಾಟಿಕೊಂಡು ಕುಳಿತುಕೊಂಡು ಬಿಟ್ಟಿದೆ. ಅದನ್ನು ತೊಡೆದು ಹಾಕುವಂತಹ ಪ್ರಯತ್ನ ಮಾಡಬೇಕು. ಆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕಾಗಿದ್ದರೆ ಅದಕ್ಕೆ ದುಡ್ಡು ಖರ್ಚು ಮಾಡಿದರೆ ಅದು ಹೋಗುವುದಿಲ್ಲ. ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ ಎನ್ನತಕ್ಕಂಥದ್ದೆಂದು ಕೆಟ್ಟ ಹುಳು ಏನಿದೆ ಅದನ್ನು ಕಿತ್ತು ಹಾಕಬೇಕು. ಆದ್ದರಿಂದ ನಾವು ವರ್ಣ ರಹಿತ ಮತ್ತು ವರ್ಗ ರಹಿತವಾದ ಸಮಾಜ ನಿರ್ಮಾಣಕ್ಕೆ ನಿರ್ದಿಷ್ಟವಾದ ಒಂದು ಹೆಜ್ಜೆಯನ್ನು ಇಡಬೇಕಾಗುತ್ತದೆ. ಇದರ ಬಗ್ಗೆ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಬೋವಿಯವರು ಒಂದು ಗಹನವಾದ ವಿಚಾರವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದರ ಬಗ್ಗೆ ನನಗೆ ಒಂದೆರಡು ಮಾತುಗಳನ್ನು ಹೇಳಬೇಕು ಎನಿಸುತ್ತದೆ. ರಾಜ್ಯಾಂಗದಲ್ಲಿ ಹೇಳಿರುವ ಹಾಗೆ ಈ ದೇಶದಲ್ಲಿ ಬಹಳ ಕೆಳಗೆ ಬಿದ್ದಿರತಕ್ಕ ಜನ ಕೆಲವರು ಇದ್ದಾರೆ. ಅವರಿಗೆ ಒಂದು ವಿಶೇಷವಾದ ಸವಲತ್ತನ್ನು ಕೊಡಬೇಕು ಎಂದು ಡಾ. ಅಂಬೇಡ್ಕರ್ ಅವರು ಬಹಳ ವಾದ ಮಾಡಿ ಹರಿಜನರಿಗೆ ವಿಶೇಷವಾದ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಡಾ. ಲೋಹಿಯಾ ಅವರು ಸಮಾನ ಅವಕಾಶಗಳನ್ನು ಕಲ್ಪಿಸಿಕೊಡದಿದ್ದರೆ, ಸಮಾಜ ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ ದೀನದಲಿತರಿಗೆ, ಕೆಳಗೆ ಬಿದ್ದಿರತಕ್ಕವರಿಗೆ ವಿಶೇಷವಾದ ಸವಲತ್ತುಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಹರಿಜನರಿಗೆ, ದೀನದಲಿತರಿಗೆ ವಿಶೇಷವಾದ ಸವಲತ್ತನ್ನು, ಸೌಲಭ್ಯವನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ನಾನು ಹೇಳುತ್ತೇನೆ. ಈ ದೇಶದಲ್ಲಿ ಬರೀ ಶ್ರೀಮಂತ ಬಡವ ಎನ್ನುವ ಭೇಧ ಭಾವ ಮಾತ್ರವಲ್ಲ, ವರ್ಣ ಭೇಧ ಜಾತಿ ಭೇಧ ಎನ್ನುವುದು ಸಾವಿರಾರು ವರ್ಷಗಳಿಂದ ಇದೆ. ಇದನ್ನು ನಿರ್ಮೂಲ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಷೆಡ್ಯೂಲ್ ಕ್ಯಾಸ್ಟ್‌ಗೆ ಸೇರಿದವರ ಪಟ್ಟಿಯನ್ನು ತಯಾರು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಂದು ಕಮೀಷನ್ ನೇಮಕ ಮಾಡಿದ್ದರು. ಆ ಕಮಿಷನ್ನಿನವರು ಎಲ್ಲಾ ಕಡೆಗೂ ಬಂದು ಹೋಗಿದ್ದಾರೆ ಎಂದು ನನಗೆ ಅನಿಸುತ್ತದೆ. ಇದರಲ್ಲಿ ಅಸ್ಪೃಶ್ಯತೆಗೆ ಒಳಗಾಗಿರತಕ್ಕವರದು ಒಂದು ಪಟ್ಟಿ ಮಾಡಿ, ಷೆಡ್ಯೂಲ್ ಟ್ರೈಬ್ಸ್ ಮತ್ತು ಕಾಡು ಕುರುಬರು ಏನಿದ್ದಾರೆಯೋ ಅವರದು ಒಂದು ಪಟ್ಟಿ ಮಾಡಿ, ಅಕ್ಷರಾಭ್ಯಾಸ ಇಲ್ಲದೆ ಇರುವವರು ಮತ್ತು ಮನೆಯೊಳಗಡೆ ಬರಬಾರದು ಎಂದು ಇರುವವರು ಯಾರು ಇದ್ದಾರೆಯೋ ಅವರದು ಹಾಗೂ ಯಾರು ಸಾಮಾಜಿಕವಾಗಿ ಯಾವುದೇ ಒಂದು ಮಟ್ಟಕ್ಕೆ ಬಂದಿಲ್ಲವೊ ಅಂಥವರದನ್ನೂ ಒಂದು ಪಟ್ಟಿ ಮಾಡುವುದಾದರೆ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗಬಹುದು ಎಂದು ನನಗೆ ಅನಿಸುತ್ತದೆ. 100 ಕ್ಕೆ 90 ಜನಗಳಿಗೆ ಅನ್ನ ಬಟ್ಟೆಗಳಿಲ್ಲದೆ ಅವರು ದರಿದ್ರಾವಸ್ಥೆಯಲ್ಲಿದ್ದರೆ ಅದು ಬಹಳ ಕಷ್ಟವಾಗುತ್ತದೆ. ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಸ್ನಾನ ಮಾಡಬೇಕು ಎನ್ನುವ ಮಟ್ಟಕ್ಕೆ ಸಮಾಜ ಹೋಗುವುದಾದರೆ ಅದನ್ನು ತೊಡೆದು ಹಾಕಬೇಕು. ಕೆಳಗೆ ಬಿದ್ದಿರತಕ್ಕವರಿಗೆ, ದೀನದಲಿತರಿಗೆ ವಿಶೇಷವಾದ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿಕೊಡಬೇಕು. ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ನಮ್ಮ ದೇಶ ಇಬ್ಭಾಗ ಆದಮೇಲೆ ನಮ್ಮ ದೇಶಕ್ಕೆ ಬೇಕಾದಷ್ಟು ಜನ ನಿರಾಶ್ರಿತರು ಬಂದರು. ಅವರ ಪುನರ್ ವ್ಯವಸ್ಥೆಗೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದರು. ಈಗ ನಮ್ಮಲ್ಲಿ ಹರಿಜನರು 18 ಪರ್ಸೆಂಟ್ ಇದ್ದಾರೆ. ಅವರ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿಗಳನ್ನು ಈ ವರ್ಷ ಒದಗಿಸಿದ್ದೀರಿ. ಇದು ಸಾಕಾಗುವುದಿಲ್ಲ. ಈ ರೀತಿ ಮಾಡುವುದಾದರೆ ಬಹುಶಃ ಇನ್ನು 5 ಸಾವಿರ ವರ್ಷಗಳಾದರೂ ಇದು ಹೋಗುವುದಿಲ್ಲ.

ಕೊನೆಯದಾಗಿ ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ನೋಡುತ್ತಿದ್ದೇನೆ. ಸಜೀವವಾಗಿ ಹರಿಜನರನ್ನು ಸುಡುವುದು, ಕೊಲ್ಲುವುದು, ಗರಗಸದಲ್ಲಿ ಕೊಯ್ಯುವುದು ಇಂಥಾದ್ದೆಲ್ಲಾ ನಡೆಯುತ್ತಿದೆ. ಇಂಥಾದ್ದೆಲ್ಲಾ ನಡೆಯಬಾರದು. ಇದಕ್ಕೆಲ್ಲಾ ಪೋಲೀಸಿನವರು ಇದ್ದಾರೆ. ಅವರು ಅದನ್ನು ನೋಡಿಕೊಳ್ಳುತ್ತಾರೆ ಎಂದು ಸರ್ಕಾರದವರು ಹೇಳಬಹುದು. ಅದು ಬೇರೆ ಮಾತು. ಆದರೆ ಇದನ್ನೆಲ್ಲಾ ತಡೆಗಟ್ಟುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ದೇಶದಲ್ಲಿ ಇದೇ ರೀತಿ ಹರಿಜನರ ಬಗ್ಗೆ ಕೃತ್ಯಗಳು ನಡೆಯುವುದಾದರೆ ಭೀಮಸೇನೆಯಂತಹ ಸೇನೆಗಳು ಹೊರಗೆ ಬಂದು ದೇಶದಲ್ಲಿ ಮಹಾ ಕ್ರಾಂತಿ, ರಕ್ತಕ್ರಾಂತಿಯಾಗುತ್ತದೆ ಎಂದು ನನಗೆ ಅನಿಸುತ್ತದೆ.

12-30 P.M.

ಹಿಂದೂ ಮುಸ್ಲಿಂ ಗಲಾಟೆಯಾದರೆ ರಕ್ತ ಹರಿಯುತ್ತದೆ, ಅದೇ ರೀತಿ ಹರಿಜನರನ್ನು ತುಳಿಯುವುದಕ್ಕೆ ಹೋದರೆ ಮತ್ತಷ್ಟು ರಕ್ತ ಹರಿಯುತ್ತದೆಂದು ಹೇಳುತ್ತೇನೆ. ಇದು ಅನಿವಾರ್ಯ ಎಂದು ಸರ್ಕಾರದ ಭಾವನೆಯಾಗಿದ್ದರೆ ಆ ಭಾವನೆ ನಿಮಗೇ ಸರಿ ಎಂದು ಕಾಣಬಹುದು. ಹೊನ್ನಾಳಿಯ ಒಬ್ಬ ಗ್ರಾಮಸೇವಕನು ತನ್ನ ಪ್ರಾಣಕ್ಕೆ ಆಪತ್ತು ಇದೆ ಎಂದು ಹೇಳಿದಮೇಲೆ ಪೋಲೀಸರು ಹೋದರು. ಆದರೂ ಆ ಗ್ರಾಮಸೇವಕನನ್ನು ಯಾರೋ ಸಾಯಿಸಿಬಿಟ್ಟರು. ಯಾರು ಯಾವಾಗ ಎಲ್ಲಿ ಯಾರನ್ನು ಕೊಲ್ಲುತ್ತಾರೆಂಬುದು ಪೋಲೀಸರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ನಾನು ಪೋಲೀಸರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಬೆಂಗಳೂರಿನ ಒಂದು ಹೋಟೆಲ್‌ನಲ್ಲಿ ಯಾರೋ ಒಬ್ಬರು ಒಬ್ಬ ಹೆಂಗಸನ್ನು ಸಾಯಿಸಿರುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಗೃಹಶಾಖೆಯ ಕಾರ್ಯದರ್ಶಿಗಳಾದ ಲಕ್ಷ್ಮಣರಾವ್ ಅವರನ್ನು ಎಲ್ಲಾ ಹೋಟೆಲ್‌ಗಳಿಗೂ ಹೋಗಿ ನೋಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ಎಲ್ಲಾ ತಪ್ಪುಗಳಿಗೂ ಪೋಲೀಸರೇ ಹೊಣೆ ಎಂದು ನಾನು ಹೇಳುವುದಿಲ್ಲ. ಈಗ ಶ್ರೀ ಗಂಗಾಭೋವಿ ಅವರು ಏನು ಒಂದು ವಾದ ಮಾಡಿದ್ದಾರೆ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಗೊತ್ತಿಲ್ಲ. ಇದೇ ವಿಚಾರದಲ್ಲಿ ಹಿಂದೆ ಮೇಲ್ಮನೆಯ ಸದಸ್ಯರಾಗಿರುವ ಶ್ರೀ ಮುನಿಚಿನ್ನಪ್ಪನವರು ಒಂದು ಅರ್ಜಿ ಬರೆದುಕೊಂಡು ಬಂದು ನನ್ನ ಸಹಿ ಹಾಕಬೇಕೆಂದು ಕೇಳಿದರು. ನಾನು ಹಾಕುವುದಿಲ್ಲವೆಂದು ಹೇಳಿದೆ. ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕು, ಹಿಂದುಳಿದ ಜನಾಂಗದವರಿಗೆ ಸಹಾಯ ಮಾಡಬೇಕು, ಬಡವರಿಗೆ ಸಹಾಯ ಮಾಡಬೇಕೆಂದು ಶ್ರೀ ಲೋಹಿಯಾ ಅವರು ಹೇಳಿರುವುದರಿಂದ ನಾನು ಸಹಿ ಹಾಕುವುದಿಲ್ಲವೆಂದು ಆಗ ಹೇಳಿದೆ. ಹರಿಜನರು, ಗಿರಿಜನರು, ಮುಸ್ಲಿಮರು, ಸ್ತ್ರೀಯರುಗಳಿಗೆ ವಿಶೇಷ ಅವಕಾಶ ಕಲ್ಪಿಸಿಕೊಡಬೇಕೆಂದು ಶ್ರೀ ಲೋಹಿಯಾ ಅವರು ಹೇಳಿದ್ದಾರೆ. ಇವತ್ತು ಅನೇಕ ಜಾತಿಗಳು ಇರಬಹುದು. ಜಾತಿಯ ಹೆಸರಿನಿಂದ ಅನೇಕ ದುರುಪಯೋಗಗಳಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಗ್ಗೆ ವಿಚಾರ ಮಾಡುವಾಗ ಅಸ್ಪೃಶ್ಯತೆಯನ್ನು ಗಮನದಲ್ಲಿಟ್ಟು

(ಶ್ರೀ ಎಸ್. ಗೋಪಾಲಗೌಡ)

ಕೊಂಡು, ಅಂತಹವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರೆ ಒಳ್ಳೆಯದು. ಇದರಲ್ಲಿ ಒಡಕು ತರುವುದು ಸರಿಯಲ್ಲ. ಬ್ರಾಹ್ಮಣರಲ್ಲಿಯೂ ಕೂಡ ಬಡವರು ಇರುತ್ತಾರೆ. ವರ್ಣದಲ್ಲಿ ಅವರು ಉತ್ತಮರಿದ್ದರೂ ಕೂಡ ನಾವು ಯಾರಿಗೆ ಕಡಿಮೆ ಎಂದು ಕೇಳುತ್ತಾರೆ. ಈ ವಿಚಾರದಲ್ಲಿ ನಾಗಣ್ಣನವರ ಕಮಿಟಿಯನ್ನು ಮಾಡಲಾಗಿತ್ತು. ಆದರೆ ಆ ಕಮಿಟಿಯಲ್ಲಿ ಯಾವ ನಿರ್ಣಯವನ್ನೂ ಕೂಡ ಮಾಡುವುದಕ್ಕಾಗಲಿಲ್ಲ. ನಾನೇ ಈ ರಾಜ್ಯದಲ್ಲಿ ಜಾತಿಗಳ ಒಂದು ಪಟ್ಟಿ ಮಾಡುವುದಾದರೆ, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಮತ್ತು ಅನುಕೂಲವಾಗಿರುವ ಕೆಲವು ಜನಾಂಗದವರನ್ನು ಒಂದು ಪಟ್ಟಿಗೆ ಸೇರಿಸುತ್ತೇನೆ. ಇವರುಗಳು ಮುಂದುವರೆದಿರುವುದರಿಂದ ಇವರಿಗೆ ಯಾವ ಒಂದು ಸೌಲಭ್ಯಗಳೂ ಸಿಗಬಾರದು. ಕೇವಲ 4 ಪರ್‌ಸೆಂಟ್‌ನಷ್ಟು ಅನುಕೂಲಗಳು ಸಿಗಬೇಕೆಂದು ಹೇಳುತ್ತೇನೆ. ಉಳಿದ 96 ಪರ್‌ಸೆಂಟ್ ನಷ್ಟು ಅನುಕೂಲಗಳು ಇನ್ನಿತರ ಹಿಂದುಳಿದ ಪಂಗಡದವರಿಗೆ ಸಿಗಬೇಕು. ವರ್ಗ ಮತ್ತು ವರ್ಣ ಇವುಗಳಲ್ಲಿ ಮುಂದುವರೆದವರು ಮತ್ತು ಹಿಂದುಳಿದವರ ಪಟ್ಟಿ ಮಾಡಿ ಹಿಂದುಳಿದವರಿಗೆ ಕೊಡ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಹಿಂದುಳಿದವರು ಶಾಲೆಗಳಲ್ಲಿ ಫೀ ಕೊಡಬೇಕಾ ಗಿಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಕೆಲವು ಶಾಲೆಗಳಲ್ಲಿ ಇಂತಹ ಹುಡುಗರಿಂದ 20—30 ರೂಪಾಯಿಗಳನ್ನು ಫೀ ಎಂದು ವಸೂಲು ಮಾಡುತ್ತಿರುವುದರಿಂದ ಕೆಲವರು ಶಾಲೆಯನ್ನೇ ಬಿಟ್ಟುಬಿಟ್ಟಿದ್ದಾರೆ. ಮತ್ತೆ ಕೆಲವು ಶಾಲೆಗಳಲ್ಲಿ ಹಿಂದುಳಿದ ಹುಡುಗರನ್ನು ಹಿಂದಿನ ಬೆಂಚ್‌ನಲ್ಲಿ ಕೂರಿಸು ತ್ತಾರೆ. ಡಾಕ್ಟರ್‌ಗಳನ್ನು ನೇಮಕ ಮಾಡುವಾಗಲೂ ಕೂಡ ಹಿಂದುಳಿದವರಿಗೆ ಸರಿಯಾದ ಪ್ರಾಶಸ್ತ್ಯ ಸಿಗುತ್ತಿಲ್ಲ. ಹಿಂದುಳಿದವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರದವರು ಸೊಸೈಟಿಗಳನ್ನು ಮಾಡಿದ್ದಾರೆ. ಈ ಸೊಸೈಟಿಗಳಿಂದ ಹಿಂದುಳಿದವರಿಗೆ ಯಾವ ಪ್ರಯೋಜನವೂ ಆಗುತ್ತಿಲ್ಲ. ಮೊದಲು ಹಿಂದುಳಿದವರಿಗೆ ಅಕ್ಷರವನ್ನು ಹೇಳಿಕೊಡಬೇಕು. ಆದಕಾರಣ ಒಂದು ಅಕ್ಷರಸೇನೆ ಮತ್ತು ರಚನಾ ಸೇನೆಯನ್ನು ಏರ್ಪಾಡು ಮಾಡಬೇಕೆಂದು ಈಗಾಗಲೇ ಮುಖ್ಯ ಮಂತ್ರಿಗಳಿಗೆ ಒಂದು ಕಾಗದವನ್ನು ಸಹ ಬರೆದಿದ್ದೇನೆ. ಇವತ್ತು ನಮ್ಮ ದೇಶದಲ್ಲಿ 14 ಆಣೆ ಕೂಲಿ ತೆಗೆದುಕೊಂಡು 14 ಗಂಟೆ ಕೆಲಸ ಮಾಡುವ ಜನರು ಇದ್ದಾರೆ. ಪಬ್ಲಿಕ್ ಸರ್ವಿಸ್ ಕಮೀಷನ್ ಅವರು ಅಪಾಯಿಂಟ್ ಮಾಡಿಕೊಳ್ಳು ವಾಗ ಹಿಂದುಳಿದವರಿಗೆ ಪ್ರಾಶಸ್ತ್ಯ ಕೊಡದೆ ಇಷ್ಟು ಉದ್ದ ಇರಬೇಕು, ಇಷ್ಟು ತೂಕ ಇರಬೇಕು, ಎದೆ ಇಷ್ಟು ಅಗಲ ಇರಬೇಕು ಎಂದು ದನ್ನೆಲ್ಲಾ ಪರೀಕ್ಷೆ ಮಾಡುತ್ತಾರೆ. ಇದೇ ಪದ್ಧತಿಯನ್ನು ಇನ್ನು ಮುಂದೆಯೂ ಕೂಡ ಅನುಸರಿಸುವುದಾದರೆ ನಾವು ರಾಷ್ಟ್ರವನ್ನು ಕಟ್ಟುವುದಕಾಗುವುದಿಲ್ಲ. ಅಸ್ಪೃಶ್ಯತೆಯನ್ನು ತೊಡೆದುಹಾಕುವುದಕ್ಕಾಗುದಿಲ್ಲ. ಇದೇ ಪದ್ಧತಿ ಮುಂದುವರೆದರೆ ಕ್ರಾಂತಿ ಆದೀತು, ಮಹಾಕ್ರಾಂತಿ ಆದೀತು, ರಕ್ತಕ್ರಾಂತಿ ಆದೀತು ಎಂದು ಎಚ್ಚರಿಕೆ ಕೊಟ್ಟು ಆ ರೀತಿ ಆಗು ವುದಕ್ಕೆ ಅವಕಾಶ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಬಸವರಾಜೇಶ್ವರಿ.—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರುಗಳು ಈ ಡಿಮ್ಯಾಂಡ್ ಬಗ್ಗೆ ಮಾತನಾಡಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ರಚನಾತ್ಮಕವಾದ ಟೀಕೆಗಳನ್ನು ಸಹ ಮಾಡಿದ್ದಾರೆ. ಅವರೆಲ್ಲರಿಗೂ ಕೂಡ ತಮ್ಮ ಮೂಲಕ ಅಭಿನಂದನೆಗಳನ್ನು ಸಲ್ಲಿ ಸುತ್ತಿದ್ದೇನೆ. ನಾವು ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭ ಮಾಡ ತಕ್ಕಂಥ ಸಂದರ್ಭದಲ್ಲಿ ಇದ್ದೇವೆ. ಈ ಯೋಜನೆಯಲ್ಲಿ ಸುಮಾರು 600 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಒಂದು ಯೋಜನೆಯನ್ನು ಇಟ್ಟುಕೊಂಡಿರುವುದು ಮಾನ್ಯ ಸದಸ್ಯರಿಗೆ ತಿಳಿದಂಥ ವಿಷಯವಾಗಿದೆ. ಮಾನ್ಯ ಸದಸ್ಯರನೇಕರು ಅಭಿಪ್ರಾಯಪಟ್ಟಂತೆ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಆಸಕ್ತಿಯನ್ನು ಈ ಯೋಜನೆಯಲ್ಲಿ ಕೊಡಲಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಡ್ವೈಸರಿ ಕಮಿಟಿಯವರು ಕೊಟ್ಟಿರುವ ಸಲಹೆಗಳನ್ನು ಮತ್ತು ಈ ಮನೆಯ ಮಾನ್ಯ ಸದಸ್ಯರು ಗಳು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಪಂಚವಾರ್ಷಿಕ ಯೋಜನೆ ಯನ್ನು ಕಾರ್ಯಗತ ಮಾಡುವ ಸಮಯದಲ್ಲಿ ಅನುಷ್ಠಾನಕ್ಕೆ ತರಲು ಆ ಬಗ್ಗೆ ಅನೇಕ ಸ್ಕೀಮ್ ಗಳನ್ನು ಹಾಕಿಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. 1969-70 ನೇ ಸಾಲಿಗೆ ಇಟ್ಟಿರುವ ಹಣ ಬಹಳ ಕಡಿಮೆ ಇದೆ ಎಂದು ಅನೇಕ ಮಾನ್ಯ ಸದಸ್ಯರುಗಳು ಹೇಳಿದರು ಈ ಇಲಾಖೆಯಿಂದ ಏನೂ ಕೆಲಸವಾಗಿಲ್ಲ, ಪ್ರಗತಿಯಲ್ಲಿ ಒಂದು ಇಂಚ್ ಕೂಡ ಮುಂದಕ್ಕೆ ಹೋಗಿಲ್ಲ ಅನ್ನುವ ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದರು. ಮತ್ತು ಹಿಂದಿನ ವರ್ಷ ಮಾನ್ಯ ಸದಸ್ಯರು ಗಳು ಮಾಡಿದ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅದರಂತೆ ಅನುಷ್ಠಾನಕ್ಕೆ ತಂದಿಲ್ಲವೆಂಬ ಅಪಾದನೆಯನ್ನೂ ಕೂಡ ಮಾಡಿದ್ದಾರೆ. ಈ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ, 1969ನೇ ಸಾಲಿನಲ್ಲಿ ಅನೇಕ ಯೋಜನೆ

ಗಳನ್ನು ಹಾಕಿಕೊಂಡಿದ್ದೇವೆ. ಇವತ್ತಿನ ದಿವಸ ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ವಿದ್ಯಾಮಟ್ಟ ಕಡಿಮೆಯಾಗುತ್ತಿದೆ. ಮತ್ತು ಪರ್‌ಸೆಂಟೇಜ್ ಆಫ್ ರಿಜಲ್ಟ್ಸ್ ಕಡಿಮೆ ಯಾಗುತ್ತಿದೆ. ಇವರ ವಿದ್ಯಾ ಮಟ್ಟ ಜಾಸ್ತಿಯಾಗಬೇಕು ಮತ್ತು ರಿಜಲ್ಟ್ಸ್ ಜಾಸ್ತಿಯಾಗ ಬೇಕೆನ್ನುವ ಕಾರಣದಿಂದ ಈಗ 8 ಹಾಸ್ಟೆಲ್‌ಗಳಲ್ಲಿ ಪಾರ್ಟ್ ಟೈಮ್ ಟೀಚರ್‌ಗಳನ್ನು ಅಪಾಯಿಂಟ್ ಮಾಡಿ ಯಾವ ವಿಷಯಗಳಲ್ಲಿ ವಿದ್ಯಾರ್ಥಿಗಳು ವೀಕ್ ಇರುತ್ತಾರೋ ಆ ವಿಷಯದಲ್ಲಿ ಪಾಠ ಹೇಳಿ ಕೊಡುವ ಏರ್ಪಾಡನ್ನು ಮಾಡಲಾಗಿದೆ. ಈಗ ಹಾಸ್ಟೆಲ್‌ಗಳಲ್ಲಿ ಮೆಟ್ರಿಕ್ಯುಲೇಷನ್ ಆದವರು ಸೂಪರಿಂಟೆಂಡೆಂಟ್ ಆಗಿದ್ದಾರೆ. ಇನ್ನು ಮುಂದೆ ಗ್ರಾಜುಯೆಟ್‌ಗಳನ್ನು ಅಂದರೆ ಬಿ. ಎ., ಬಿ. ಈಡಿ. ಟ್ರೈನಿಂಗ್ ಆದವರನ್ನು ನೇಮಕ ಮಾಡಬೇಕೆಂದು ಇದ್ದೇವೆ. ಇಂತಹವರನ್ನು ನೇಮಕ ಮಾಡಿದರೆ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗುವುದಕ್ಕೆ ಅವಕಾಶವಾಗುತ್ತದೆಂದು ತಿಳಿದು ಈ ಯೋಜನೆ ಯನ್ನು 1969ನೇ ಸಾಲಿನಿಂದ ತರಲಾಗುತ್ತದೆಂದು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡು ತ್ತೇನೆ. ಡಾಕ್ಟರ್‌ಗಳಿಗೆ ಮತ್ತು ಇಂಜನಿಯರ್‌ಗಳಿಗೆ ಸಿಗುತ್ತಿರುವ ಸವಲತ್ತುಗಳನ್ನು ಲಾ-ಗ್ರಾಜುಯೇಟ್ಸ್‌ಗೂ ಕೊಡಬೇಕೆಂದು ಅನೇಕ ಮಾನ್ಯ ಸದಸ್ಯರುಗಳ ಅಭಿಪ್ರಾಯವಾಗಿತ್ತು. ಅದರ ಪ್ರಕಾರ ಮುಂದಿನ ವರ್ಷದಿಂದ ಲಾ-ಗ್ರಾಜುಯೇಟ್ಸ್‌ಗಳಿಗೆ ರಿಜಿಸ್ಟ್ರೇಷನ್ ಫೀಯನ್ನು ಪುಸ್ತಕ ಗಳಿಗೆ ಬೇಕಾಗುವ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ.

New schemes included in the IV Five-Year Plan are :—

1. Sanction of Pocket Money to Scheduled Caste students admitted in General Hostels.
2. Coaching Scheduled Castes and Schedule Tribes students to enable them to compete in competitive examinations held by the Mysore Public Service Commission.
3. Training Scheduled Caste Graduates in Stenography with a stipend at Rs. 100 P.M.
4. Assistance to Scheduled Caste Law Graduates to enroll themselves and practise as Advocates.

This scheme is taken up for implementation during the current year itself.

5. Acquisition of sites in the mixed colonies to enable them to construct and live in houses along with others.
6. Assistance towards share capital to Scheduled Castes for formation of Agriculture, Industrial and Craft Co-operatives to increase the creditworthiness of the Societies.

ಈ ತರಹ ಅನೇಕ ಯೋಜನೆಗಳನ್ನು ಮಾಡಬೇಕು ಎಂದು 1969-70ನೇ ಸಾಲಿನಲ್ಲಿ ಒಂದು ಪ್ರೋಗ್ರಾಮ್ ಮಾಡಿಕೊಂಡಿದ್ದೇವೆ. ಇದನ್ನು ಮುಂದಿನ ವರ್ಷದಿಂದ ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ ಎನ್ನುವ ವಿಷಯವನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಅನೇಕ ಮಾನ್ಯ ಸದಸ್ಯರುಗಳು ನಮ್ಮ ಇಲಾಖೆ ಬಗ್ಗೆ ಕಟ್ ಮೋಷನ್ಸ್‌ಗಳನ್ನು ಇಲ್ಲಿ ಕೊಟ್ಟಿ ದ್ದಾರೆ. ಇದನ್ನು ಸ್ಥೂಲವಾಗಿ ನೋಡಿದರೆ ಇದರಲ್ಲಿ ಎರಡು ಮೂರು ಅಂಶಗಳು ಗೊತ್ತಾಗುತ್ತವೆ. ಅವರು ಹೇಳಿರತಕ್ಕ ವಿಷಯಗಳು ಎಂದರೆ ಕುಡಿಯುವ ನೀರಿನ ಬಾವಿಗಳನ್ನು ಪೂರೈಕೆ ಮಾಡುವುದು, ಮನೆಗಳನ್ನು ಕಟ್ಟಲಿಕ್ಕೆ ಸೈಟುಗಳನ್ನು ಒದಗಿಸಿ ಕೊಡುವುದು ಇತ್ಯಾದಿ ಇನ್ನೂ ಕೆಲವು ವಿಚಾರ ಗಳನ್ನು ಹೇಳಿದ್ದಾರೆ. ಎಲ್. ಡಿ. ವರ್ಕ್ಸ್ ಮೂಲಕ ಈಗ ಕುಡಿಯುವ ನೀರಿನ ಪೂರೈಕೆ ಮಾಡುತ್ತಿದ್ದಾರೆ. ಒಂದು ವೇಳೆ ಇದು ಸಾಲದೆ ಇದ್ದರೆ ನಮ್ಮ ಇಲಾಖೆ ಮೂಲಕ ಇಂತಹ ಪ್ರಸಂಗಗಳು ಬಂದಾಗ ಬಾವಿಗಳನ್ನು ಪೂರೈಕೆ ಮಾಡಿಕೊಳ್ಳಬಹುದು. ಇಂತಹ ಪ್ರಪೋಸಲ್‌ಗಳು ಕೆಲವು ಕಡೆ ಬಂದಿವೆ. ಅವನ್ನು ಸರಕಾರ ಪರಿಶೀಲನೆ ಮಾಡಿ ಅಂತಹ ಕಡೆಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಹರಿಜನರ ಬಗ್ಗೆ ಕುಡಿಯುವ ನೀರಿನ ಬಾವಿಗಳನ್ನು ಮಾಡಿಸಿಕೊಡುತ್ತೇವೆಂದು ಮಂತ್ರಿಗಳು ಅಪ್ಪಣೆ ಕೊಡಿಸಿದರು. ಒಂದೊಂದು ಊರಿನಲ್ಲಿ ಹರಿಜನರು ಎರಡು ಬಗೆಯವರು ಇರುತ್ತಾರೆ. ಇಂತಹ ಕಡೆಗಳಲ್ಲಿ ಒಂದೇ ಬಾವಿ ಮಾಡಿಸಿ ಕೊಡುತ್ತೀರೋ ಇಲ್ಲವೇ ಎರಡು ವರ್ಗಗಳವರಿಗೂ ಬೇರೆ ಬೇರೆಯಾಗಿ ಬಾವಿಗಳನ್ನು ಮಾಡಿಸಿ ಕೊಡುತ್ತೀರೋ ?

ಶ್ರೀಮತಿ ಬಸವರಾಜೇಶ್ವರಿ.—ತಮಗೆ ಇದರ ಬಗ್ಗೆ ಉತ್ತರನ್ನು ಕೊನೆಯಲ್ಲಿ ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ಹರಿಜನರ ಅಭಿವೃದ್ಧಿಗಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟು ಎಂದು ಪ್ರತ್ಯೇಕವಾದ ಇಲಾಖೆಯನ್ನು ಏಕೆ ಇಟ್ಟುಕೊಂಡಿದ್ದಾರೆ ಎಂದರೆ ಇದರಲ್ಲಿ ಕಾನ್‌ಸ್ಟಿಟ್ಯೂಷನಲ್ ಸೇಫ್‌ಗಾರ್ಡ್ಸ್ ಏನಿವೆಯೋ ಅದರ ಸವಲತ್ತುಗಳು ಸಿಗುವುದಕ್ಕೋಸ್ಕರ ಕೆಲಸ ಮಾಡಿಕೊಂಡು ಇಲ್ಲಿಯವರೆಗೂ ಈ ಇಲಾಖೆಯನ್ನು ಉಳಿಸಿಕೊಂಡು ಬರುತ್ತಿದೆ. ಎಜುಕೇಷನ್ನಿನಲ್ಲಿ ಬ್ಯಾಕ್‌ವರ್ಡ್ ಆಗಿರುವ ಇಂತಹ ಜನಕ್ಕೆ ಅನುಕೂಲವಾಗುವ ಎಜುಕೇಷನಲ್ ಸ್ಕೀಂಗಳನ್ನು ಹಾಗೂ ಎಜುಕೇಷನಲಿ ಬ್ಯಾಕ್‌ವರ್ಡ್ ಆಗಿರುವವರಿಗೆ ಸಹಾಯ ಮಾಡಲು ಮತ್ತು ಇವರ ಹೌಸಿಂಗು ಪ್ರಾಬ್ಲಂ ಬಗ್ಗೆ ಅನೇಕ ವಿಧವಾದ ಸ್ಕೀಂಗಳನ್ನು ಹಾಕಿಕೊಂಡು ಇವರನ್ನು ಸುಧಾರಿಸಬೇಕು ಎನ್ನುವ ದೃಷ್ಟಿಯಿಂದ ಇದನ್ನೂ ಮಾಡಲಾಗಿದೆ. ಇದರ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಬೇಕು ಮತ್ತು ಈ ಕಮಿಟಿಯವರು ಇವೊತ್ತು ಈ ಜನಾಂಗದ ಅಭಿವೃದ್ಧಿ ಯಾವ ರೀತಿಯಾಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ಕೆಲವು ಅಂಕೆ ಅಂಶಗಳನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ಇಂತಯ ಕಮಿಟಿಯೇ ಬೇಕಾಗಿಲ್ಲ ಎಂದು ಅವರೇ ಹೇಳಬಹುದು. ಇದರ ವಿವರಗಳು ಹೀಗಿವೆ.

Recognising the need to improve the Socio-economic, educational and living conditions of Scheduled Castes and the Depressed Classes in the State, schemes were taken up for the welfare of the Communities in 1940-41 itself. By the end of 1967-68, over Rs. 10 crores have been spent for the welfare of these Backward Classes, including Scheduled Castes, Scheduled Tribes, Denotified Tribes, Nomadic and semi-Nomadic tribes and other Backward Classes.

As a result of implementation of all these programmes, we have over 400 Hostels, at present catering to the needs of over 16,000 students belong to these Classes, over 350 Nursery *cum*-Women Welfare Centres for the benefit of children between the age-group of 3 and 5 years.

115 Ashram-*cum*-Residential schools for the benefit of over 3,000 children of the age-group of 5 to 11 years.

Scholarships are being awarded annually to 10,000 students.

Post-Matric scholarships are awarded to over ten thousand students annually.

Women are being trained in various Training Centres like Tailoring, Lacquer ware, Coir, etc., and nearly 60 Institutions of this nature are functioning at present.

Over 100 Agricultural Colonies were established by the end of the II Five-Year Plan and 12 Multi-Purpose Co-operative Rehabilitation Projects have been started in 1966-67.

Economic assistance for the development of agriculture and crafts were given to over 10,000 families by the end of the III Five-Year Plan.

Over 500 Community Centre buildings have been constructed and over 10,000 drinking water wells were sunk.

In the matter of securing reserved percentage of vacancies in all the Government Services and in the services of Local Bodies for the Scheduled Castes, an Employment Cell has been set up in the Directorate of Social Welfare and it has been making efforts to secure the deficit in the reservation made for the Scheduled Castes and Scheduled Tribes in as short a period as possible:

ಇದಕ್ಕಾಗಿ ಇಲ್ಲಿಯವರೆಗೂ ಈ ತರಹಾ ಅನೇಕ ಯೋಜನೆಗಳನ್ನು ನಾವು ಮಾಡುತ್ತಾ ಬಂದಿದ್ದೇವೆ. ಹಿಂದೆ ಇದೇ ಸದನದಲ್ಲಿ ಮಾನ್ಯ ಸದಸ್ಯರು ಒಂದು ಷಾರ್ಟ್ ನೋಟೀಸು ಪ್ರಶ್ನೆ ಕೇಳಿದ್ದರು ಮತ್ತು ಇದರ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಯನ್ನು ಇಲ್ಲಿ ಮಾಡಿದರು, ಆಗ ಮೂರನೇ ಯೋಜನೆಯಲ್ಲಿ ಎಷ್ಟು ದುಡ್ಡನ್ನು ಲ್ಯಾಪ್ಸ್ ಮಾಡಿದ್ದಾರೆ ಎನ್ನುವುದನ್ನು ಸರಕಾರದ ಗಮನಕ್ಕೆ ತಂದಾಗ ಇದರ ಬಗ್ಗೆ ವಿವರಗಳನ್ನೆಲ್ಲಾ ಕೊಟ್ಟಿದ್ದೇನೆ. ಮತ್ತೆ ಇದೇ ವಿಚಾರಗಳನ್ನು ಪುನಃ ಇಲ್ಲಿ ಹೇಳಲು ಇಷ್ಟಪಡುವುದಿಲ್ಲ. ಬಡ್ಜೆಟ್ಟಿನಲ್ಲಿ 1967-68 ನೇ ಸಾಲಿನಲ್ಲಿ ಒದಗಿಸಿರುವ ಹಣವೇ ಕಡಿಮೆ. ಉಳಿದುದೆಲ್ಲವನ್ನೂ ಪೂರ್ತಿಯಾಗಿ ಖರ್ಚು ಮಾಡಿದ್ದೇವೆ. ಸುಮಾರು ಮೂರು ಲಕ್ಷ ಉಳಿದಿದೆ ಎಂದು ಸರಕಾರದ ಗಮನಕ್ಕೆ ಬಂದಾಗ ಅನೇಕ ಸ್ಕೀಂಗಳನ್ನು ಮಾಡಿ ಅವನ್ನು ತೆಗೆದುಕೊಳ್ಳಬೇಕೆಂದು ಆ ವರ್ಷದ ಕೊನೆಯಲ್ಲೇ ಕೆಲಸ ಮಾಡಿ ಒಂದು ನಯಾಪೈಸೆ ಕೂಡ ಉಳಿಯದಂತೆ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಏನು ಭರವಸೆ ಕೊಟ್ಟಿದ್ದರೋ ಆ ಪ್ರಕಾರ ನಡೆದುಕೊಂಡಿದ್ದಾರೆ. ಆದರಂತೆ ಕೆಲಸವಾಗ ಬೇಕಾದರೆ ಅಧಿಕಾರಿಗಳೂ ಕೂಡ ಬಹಳ ಸಹಾನುಭೂತಿಯಿಂದ ಮತ್ತು ಯಶಸ್ವಿಯಾಗಿ ನೋಡಿ ಕೊಂಡು ಯಾವ ದುಡ್ಡೂ ಲ್ಯಾಪ್ಸ್ ಆಗದ ರೀತಿಯಲ್ಲಿ ಖರ್ಚು ಮಾಡಿದ್ದಾರೆ.

ಶ್ರೀಮಾನ್ ಮುನಿಯಪ್ಪನವರು ಹಿಂದೆ ಇಲ್ಲಿದ್ದ ಡೈರೆಕ್ಟರವರು ಬಹಳ ಚೆನ್ನಾಗಿ ಕೆಲ ಮಾಡುತ್ತಿದ್ದರು, ಆದರೆ ಈಗ ಇರುವ ಡೈರೆಕ್ಟರು ಒಂದು ರೀತಿಯ ಉದಾಸೀನದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಇದು ಸರಿಯಲ್ಲ. ಇದಕ್ಕೆ ಬೇಕಾದರೆ ತಮಗೆ ಅಂಕೆ ಸಂಖ್ಯೆಗಳನ್ನು ಕೊಡಬಹುದು. ಆದರೆ ಈಗ ವೇಳೆ ಬಹು ಕಡಿಮೆ ಇರುವುದರಿಂದ ಇದನ್ನು ಕೊಡುವ ಗೋಜಿಗೆ ಹೋಗುವುದಿಲ್ಲ. ನಮ್ಮ ಇಲಾಖೆಯಲ್ಲಿ ಬಹಳ ಒಳ್ಳೆಯ ರೀತಿಯಿಂದ ಕೊಟ್ಟಿರುವ ದುಡ್ಡನ್ನು ಪೂರ್ತಿಯಾಗಿ ಖರ್ಚುಮಾಡಿದ್ದಾರೆ ಎಂದು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಇನ್ನು ಮಾನ್ಯ ಸದಸ್ಯರು ಅನೇಕರು ಇಲ್ಲಿರುವ ಡಿಪಾರ್ಟುಮೆಂಟಿನಲ್ಲಿ ಇದುವರೆಗೆ ಏನೂ ಕೆಲಸ ಮಾಡಿಲ್ಲ ಮತ್ತು ಏನೇನು ಅಚೀವ್ ಮಾಡಿದ್ದೀರಿ ಇದರ ಅಂಕೆ ಸಂಖ್ಯೆಗಳೇ ಇಲ್ಲ ಮತ್ತು ಎಷ್ಟು ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ, ಎಷ್ಟು ಕುಡಿಯುವ ನೀರಿನ ಬಾವಿಗಳನ್ನು ಮಾಡಲು ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಎಷ್ಟು ಹಾಸ್ಟೆಲ್‌ಗಳನ್ನು ಓಪನ್ ಮಾಡಿದ್ದೀರಿ ಎನ್ನುವ ಕೆಲವು ಅಪಾದನೆಗಳನ್ನು ಮಾಡಿದ್ದಾರೆ. ನಾನಾದರೂ ಇದರ ಬಗ್ಗೆ ಕೆಲವು ಅಂಕೆ ಸಂಖ್ಯೆಗಳನ್ನು ಕೊಟ್ಟರೆ ಇವರಿಗೆಲ್ಲಾ ಸಮಾಧಾನವಾಗುತ್ತದೆ. ಯಾವ ಯಾವ ಕೆಲಸಗಳಿಗಾಗಿ ಎಷ್ಟು ಖರ್ಚು ಮಾಡಿದ್ದೇವೆ ಎನ್ನುವ ವಿವರಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಎರಡನೇ ಪ್ಲಾನಿನಲ್ಲಿ	...	12 ಲಕ್ಷ ಖರ್ಚಾಗಿದೆ,
ಮೂರನೇ ಪ್ಲಾನಿನಲ್ಲಿ	...	1,60,30,528.39
1966–67	...	1,11,983.08
1967–68 ರಲ್ಲಿ	...	4,53,889
1968–69 ರಲ್ಲಿ	...	ಇಲ್ಲಿಯವರೆಗೆ 2,79,482

ಪ್ರೈವೇಟು ಹಾಸ್ಟರ್‌ಗಳು :	...	ಗ್ರ್ಯಾಂಟ್ ಇನ್‌ಏಡ್ ಹಾಸ್ಟಲ್‌ಗಳಿಗೆ
ಎರಡನೇ ಪ್ಲಾನ್ ಪೀರಿಯಡ್‌ನಲ್ಲಿ		ಸುಮಾರು 5 ಲಕ್ಷ ರೂಪಾಯಿಗಳು
ಮೂರನೇ ಪ್ಲಾನಿನಲ್ಲಿ	...	37,50,000 ರೂಪಾಯಿಗಳು
1966–67 ರಲ್ಲಿ	...	1030,000 ರೂಪಾಯಿಗಳು
1967–68 ರಲ್ಲಿ	...	12,66,500 ರೂಪಾಯಿಗಳು
1968–69 ರಲ್ಲಿ	...	13,45,000 ರೂಪಾಯಿಗಳು

(ಶ್ರೀಮತಿ ಬಸವರಾಜೇಶ್ವರಿ)

ಪ್ರೀ ಮೆಟ್ರಿಕ್ ಸ್ಕಾಲರುಷಿಪ್‌ಗಳು :

ಮೂರನೇ ಪ್ಲಾನಿನಲ್ಲಿ	...	4,572 ವಿದ್ಯಾರ್ಥಿಗಳಿಗೆ
1966–67 ರಲ್ಲಿ	...	7,102 ವಿದ್ಯಾರ್ಥಿಗಳಿಗೆ
1967–68 ರಲ್ಲಿ	...	10,251 ವಿದ್ಯಾರ್ಥಿಗಳಿಗೆ

ಹಣ ಕೊಟ್ಟಿರುವುದು :

ಮೂರನೇ ಪ್ಲಾನಿನಲ್ಲಿ	...	3,42,128
1966–67	...	2,68,767
1967–68 ರಲ್ಲಿ	...	3,68,908
1968–69 ರಲ್ಲಿ	...	4,30, 000

ಕೇಂದ್ರ ಸರಕಾರದವರು ಪೋಸ್ಟ್ ಮೆಟ್ರಿಕ್ ಸ್ಕಾಲರುಷಿಪ್‌ಗಳನ್ನು–ರ– ಜನಾಂಗಗಳಿಗೆ ಕೊಡುತ್ತಾ ಇದ್ದಾರೆ. ಇದನ್ನು ರಾಜ್ಯ ಸರಕಾರದವರು ಹಂಚಿಕೆ ಮಾಡುತ್ತಿದ್ದೇವೆ.
ಅವುಗಳ ವಿವರ ಹೀಗಿದೆ :

		No. of Students :	*Amount spent :*
			Rs.
Second Plan :	...	3,653	17,17,159
Third Plan :	...	1,5099	76,26,434
1966–67	...	4,016	21,76,168
1967–68	...	4,808	27,39,169

1968-69ನೇ ಸಾಲಿಗೆ ಈಗಾಗಲೇ 6,500 ಮಕ್ಕಳಿಗೆ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್‌ಗಳಿಗಾಗಿ 33, 94, 151 ರೂಪಾಯಿಗಳನ್ನು ವಿತರಣೆ ಮಾಡಿದ್ದಾಗಿದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಇದನ್ನೆಲ್ಲಾ ಏತಕ್ಕೆ ಹೇಳುತ್ತೇನೆ ಎಂದರೆ ಮಾನ್ಯ ಸದಸ್ಯರುಗಳು ಕೆಲವರು ಏನೂ ಮಾಡಿಲ್ಲ ಎಂದು ಹೇಳಿದ್ದರಿಂದ ಇದನ್ನು ಹೇಳಬೇಕಾಯಿತು.

ಇದೇ ರೀತಿ No. of Govermment Hostels for boys and Girls opened under Social Welfare Department ಎನ್ನುವ ಬಗ್ಗೆ ವಿವರಗಳನ್ನು ಕೊಡುತ್ತೇನೆ :

		Hostels for :	
		Boys :	*Girls :*
Second Plan	...	95	37
Third Plan	...	98	46
1966–67	...	6	18
1967–68	...	24	18
1968–69	...	10	5

		Economic upliftment :
Second Plan	...	24,54,516
Third Plan	...	47,39,000
1966–67	...	3,98,300
1967–68	...	3,21,200
1968–69		about 4 lakhs.

ಈ ರೀತಿ ಖರ್ಚು ಮಾಡಲಾಗಿದೆ. ಈ ಅಂಕಿಅಂಶಗಳ ಪ್ರಕಾರ ಮಾನ್ಯ ಸದಸ್ಯರುಗಳು ಏನೂ ಕೆಲಸವಾಗಿಲ್ಲ ಎಂದು ಹೇಳಿರುವುದು ಸರಿಯಲ್ಲ ಎಂದುದು ಗೊತ್ತಾಗುತ್ತದೆ. ಇವರ ಏಳಿಗೆಗಾಗಿ

ಪ್ರತಿವರ್ಷ ಯಾವ ರೀತಿ ಹಣವನ್ನು ಖರ್ಚ ಮಾಡಲಾಗುತ್ತಿದೆ ಎಂಬ ಬಗ್ಗೆ ಈ ಅಂಕಿ ಅಂಶಗಳನ್ನು ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಇದೇ ರೀತಿ ಇನ್ನೊಂದು ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ ಡಬ್ಲ್ಯು. ಎಚ್. ಓ. ಸಂಸ್ಥೆಯವರು ನಮ್ಮ ರಾಜ್ಯಕ್ಕೆ ಬಂದಿದ್ದಾಗ ನಮ್ಮ ಅಧಿಕಾರಿಗಳು ಅವರ ಜೊತೆಯಲ್ಲಿ ಸೇರಿಕೊಂಡು ಸಮಾಲೋಚನೆ ನಡೆಸಿದರು. ನಾವು ಇವತ್ತಿನದಿವಸ ಗ್ರಾಂಟ್-ಇನ್-ಯೇಡ್ ಹಾಸ್ಟಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಕೊಡುತ್ತಿರುವ 25 ರೂಪಾಯಿಗಳಿಗೆ ಒಳ್ಳೆಯ ಊಟ ಸಿಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಮೇಲಿಂದ ಮೇಲೆ ನಮ್ಮ ರಾಜ್ಯ ಅಭಾವಕ್ಕೆ ತುತ್ತಾಗುತ್ತಿರುವುದರಿಂದ, ಡಬ್ಲ್ಯು. ಎಚ್. ಓ. ಅವರ ನೆರವು ಪಡೆಯಬೇಕೆಂದು ಅಭಿಪ್ರಾಯ ಪಟ್ಟಿದ್ದೇವೆ. ಅದಕ್ಕಾಗಿ ಒಂದು ಸ್ಕೀಮನ್ನು ತಯಾರು ಮಾಡಿ ನಮ್ಮ ಮಂತ್ರಿಗಳು ಕೇಂದ್ರಸರ್ಕಾರಕ್ಕೆ ಕಳಿಸಿದ್ದಾರೆ. ಅದರ ಜೊತೆಗೆ ವಿದ್ಯಾಸಂಸ್ಥೆಗಳಲ್ಲಿ ಫೀಡಿಂಗ್ ಪ್ರೋಗ್ರಾಮ್‌ನ್ನು ಜಾರಿಗೆ ತರುವ ವಿಚಾರದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿ ನಮ್ಮ ಮಂತ್ರಿಗಳು ಕೇಂದ್ರಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಇದು ಒಂದು ಸಂತೋಷದ ಸಂಗತಿಯಾಗಿದೆ ಎಂಬುದನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರುಗಳಲ್ಲಿ ಕೆಲವರು ಟೀಕೆ ಮಾಡಿದ್ದಾರೆ, ಮತ್ತೆ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರತಿಯೊಂದಕ್ಕೂ ಈಗ ಉತ್ತರ ಕೊಡುವುದು ಅವಶ್ಯಕವೆಂದು ಕಾಣುವುದಿಲ್ಲ. ಆದರೂ ಕೂಡ ಸ್ಥೂಲವಾಗಿ ಹೇಳುವುದಾದರೆ, ಮಾನ್ಯ ಸದಸ್ಯರಾದಂಥ ಶ್ರೀ ಜಯಪ್ರಕಾಶ್‌ನಾರಾಯಣ್ ಅವರು ಯೂನಿಫಾರಮ್ ಗ್ರಾಂಟ್-ಇನ್-ಯೇಡ್ ಆಗ ಬೇಕೆಂದು ಹೇಳಿದರು. ಈಗ ಕರ್ನಾಟಕದ ಮಕ್ಕಳಿಗೆ, ಹೈದರಾಬಾದಗೆ ಕರ್ನಾಟಕ ಮತ್ತು ಹಳೆಯ ಮೈಸೂರಿನ ಮಕ್ಕಳಿಗೆ ಕೊಡುತ್ತಿರುವ ಸಹಾಯಧನ ಬೇರೆ ಬೇರೆ ರೂಪದಲ್ಲಿ ಇದೆ. ಇದನ್ನೆಲ್ಲಾ ಹೋಗಲಾಡಿಸಲು ಮತ್ತು ಈ ಒಂದು ತಾರತಮ್ಯವನ್ನು ತಪ್ಪಿಸಲು ಮುಂದಿನ ವರ್ಷದಿಂದ ಇಡೀ ರಾಜ್ಯಕ್ಕೇ ಅನ್ವಯವಾಗುವಂತೆ ಯೂನಿಫಾರಂ ಗ್ರಾಂಟ್-ಇನ್-ಯೇಡ್‌ನ್ನು ಜಾರಿಗೆ ತರಬೇಕೆಂದಿದ್ದೇವೆ. ಇದರಿಂದ ಮಾನ್ಯ ಸದಸ್ಯರುಗಳಿಗೆ ಸಂತೋಷ ವಾಗಬಹುದು. ಇದೇ ರೀತಿ ಯೂನಿಫಾರಮ್ ಗ್ರಾಂಟ್-ಇನ್-ಯೇಡ್ ಕೋಡನ್ನು ಕೂಡ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದೇವೆ. ಈ ಮೂಲಕ ರಾಜ್ಯದ ಎಲ್ಲಾ ಮಕ್ಕಳಿಗೂ ಕೂಡ ಒಂದೇ ರೀತಿಯ ಸಹಾಯ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಕೆಲವು ಮಾನ್ಯ ಸದಸ್ಯರುಗಳು ಮಕ್ಕಳಿಗೆ ಸಹಾಯ ಧನ ಸರಿಯಾಗಿ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಸರ್ಕಾರದ ಉದ್ದೇಶವಾದರೂ ಕೂಡ, ಮಕ್ಕಳಿಗೆ ಹಾಸ್ಟಲ್ ಫೆಸಿಲಿಟೀಸ್ ಸಿಗಬೇಕು ಇಲ್ಲವೇ ಫ್ರೀ ಮೆಟ್ರಿಕ್ ಸ್ಕಾಲರ್‌ಷಿಪ್ ಕೊಡಬೇಕೆಂಬುದು ಇದೆ. ಈ ಎರಡು ಸ್ಕೀಮ್‌ಗಳಲ್ಲಿ ಯಾವುದಾದರು ಒಂದರಲ್ಲಿ ಈ ಮಕ್ಕಳನ್ನು ಅಳವಡಿಸಬೇಕೆಂದು ಯೋಚನೆಮಾಡಿ ಆ ಬಗ್ಗೆ ಒಂದು ಯೋಜನೆಯನ್ನು ತಯಾರುಮಾಡಿ ಅದರಂತೆ ಕೆಲಸ ಮಾಡುತ್ತಿದ್ದೇವೆನ್ನುವ ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಟಿಂಬರ್ ಕೊಡುವ ವಿಚಾರದಲ್ಲಿ ಮಿಸ್-ಅಪ್ರೋಪ್ರಿಯೇಷನ್ ಆಗಿದೆ ಎಂದು ಮಾನ್ಯ ಲೋಕಯ್ಯ ನಾಯಕ್ ಅವರು ಹೇಳಿದ್ದಾರೆ. ಬಹುಶಃ ಅವರಿಗೂ ಗೊತ್ತಿರಬಹುದು, ಮೊನ್ನೆತಾನೆ ನಮ್ಮ ಮಂತ್ರಿಗಳು ತಮ್ಮ ಛೇಂಬರ್‌ನಲ್ಲಿ ಒಂದು ಮೀಟಿಂಗ್ ಈ ಬಗ್ಗೆ ನಡೆಸಿದರು. ಮಾನ್ಯಸದಸ್ಯರುಗಳನೇಕರು ಈ ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಂದು ಮೀಟಿಂಗ್ ಕರೆದು ಇದರ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಾಗಿ ನಮ್ಮ ಮಂತ್ರಿಗಳು ಮಾನ್ಯ ಸದಸ್ಯರುಗಳಿಗೆ ಭರವಸೆಯನ್ನು ಕೊಟ್ಟಿದ್ದಾರೆ. ಟಿಂಬರ್ ಕೊಡುವ ವಿಚಾರ ದಲ್ಲಿ ಸ್ವಲ್ಪ ಅನಾನುಕೂಲತೆಗಳು ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದವರು ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೆಲವು ಸದಸ್ಯರುಗಳು ಕೇಳಿದರು, ಈಗ ಎಲ್ಲೆಲ್ಲಿ ದುರುಪಯೋಗವಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಲ್ಲೆಲ್ಲಾ ತನಿಖೆಯಾಗುತ್ತಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಜಯಪ್ರಕಾಶ್‌ನಾರಾಯಣ್ ಅವರು ಎಂ. ಸಿ. ಆರ್. ಪಿ. ಸ್ಕೀಮ್ ಮತ್ತು ಲ್ಯಾಂಡ್ ರಿಕ್ಲಮೇಷನ್ ಸ್ಕೀಮ್‌ಗಳಿಗೆ ಕೊಡುತ್ತಿರುವ ಹಣ ಸಾಲುವುದಿಲ್ಲವೆಂದು ಹೇಳಿದರು. ರಿಕ್ಲಮೇಷನ್ ಕೆಲಸಕ್ಕಾಗಿ ಇಟ್ಟಿರುವ ಹಣವನ್ನು ಖರ್ಚು ಮಾಡಲು ಈಗಾಗಲೇ ವ್ಯವಸಾಯ ಇಲಾಖೆಯವರು ಕೆಲವು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದಾರೆ. ಈ ರೀತಿಯಲ್ಲಿ ಎಲ್ಲಾ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಅನೇಕ ಮಾನ್ಯ ಸದಸ್ಯರು ಬೋವಿ ಜನಾಂಗವನ್ನು ಷೆಡ್ಯೂಲ್ ಕ್ಯಾಸ್ಟ್ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಹೇಳಿದ್ದಾರೆ. ಮೊನ್ನೆತಾನೆ ಕೇಂದ್ರ ಸರ್ಕಾರದ ಜಾಯಿಂಟ್ ಸೆಲೆಕ್ಟ್ ಕಮಿಟಿ

(ಶ್ರೀಮತಿ ಬಸವರಾಜೇಶ್ವರಿ)

ಯವರು ಈ ವಿಚಾರವಾಗಿ ನಮ್ಮ ರಾಜ್ಯಕ್ಕೆ ಬಂದಿದ್ದರು. ಅವರ ಮುಂದೆ ಅನೇಕ ಮಾನ್ಯ ಸದಸ್ಯರಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಇಟ್ಟಿದ್ದಾರೆ. ಸರ್ಕಾರದವರು ಕೂಡ ತಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿದ್ದಾರೆ. ಮುಂದೆ ಅವರು ಆ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ. ಇದನ್ನು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಬೇಕೇ ವಿನಃ ನಾವಲ್ಲ, ಎನ್ನುವ ವಿಚಾರವನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಫ್ರೀ ಮೆಟ್ರಿಕ್ ಸ್ಕಾಲರ್‌ಷಿಪ್ ಕಾಲಕ್ಕೆ ಸರಿಯಾಗಿ ಸಿಗುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಸಿಗುತ್ತಿರುವುದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ ಎಂದೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ಅಪ್ಲಿಕೇಷನ್‌ಗಳನ್ನು ಬಿಲ್ಡ್ ಅಫ್ ಮಾಡುವವರು ಆಯಾ ಶಾಲೆಗಳ ಮುಖ್ಯ ಉಪಾಧ್ಯಾಯರುಗಳು. ಅವರು ಕಾಲಕ್ಕೆ ಸರಿಯಾಗಿ ಅಪ್ಲಿಕೇಷನ್‌ಗಳನ್ನು ಬಿಲ್ಡ್ ಅಫ್ ಮಾಡಿ ಕಳಿಸದೇ ಇರುವುದರಿಂದ ಈ ರೀತಿ ಸ್ವಲ್ಪ ನಿಧಾನವಾಗುತ್ತಿದೆ. ಈಗಾಗಲೇ ವಿದ್ಯಾ ಇಲಾಖೆಯ ಕಾರ್ಯದರ್ಶಿಗಳೊಡನೆ ಚರ್ಚೆ ಮಾಡಿದ್ದೇವೆ. ಮತ್ತು ಮುಂದಿನ ವರ್ಷದಿಂದ ಆಯಾ ಶಾಲೆಗಳ ಮುಖ್ಯ ಉಪಾಧ್ಯಾಯರುಗಳು ಸ್ಟ್ರಿಕ್ಟ್ ಆಗಿ ಶಾಲೆ ಪ್ರಾರಂಭವಾದ ಒಂದು ತಿಂಗಳೊಳಗೇ ಅಪ್ಲಿಕೇಷನ್‌ಗಳನ್ನು ಬಿಲ್ಡ್ ಅಪ್ ಮಾಡಿ ಕಳಿಸುವಂತೆ ಒಂದು ಸರ್ಕ್ಯುಲರ್‌ಅನ್ನು ಕಳಿಸಬೇಕೆಂದು ಮಾಡಿದ್ದೇವೆ. ಇದರಿಂದ ವರ್ಷದ ಪ್ರಾರಂಭದಲ್ಲಿಯೇ ಮಕ್ಕಳಿಗೆ ಹಣ ಸಿಗುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರಮಾಡಿದ್ದೇವೆ.

ಇನ್ನು ಕೊನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಮಹಿಳೆಯರ ಬಗ್ಗೆ ಒಂದು ವಿಷಯವನ್ನೂ ಕೂಡ ಪ್ರಸ್ತಾಪ ಮಾಡಿಲ್ಲವೆಂದು ಅಪಾದನೆ ಮಾಡಿದ್ದಾರೆ. ಈ ಮಾನ್ಯ ಸಭೆಗೆ ಒಂದು ಸಂತೋಷದ ವಿಚಾರ ಹೇಳಬೇಕಾಗಿದೆ ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಬಹಳ ಉತ್ಸುಕತೆಯಿಂದ ಇದ್ದಾರೆ. ಮಹಿಳೆಯರಿಗಾಗಿ ಒಂದು ಪ್ರತ್ಯೇಕವಾದ ಶಾಖೆಯನ್ನು ಪ್ರಾರಂಭ ಮಾಡಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇದೆ. ಮದ್ರಾಸ್ ಮತ್ತು ಆಂಧ್ರ ಸರ್ಕಾರಗಳಲ್ಲಿ ಮಹಿಳೆಯರಿಗಾಗಿ ಇರುವ ಶಾಖೆಗಳು ಬಹಳ ಚೆನ್ನಾಗಿ ಕೆಲಸವನ್ನು ನಡೆಸಿಕೊಂಡು ಹೋಗುತ್ತಿವೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಕೂಡ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕಾಲದಲ್ಲಿಯೇ ಒಂದು ಶಾಖೆಯನ್ನು ಪ್ರಾರಂಭ ಮಾಡಬೇಕೆಂದು ಮೊನ್ನೆ ನಡೆದ ಸೆಮಿನಾರ್‌ನಲ್ಲಿ ಒಂದು ನಿರ್ಣಯ ಮಾಡುವುದರ ಮೂಲಕ ಕೇಳಿಕೊಂಡಿದ್ದೇವೆ. ಮತ್ತು ಆ ನಿರ್ಣಯವನ್ನು ಮುಖ್ಯ ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇವೆ. ಮತ್ತು ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಈ ವಿಷಯದಲ್ಲಿ ಸರ್ಕಾರ ತನ್ನ ಅಂತಿಮ ತೀರ್ಮಾನವನ್ನು ಇಷ್ಟರಲ್ಲಿಯೇ ಕೈಗೊಳ್ಳುತ್ತದೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೊನೆಯದಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನೇಕ ಕೆಲಸಗಳನ್ನು ಹಿಂದುಳಿದವರ ಬಗ್ಗೆ ಮಾಡಿಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರುಗಳನೇಕರು ಅಭಿಪ್ರಾಯಪಟ್ಟಂತೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ಹಿಂದುಳಿದ ಜನಾಂಗದವರ ಕಲ್ಯಾಣಕ್ಕಾಗಿ ಅನೇಕ ಸ್ಕೀಮ್‌ಗಳನ್ನು ಹಾಕಿಕೊಂಡಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ ಕುರುಡರು, ಕುಂಟರು, ಮೊದಲಾದ ಹ್ಯಾಂಡಿಕ್ಯಾಪ್‌ಡ್, ಅನಾಥ ಮಹಿಳೆಯರು ಮುಂತಾದವರ ಕಲ್ಯಾಣವಾಗುವುದು ಅವಶ್ಯಕವಿದೆ. ಸಮಾಜದಲ್ಲಿ ಈ ರೀತಿಯಾಗಿ ಬದಲಾವಣೆಗಳಾಗುತ್ತಿರುವ ಸಂದರ್ಭದಲ್ಲಿ ಇವರ ಕಲ್ಯಾಣವನ್ನು ಸರ್ಕಾರ ವಹಿಸಿಕೊಳ್ಳತಕ್ಕದ್ದು ಅತ್ಯಾವಶ್ಯಕವೆಂದು ತಿಳಿದುಕೊಂಡಿದ್ದೇವೆ. ಕೆಲವು ಖಾಸಗಿ ಸಂಸ್ಥೆಗಳವರು ಮಾಡಿದ್ದಾರೆ, ಸರ್ಕಾರದವರೂ ಕೂಡ ಪ್ರಯತ್ನ ಮಾಡಿದ್ದಾರೆ. ಇನ್ನು ಮುಂದೆ ಹೆಚ್ಚಾಗಿ ಖಾಸಗಿ ಜನರು ಮುಂದೆ ಬಂದು ಸ್ಪೆಷಲೈಸ್ಡ್ ಸರ್ವಿಸ್ ಎಂದೆ ಅದನ್ನು ಪ್ರಾರಂಭ ಮಾಡಿದರೆ ಅದಕ್ಕೆ ಸರ್ಕಾರ ಸಹಾಯ ಮಾಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. ನಾನು ಅಧ್ಯಕ್ಷರ ಮೂಲಕ ಖಾಸಗಿಯವರನ್ನು ಕೇಳಿಕೊಳ್ಳುವುದೇನೆಂದರೆ ಅವರ ಮನಸ್ಸು ಈ ಕಡೆಗೆ ಹರಿಯಬೇಕು, ಅವರು ಈ ಕಡೆಗೆ ದೃಷ್ಟಿ ಇಟ್ಟು ಸ್ಪೆಷಲೈಸ್ಡ್ ಸ್ಕೀಮುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

1-00 P.M.

ಅಸ್ಪೃಶ್ಯತಾ ನಿವಾರಣೆ ಬಗ್ಗೆ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಇದು ಈ ಹೊತ್ತಿನ ವಿಷಯವಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅನೇಕ ವರ್ಷಗಳಿಂದ ಪರಂಪರೆಯಾಗಿ ಬಂದಿರತಕ್ಕ ವಿಚಾರ. ಇದನ್ನು ಯಾವ ರೀತಿ ನಿರ್ಮೂಲ ಮಾಡಬೇಕು, ಏನು ಕ್ರಮಗಳನ್ನು

ತೆಗೆದುಕೊಳ್ಳಬೇಕು ಎಂದು ಸರ್ಕಾರ ವಿಚಾರ ಮಾಡುತ್ತಿದೆ. ಕೆಲವು ಹಾಸ್ಟಲುಗಳು ಈ ಹೊತ್ತಿನ ದಿವಸ ನಾನ್ ಡಿನಾಮಿನೇಷನಲ್ ಹಾಸ್ಟಲ್ಸ್ ಎಂದು ಮಾಡಿ ಅದರಲ್ಲಿ ಸೇಕಡ 25 ರಷ್ಟು ಬೇರೆ ಹುಡುಗರು ಇರುವುದಕ್ಕೆ ಅವಕಾಶ ಮಾಡಿದೆ. ಕಾಲೇಜು ಮಟ್ಟಕ್ಕೆ ಹೋದಾಗ ಆ ಮಕ್ಕಳಿಗೆ ಅಷ್ಟೊಂದು ಅಸ್ಪೃಶ್ಯತೆಯ ವಿಚಾರ ಅವರ ಮನಸ್ಸಿನಲ್ಲಿ ಇರಬಾರದೆಂದು. ಪೋಸ್ಟ್ ಮೆಟ್ರಿಕ್ ತರಗತಿಗಳಲ್ಲಿ ಓದುವಾಗ ಅವರನ್ನು ಜನರಲ್ ಹಾಸ್ಟಲುಗಳಲ್ಲಿ ಇಡುವ ವ್ಯವಸ್ಥೆ ಮಾಡಿ ಬೋರ್ಡಿಂಗ್ ಸ್ಕಾಲರ್‌ಷಿಪ್ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಪಂಚಾಯಿತಿಗಳಿಗೆ ಪ್ರೈಜ್ ಕಾಂಪಿಟಿಷನ್ ವ್ಯವಸ್ಥೆ ಮಾಡಿ ಯಾರು ಈ ವರ್ಗದ ಜನರ ಕಲ್ಯಾಣಕ್ಕಾಗಿ ಹೆಚ್ಚು ದುಡಿಯುತ್ತಾರೆ ಅವರಿಗೆ ಬಹುಮಾನಗಳನ್ನು ಕೊಡತಕ್ಕ ಪದ್ಧತಿಯನ್ನು ಕೂಡ ಸರ್ಕಾರ ಹಾಕಿಕೊಂಡಿದೆ. ಅದೇ ರೀತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಪಟ್ಟಣಗಳಲ್ಲಿ ಅಸ್ಪೃಶ್ಯತೆ ಕ್ರಮೇಣ ಕಡಮೆಯಾಗುತ್ತ ಬಂದಾಗ್ಯೂ ಕೂಡ ಎಲ್ಲರೂ ಹೇಳುವಂತೆ ಹಳ್ಳಿಗಳಲ್ಲಿ ಸ್ವಲ್ಪಮಟ್ಟಿಗೆ ಇನ್ನೂ ಇವೆ. ಅದೂ ಕ್ರಮೇಣ ಕಡಮೆಯಾಗಬಹುದು ಎನ್ನುವ ನಂಬಿಕೆ ನನಗೆ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಗಾಂಧಿ ಶತಾಬ್ದಿ ಸಂಬಂಧದಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ಏನೇನು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ ಮತ್ತು ಅದಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ ?

ಶ್ರೀಮತಿ ಬಸವರಾಜೇಶ್ವರಿ.—ಆ ರೀತಿಯಾಗಿ ಪ್ರತ್ಯೇಕವಾದ ಯೋಜನೆಗಳನ್ನು ಹಾಕಿಕೊಂಡಿಲ್ಲ, ಕುಡಿಯುವ ನೀರಿನ ಪೂರೈಕೆ ಬಗ್ಗೆ ಹೆಚ್ಚಿನ ಗಮನಕೊಡಬೇಕೆಂದು ಸರ್ಕಾರ ಮನಗಂಡಿದೆ.

ಮಾನ್ಯ ಸದಸ್ಯರೆಲ್ಲರೂ ಇದುವರೆಗೂ ಕೂಡ ಸಹಕಾರ ಮಾಡಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಅನೇಕ ಮಹನೀಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವೆಲ್ಲಕ್ಕೂ ಉತ್ತರ ಕೊಡುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಅವರು ಹೇಳಿರುವ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದೆ ಆಗಬೇಕಾದ ಕಾರ್ಯಕ್ರಮಗಳಲ್ಲಿ ಅದನ್ನು ಅಳವಡಿಸಿ ಕೆಲಸ ಮಾಡುತ್ತೇವೆಂದು ಮಾನ್ಯ ಸಭೆಗೆ ಭರವಸೆಯನ್ನು ಕೊಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಇಡೀ ರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಹುಡುಗರಿಂದ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಾರೆ. ಅದನ್ನು ಕೊಡಲಾರದೆ ಅನೇಕ ಹರಿಜನರು ಶಾಲೆಗೆ ಹೋಗದಂತಾಗಿದೆ. ಸರ್ಕಾರದಿಂದ ಒಂದು ಸುತ್ತೋಲೆಯನ್ನು ಕಳಿಸಿ ಹರಿಜನರಿಗೆ ವಿನಾಯಿತಿ ಕೊಡಬೇಕೆಂದು ಸೂಚಿಸುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಕ್ಯಾಪಿಟೇಷನ್ ವಿಚಾರದಲ್ಲಿ ಕೆಲವು ಖಾಸಗಿ ಸಂಸ್ಥೆಗಳಿಗೆ ಸೂಚನೆ ಕೊಟ್ಟು ಇಂಥ ಸಂದರ್ಭಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ವಿನಾಯಿತಿಯನ್ನು ಕೊಡಿ, ಅದನ್ನು ಸರ್ಕಾರದಿಂದ ರೀ ಇಂಬರ್ಸ್ ಮಾಡಲಾಗುತ್ತದೆ, ಅವರ ಕಡೆಯಿಂದ ವಸೂಲು ಮಾಡಬೇಡಿ ಎಂದು ಸರ್ಕಾರದ ಆದೇಶವನ್ನು ಕಳಿಸಿದ್ದೇವೆ.

ಶ್ರೀ ಎ. ಮುನಿಯಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ಅಡ್ವೈಸರಿ ಬೋರ್ಡಿನಲ್ಲಿ ಹರಿಜನ ಹಾಸ್ಟಲುಗಳ ಗ್ರಾಂಟನ್ನು ಜಾಸ್ತಿ ಮಾಡಬೇಕು, ಕೆಲವು ಹಾಸ್ಟಲುಗಳು ವಿದ್ಯಾ ಇಲಾಖೆಯ ಅಧೀನದಲ್ಲಿರುವುದನ್ನು ಸಮಾಜ ಕಲ್ಯಾಣ ಇಲಾಖೆಗೆ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡಿ ಅದನ್ನು ಈ ವರ್ಷದಿಂದ ಜಾರಿಗೆ ತರಬೇಕು ಎಂದು ಹೇಳಿದ್ದೆವು. ಅದನ್ನು ಏನು ಮಾಡಿದ್ದೀರಿ ಎಂದು ಹೇಳಿದರೆ ನಮಗೆ ತೃಪ್ತಿಯಾಗುತ್ತದೆ.

ಶ್ರೀಮತಿ ಬಸವರಾಜೇಶ್ವರಿ.—ಸುಮಾರು 92 ಹಾಸ್ಟಲುಗಳು ವಿದ್ಯಾ ಇಲಾಖೆಯ ಸ್ವಾಧೀನದಲ್ಲಿವೆ. ಅವುಗಳನ್ನು ಮುಂದಿನ ವರ್ಷದಿಂದ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವಿದೆ. ಅದರ ಬಗ್ಗೆ ಇನ್ನೂವರೆಗೆ ಅಂತಿಮವಾಗಿ ತೀರ್ಮಾನವಾಗಿಲ್ಲ.

ಶ್ರೀ ಕೆ. ಪ್ರಭಾಕರ್.—ರಾಜ್ಯದಲ್ಲಿರುವ ಹರಿಜನ ಹಾಸ್ಟಲುಗಳಲ್ಲಿ ಸೇಕಡ 25 ರಷ್ಟು ಹರಿಜನೇತರರು ಇರುವುದಕ್ಕೆ ಅವಕಾಶ ಮಾಡಲಾಗಿದೆ ಎಂದು ಹೇಳಿದರು. ಎಷ್ಟು ಜನ ಇದರ ಅವಕಾಶವನ್ನು ಉಪಯೋಗಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಬಹಳಮಟ್ಟಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಅನೇಕ ಹಾಸ್ಟಲುಗಳಲ್ಲಿ ನಾನು ನೋಡಿಕೊಂಡು ಬಂದಿದ್ದೇನೆ. ಇತರರೂ ಈ ಹಾಸ್ಟಲುಗಳಲ್ಲಿ ಇದ್ದಾರೆ.

Sri J. P. SARWESH.—I want to know what are the economic uplift programmes run by the Social Welfare Department for the uplift of the Scheduled Castes and the Scheduled Tribes ? Whether Government have been able to give cultivable land to the extent of a family holding each to these people according to the Reveune Act ? If these figures are not readily available, they may be furnished after some time.

ಶ್ರೀಮತಿ ಬಸವರಾಜೇಶ್ವರಿ.—ಮಾನ್ಯ ಸದಸ್ಯರು ಅಂಕಿಸಂಖ್ಯೆಗಳನ್ನು ಏನು ಕೇಳಿದ್ದಾರೆ ಅದು ಈಗ ನನ್ನ ಹತ್ತಿರ ಇಲ್ಲ. ಎಲ್ಲೆಲ್ಲಿ ಜಮೀನು ಕೊಡತಕ್ಕುದು ಇದೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಅದನ್ನು ಕೊಡಲಾಗುತ್ತಿದೆ. ಈ ಬಗ್ಗೆ ಪೆಂಡಿಂಗ್ ಇರುವ ಅಪ್ಲಿಕೇಷನ್ ವಿಚಾರದಲ್ಲಿ ಮೊನ್ನೆ ತಾನೇ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ.

Mr. DEPUTY SPEAKER.—Now I shall put Demand No. 27 to vote. The question is :

> "That a sum not exceeding Rs. 7,26,57,000 be granted to the Government to defray the charges which will come in course of payment during the financial year for the period ending 31st day of March 1970 in respect of 'Miescllaneous, Social and Development Organisations'."

The motion was adopted.

Mr. DEPUTY SPEAKER.—I suggest that we may dispense with the question hour in the afternoon as we are having very important demands. In the afternoon we will straightaway take up the demands. I hope the House has no objection.

HON. MEMBERS.—Yes.

Mr. DEPUTY SPEAKER.—The House now stands adjourned to meet at 2-30 P.M.

The House adjourned at Ten Minutes past One of the Clock and re-assembled at Thirty Minutes past Two of the Clock.

[Mr. SPEAKER in the Chair]

Mr. SPEAKER.—I call upon the Hon. Ministers to move the Demands.

Sri H. N. NANJE GOWDA (Arkalgud).—Sir, I have some objection.

Mr. SPEAKER.—Let the Demands be moved !

Sri H. N. NANJE GOWDA.—Sir, I just want a clarification. ಇವತ್ತು ಮೇಜರ್ ಹೆಡ್ 26 ಇದೆ, ಅದರಲ್ಲಿ ಮುಜರಾಯಿ ಸಂಸ್ಥೆಗಳೂ ಸೇರಿವೆ, ಮುಜರಾಯಿ ಸಂಸ್ಥೆಗಳ

ಜವಾಬ್ದಾರಿ ರೆವೆನ್ಯೂ ಮಂತ್ರಿಗಳಿಗಿದೆ. ಅದರ ಬಗ್ಗೆ ಮುನಿಸಿಪಾಲಟಿಗಳಿಗೆ ಸಂಬಂಧಪಟ್ಟ ಸಚಿವರು ಜವಾಬು ಹೇಳುತ್ತಾರೋ ಏನೋ ಗೊತ್ತಿಲ್ಲ. ಬೆಳಿಗ್ಗೆ ಕೂಡ ಹಾಗೇ ಆಯಿತು. ಟೌನ್ ಪ್ಲಾನಿಂಗ್ ಕೂಡ ಸೇರಿತ್ತು, ಅದು ಪಿ. ಡಬ್ಲ್ಯು. ಗೆ ಸೇರಬೇಕಾಗಿತ್ತು. ಈ ರೀತಿಯಾದರೆ ಕ್ಲಾಸಿಫಿಕೇಷನ್ ಕಷ್ಟ. ಇವತ್ತು ಅಗ್ನಿಶಾಮಕ ದಳದ ವಿಚಾರ ಕೂಡ ಬರುತ್ತದೆ. ಅದು ಹೋಂ ಇಲಾಖೆಯಲ್ಲಿತ್ತು. ಕ್ಲಾಸಿಫಿಕೇಷನ್ ಸರಿಯಾಗಿಲ್ಲದಿರುವುದರಿಂದ ಟೀಕೆ ಮಾಡುವುದು ಕಷ್ಟ, ಉತ್ತರ ಕೊಡುವುದೂ ಕಷ್ಟ. ಆದುದರಿಂದ ಡಿಮ್ಯಾಂಡುಗಳನ್ನು ರೀಕ್ಲಾಸಿಫೈ ಮಾಡಬೇಕು, ಯಾವ ಮಂತ್ರಿಗಳು ಡಿಮ್ಯಾಂಡ್ ಇಡುತ್ತಾರೋ ಅವರಿಗೆ ಸಂಬಂಧಪಟ್ಟಿದು ಮಾತ್ರ ಇರಬೇಕು. ಬೇರೆ ಮಂತ್ರಿಗಳಿಗೆ ಸಂಬಂಧಪಟ್ಟಿದ್ದನ್ನು ಬೇರೆ ದಿವಸ ಇಡಬೇಕು. ಬೈಫರ್ಕೇಷನ್ ಮಾಡುವುದಕ್ಕೆ ಅವಕಾಶ ಇರಬೇಕು.

Demand Nos. 4, 15, 39 and 53

Mr. SPEAKER.—Yes, I will look into it.

Sri MOHAMED ALI (Minister for Transport).—Sir, on the recommendation of the Governor, I beg so move :

"That a sum not exceeding Rs. 22,70,000 be granted to the Government to defray the charges which will come in course of payment during the financial year for the period ending 31st day of March 1970, in respect of 'Taxes on Vehicles'."

Mr. SPEAKER.—Motion moved :

"That a sum not exceeding Rs. 22,70,000 be granted to the Government to defray the charges which will come in course of payment during the financial year for the period ending 31st day of March 1970, in respect of 'Taxes on Vehicles'."

Sri B. VITHALDAS SHETTY (Minister of State for Food and Civil Supplies).—Sir, on the recommendation of the Governor, I beg to move :

"That a sum not exceeding Rs. 2,38,75,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous Departments'."

"That a sum not exceeding Rs. 30,31,04,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Schemes of Government Trading'."

Mr. SPEAKER.—Motion moved :

"That a sum not exceeding Rs. 2,38,75,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous Departments'."

(Mr. Speaker)

"That a sum not exceeding Rs. 30,31,04,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Schemes of Government Trading'."

Sri B. M. PATIL (Minister of State for Municipal Administration).—Sir, on the recommendation of the Governor, I beg to move:

"That a sum not exceeding Rs. 6,98,90,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous."

Mr. SPEAKER.—Motion moved:

"That a sum not exceeding Rs. 6,98,90,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous'."

All the Demands are before the House for discussion. Hon. member Sri H. N. Nanje Gowda, will initiate the debate. He has been allotted 15 minutes.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಗಳೇ ಈ ದಿನ ಈ ಬೇಡಿಕೆಗಳು ಏನಿವೆ ಇವು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತಹ ಬೇಡಿಕೆಗಳಾಗಿವೆ. ಸದಸ್ಯರಿಗೂ ಕೂಡ ಬಹಳ ಕಷ್ಟ, ಎಲ್ಲವನ್ನೂ ಕೂಡ ನಾವು ನೋಡಿ ಕೂಲಂಕಷವಾಗಿ ನಮ್ಮ ಅಭಿಪ್ರಾಯಗಳನ್ನು ಸೂಚಿಸುವುದಕ್ಕೆ ಅವಕಾಶವಿಲ್ಲದಂತಹ ಸ್ಥಿತಿ ಬಂದಿದೆ. ಆದ್ದರಿಂದ ಮುಂದೆ ಇಂತಹ ಬಡ್ಜೆಟ್ ಅಧಿವೇಶನಗಳಲ್ಲಿ ಡಿಮ್ಯಾಂಡುಗಳನ್ನು ವರ್ಗೀಕರಣ ಮಾಡುವಾಗ ಎಚ್ಚರಿಕೆ ವಹಿಸಿ ಈ ರೀತಿ ಮಾಡದಂತೆ ಒಂದು ಸಲಹೆಯನ್ನು ತಾವು ಸರ್ಕಾರದವರಿಗೆ ಕೊಡಬೇಕೆಂದು ಹೇಳಿ, ಎಲ್ಲದರಮೇಲೂ ಮಾತನಾಡುವುದಕ್ಕೆ ಅವಕಾಶವಿಲ್ಲವಾದ್ದರಿಂದ ಟ್ರಾನ್ಸ್‌ಪೋರ್ಟ್ ಮಿನಿಸ್ಟರ ಇಲಾಖೆಯ ಬೇಡಿಕೆ ಬಗ್ಗೆ ಕೆಲವಾರು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಎಂ.ಎಸ್.ಆರ್.ಟಿ.ಸಿ. ವಿಷಯ ಇಲ್ಲಿ ಬರಲಿಲ್ಲ ಅಂತ ಅಂದರೂ ಸಹ ಪೂರ್ವಭಾವಿಯಾಗಿಯೇ ಹೇಳುತ್ತಾ ಇದ್ದೇನೆ. ಟ್ಯಾಕ್ಸೇಷನ್ ಆಫ್ ವೆಹಿಕಲ್ಸ್ ಇದೂ ಕೂಡ ಎಂ.ಎಸ್.ಆರ್.ಟಿ.ಸಿ. ಯಿಂದ ಬರತಕ್ಕ ರೆವಿನ್ಯೂಗೆ ಸಂಬಂಧಪಡುವುದರಿಂದ ಇದಕ್ಕೆ ಸಂಬಂಧವಾಗಿರುತ್ತದೆಯೇ ಹೊರತು ಸಂಬಂಧ ವಿರೋಧವಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಂ.ಎಸ್.ಆರ್.ಟಿ.ಸಿ. 'ಮಾಲ್ ಅಡ್ಮಿನಿಸ್ಟ್ರೇಷನ್'ಗೆ ಉದಾಹರಣೆ, 'ಕರಪ್ಷನ್'ಗೆ' ಉದಾಹರಣೆ, ಮತ್ತು 'ಸ್ಪೆಂಡಿಂಗ್ ಆಫ್ ಕ್ಯಾಪಿಟಲ್ ಮನಿ'ಗೆ ಉದಾಹರಣೆ ಎಂದು ಯಾರು ಬೇಕಾದರೂ ಹೇಳಬಹುದು. ಈ ರೀತಿಯಾಗಿ ಇರುವುದು ನಮಗೆ ತಿಳಿದುಬಂದಿದೆ. ಇದರಲ್ಲಿ ಬೇರೆ ಸಂಸ್ಥಾನಗಳ ಮತ್ತು ನಮ್ಮ ಸಂಸ್ಥಾನದ ಒಂದೆರಡು ಅಂಕಿ ಅಂಶಗಳನ್ನು ನಾನು ಕೊಡಲು ಇಷ್ಟಪಡುತ್ತೇನೆ. ಮಹಾರಾಷ್ಟ್ರದಲ್ಲಿ ಗ್ರಾಸ್ ರೆವಿನ್ಯೂನಲ್ಲಿ ಶೇಕಡ 20 ಭಾಗ ಪ್ಯಾಸೆಂಜರ್ ಟ್ಯಾಕ್ಸ್‌ನಿಂದ ಸರ್ಕಾರಕ್ಕೆ ಬರುತ್ತದೆ. ಎಂ.ಎಸ್.ಆರ್.ಟಿ.ಸಿ. ಯಲ್ಲಿ ಕೇವಲ ಶೇಕಡ 6 ಭಾಗ ಮಾತ್ರ ಬರುತ್ತಾ ಇದೆ. ಮಹಾರಾಷ್ಟ್ರದ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ 32 ಕೋಟಿ ರೂಪಾಯಿ, ಇಲ್ಲಿ 20 ಚಿಲ್ಲರೆ ಕೋಟಿ ರೂಪಾಯಿ. ಮಹಾರಾಷ್ಟ್ರದಲ್ಲಿ ಗ್ರಾಸ್ ರೆವಿನ್ಯೂ 43 ಕೋಟಿ ರೂಪಾಯಿ ನಮ್ಮಲ್ಲಿ 19.16 ಕೋಟಿ ರೂಪಾಯಿ. ಅರ್ನಿಂಗ್ಸ್ ಒಂದು ಕಿಲೋ ಮೈಲಿಗೆ ನಮ್ಮ ಸಂಸ್ಥಾನದಲ್ಲಿ ಹೋದ ವರ್ಷ 120.7 ಪೈಸೆ ಈ ವರ್ಷ 119.3 ಪೈಸೆಗೆ ಇಳಿದಿದೆ. ಮಹಾರಾಷ್ಟ್ರದಲ್ಲಿ 132 ಪೈಸೆ ಬರುತ್ತದೆ. ಅಕೌಂಟ್ ಮಾಡುವುದರಲ್ಲಿ ಎಂ.ಎಸ್.ಆರ್.ಟಿ.ಸಿ.ಯವರು ಒಂದು ಜಾಣತನ ಮಾಡಿದ್ದಾರೆ ಎಂದು ಅಂದುಕೊಂಡಿದ್ದೇನೆ.

1960-61 ರಿಂದ ಹಿಡಿದು 67-68 ರವರೆಗೂ ಕೂಡ ಅಂಕಿಅಂಶ ಕೊಟ್ಟಿದ್ದಾರೆ. 65-66ರವರೆಗೂ ಇನ್‌ಕಂಟ್ಯಾಕ್ಸ್ ಕೊಟ್ಟು ಉಳಿದದ್ದು ಲಾಭ ಅಂತ ತೋರಿಸಿದ್ದಾರೆ. 60-61 ರಲ್ಲಿ 6.41 ಕೋಟಿ ರೂಪಾಯಿ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಇತ್ತು. ಆಗ ನಮ್ಮ ಆದಾಯ 86.41 ಲಕ್ಷ ರೂಪಾಯಿ ಆಗಿತ್ತು. ಗ್ರಾಸ್ ರೆವಿನ್ಯೂ ಈಗ 19.16 ಕೋಟಿ ರೂಪಾಯಿ ಇದೆ. ಈ ರೀತಿ ಕಡಿಮೆ ತೋರಿಸಿದರೆ ಆಡಳಿತ ಹೇಗೆ ನಡೆಯುತ್ತಾ ಇದೆ ಎಂದು ಪ್ರಶ್ನೆ ಮಾಡತಕ್ಕ ಸಂದರ್ಭ ಬರುತ್ತದೆ. ಆದ್ದರಿಂದ ಏನು ಮಾಡಿದರು ? ನಿಮಗೆ ಹೇಳಬೇಕಾದರೆ 60-61 ರಿಂದ ಹಿಡಿದು 86.41, 72.32, 30.70, 59.41 ಈ ರೀತಿ ಬಂದಿದೆ. 66 ಲಕ್ಷ ರೂಪಾಯಿ ಇನ್‌ಕಂ ಟ್ಯಾಕ್ಸ್ ಕೊಡಬೇಕಾಗುತ್ತದೆ. ವರ್ಷವರ್ಷವೂ ಕೊಡುತ್ತಾ ಇರುವ ಹಾಗೆ ನೆಟ್ ಪ್ರಾಫಿಟ್ ಉಳಿಯುವುದು 60 ಲಕ್ಷ ರೂಪಾಯಿ. ಇದನ್ನು ಏಕೆ ಹೇಳಬೇಕಾಯಿತು ಎಂದರೆ ಮೊನ್ನೆ ಶ್ರೀಮಾನ್ ದೇವರಾಜ ಅರಸ್‌ರವರು ಮಾತನಾಡುವಾಗ ಸಿದ್ದಯ್ಯನವರು ಯಾವುದೋ ಒಂದು ಸಂದರ್ಭದಲ್ಲಿ ರಾಷ್ಟ್ರೀಕರಣ ಬೇಡ ಅನ್ನತಕ್ಕವರು ಬುದ್ಧಿವಂತರು ಅಂತ ಅನ್ನುವುದಕ್ಕೆ ಯಾವುದೋ ಒಂದು ಪದ ಉಪಯೋಗಿಸಿದರು ನನಗೆ ನೆನಪು ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ನಾನು ಉಪಯೋಗ ಮಾಡಿದ ಪದ ಕದೀಮರು ಎಂದರೆ ಬುದ್ಧಿವಂತರು ಅಂತ ಅಷ್ಟೇ ಹೊರತು ಅವಮಾನದ ಮಾತು ಯಾವುದನ್ನೂ ಹೇಳಲಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಏಕೆ ಹೇಳುತ್ತೇನೆ ಎಂದರೆ ಒಂದೊಂದು ರಾಜಕೀಯ ಸಿದ್ಧಾಂತ ಇರುತ್ತದೆ. ಸಿದ್ಧಾಂತವನ್ನು ಒಪ್ಪಿಕೊಂಡ ಮೇಲೆ ಅದನ್ನು ತತ್ವಶಃ ಮಾಡತಕ್ಕ ಒಂದು ಅಭಿಪ್ರಾಯವನ್ನು ಇಟ್ಟುಕೊಳ್ಳಬೇಕು. ತಮ್ಮ ರಾಜಕೀಯ ಸಿದ್ಧಾಂತ ಸಮಾಜವಾದ ಅದನ್ನು ಬಿಡುವುದಕ್ಕಾಗುವುದಿಲ್ಲ. ಗ್ರಾಸ್ ರೆವಿನ್ಯೂ 19.16 ಕೋಟಿ ರೂಪಾಯಿ ಬರಬೇಕಾದರೆ—ತಾವು ಹಿಂದೆ ಒಂದು ರೂಪಾಯಿ ಚಾರ್ಜ್ ಮಾಡುತ್ತಾ ಇದ್ದಿರಿ, ಈಗ 1 ರೂಪಾಯಿ 30 ಪೈಸೆಯಿಂದ 40 ಪೈಸೆವರೆಗೂ ಪ್ರತಿಯೊಬ್ಬ ಪ್ರಜೆಯೂ ಕೊಡುತ್ತಾ ಇದ್ದಾನೆ. ಖರ್ಚೆಲ್ಲಾ ಕಳೆದು 60 ಲಕ್ಷ ರೂಪಾಯಿ ಉಳಿಯುತ್ತದೆ. ಇಷ್ಟಕ್ಕೆ ರಾಷ್ಟ್ರೀಕರಣ ಮಾಡುತ್ತೇವೆ ಎಂದರೆ ಬಹುಶಃ ಇದನ್ನು ಯಾರು ರಕ್ಷಣೆ ಮಾಡಬೇಕೋ ಗೊತ್ತಿಲ್ಲ. 1965-66 ರಲ್ಲಿ ಒಂದು ತಿಂಗಳಿಗೆ ಒಂದು ಬಸ್ಸಿಗೆ 254 ರೂಪಾಯಿ ಆದಾಯ ಬರುತ್ತಾ ಇತ್ತು, ಈಗ 183 ರೂಪಾಯಿ ಬರುತ್ತಿದೆ. ನಾನು ಅವರನ್ನು ಕೇಳುತ್ತೇನೆ ಒಬ್ಬ ಸೈಕಲ್ ಷಾಪ್ ಇಟ್ಟುಕೊಂಡಿರುವವನು ತಿಂಗಳಿಗೆ 200 ರೂಪಾಯಿ ಆದಾಯ ಮಾಡುತ್ತಾನೆ. ಅದೇ ರೀತಿ ಒಬ್ಬ ಜಟಕಾವಾಲ 500 ರೂಪಾಯಿ ಗಾಡಿ 300 ರೂಪಾಯಿ ಸಾಯುವ ಕುದುರೆ ಇಟ್ಟುಕೊಂಡು ಒಂದು ತಿಂಗಳಿಗೆ 300 ರೂಪಾಯಿ ಸಂಪಾದನೆ ಮಾಡುತ್ತಾನೆ. 80 ಸಾವಿರ 90 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಬಸ್ಸಿನಿಂದ 183 ರೂಪಾಯಿ ಒಂದು ತಿಂಗಳಿಗೆ ಆದಾಯ ಮಾಡುತ್ತಾರೆ ಎಂದರೆ ಬಹುಶಃ ಯಾರು ಕಾಪಾಡಬೇಕೆನ್ನುವುದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಟ್ರಾನ್ಸ್‌ಪೋರ್ಟ್ ಮಿನಿಸ್ಟರು ಇದ್ದಾರೆ ಅವರು ಇದಕ್ಕೆ ಉತ್ತರ ಹೇಳಬೇಕು. ಇವತ್ತು ಸೆಕ್ಯೂರ್ಡ್ ಡೆಟ್ಸ್ ಮೇಲೆ ಬೇರೆ ಕಡೆ 12 ಪರ್ಸೆಂಟ್ ಬಡ್ಡಿ ಕೊಡುತ್ತಾರೆ ಅನ್‌ಸೆಕ್ಯೂರ್ಡ್ ಡೆಟ್ಸ್ ಮೇಲೆ 18 ಪರ್ಸೆಂಟ್ ಕೊಡುತ್ತಾರೆ, ತಾವು 22 ಕೋಟಿ ರೂಪಾಯಿ ಬಂಡವಾಳ ಹಾಕಿದ್ದೀರಿ. ಸೆಕ್ಯೂರ್ಡ್ ಡೆಟ್ಸ್ ಅಷ್ಟು ಇದ್ದಿದ್ದರೆ ಎಷ್ಟು ಬಡ್ಡಿ ಬರುತ್ತಾ ಇತ್ತು ? ಇವತ್ತು ಜನಗಳಿಗೆ ತೊಂದರೆಯಾಗುತ್ತಾ ಇರುವಂತಹ ಕಾಲದಲ್ಲಿ ಪ್ರಾಜೆಕ್ಟುಗಳಿಗೆ ಹಣವನ್ನು ಹಾಕುವುದಕ್ಕೆ ಬದಲಾಗಿ ಇಂತಹ ಕಾರ್ಯಗಳಿಗೆ ಹಾಕಿ ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಹಣವನ್ನು ಕಳೆದುಕೊಳ್ಳುತ್ತಾ ಇದ್ದೀರಲ್ಲಾ ಇದು 'at the cost of whom' ಎಂದು ಕೇಳುತ್ತಾ ಇದ್ದೇನೆ. ಇದು ಒಂದು ದೊಡ್ಡ ಹಿಪೋಕ್ರೆಸಿ ಎಂದು ಹೇಳಬೇಕಾಗುತ್ತದೆ. ನೇರವಾದ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಗಾಂಧೀಜಿಯವರ ಹೆಸರಿಗೆ ಮಸಿ ಬಳಿಯತಕ್ಕ ರೀತಿಯಲ್ಲಿ ಪ್ರೊಹಿಬಿಷನ್ನನ್ನು ಸ್ಕ್ರಾಪ್ ಮಾಡಿದಿರಿ, ಅಂತಹ ಒಂದು ಘನತರವಾದ ತತ್ವವನ್ನು ಗಾಳಿಗೆ ತೂರತಕ್ಕ ಕಾಲದಲ್ಲಿ ಮೈಸೂರು ಸಂಸ್ಥಾನದ ಯಾವ ಮೂಲೆಯಲ್ಲಿ ಹೋಗಲಿ, ಯಾವ ಬಸ್‌ನಲ್ಲಿ ಹೋಗಲಿ ಯಾವ ಒಬ್ಬ ಮನುಷ್ಯನೇ ಆಗಲಿ ಒಂದು ಒಳ್ಳೆಯ ಅಭಿಪ್ರಾಯವನ್ನು ಇವರ ವಿಚಾರದಲ್ಲಿ ವ್ಯಕ್ತಪಡಿಸುವುದಿಲ್ಲ. ರಾಜ್ಯದ ಹಣವನ್ನು ಇದರಲ್ಲಿ ಹಾಕಿ ಸಂತೋಷವಿಲ್ಲದಂತಹ ವ್ಯವಹಾರವನ್ನು ಮಾಡಿದ್ದೀರಿ. ಇದನ್ನು ಏಕೆ ಹೇಳಬೇಕಾಯಿತು ಎಂದರೆ ನಮ್ಮ ಸರ್ಕಾರದಲ್ಲಿ ಅಥವಾ ನಮ್ಮ ಮಂತ್ರಿಗಳಿಗೆ ಇದು ತಿಳಿಯಬೇಕು, ಅವರ ಸ್ವಂತ ಬೇಳೆ ಬೇಯಿಸುವುದಕ್ಕೆ ಅಲ್ಲ ಅವರು ಇರುವುದು. ಸ್ವಾಮಿ, ಒಬ್ಬ 18-9-1957 ರಿಂದ 28-9-1958 ರವರೆಗೆ ಟ್ರೈನಿ ಆಗಿ 150 ರೂಪಾಯಿ ಕೊಡತಕ್ಕ ಸ್ಟೈಪೆಂಡ್ ಮೇಲೆ ಕೆಲಸ ಮಾಡಿದ, ಅಲ್ಲಿಂದ ಅವನನ್ನು ಡಿಸಬ್ಯಾಂಡ್ ಮಾಡಿದರು. 29-9-1958 ರಲ್ಲಿ ಅಸಿಸ್ಟೆಂಟ್ ವರ್ಕ್ಸ್ ಸೂಪರಿಂಟೆಂಡೆಂಟ್

(ಶ್ರೀ ಎಚ್. ಎನ್. ನಂಜೇಗೌಡ)

ಅಂತ 175 ರೂಪಾಯಿನಿಂದ 375 ರೂಪಾಯಿನ ಗ್ರೇಡಿನಲ್ಲಿ ಅವನನ್ನು ಅಪಾಯಿಂಟ್ ಮಾಡಿ ಕೊಂಡರು. ಇದನ್ನು ಅವರು ಚಾಲೆಂಜ್ ಮಾಡುವುದಿದ್ದರೆ ಮಾಡಲಿ.

ತಾರೀಖು 1-2-1963ರಲ್ಲಿ ಆತ ಸ್ಕೇಲು ರೂಪಾಯಿ 175-325 ರಲ್ಲಿ ಡಿಪೋ ಮೇನೇಜ ರಾಗಿದ್ದ. ಅದೇ ಮನುಷ್ಯ ತಾರೀಖು 2-2-1963ರಲ್ಲಿ ಪ್ರಮೋಟೆಡ್ ಟು ರುಪೀಸ್ 265 ಅಸ್ ಬೇಸಿಕ್ ಪೇ ಅಸ್ ಕ್ಲಾಸ್ ಟೂ ಆಫೀಸರ್. ಆದರೆ ಈಗ ಸಭೆಯಲ್ಲಿ ಶ್ರೀಮಾನ್ ಡಿ. ದೇವರಾಜ ಅರಸರಿಲ್ಲ, ಅವರಿದ್ದರೆ ಬಹುಶಃ ಅವರು ಇದಕ್ಕೆ ಉತ್ತರ ಕೊಡಬೇಕಾಗುತ್ತಿತ್ತೋ ಏನೋ? ಆ ಒಬ್ಬ ವ್ಯಕ್ತಿ ಕೇವಲ ಒಂದೇ ಒಂದು ದಿನದಲ್ಲಿ Class II ಅಧಿಕಾರಿಯಾಗಿಬಿಟ್ಟ. ಆತ ತಾರೀಖು 1-2-1963ರಲ್ಲಿ 175ರ ಗ್ರೇಡಿನಲ್ಲಿದ್ದವನು ಮಾರನೆ ದಿನ ಒಂದೇ ದಿನದಲ್ಲಿ ಅಂದರೆ ತಾರೀಖು 2-2-1963ರಲ್ಲಿ ಕ್ಲಾಸ್ ಟೂ ಆಫೀಸರಾಗಿ 265 ರೂಪಾಯಿ ಸಂಬಳಕ್ಕೆ ಬಂದ. ಅದೇ ವ್ಯಕ್ತಿಯನ್ನು ಮತ್ತೆ ತಾರೀಖು 4-11-1963ಕ್ಕೆ ಮತ್ತೆ ಕ್ಲಾಸ್ ಒನ್ ಗ್ರೇಡ್ ಒನ್ ಆಫೀಸರಾಗಿ ನೇಮಕ ಮಾಡಿದ್ದಾರೆ. 550 ರೂಪಾಯಿ ಬೇಸಿಕ್ ಸಂಬಳವನ್ನು ಕೊಟ್ಟಿದ್ದಾರೆ ಕ್ಲಾಸ್ ಒನ್ ಆಫೀಸರಾಗಿ ಪ್ರಮೋಷನ್ನೂ ಮಾಡಿದ್ದಾರೆ. ಅದೇ ವ್ಯಕ್ತಿಗೆ ಮತ್ತೆ ತಾರೀಖು 25-9-1968 ರಲ್ಲಿ ಪ್ರಮೋಷನ್ ಕೊಟ್ಟು ಒಂದು ಅಡಿಷನಲ್ ಛಾರ್ಜ್ ಎಂದು ಹೇಳಿ 720 ರೂಪಾಯಿಗಳ ಸಂಬಳವನ್ನು ಫಿಕ್ಸ್ ಮಾಡಿದ್ದಾರೆ. ಇದು ಅವರ ಬೇಸಿಕ್ ಸ್ಯಾಲರಿ. ಈ ಗ್ರೇಡ್ ಸಿಕ್ಕಿದ ಒಂದು ದಿನದ ತರುವಾಯ ಅಂದರೆ 24 ಗಂಟೆಗಳು ಮುಗಿಯುತ್ತಿದ್ದಂತೆ ಅಂದರೆ ತಾರೀಖು 26-9-1968ರಲ್ಲಿ ಅದೇ ವ್ಯಕ್ತಿಗೆ 1600—2000 ರೂಪಾಯಿಗಳ ಗ್ರೇಡನ್ನು ಕೊಟ್ಟು ಆತನನ್ನು 1600 ರೂಪಾಯಿ ಸಂಬಳದಲ್ಲಿ ಫಿಕ್ಸ್ ಮಾಡಿದ್ದಾರೆ. ಈ ಸಂಬಳ ಪಡೆಯುವುದಕ್ಕೆ ಒಂದು ದಿನದ ಹಿಂದೆ ಆತ 720 ರೂಪಾಯಿ ಸಂಬಳ ಪಡೆಯುತ್ತಿದ್ದ. ಆ ಮಾರನೇ ದಿನ ಅಂದರೆ ಒಂದು ದಿನದ ವ್ಯತ್ಯಾಸದಲ್ಲಿ 1600 ರೂಪಾಯಿ ಸಂಬಳಕ್ಕೇರಿದ್ದಾನೆ. ಆತನನ್ನು ಚೀಫ್ ಮೆಕ್ಯಾನಿಕಲ್ ಆಫೀಸರು ಎಂದು ನೇಮಕ ಮಾಡಿದ್ದಾರೆ. ಇದು ತೀರಾ ಅಧರ್ಮವಾದದ್ದು, ಕಾನೂನುಬಾಹಿರವಾದದ್ದು ಮಾತ್ರವಲ್ಲದೆ ನೀತಿಬಾಹಿರವಾದದ್ದೂ ಹೌದು. ಜೊತೆಗೆ ಸ್ವಜನ ಪಕ್ಷಪಾತ ಬೇರೆ ಇದ್ದಿದ್ದೇ. ಮಾನ್ಯ ಮಂತ್ರಿಗಳು ಇಲ್ಲಿ ಇದ್ದಾರೆ—ಅವರು ಹೇಳಿಬಿಡಲಿ ಶ್ರೀಮಾನ್ ನಿಜಲಿಂಗಪ್ಪನವರು ಹಾಗೆ ಆತನಿಗೆ ಅನುಕೂಲವಾಡದಿದ್ದರೆ ಇಲ್ಲಿಂದ ಮಂತ್ರಿಪದವಿಯಿಂದ ಕಿತ್ತುಹಾಕುತ್ತಾರೆಂದು ಹೇಳಿದ್ದರಿಂದ ನನಗೆ ಹೆದರಿಕೆ ಉಂಟಾಗಿ ನಾನು ಹಾಗೆ ಮಾಡಿದ್ದೇನೆಂದು ಇವರು ಒಪ್ಪಿಕೊಂಡರೆ ಅದರ ಬಗ್ಗೆ ನನ್ನ ವಾದವಿಲ್ಲ ನಾನು ಇವನ್ನು ಇಷ್ಟಕ್ಕೇ ಕೈಬಿಡುತ್ತೇನೆ. ಹೀಗೆ ಆಡಳಿತ ನಡೆಯುತ್ತಿದ್ದರೆ ದೇಶ ಇನ್ನೆಲ್ಲಿ ಉಳಿಯುತ್ತದೆ? ಕೆಲಸಕಾರ್ಯಗಳು ದಕ್ಷತೆಯಿಂದ ನಡೆಯಬೇಕೆಂದರೆ ಹೇಗೆ ಸಾಧ್ಯ? ಈ ಇಲಾಖೆಗಳನ್ನು ಇಟ್ಟುಕೊಳ್ಳುವುದು ಇದಕ್ಕೇನೇನು? ಸರ್ಕಾರದವರ ಉದ್ದೇಶ ಕೇವಲ ಇಂಥಾ ಪಕ್ಷಪಾತಗಳ ಕೆಲಸ ಮಾಡುವುದಕ್ಕೇ ಇಲಾಖೆಗಳು ಇರುತ್ತವೆನ್ನುವುದಾದರೆ ಹೇಳಿಬಿಡಲಿ. ಇನ್ನು ಮಾನ್ಯ ಮಂತ್ರಿಗಳು ಅವರು ಒಬ್ಬರಿದ್ದರು ಅವರು ಮೂರು ಕಾರುಗಳನ್ನು ಉಪಯೋಗಮಾಡುತ್ತಿದ್ದಾರೆ. ಅವರಲ್ಲಿ ಸ್ಟೇಟ್ ಕಾರು ಒಂದಿದೆ. ಟ್ರಾನ್ಸ್‌ಪೋರ್ಟ್ ಇಲಾಖೆಯ ಕಾರು ಒಂದಿದೆ. ಇನ್ನೂ ಒಂದು ಹೀಗೆ ಮೂರು ಕಾರುಗಳನ್ನು ಒಬ್ಬರು ಉಪಯೋಗ ಮಾಡಬಹುದೇ?

Sri MOHAMED ALI.—I am using the Transport car also as per rules.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಮಾನ್ಯ ಮಂತ್ರಿಗಳು 3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಎರಡು ರಿಪೋರ್ಟುಗಳನ್ನು ತಯಾರು ಮಾಡಿಸಿದ್ದಾರೆ. ಅವುಗಳನ್ನು ಇಂಪ್ಲಿಮೆಂಟ್ ಮಾಡತಕ್ಕ ಆವಶ್ಯಕತೆ ಇಲ್ಲದಿದ್ದರೆ ಅಷ್ಟು ಹಣವನ್ನು ವೇಸ್ಟ್‌ಮಾಡಿ ಆ ವರದಿಗಳನ್ನು ಏಕೆ ತಯಾರಿಸ ಬೇಕಾಗಿತ್ತು? ನಾನು ಇಷ್ಟು ವಿಚಾರವನ್ನು ಈ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಹೇಳಿ ಇನ್ನು ನನಗೆ ಕೇವಲ ಮಿತ್ರರೂ ಆಪ್ತರೂ ಆದ ಶ್ರೀ ವಿಠಲದಾಸ ಶೆಟ್ಟರ ಆಡಳಿತದಲ್ಲಿರುವ ಆಹಾರ ಸರಬರಾಜು ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀಮಾನ್ ವಿಟ್ಠಲದಾಸ ಶೆಟ್ಟರೆಂದರೆ ನುಡಿದಂತೆ ನಡೆಯತಕ್ಕ ಧೀರರವರು. ಆದರೆ ಅದೇಕೋ ಇತ್ತೀಚೆಗೆ ಅವರು ಅವರ ಆ ಧೀರತ್ವವನ್ನು ಸ್ವಲ್ಪ ಪೋಸ್ಟ್‌ಪೋನ್ ಮಾಡಿರುವಂತೆ ಕಂಡು ಬರುತ್ತಿದೆ. ಅವರು ಅಂಥದಕ್ಕೆ ಒಪ್ಪತಕ್ಕವರಲ್ಲ. ಒಂದು ವೇಳೆ ತಮಗೆ ಅಲ್ಲಿ ಸ್ಥಾನ ಸಿಕ್ಕದಿದ್ದರೂ ತಮ್ಮ ಮಾತನ್ನು ಅವರು ಎಂದಿಗೂ ಕಳೆದುಕೊಳ್ಳತಕ್ಕವರಲ್ಲ. ಅವರು ಹಿಂದೆ ಮಂತ್ರಿಗಳಾಗದಿದ್ದಾಗ ಅವರು ಸಾಮಾನ್ಯ ಸದಸ್ಯರಿದ್ದಾಗ ಏನು ಈ ಆಹಾರ ಸರಬರಾಯಿ ಮತ್ತು ಲೆವಿ ವಿಷಯದಲ್ಲಿ

ಹೇಳಿದ್ದಾರೆಂಬುದು ಕೇವಲ ನಾಲ್ಕೇ ಲೈನಿದೆ ಅದನ್ನು ಓದಿಕೇಳುತ್ತೇನೆ. ಅವರು ಭಾಷಣ ಮಾಡಿದ್ದು: ತಾ: 10-4-1968ರಲ್ಲಿ ಅವರ ಭಾಷಣದ ಸಾರಾಂಶ ಹೀಗಿದೆ :—

"ಸರ್ಕಾರದವರು ಈ ದಿವಸ ರೈತರಿಂದ ಆತನು ಬೆಳೆದ ಭತ್ತದಲ್ಲಿ ಕ್ವಿಂಟಾಲಿಗೆ 45 ರೂಪಾಯಿಗಳಂತೆ ಲೆವಿ ವಸೂಲ್ಮಾಡುತ್ತಿದ್ದಾರೆ. ಅದು ಸರ್ವಥಾ ಸರಿಯಾದುದಲ್ಲ. ಹಳ್ಳಿಯವರಿಂದ ಭತ್ತವನ್ನು ಕಿತ್ತುಕೊಂಡರೂ ಅವರಿಗೆ ಅನ್ನಕೊಡತಕ್ಕ ನೀತಿ ಈ ಸರ್ಕಾರದಲ್ಲಿಲ್ಲ. ಅದ್ದರಿಂದ ಸರ್ಕಾರದವರು ಭತ್ತಬೇಕಾಗಿದ್ದರೆ ಇನ್ನು ಮುಂದೆ ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳಲಿ. ಈ ಲೆವಿಯನ್ನು ಕೂಡಲೆ ನಿಲ್ಲಿಸಬೇಕು"

ಎಂದು ಹೇಳಿದ್ದಾರೆ. ಆ ದಿವಸ ಹಾಗೆ ಭಾಷಣ ಮಾಡಿದ್ದ ಮಾನ್ಯ ಸದಸ್ಯರೇ ಈ ದಿವಸ ಮಂತ್ರಿಗಳಾಗಿದ್ದಾರೆ. ಅವರು ನುಡಿದಂತೆ ನಡೆಯತಕ್ಕ ಧೀರರು, ನೀತಿವಂತರು. ಅವರು ನುಡಿದುದನ್ನು ಇಷ್ಟು ಬೇಗ ಮರೆಯಬಾರದು, ಅವರು ಮರೆಯತಕ್ಕವರೂ ಅಲ್ಲ. ಈ ಕೂಡಲೆ ಅವರು ಅವರ ತತ್ವನಿಷ್ಠೆಯೇನಿದೆ ಅದರಂತೆ ಭತ್ತವನ್ನು ಓಪನ್ ಮಾರುಕಟ್ಟೆಯಲ್ಲಿ ಕೊಳ್ಳಬೇಕು ಲೆವಿ ಪದ್ಧತಿಯನ್ನು ಕೂಡಲೆ ಮನ್ನಾಮಾಡಬೇಕು. ಹಾಗೆ ಅದನ್ನು ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಮಂತ್ರಿಸ್ಥಾನವನ್ನು ಬಿಟ್ಟು ಹೊರಗಡೆಗೆ ಬಂದು ಅವರ ಕೀರ್ತಿ ಘನತೆಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಒಂದೆರೆಡು ಮಾತುಗಳನ್ನು ಹೇಳ ಬಯಸುತ್ತೇನೆ.

ನಾನು ಮೊಟ್ಟಮೊದಲನೆಯದಾಗಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ವಿಚಾರವಾಗಿ ಒಂದೆರೆಡು ಮಾತುಗಳನ್ನಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಸರ್ಕಾರದವರು ಕೆಲವು ಕಡೆ ಏರಿಯಾ ನ್ಯಾಷನಲೈಜ್ ಮಾಡಿದ್ದಾರೆ ಇನ್ನು ಕೆಲವು ಕಡೆ ರೋಡುಗಳನ್ನು ನ್ಯಾಷನಲೈಜ್ ಮಾಡಿಕೊಂಡಿದ್ದಾರೆ. ಆದರೆ ಮುಂಬೈ ಮತ್ತು ಹೈದ್ರಾಬಾದ್ ಕರ್ಣಾಟಕ ಏರಿಯಾದಲ್ಲಿ ಟ್ರಾನ್ಸ್‌ಪೋರ್ಟ್ ಇಲಾಖೆಯವರು ಏರಿಯಾ ನ್ಯಾಷನಲೈಜ್ ಮಾಡಿದ್ದಾರೆ. ಆದರೆ ಅಲ್ಲಿ ಪ್ರಯಾಣೀಕರ ಬೇಡಿಕೆಗೆ ತಕ್ಕಹಾಗೆ ಸರ್ಕಾರಿ ಬಸ್ಸುಗಳನ್ನು ಹಾಕುತ್ತಿಲ್ಲ. ಇಲ್ಲವೇ ಖಾಸಗೀ ಜನಕ್ಕಾದರೂ ಅವಕಾಶ ಕೊಡಬೇಕು, ಅದನ್ನೂ ಕೂಡ ಮಾಡುತ್ತಿಲ್ಲ. ಬಿಜಾಪುರಕ್ಕೆ ಸುಮಾರು 126 ಬಸ್ಸುಗಳನ್ನು ಹಾಕಿದ್ದಾರೆ. ಅದೇ ದೃಷ್ಟಿಯಿಂದ ನಮ್ಮ ಪ್ರದೇಶವನ್ನು ನೋಡುತ್ತಿಲ್ಲ, ಹೀಗೆ ಇದರಲ್ಲಿ ತಾರತಮ್ಯ ಬಹಳವಾಗುತ್ತಿದೆ. ಈ ದಿವಸ ಬಹಳ ಮಟ್ಟಿಗೆ ಪ್ರಯಾಣಿಕರೆಲ್ಲಾ ಬಸ್‌ಮೈಂಡೆಡ್ ಆಗಿದ್ದಾರೆ. ಹಾಗಿರುವಾಗ ಸರ್ಕಾರದವರು ಹಿಂದಿನಹಾಗೆ ಅನುಕರಣ ಮಾಡುತ್ತಾ ಹೋಗುವುದು ಸರಿಯಲ್ಲ. ಸರ್ಕಾರದವರು ಎಲ್ಲಾ ರೂಟುಗಳನ್ನೂ ನ್ಯಾಷನಲೈಜ್ ಮಾಡುವುದಕ್ಕೆ ಮುನ್ನ ತಮ್ಮಲ್ಲಿ ಶಕ್ತಿ ಎಷ್ಟಿದೆ ಎಂಬುದನ್ನು ಮೊದಲು ನೋಡಿಕೊಳ್ಳಬೇಕು. ಆ ಶಕ್ತಿಗೆ ತಕ್ಕಂತೆ ಹಣವನ್ನು ಬಜೆಟ್‌ನಲ್ಲಿ ಒದಗಿಸಿಕೊಳ್ಳಬೇಕು. ಸರ್ಕಾರದವರು ಈ ದಿವಸ ರಸ್ತೆಮೇಲೆ ಎಷ್ಟು ಹಣವನ್ನು ಹಾಕಬೇಕು ಬಸ್ಸುಗಳ ಮೇಲೆ ಎಷ್ಟು ಹಣವನ್ನು ಹಾಕಬೇಕು ಅನ್ನುವುದನ್ನೆಲ್ಲಾ ಸರಿಯಾಗಿ ಅನಲೈಜ್ ಮಾಡಿಕೊಂಡು ರಾಷ್ಟ್ರೀಕರಣ ಮಾಡಬೇಕು. ಅವರು ಯಾವತ್ತೂ ತಮ್ಮ ಶಕ್ತಿಗೆ ಮೀರಿ ನ್ಯಾಷನಲೈಜ್ ಮಾಡಿಕೊಳ್ಳಬಾರದು. ನಮ್ಮಲ್ಲಿ ಈ ದಿವಸ 8—10 ರೂಟ್‌ಗಳಲ್ಲಿ ಅಪರೇಟ್ ಮಾಡುತ್ತಿದ್ದರೂ ಅಲ್ಲಿ ಸ್ಪೇರ್ ಬಸ್ಸುಗಳಿಲ್ಲ. ಇದರಿಂದ ಎಸ್. ಟಿ. ಸರ್ವೀಸಿಗೆ ಕೆಟ್ಟ ಹೆಸರು ಬರುತ್ತಿದೆ. ಲಾಭ ಬಂದರೂ ಒಳ್ಳೇ ಹೆಸರಿಲ್ಲ. ಇದಕ್ಕೆ ಜನರ ಹಿತವನ್ನು ರಕ್ಷಣೆ ಮಾಡುತ್ತಿಲ್ಲ ಅನ್ನುವುದೇ ಕಾರಣ. ಇನ್ನು ಮುಂದಕ್ಕಾದರೂ ಜನರ ಹಿತಾಸಕ್ತಿಯನ್ನು ಅಲ್ಲಗಳೆದುದೇ ಆದರೆ ಈ ಇಲಾಖೆಗೆ ಇನ್ನೂ ಹೆಚ್ಚಿನ ಕೆಟ್ಟ ಹೆಸರು ತಪ್ಪಿದ್ದಲ್ಲ. ಸ್ಪೇರ್ ಬಸ್ಸುಗಳಿಲ್ಲ ಅನ್ನುವುದರ ಜೊತೆಗೆ ಸ್ಪೇರ್ ಪಾರ್ಟ್‌ಗಳೂ ಸಿಕ್ಕುತ್ತಿಲ್ಲ. ಒಂದೊಂದು ಡಿಪೋದಲ್ಲೂ ಸಾಕಷ್ಟು ಸ್ಪೇರ್‌ಪಾರ್ಟ್‌ಗಳನ್ನು ಇಟ್ಟಿರಬೇಕು. ಅವು ಇಲ್ಲದಿರುವ ಕಾರಣದಿಂದ ರೂಟ್‌ಗಳಲ್ಲಿ ಅಲ್ಲಲ್ಲೇ ಕೆಟ್ಟು ನಿಂತು ಹೋದ ಬಸ್ಸುಗಳು ದಿನಗಟ್ಟಲೇ ಅಲ್ಲೇ ಉಳಿದಿರುತ್ತವೆ. ಪ್ರಗತಿ ಹೆಚ್ಚಿನಮಟ್ಟದಲ್ಲಿ ಸಾಧನೆಯಾಗಿಲ್ಲ. ಅಧಿಕಾರ ಬೇರೆ ಕೇಂದ್ರಿಕೃತವಾಗುತ್ತಿದೆ.

3-00 P.M.

ಅದಕಾರಣ ಪ್ರತಿಯೊಂದು ಡಿವಿಷನ್ನಿನಲ್ಲಿ ಅವರಿಗೆ ಬೇಕಾದಂಥ ಸ್ಪೇರ್‌ಪಾರ್ಟ್ಸ್‌ನ್ನು ಒದಗಿಸಿಕೊಡುವ ವ್ಯವಸ್ಥೆಮಾಡಬೇಕು. ಈಗ ಆ ಏರಿಯಾಗಳಲ್ಲಿ ಏನು ಮಾಡುತ್ತಿದ್ದಾರೆ ಎಂದರೆ, ಎಲ್ಲಿ ನ್ಯಾಷನಲೈಜೇಷನ್ ಆದರೂ ಕೂಡ ಖಾಸಗಿಯವರು ಲಗ್ಜುರಿ ಬಸ್ ಎಂದು ಓಡಿಸುತ್ತಿದ್ದಾರೆ.

(ಶ್ರೀ ಎಸ್. ಎಂ. ಗುರೆಡ್ಡಿ)

ಪ್ರವಾಸಿಗಳ ಅನುಕೂಲಕ್ಕೋಸ್ಕರವಾಗಿ ಈ ವ್ಯವಸ್ಥೆಯನ್ನು ಸರಕಾರದವರೇ ತಮ್ಮ ಇಲಾಖೆಯಿಂದ ಮಾಡಬೇಕಾಗಿತ್ತು. ಈಗ ತಾವು ಖಾಸಗಿಯವರಿಗೆ ಕೊಡುತ್ತಿದ್ದೀರಿ. ಅವರು ಅದನ್ನು ಮಿಸ್‌ಯೂಸ್ ಮಾಡುತ್ತಿದ್ದಾರೆ. ತಾವು ಸ್ವಲ್ಪ ಚೆಕ್ ಮಾಡಿ ಈ ದೇಶದಲ್ಲಿ ಏನಾದರೂ ತಾವು ಕೊಟ್ಟಂಥ ಪರ್ಮಿಟ್ಟನ್ನು ದುರುಪಯೋಗ ಮಾಡುತ್ತಿದ್ದವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಸಾಕಷ್ಟು ಜನರು ಈ ಸಾರಿಯೂ ಹೋದ ಸಾರಿಯೂ ಮಾತನಾಡಿ, ನೀವು ರಾಷ್ಟ್ರೀಕರಣ ಕೈಬಿಡಿ ಎಂದು ಹೇಳುತ್ತಿದ್ದಾರೆ. ಇಂತಹ ಮನೋವೃತ್ತಿ ಸರಿಯಾದುದಲ್ಲ. ಯಾರಾದರೂ ತಪ್ಪು ಮಾಡಿದರೆ ಆ ತಪ್ಪನ್ನೇ ಮುಂದಿಟ್ಟುಕೊಂಡು ನ್ಯಾಷನಲೈಜೇಷನ್ನನ್ನು ಕೈಬಿಡುವುದರಿಂದ ನಮ್ಮ ಪ್ರಗತಿ ಕುಂಠಿತವಾಗುತ್ತದೆ. ರಾಷ್ಟ್ರೀಕರಣ ಮಾಡುವುದು ಸರಿಯಾದ ಮಾರ್ಗ. ಇದರಲ್ಲಿ ಹಿಂದೆ ಹೋಗಬಾರದು. ಇವತ್ತು ತಮ್ಮ ಮೇಲೆ ನೂರಾರು ಪ್ರೆಷರ್ಸ್ ಬರಬಹುದು. ತಾವು ನ್ಯಾಷನಲೈಜ್ ಮಾಡುವಂಥ ರೂಟಿನಲ್ಲಿ ಖಾಸಗೀಯವರಿಗೆ ಪರ್ಮಿಟ್ ಕೊಟ್ಟರೆ ಅವರು ನಮ್ಮ ಮೇಲೆ ಕಾಂಪಿಟಿಷನ್ ಮಾಡುತ್ತಾರೆ. ಜನರಿಗೆ ಹೆಚ್ಚಿನ ಸೌಕರ್ಯವನ್ನು ಕೊಡುವುದರಲ್ಲಿ ಖಾಸಗಿಯವರು ಮುಂದೆ ಮುಂದೆ ಹೋಗಿದ್ದಾರೆ. ಅವರು ಬಸ್ಸುಗಳನ್ನು ಚನ್ನಾಗಿ ಓಡಿಸುತ್ತಾರೆ. ತಾವು ಅವರ ಹಾಗೆ ಧೈರ್ಯತೆಗೆದುಕೊಂಡು ಓಡಿಸುತ್ತಾ ಇಲ್ಲ. ನಮ್ಮ ಬಸ್ಸುಗಳನ್ನು ಓಡಿಸುವಂಥ ರೀತಿ ನೋಡಿದರೆ ಅವು ಕೆಟ್ಟುಹೋಗುವುದಕ್ಕೆ ಅವಕಾಶವಾಗಿದೆ. ಕೇವಲ ಖಾಸಗೀಯವರು ಓಡಿಸುವಂಥ ಬಸ್ಸು ರೂಟುಗಳನ್ನು ನೋಡಿದರೆ, ಅವರು ಯಾವ ರೀತಿ ಲಾಭ ಪಡೆಯುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಹಂತಹಂತವಾಗಿ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಕರಣ ಮಾಡಬೇಕು.

ಅದರ ಜೊತೆಗೆ ಈ ಟೂರಿಸ್ಟ್ ವಿಷಯವಾಗಿ ನಾನು ಹೇಳಬೇಕಾಗಿದೆ. ಈಗ ಮೈಸೂರು ರಾಜ್ಯದಲ್ಲಿ ಕೆಲವು ಟೂರಿಸ್ಟ್ ಸೆಂಟರುಗಳಿವೆ. ಆದರೆ ನಾವು ಈಗ ಬಡ್ಜೆಟ್ ನೋಡಿದರೆ, ಟೂರಿಜಂನ್ನು ಡೆವಲಪ್‌ಮಾಡುವುದಕ್ಕೆ ಹೊರಟಿದ್ದಾರೆ, ಈಗ ಆಫೀಸಿನೊಳಗೆ ಆಫೀಸರ ಪಗಾರವನ್ನು ಕೊಡುವುದಕ್ಕೋಸ್ಕರ ಬಡ್ಜೆಟ್ ಇದೆ.

Sri MOHAMED ALI.—The demand in respect of Tourism has been voted this morning, Sir.

Mr. SPEAKER.—Yes, that demand is over.

ಶ್ರೀ ಎಚ್. ಎನ್. ನಂಜೇಗೌಡ.—ಈ ಡಿಮ್ಯಾಂಡಿನ ಬಗ್ಗೆ ಮಂತ್ರಿಗಳು ಉತ್ತರ ಕೊಡುವಾಗ ಸರಿಯಾಗಿ ಕೊಟ್ಟಿದ್ದರೆ, ಒಳ್ಳೆಯದಾಗುತ್ತಿತ್ತು.

Sri C. K. RAJAIAH SHETTY.—This time the classification is very bad, Sir. All of us felt a sort of confusion.

ಶ್ರೀ ಎಸ್. ಎಂ. ಗುರಡ್ಡಿ.—ನಾನು ಟೂರಿಜಂ ವಿಷಯವಾಗಿ ಹೇಳುತ್ತಾ ಇಲ್ಲ. ಟೂರಿಜಂನಲ್ಲಿ ಇವನ್ನು ಸೇರಿಸಿಕೊಳ್ಳಬೇಕು. ಈಗ ತಾವೇ ಈ ಪೋರ್ಟ್‌ಫೋಲಿಯೊ ಡೀಲ್ ಮಾಡುತ್ತಿದ್ದೀರಿ. ಟೂರಿಸ್ಟ್ ಸೆಂಟರ್ಸ್ ಎಷ್ಟು ಇವೆ, ಯಾವ್ಯಾವ ಸೌಕರ್ಯವನ್ನು ಒದಗಿಸಿದ್ದೀರಿ ಎಂದು ನಾನು ಹೇಳುತ್ತೇನೆ. ತಾವು ಯಾವ್ಯಾವ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದೀರಿ ಎಂಬುದನ್ನು ತಾವೇ ವಿಚಾರಮಾಡಬೇಕು. ತಾವೇ ಹೇಳಿದಹಾಗೆ ನ್ಯಾಷನಲೈಜೇಷನ್ ಆಫ್ ರೂಟ್ಸ್‌ನಲ್ಲಿ ಒಂದು ಕರಾರು ಆಗಿದೆ. ಕೆಲವು ರೂಟುಗಳನ್ನು ಆ ಪೀರಿಯಡ್ ಮುಗಿಯುವುದರೊಳಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವು ಎಷ್ಟೋ ನ್ಯಾಷನಲೈಜ್ ಆದಂಥ ರೂಟಿನಲ್ಲಿ ನಿಮ್ಮ ಖಾಸಗಿಯವರಿಗೆ ಪರ್ಮಿಟ್ ಕೊಟ್ಟಿದ್ದೀರಿ ಎಂಬುದಾಗಿ ತಿಳಿದುಬಂದಿದೆ. ಅದನ್ನು ತಾವು ಚೆಕ್‌ಮಾಡಬೇಕು.

ಇನ್ನು ಆಹಾರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಸಚಿವರು ಹೇಳಿದ ಹಾಗೆ ಎಲ್ಲಾ ಕಡೆಯೂ ಸರಿಯಾದಂಥ ಚೆಕ್‌ಪೋಸ್ಟ್‌ಗಳನ್ನು ಇಟ್ಟಿದ್ದಾರೆ. ಎಲ್ಲೆಲ್ಲಿ ಸ್ಕ್ವಾಡ್ಸ್ ಇಟ್ಟಿದ್ದಾರೋ ಅಲ್ಲೆಲ್ಲಾ ಸರಿಯಾಗಿ ಕೆಲಸಮಾಡುತ್ತಿದ್ದಾರೆಂದು ಕೇಳಿದ್ದೇನೆ. ಈ ಸ್ಕ್ವಾಡ್ಸ್ ಏನು ಮಾಡುತ್ತಿದ್ದಾರೆಂದರೆ, ನಿಜವಾಗಿ ಪ್ರಾಮಾಣಿಕತೆಯಿಂದ ನಡೆಯುವಂಥ ಜನರಿಗೆ ಹರಾಸ್‌ಮೆಂಟ್ ಮಾಡುತ್ತಿದ್ದಾರೆ. ಇದರಿಂದ ನಮ್ಮ ಪಾಲಿಸಿಯಲ್ಲಿಯೇ ದೋಷವಿದೆ ಯೆಂದು ನಾನು ತಿಳಿದುಕೊಂಡಿದ್ದೇನೆ. ನಾವು ಇವತ್ತು ಒಂದು ಡಿಕ್ಲರೇಷನ್ ಕೊಟ್ಟನಂತರ ಒಂದು ಏರಿಯಾದಿಂದ ಮತ್ತೊಂದು ಏರಿಯಾಕ್ಕೆ ಆಹಾರವನ್ನು ಸಾಗಿಸುವಾಗ ನೂರೆಂಟು ಅಡಚಣೆಗಳು ಬರುತ್ತಾ ಇವೆ. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಬೇಕಾದರೆ

ನಾವು ಇಂದು ಕಲೆಕ್ಟರ ಪರ್ಮಿಷನ್ ತೆಗೆದುಕೊಳ್ಳಬೇಕು. ಎಷ್ಟೋ ಜನ ರೈತರ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಕೋಟಿಕ್ಯಂತರ ರೂಪಾಯಿಗಳ ಸೇಲ್ಸ್‌ಟ್ಯಾಕ್ಸ್ ನಮಗೆ ತಪ್ಪಿ ಹೋಗುತ್ತಾ ಇದೆ. ನಿಮ್ಮ ಪಾಲಿಸಿ, ತತ್ವದ ಬಗ್ಗೆ ನಾನು ಹೇಳುವುದು ಇಷ್ಟೇ. ಅವರು ಎಫೆಕ್ಟಿವ್ ಆಗಿ ಕೆಲಸ ಮಾಡಬೇಕಾದರೆ, ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಹೋಗುವುದಕ್ಕೆ ಫ್ರೀಯಾಗಿ ಬಿಡಿ. ಆಗ ರೈತರಿಗೆ ಹರಾಸ್‌ಮೆಂಟ್ ಆಗುವುದಿಲ್ಲ ಮತ್ತು ವ್ಯಾಪರಸ್ಥರಿಗೂ ಹರಾಸ್‌ಮೆಂಟ್ ಆಗುವುದಿಲ್ಲ. ಬರತಕ್ಕ ಸೇಲ್ಸ್‌ಟ್ಯಾಕ್ಸ್ ಕೂಡ ಬರುತ್ತದೆ. ಈಗ ವ್ಯಾಪಾರಸ್ಥರು ಏನು ಮಾಡುತ್ತಾರೆಂದರೆ, ರೈತರ ಹೆಸರಿನಲ್ಲಿ ಸಾಗಿಸುವುದನ್ನು ಬಿಡುವುದಿಲ್ಲ, ಅದೇ ಸಮಯದಲ್ಲಿ ಸರ್ಕಾರಕ್ಕೆ ಬರುವ ಸೇಲ್ಸ್‌ಟ್ಯಾಕ್ಸ್ ಹೋಗುತ್ತದೆ. ಆದಕಾರಣ ಆಹಾರ ಸಚಿವರಿಗೆ ನಾನು ಹೇಳುವುದೇನೆಂದರೆ, ಡಿಸ್ಟ್ರಿಕ್ಟ್ ಬ್ಯಾನ್ಸನ್ನು ಸಂಪೂರ್ಣವಾಗಿ ತೆಗೆಯಬೇಕು. ಈಗ ಆಹಾರ ಪದಾರ್ಥಗಳು ಎಷ್ಟೋ ಮಹಾರಾಷ್ಟ್ರಕ್ಕೆ ಮತ್ತು ಕೇರಳಕ್ಕೆ ಹೋಗುತ್ತಿದೆ. ನಿಮ್ಮ ಸ್ಕ್ವಾಡುಗಳು ಹಾಕುವ ಕೇಸುಗಳು ಅದಕ್ಕೆ ಸಂಬಂಧಪಡುವುದಿಲ್ಲ. ಅವರು ಹಾಕುವ ಕೇಸುಗಳು ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟಿಗೆ ಹೋಗುವುದಕ್ಕೆ ಸಂಬಂಧಪಡುತ್ತವೆ. ಈಗ ಎಕ್ಸೈಜು ಹೋದನಂತರ ಪೋಲೀಸು ಇಲಾಖೆಗೆ ಇದೇ ಒಂದು ದೊಡ್ಡ ಸಂಪಾದನೆ ಮಾಡುವ ಮಾರ್ಗವಾಗಿದೆ. ಒಟ್ಟಿನಲ್ಲಿ ಡಿಸ್ಟ್ರಿಕ್ಟ್ ಬ್ಯಾನ್ ತೆಗೆದುಹಾಕಿ. ಬಾರ್ಡರ್ ಇರುವ ಕಡೆ ಸಿಬ್ಬಂದಿ ಹಾಕಿ. ಮಹಾರಾಷ್ಟ್ರ ಮತ್ತು ಕೇರಳಕ್ಕೆ ಹೋಗುವುದನ್ನು ತಡೆಗಟ್ಟಿ. ಅವರೆ ಸಂಸ್ಥಾನದೊಳಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆಹಾರವನ್ನು ಸಾಗಿಸುವುದಕ್ಕೆ ಯಾವ ತರಹ ಆತಂಕವನ್ನೂ ತಂದೊಡ್ಡಬಾರದು. ಬತ್ತದ ಪ್ರೈಸನ್ನು ಹೆಚ್ಚು ಮಾಡಿದ್ದಾರೆ. ಆದರೆ ಜವಾರ್ ಪ್ರೈಸನ್ನು ಹಾಗೆಯೇ ಇಟ್ಟಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಮಾರ್ಕೆಟ್ಟಿನಲ್ಲಿ ಜೋಳದ ಬೆಲೆ ಬಹಳ ಕಡಿಮೆಯಾಗಿದೆಯೆಂದು ರೈತರು ಕಳವಳಪಡುತ್ತಿದ್ದಾರೆ. ಆದ್ದರಿಂದ ಬತ್ತದ ಬೆಲೆಯನ್ನು ಯಾವ ರೀತಿ ಏರಿಸಿದರೋ ಅದೇ ಪ್ರಕಾರ ಜೋಳದ ದರವನ್ನೂ ಕೂಡ ಏರಿಸಬೇಕು. ಈಗ ನಮ್ಮ ರೈತರು ಬಹಳ ಶ್ರಮ ವಹಿಸಿ ಇನ್ನೂ ಹೆಚ್ಚು ದರ ಬರುತ್ತದೆಂದು ಹೆಚ್ಚು ಹೆಚ್ಚಾಗಿ ಉತ್ಪತ್ತಿ ಮಾಡುತ್ತಿದ್ದಾರೆ. ಏಕ್‌ದಂ ಅದರ ಬೆಲೆಯನ್ನು ಇಳಿಸಿದರೆ, ಅವರ ಆಸಕ್ತಿಗೆ ತಡೆಗಟ್ಟಿದಂತಾಗುತ್ತದೆ. ಆದ್ದರಿಂದ ತಾವು ಬೆಲೆ ಇಳಿಯದ ಹಾಗೆ ನೋಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಹೈಬ್ರಿಡ್ ಜೋಳ ಬಂದಮೇಲೆ ಹೆಚ್ಚು ಹೆಚ್ಚಾಗಿ ಬೆಳೆ ಬೆಳೆಯುವುದಕ್ಕೆ ಹತ್ತಿದ್ದಾರೆ. ಪರಪ್ರಾಂತಗಳಿಗೆ ಇದನ್ನು ಕಳುಹಿಸಿದರೆ ಇದರ ಪ್ರಾಬ್ಲಂ ಸಾಲ್ವ್ ಆಗುವುದಿಲ್ಲ. ಅದನ್ನು ಇಲ್ಲಿಯೇ ಮಿಲ್ಲು ಮಾಡಿ ಉಪಯೋಗಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು. ಯಾವ ಪ್ರದೇಶದಲ್ಲಿ ಗೋವಿನ ಜೋಳ ಬೆಳೆಯುವ ಒಳ್ಳೆಯ ಜಮೀನು ಇದೆಯೋ ಅಲ್ಲಿ ಅವನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು. ಇವಲ್ಲದೆ ಮುನಿಸಿಪಾಲಿಟಿಯ ವಿಷಯವಾಗಿ, ಹೇಳುತ್ತೇನೆ. ಈಗ ಪಟ್ಟಣದಲ್ಲಿ ಜನಸಂಖ್ಯೆ ಪ್ರತಿದಿನ ಹೆಚ್ಚಾಗುತ್ತಾ ಇದೆ. ಹಿಂದೆ ಕೊಟ್ಟಂತಹ ಅನುಕೂಲಗಳು ಹಾಗೆಯೇ ಮುಂದುವರಿಯುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ಬಿಜಾಪುರದಲ್ಲಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ಕಟ್ಟಿದ ಕೆರೆಯ ನೀರಿನ ಉಪಯೋಗ ಇನ್ನೂ ಆಗುತಾ ಇದೆ. ಆಗ 25 ಸಾವಿರ ಜನ ಸಂಖ್ಯೆ ಇತ್ತು. ಈಗ ಒಂದು ಲಕ್ಷಕ್ಕೆ ಬಂದಿದೆ. ಆದರೆ ನೀರಿನ ಸೌಕರ್ಯ ಹಾಗೆಯೇ ಇದೆ. ಈಗ ಕೃಷ್ಣಾ ನದಿನೀರನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಅದರ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ. ಇಲ್ಲಿ ಬೇಸಿಗೆಯಲ್ಲಿ ನೀರಿನ ಸಮಸ್ಯೆಯುಂಟಾಗುತ್ತದೆ. ಆದಕಾರಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಬಿಜಾಪುರ ಜಿಲ್ಲೆಯಲ್ಲಿ ಮಾಡಬೇಕು ಅದೇ ರೀತಿ ಅಂಡರ್ ಗ್ರೌಂಡ್ ಡ್ರೈನೇಜ್ ಕೂಡ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ಮಂತ್ರಿಯವರಲ್ಲಿ ಕೇಳಿಕೊಳ್ಳುವುದು ಇಷ್ಟೇ. ತಾವು ಇವತ್ತು ಹೌಸಿಂಗ್ ಕೂಡ ಡೀಲ್ ಮಾಡುತ್ತಿದ್ದೀರಿ. ಈ ರೂರಲ್ ಹೌಸಿಂಗ್ ಸೆಲ್ ಏನಿದೆ, ಅದನ್ನು ಆದಷ್ಟು ಬೇಗ ಹೌಸಿಂಗ್ ಬೋರ್ಡಿಗೆ ಕೊಡಬೇಕು. ಇವತ್ತು ಕೇವಲ ಪಟ್ಟಣದಲ್ಲಿ ಕೆಲಸವಾದರೆ ಸಾಕಾಗುವುದಿಲ್ಲ. ಹಳ್ಳಿಗಳಲ್ಲಿ ಮನೆಗಳ ಕೊರತೆ ಇದೆ, ಅಲ್ಲಿ ಕೂಡ ಅಷ್ಟೇ ತ್ವರಿತವಾಗಿ ಬೆಳೆಯಬೇಕು. ಆದ್ದರಿಂದ ಹೌಸಿಂಗ್ ಬೋರ್ಡಿಗೆ ಇದನ್ನು ಕೊಟ್ಟು ಗ್ರಾಮಾಂತರ ಜನರಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಅದೇ ರೀತಿ ಮೈಸೂರು ಹೌಸಿಂಗ್ ಕಾರ್ಪೊರೇಷನ್ ಕೂಡ ಹೌಸಿಂಗ್ ಬೋರ್ಡಿಗೆ ಕೊಟ್ಟರೆ ಒಳ್ಳೆಯದು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಈಗ ನಮ್ಮ ಮುಂದಿರತಕ್ಕಂತಹ ಈ ಮುನಿಸಿಪಾಲಿಟಿ ಡಿಮ್ಯಾಂಡಿನ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಇದುವರೆಗೂ

(ಶ್ರೀ ಟಿ. ಆರ್. ಶಾಮಣ್ಣ)

ಕೂಡ ಮುನಿಸಿಪಲ್ ಖಾತೆಯನ್ನು ನೋಡಿಕೊಳ್ಳುತ್ತಿದ್ದ ಮಂತ್ರಿಯವರು ನಮಗೆ ಸಾಕಾದಷ್ಟು ವಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಈಗ ಬಂದಿರತಕ್ಕವರು ಬಹಳ ಸೌಮ್ಯ ಸ್ವಭಾವದವರು, ಮತ್ತು ಸಾಕಷ್ಟು ಜನರ ಕಷ್ಟವನ್ನು ಅರಿತು, ಆದಷ್ಟು ನ್ಯಾಯ ಮಾಡತಕ್ಕ ಮನೋಭಾವ ಉಳ್ಳವರು. ಇವರಿಂದ ಆಡಳಿತ ಒಳ್ಳೆಯದಾಗುತ್ತದೆ ಎನ್ನತಕ್ಕ ನಂಬಿಕೆ ನನಗೆ ಇದೆ. ಈಗ ನಿಜವಾಗಿಯೂ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿಯೂ ಬಹಳ ಶೋಚನೀಯವಾಗಿದೆ. ಕೇಂದ್ರ ಸರ್ಕಾರದವರು ಪೂರಾ ಹೆಚ್ಚಿನ ಭಾಗವನ್ನು ತೆರಿಗೆ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಉಳಿದುದರಲ್ಲಿ ಹೆಚ್ಚು ಭಾಗವನ್ನು ರಾಜ್ಯ ಸರ್ಕಾರದವರು ತೆಗೆದುಕೊಂಡು ಉಳಿದ ಕೆಲವು ಭಾಗಗಳು ಮಾತ್ರ ಈ ಸ್ಥಳೀಯ ಸಂಸ್ಥೆಗಳಿಗೆ ಬರುತ್ತವೆ. ಅದರಲ್ಲಿ ಮುಖ್ಯವಾಗಿರತಕ್ಕಂಥದ್ದು, ಮನೆ ಕಂದಾಯ, ಆಕ್ಟ್ರಾಯಿ, ಮತ್ತು ಮನರಂಜನೆಯ ತೆರಿಗೆ. ಈ ಆಕ್ಟ್ರಾಯಿಯನ್ನು ತೆಗೆದುಬಿಡಬೇಕೆಂಬ ಕೂಗು ಬಹಳವಾಗಿ ಇದೆ. ಆಕ್ಟ್ರಾಯಿ ನಿಜವಾಗಿಯೂ ಕಿರುಕುಳ, ತೆರಿಗೆ, ಒಬಿರಾಯನ ಕಾಲದ ತೆರಿಗೆ, ಮತ್ತು ಇದರಲ್ಲಿ ಬೇಕಾದಷ್ಟು ಪೋಲಾಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಆಕ್ಟ್ರಾಯಿಯನ್ನು ತೆಗೆದು ಹಾಕಿದ ಪಕ್ಷದಲ್ಲಿ ಬೆಂಗಳೂರು ನಗರದ ಹಣಕಾಸಿನ ಪರಿಸ್ಥಿತಿ ಬಹಳ ಕುಂಠಿತವಾಗುತ್ತದೆ. ನನಗೆ ಹಣಕಾಸಿನ ಸಮಿತಿಯಲ್ಲಿ ಅಧ್ಯಕ್ಷನಾಗಿ ಅಲ್ಲಿ ಕೆಲಸಮಾಡಿ ಅನುಭವ ಇದೆ. ಆಕ್ಟ್ರಾಯಿ ತೆಗೆಯಬೇಕಾದ ಪಕ್ಷದಲ್ಲಿ ಅದಕ್ಕೆ ಸರಿಯಾದ ಬೇರೆ ವರಮಾನ ಬರುವ ಬಾಬುಗಳನ್ನು ತೋರಿಸಬೇಕಾಗುತ್ತದೆ. ಅದರ ಬಗ್ಗೆ ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಕಾರ್ಪೊರೇಷನ್ನಿನ 6 ಕೋಟಿ ಆದಾಯದಲ್ಲಿ 1 ಕೋಟಿ 71 ಲಕ್ಷ ಆಕ್ಟ್ರಾಯಿ ಮೂಲಕ ವಸೂಲಾಗುತ್ತಿದೆ. ಸರ್ಕಾರದವರು ಇದಕ್ಕೆ ಯಾವುದೇ ಒಂದು ರೀತಿಯಲ್ಲಿ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಬಹುದು. ಆದರೆ ಅದರಲ್ಲಿ ನನಗೆ ನಂಬಿಕೆ ಇಲ್ಲ. ಸರ್ಕಾರದವರು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ನಿನಲ್ಲಿ ಒಂದು ಭಾಗ ಕೊಡುತ್ತೇವೆಂದು ಹೇಳಿ, 57ರಲ್ಲಿ ನಾಲ್ಕೂವರೆ ಲಕ್ಷ ಏನು ಕೊಡುತ್ತಿದ್ದರೋ, ಅದನ್ನೇ 69ರಲ್ಲೂ ಕೊಡುತ್ತಿದ್ದಾರೆ. ಹೀಗೆ ಕೊಡತಕ್ಕ ಒಂದು ಸಣ್ಣ ಮಾಮೂಲಿಯನ್ನು ಇಟ್ಟುಕೊಂಡಿದ್ದಾರೆ, ದಿನೇ ದಿನ ಬೆಳೆಯುತ್ತಿರುವ ಸ್ಥಳೀಯ ಸಂಸ್ಥೆಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ತೆಗೆಯುವುದಾದರೆ, ಸೇಲ್ಸ್ ಟಾಕ್ಸಿನ ಒಂದು ಭಾಗ ಇಲ್ಲವೇ ಇತರ ಆದಾಯದ ಮಾರ್ಗವನ್ನು ನೋಡಬೇಕು. ಅಲ್ಲದೆ, ಯಾವುದೇ ಒಂದು ಒತ್ತಡಕ್ಕೆ ಒಳಗಾಗಿ ಆಕ್ಟ್ರಾಯಿ ತೆಗೆದರೆ, ಸ್ಥಳೀಯ ಸಂಸ್ಥೆಗಳಿಗೆ ಬಹಳ ಕಷ್ಟವಾಗುತ್ತದೆ. ಅದರಲ್ಲಿ ಬೆಂಗಳೂರು ಕಾರ್ಪೊರೇಶನ್ನಿಗೆ ಬರತಕ್ಕ ಆರು ಕೋಟಿ ರೂಪಾಯಿಯಲ್ಲಿ, ಕಾಲು ಭಾಗಕ್ಕಿಂತಲೂ ಹೆಚ್ಚು ಆಕ್ಟ್ರಾಯಿ ಮೂಲಕ ಬರುತ್ತಿರುವುದರಿಂದ, ಅದನ್ನು ತೆಗೆದರೆ, ಹಣಕಾಸಿನ ಪರಿಸ್ಥಿತಿಯು ಬಹಳ ಶೋಚನೀಯವಾಗುತ್ತದೆ. ಅದರಲ್ಲೂ ಮನೆ ಕಂದಾಯ ಹೆಚ್ಚು ಮಾಡಬಾರದು. ಏಕೆಂದರೆ ಈಗಾಗಲೇ 15 ಪರ್‌ಸೆಂಟ್ ವಸೂಲು ಮಾಡುವುದಲ್ಲದೆ, ಅದರ ಜೊತೆಗೆ ಹೆಲ್ತ್ ಸೆಸ್, ಲೈಬ್ರೆರಿ ಸೆಸ್, ಎಂದೆಲ್ಲಾ ಸೇರಿ ಒಟ್ಟು 20 ಪರ್‌ಸೆಂಟ್ ಆಗುತ್ತದೆ. ಅದಲ್ಲದೆ 5 ವರ್ಷಕ್ಕೊಮ್ಮೆ ಮನೆ ಕಂದಾಯವನ್ನು ಹೆಚ್ಚು ಮಾಡುತ್ತಿದ್ದಾರೆ. ತತ್ಪರಿಣಾಮವಾಗಿ ಬಡ ಜನರಿಗೆ ಮನೆ ಬಾಡಿಗೆ ಜಾಸ್ತಿಯಾಗಿರುವುದರಿಂದ ಬಹಳ ತೊಂದರೆಯಾಗುತ್ತದೆ. ಮೊದಲೇ ಮನೆಗಳ ತೊಂದರೆ ಇವೆ. ಆ ರೀತಿ ಮಾಡಬಾರದು. ಮತ್ತು ಈ ಮುನಿಸಿಪಾಲಿಟಿಗಳಿಗೆ ಸರ್ಕಾರದಿಂದ ಒದಗಿಸಿರತಕ್ಕಂತಹ ಧನ ಸಹಾಯ ಬಹಳ ಕಡಮೆಯಾಗಿದೆ. ಈಗ ಬೇರೆ ಎಲ್ಲಾ ಲೋಕಲ್ ಬಾಡಿಗಳಿಗೂ ಕೂಡ ಡಿ.ಎ.ಯ ಅರ್ಧ ಭಾಗ ಕೊಡುತ್ತಿದ್ದಾರೆ. ಆದರೆ ಬೆಂಗಳೂರು ಕಾರ್ಪೊರೇಷನ್ನಿಗೆ ಯಾವ ವಿಧವಾಗಿಯೂ ಕೊಡುತ್ತಾ ಇಲ್ಲ. ಅಲ್ಲಿ ಕೊಡತಕ್ಕದ್ದು ವೆಹಿಕಲ್ಸ್ ಟ್ಯಾಕ್ಸ್ ಮಾತ್ರ. ಇವರು ರೋಡು ರಿಪೇರಿಗೆ 70-80 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೆ ಸರ್ಕಾರದವರು ಕೇವಲ ನಾಲ್ಕೂವರೆ ಲಕ್ಷ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಇದು ಬಹಳ ಶೋಚನೀಯವಾದುದು. ಕಾರ್ಪೊರೇಷನ್ನಿಗೆ ಒದಗಿಸುವ ಹಣದಲ್ಲಿ ಖೋತ ಮಾಡಬಾರದು. ಎರಡನೆಯದಾಗಿ ಕಾರ್ಪೊರೇಷನ್ನಿನಲ್ಲಿ ಆಡಳಿತ ಚೆನ್ನಾಗಿ ನಡೆಯುತ್ತಾ ಇಲ್ಲ. ಮತ್ತು ಅನೇಕ ಇತರ ಸಂಸ್ಥೆಗಳಲ್ಲಿಯೂ ಸರಿಯಾಗಿ ಆಡಳಿತ ನಡೆಯುತ್ತಾ ಇಲ್ಲ. ಇದಕ್ಕೆ ಕಾರಣ, ಅಲ್ಲಿ ಪಟ್ಟಭದ್ರರಾಗಿ ಇರತಕ್ಕ ಆಡಳಿತ ವರ್ಗದವರು. ಅನೇಕ ವರ್ಷಗಳಿಂದ ಎಲ್ಲಾ ಮುನಿಸಿಪಾಲಿಟಿಯವರಿಗೂ ಕಾಮನ್ ಮುನಿಸಿಪಲ್ ಕೇಡರ್ ಮಾಡಬೇಕೆಂದು ಇದೆ. ಅದನ್ನು ಇನ್ನೂ ಮಾಡಿಲ್ಲ. ಅದನ್ನು ಆದಷ್ಟು ಜಾಗ್ರತೆ ಮಾಡಿ, ಆಗಿಂದಾಗ್ಗೆ, ಅಧಿಕಾರಿಗಳನ್ನು ಬದಲಾವಣೆ ಮಾಡಿದರೆ, ಜನರಿಗೆ ಕ್ಷೇಮವಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇವತ್ತು ಬೆಂಗಳೂರು 26 ಚದರ ಮೈಲಿಗಳಷ್ಟು ಇದೆ. ಅನೇಕ ಹೊಸ ಜಾಗಗಳನ್ನೂ ಸೇರಿಸಿದ್ದಾರೆ. ಇನ್ನೂ ಅನೇಕ ಜಾಗಗಳನ್ನು ಟ್ರಸ್ಟ್ ಬೋರ್ಡಿನವರೂ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದಾರೆ.

ಟ್ರಸ್ಟ್ ಬೋರ್ಡಿನವರು ಜನಗಳಿಗೆ ಕೊಡಬೇಕಾದ ಸೌಲಭ್ಯಗಳನ್ನು ಒದಗಿಸುತ್ತಾ ಇಲ್ಲ. ನಮ್ಮ ಏರಿಯಾ ತೆಗೆದುಕೊಂಡರೆ ಅಶೋಕನಗರ ಮತ್ತು ಹನುಮಂತನಗರಗಳಲ್ಲಿ ಬೇಕಾದಷ್ಟು ಟ್ರಸ್ಟ್‌ಬೋರ್ಡ್ ಏರಿಯಾ ಇದೆ. ಈಗ 10—12ವರ್ಷಗಳಾಯಿತು. ಟ್ರಸ್ಟ್‌ಬೋರ್ಡಿನವರು ಆ ಏರಿಯಾವನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಕಾರ್ಪೋರೇಷನ್ನಿನವರು ಅದನ್ನು ತೆಗೆದು ಕೊಳ್ಳುವುದರಿಂದ ವಿಪರೀತ ನಷ್ಟವಾಗುತ್ತದೆ ಎಂದು ಅವರು ಹೇಳುತ್ತಾರೆ. ಈಗಾಗಲೇ ಕಾರ್ಪೋರೇಷನ್ನಿನವರು ಜಯನಗರ ಮತ್ತು ರಾಜಾಜಿನಗರವನ್ನು ಕಾರ್ಪೋರೇಷನ್ನಿಗೆ ಸೇರಿಸಿಕೊಂಡು ಆ ಬಡಾವಣೆಗಳಿಗೆ ಸುಮಾರು 15ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಹನುಮಂತ ನಗರ ಮತ್ತು ಅಶೋಕನಗರಗಳನ್ನು ಕಾರ್ಪೋರೇಷನ್ನಿಗೆ ಸೇರಿಸಿಕೊಂಡರೆ ವಿಪರೀತ ದುಡ್ಡು ಖರ್ಚು ಆಗುತ್ತದೆ ಎಂದು ಅವರು ಆ ಬಡಾವಣೆಗಳನ್ನು ತೆಗೆದುಕೊಳ್ಳುತ್ತಾ ಇಲ್ಲ. ಆದ್ದರಿಂದ ಅಲ್ಲಿರತಕ್ಕ ಜನಗಳಿಗೆ ಬಹಳ ತೊಂದರೆಯಾಗಿದೆ. ಕಾರ್ಪೋರೇಷನ್ನಿನವರು ಮತ್ತು ಟ್ರಸ್ಟ್ ಬೋರ್ಡಿನವರು ಕುಳಿತುಕೊಂಡು ಚರ್ಚೆಮಾಡಿ ಟ್ರಸ್‌ಬೋರ್ಡ್ ಏರಿಯಾವನ್ನು ಆದಷ್ಟು ಬೇಗ ಕಾರ್ಪೋರೇಷನ್ನಿಗೆ ಒಳಪಡಿಸದಿದ್ದರೆ ಜನಗಳಿಗೆ ಸೌಲಭ್ಯಗಳು ಸಿಕ್ಕುವುದಿಲ್ಲ. ಆ ಬಗ್ಗೆ ತ್ವರಿತ ವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಬೆಂಗಳೂರು ಕಾರ್ಪೋರೇಷನ್ನಿಗೆ ಸರ್ಕಾರದವರು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ ಮೇಲೆ, ಕಾರ್ಪೋರೇಷನ್ನಿನಲ್ಲಿ ಸರ್ಕಾರದವರು ಅನೇಕ ಅಧಿಕಾರಿಗಳನ್ನು ತಂದು ತುಂಬಿ ಅಲ್ಲಿನ ಅಧಿಕಾರಿಗಳು ಮತ್ತು ನೌಕರರು ಲಂಚ ಹೊಡೆಯುವುದರಲ್ಲಿ ನಿಪುಣರಾಗಿದ್ದಾರೆ. ಕಾರ್ಪೋರೇಷನ್ನಿನಲ್ಲಿ ಎಷ್ಟು ಕೆಲಸ ಇದೆಯೋ ಎಷ್ಟು ಅಧಿಕಾರಿಗಳು ಬೇಕೋ ಅಷ್ಟು ಮಾತ್ರ ನೇಮಕ ಮಾಡಬೇಕು. ಜನಗಳ ದುಡ್ಡನ್ನು ಪೋಲು ಮಾಡತಕ್ಕದ್ದು ಖಂಡಿತಾ ಸರಿಯಲ್ಲ. ಬೆಂಗಳೂರು ಕಾರ್ಪೋರೇಷನ್ನಿನಲ್ಲಿ O. D. P. (outline development plan) ಅನ್ನು ಜಾರಿಗೆ ತರಬೇಕೆಂದು ಮಾಡಿದ್ದಾರೆ. ಅದರಿಂದ ಅನೇಕ ಜನಗಳಿಗೆ ಕಿರುಕುಳ ಕೊಡುತ್ತಿದ್ದಾರೆ. ಒಂದು ಪ್ಲಾನು ಮಂಜೂರು ಆಗಬೇಕಾದರೆ ಲೈಸೆನ್ಸ್ ಮಂಜೂರು ಆಗಬೇಕಾದರೆ ವಿಪರೀತ ತೊಂದರೆ ಯುಂಟಾಗುತ್ತದೆ. ಕೊಡಬೇಕಾದಂತಹ ಮಾಮೂಲು ಕೊಟ್ಟರೆ ಮಾತ್ರ ಆ ಕೆಲಸಗಳು ಆಗುತ್ತವೆ. ಇಲ್ಲದಿದ್ದರೆ ಇಲ್ಲ. ಅದರಿಂದ ಜನಗಳಿಗೆ ಆಗತಕ್ಕಂಥ ತೊಂದರೆಗಳೇ ಹೆಚ್ಚು. ಆದ್ದರಿಂದ O.D.P. ಯನ್ನು ಜಾರಿಗೆ ತರುವುದಕ್ಕೆ ಮುಂಚೆ ಜನಗಳಿಗೆ ಅದರಿಂದ ಎಷ್ಟು ತೊಂದರೆ ಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಜನಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೊಂಡು ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ಅದನ್ನು ಜಾರಿಗೆ ತರುವ ನೆಪದಲ್ಲಿ ಜನಗಳಿಗೆ ಕಿರುಕುಳ ಕೊಡಬೇಡಿ.

ಕಾರ್ಪೋರೇಷನ್ನಿನಲ್ಲಿ ಯಾರೇ ಪ್ರಯತ್ನಪಟ್ಟರೂ ಲಂಚದ ಹಾವಳಿಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಕಾರ್ಪೋರೇಷನ್ನಿನಲ್ಲಿ ವ್ಯವಹಾರ ಮಾಡಿದವರಿಗೆ ಗೊತ್ತಿದೆ. ಬ್ರಹ್ಮ ಬಂದರೂ ಅದನ್ನು ಸರಿಮಾಡುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು. ಈ ಕಾರ್ಪೋರೇಷನ್ ಅನ್ನು ವಿಜಿಲೆನ್ಸ್ ಕಮಿಷನ್ನಿನ ವ್ಯಾಪ್ತಿಗೆ ಒಳಪಡಿಸಬೇಕು ಎಂದು ನಾವು ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಆದರೂ ಕೂಡ ಅದು ಇನ್ನು ಜಾರಿಗೆ ಬಂದಿಲ್ಲ. ಇದು ಶೋಚನೀಯ. ಆದಷ್ಟು ಜಾಗ್ರತೆ ಇದನ್ನು ವಿಜಿಲೆನ್ಸ್ ಕಮಿಷನ್ನಿನ ವ್ಯಾಪ್ತಿಗೆ ಒಳಪಡಿಸ ಬೇಕು. ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಅದರ ಡ್ರಾಫ್ಟ್ ಬಿಲ್ ತಯಾರಾಗಿದೆ. ಅದನ್ನು ಈ ಸಭೆಯಲ್ಲಿ ತಂದು ಪಾಸು ಮಾಡಬೇಕಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಆ ಬಿಲ್ಲು ತಯಾರಾಗಿದ್ದರೆ ಅದನ್ನು ಜಾರಿಗೆ ತರುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ. ಮತ್ತು ಬೆಂಗಳೂರು ನಗರ ಕಾರ್ಪೋರೇಷನ್ನಿನ ವಿಚಾರವಾಗಿ ಅನೇಕ ಸಾರಿ ನಾನು ಪ್ರಸ್ತಾಪ ಮಾಡಿದ್ದೇನೆ ಅದನ್ನು ಇನ್ನು ವಿವರಿಸಬೇಕಾಗಿಲ್ಲ.

ಬೆಂಗಳೂರು ನಗರದ ಬಿ. ಟಿ. ಎಸ್. ವ್ಯವಸ್ಥೆಯನ್ನು ತೆಗೆದುಕೊಂಡರೆ ಬಸ್‌ಸ್ಟ್ಯಾಂಡು ಗಳಲ್ಲಿ ಗಂಟೆಗಟ್ಟಲೆ ಜನಗಳು ಉದ್ದದ ಕ್ಯೂ ನಿಲ್ಲುವುದು ತಪ್ಪಿಲ್ಲ. ಬಸ್ಸಿನಲ್ಲಿ ಓವರ್ ಲೋಡ್ ತಪ್ಪಿಲ್ಲ. ಟೈಮಿಗೆ ಸರಿಯಾಗಿ ಬಸ್ಸುಗಳು ಬರುವುದಿಲ್ಲ. ಇದರಲ್ಲಿ ತುಂಬಾ ಅವ್ಯವಸ್ಥೆ ಇದೆ. ಇದರ ಜೊತೆಗೆ ಕಂಡಕ್ಟರು ಲಂಚ ತೆಗೆದುಕೊಳ್ಳುತ್ತಾರೆ. ಟಿಕೆಟ್ ಕೊಡುವುದರಲ್ಲಿ ಮೋಸಮಾಡಿ ಲಾಭ

(ಶ್ರೀ ಟಿ. ಆರ್. ಶಾಮಣ್ಣ)

ಸಂಪಾದನೆ ಮಾಡುತ್ತಿದ್ದಾರೆ. ಬಿ. ಟಿ. ಎಸ್. ಬಸ್ಸಿನಲ್ಲಿ ದಿನೇ ದಿನೇ ಜನಗಳಿಗೆ ತೊಂದರೆಗಳು ಜಾಸ್ತಿಯಾಗುತ್ತಿವೆ. ಬಸ್ಸಿನಲ್ಲಿ ಪ್ರಯಾಣ ಮಾಡತಕ್ಕವರಿಗೆ ಅನುಕೂಲತೆಯನ್ನು ಒದಗಿಸಿಕೊಟ್ಟಿಲ್ಲ. ಬೆಂಗಳೂರು ನಗರದಲ್ಲಿನ ಜನಸಂಖ್ಯೆ ಮತ್ತು ಬಸ್ಸಿನಲ್ಲಿ ಪ್ರಯಾಣ ಮಾಡತಕ್ಕವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಬಸ್ಸುಗಳ ಸಂಖ್ಯೆ ಮಾತ್ರ ಹೆಚ್ಚುತ್ತಿಲ್ಲ ಆದ್ದರಿಂದ ಬೆಂಗಳೂರಿನ ನಾಗರೀಕರಿಗೆ ಬಸ್ಸಿನ ಸೌಕರ್ಯವನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಡಬೇಕು ಇದರ ಜೊತೆಗೆ ಬೆಂಗಳೂರು ನಗರದಿಂದ ಮೊಫ್ಯೂಸಿಲ್ ಪ್ರದೇಶಗಳಿಗೆ ಹೋಗುವ ಬಸ್ಸುಗಳನ್ನು ಬಿ. ಟಿ. ಎಸ್. ಗೆ ಸೇರಿಸಿದ್ದಾರೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಬಸ್ಸುಗಳು ಇಲ್ಲದೇ ಇರುವುದರಿಂದ ಜನಗಳು ಬಸ್‌ಸ್ಟ್ಯಾಂಡಿನಲ್ಲಿ ಗಂಟೆಗಟ್ಟಲೇ ಕಾಯಬೇಕಾಗುತ್ತದೆ. ಅನೇಕ ಸಾರಿ ಈ ಉದ್ದದ ಕ್ಯೂ ತಪ್ಪಿಸತಕ್ಕ ಬಗ್ಗೆ ಓವರ್ ಲೋಡ್ ತಪ್ಪಿಸತಕ್ಕ ಬಗ್ಗೆ ಬಸ್ಸುಗಳು ಸಕಾಲಕ್ಕೆ ಬರುವಹಾಗೆ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ನಾನು ಪದೇ ಪದೇ ಹೇಳುತ್ತಲೇ ಇದ್ದೇನೆ. ಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸಿ ಬೆಂಗಳೂರಿನ ಜನತೆಗೆ ಬೇಕಾದಂತಹ ಬಸ್ಸಿನ ಸೌಕರ್ಯವನ್ನು ಒದಗಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ಫೇರ್ ಪ್ರೈಜ್ ಡಿಪೋಗಳ ವಿಷಯದಲ್ಲಿ ಏನಾಗಿದೆ ಎಂದರೆ ಬೆಂಗಳೂರಿನಲ್ಲಿ ಹೆಸರಿಗೆ ಮಾತ್ರ ರೇಷನಿಂಗ್ ಪದ್ಧತಿ ಇದೆ. ಇಲ್ಲಿ ಇನ್ ಫಾರ್ಮಲ್ ರೇಷನಿಂಗ್ ಪದ್ಧತಿ ಇಟ್ಟಿದ್ದಾರೆ. ಇದರಿಂದ ಒಂದು ವಾರ 50 ಪರ್ಸೆಂಟ್ ಕೋಟಾ ಕೊಡುತ್ತೇವೆ ಎಂದು ಹೇಳುತ್ತಾರೆ. ಒಂದು ವಾರ 75 ಪರ್ಸೆಂಟ್ ಕೋಟಾ ಕೊಡುತ್ತೇವೆ ಎಂದು ಹೇಳುತ್ತಾರೆ, ಇನ್ನೊಂದು ವಾರ ಫುಲ್ ಕೋಟಾ ಕೊಡುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ಜನಗಳು ಇದರ ಬಗ್ಗೆ ಯಾವ ವಿಧವಾದ ನಂಬಿಕೆಯನ್ನೂ ಇಟ್ಟುಕೊಂಡಿಲ್ಲ. ಒಂದು ವಾರದಲ್ಲಿ ಎಷ್ಟು ಕೋಟಾ ಬರುತ್ತದೆ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ. ಡಿಪೋಗಳಿಗೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಆಹಾರ ಧಾನ್ಯಗಳು ಸಪ್ಲೈ ಆಗುವುದಿಲ್ಲ. ಅದರಿಂದ ಡಿಪೋಗಳವರು ಜನಗಳಿಗೆ ವ್ಯವಸ್ಥಿತ ರೀತಿಯಲ್ಲಿ ಹಂಚುವುದಕ್ಕಾಗುತ್ತಿಲ್ಲ. ಆದ್ದರಿಂದ ವ್ಯವಸ್ಥಿತ ರೀತಿಯಲ್ಲಿ ಡಿಪೋಗಳಿಗೆ ಆಹಾರ ಧಾನ್ಯವನ್ನು ಒದಗಿಸಿ ಜನಗಳಿಗೆ ಅದನ್ನು ಸರಿಯಾಗಿ ಹಂಚತಕ್ಕ ವ್ಯವಸ್ಥೆ ಮಾಡಬೇಕು. ಸಾಧಾರಣವಾಗಿ ಈಗ ಬೆಂಗಳೂರಿನ ನಾಗರೀಕರಿಗೆ ಕೊಡತಕ್ಕಂಥ ಅಕ್ಕಿ ಅನೇಕ ಸಂದರ್ಭಗಳಲ್ಲಿ ಇವರು ಕೊಡತಕ್ಕಂಥಾದ್ದು ಹಿಂದಿನ ಕಾಲದಲ್ಲಿ ಆನೆಗಳಿಗೆ ಹಾಕುತ್ತಿದ್ದರು. ಅಂಥಾ ಅಕ್ಕಿಯನ್ನು ಕೊಡುತ್ತಿದ್ದಾರೆ. ದುಡ್ಡುಕೊಡುವಾಗ ಸರಿಯಾದ ಸಾಮಾನುಗಳನ್ನು ಕೊಡದಿದ್ದರೆ ಮನಸ್ಸಿಗೆ ವ್ಯಸನವಾಗುತ್ತದೆ. ಇದರ ಬಗ್ಗೆ ಸಾಕಷ್ಟು ದುಡ್ಡು ಖರ್ಚಾಗುತ್ತಿದೆ. ಆದರೆ ಇದರ ಮೇಲ್ವಿಚಾರಣೆ ಸರಿಯಾಗಿ ನಡೆಯುತ್ತಾಯಿಲ್ಲ. ಆದ್ದರಿಂದ ಈ ಆಹಾರ ಸರಬರಾಜು ಬಗ್ಗೆ ಸಾಕಷ್ಟು ವ್ಯವಸ್ಥಿತವಾಗಿ ನೋಡಬೇಕಾದ್ದು ಅಗತ್ಯ ಎಂದು ನಾನು ಹೇಳುತ್ತೇನೆ. ಬಡವರಿಗೆ ಬೇಕಾದಂತಹ ಜೋಳವನ್ನು ಕೊಡುವುದನ್ನು ಇತ್ತೀಚೆಗೆ ನಿಲ್ಲಿಸಿದ್ದಾರೆ. ಫೇರ್ ಪ್ರೈಜ್ ಡಿಪೋಗಳಲ್ಲಿ ಆ ಜೋಳವನ್ನು ಮಾರತಕ್ಕ ವ್ಯವಸ್ಥೆ ಮಾಡಿದರೆ ಅದರಿಂದ ಬಡಬಗ್ಗರಿಗೆ ಅನುಕೂಲವಾಗುತ್ತದೆ. ಈಗ ಬೆಂಗಳೂರು ನಗರದಲ್ಲಿ ಜನತೆಗೆ ಉಚಿತ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಮೊನ್ನೆ ಜನವರಿ ಒಂದನೇ ತಾರೀಖಿನಿಂದ ಒಂದು ರಿಯಾಯಿತಿಯನ್ನು ಕೊಟ್ಟಿದ್ದಾರೆ. ಎಸ್ಟಿಮೇಟ್ಸ್ ಕಮಿಟಿಯವರ ಶಿಫಾರಸ್ಸುಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈ ರಿಯಾಯಿತಿಯನ್ನು 1965ನೇ ಇಸವಿಯಿಂದ ಜಾರಿಗೆ ಕೊಡದೆ 196 ನೇ ಜನವರಿಯಿಂದ ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಹಾಗೆ 1½ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ. ಮನೆಗಳಲ್ಲಿ ಇದ್ದಂತಹ ಬಾಡಿಗೆದಾರರು ಅನೇಕರು ಬಿಟ್ಟು ಹೋಗಿದ್ದಾರೆ. ಇದರಿಂದ ಅನೇಕರಿಗೆ ತೊಂದರೆಯಾಗುತ್ತದೆ. ಸಾವಿರಾರು ರೂಪಾಯಿಗಳ ಬಿಲ್ಲು ಬರತಕ್ಕಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ಹೈಕೋರ್ಟಿನಲ್ಲಿ ಒಂದು ರಿಟ್ ಕೂಡ ಹಾಕಿದೆ. ಈ ಬಗ್ಗೆ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ ಸರ್ಕಾರದವರು ದೊಡ್ಡಮನಸ್ಸುಮಾಡಿ ಕುಡಿಯುವ ನೀರಿನ ರಿಯಾಯಿತಿ ಬಗ್ಗೆ ರೇಟ್ರಾಸ್ಪೆಕ್ಟಿವ್ ಬೆನಿಫಿಟ್ ಕೊಡಬೇಕು ಎಂದು ನಾನು ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಕಾರ್ಪೋರೇಷನ್‌ನಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಲೈಸನ್ಸ್ ಕೊಡುವ ಬಗ್ಗೆ, ಖಾತಾ, ಲೈಸನ್ಸ್ ಕೊಡುವ ಬಗ್ಗೆ ಜನಗಳಿಗೆ ತೊಂದರೆಗಳಾಗುತ್ತಿವೆ. ಆದ್ದರಿಂದ ಆಫೀಸರುಗಳು ಕಾರ್ಪೋರೇಷನ್ ಆಫೀಸಿಗೆ ಭೇಟಿಕೊಟ್ಟು ಪರಿಶೀಲನೆ ಮಾಡಬೇಕು. ಇದರ ಬಗ್ಗೆ ವ್ಯವಹಾರ ಮಾಡಬೇಕು ಎಂದು ಹೇಳಿ, ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

† ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ನಾಲ್ಕು ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ ಎಂ. ಎಸ್. ಆರ್. ಟಿ. ಸಿ. ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈ ಇಲಾಖೆ ಕಳೆದ 10 ವರ್ಷಗಳಲ್ಲಿ ನಿಜವಾಗಿಯೂ ಬಹಳ ಪ್ರಗತಿಯನ್ನು ಸಾಧಿಸಿದೆ. ಹತ್ತು ವರ್ಷಗಳ ಕೆಳಗೆ ಅಲ್ಲೊಂದು ಇಲ್ಲೊಂದು ಬಸ್‌ಗಳು ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೆವು. ಆದರೆ ಈ 5 ವರ್ಷಗಳಿಂದೀಚೆಗೆ ಈ ಇಲಾಖೆಯವರು ಜನರಿಗೆ ಅನುಕೂಲವಾಗುವಂತೆ ಸಾಕಷ್ಟು ಬಸ್‌ಗಳನ್ನು ಓಡಿಸುತ್ತಿದ್ದಾರೆ. ಮತ್ತು ಜನರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಲಕ್ಸುರಿ ಬಸ್‌ಗಳನ್ನು ಮತ್ತು ಸ್ಲೀಪಿಂಗ್ ಬಸ್‌ಗಳನ್ನು ಓಡಿಸುತ್ತಿದ್ದಾರೆ. ಈ ಮೂಲಕ ಜನರಿಗೆ ಬಹಳ ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನನ್ನ ಅಭಿಪ್ರಾಯ. ಆದರೂ ಕೂಡ ಈ ಇಲಾಖೆಯವರು ಪ್ರಗತಿ ಸಾಧಿಸುವುದು ಇನ್ನೂ ಇದೆ ಎಂದು ಹೇಳುತ್ತೇನೆ. ಏಕೆಂದರೆ ರಸ್ತೆಗಳು ಹೊಸಹೊಸದಾಗಿ ಆಗುತ್ತಿರುವುದರಿಂದ ಇನ್ನೂ ಹೆಚ್ಚಿನ ಬಸ್‌ಗಳನ್ನು ಓಡಿಸಬೇಕಾಗುತ್ತದೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಸ್ತೆಗಳ ಸೌಕರ್ಯ ಹೆಚ್ಚಿದಂತೆ ಜನರು ಪ್ರವಾಸ ಮಾಡುವುದೂ ಕೂಡ ಜಾಸ್ತಿಯಾಗುತ್ತಿದೆ. ಮತ್ತು ನಾಲ್ಕಾಣೆ ಜಾಸ್ತಿಯಾದರೂ ಸರಿಯೇ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಜಾಗ್ರತೆ ಹೋಗಬೇಕೆಂಬ ಅಭಿಪ್ರಾಯ ಜನರಲ್ಲಿ ಇದೆ. ಆದಕಾರಣ ನನ್ನ ಸೂಚನೆ ಏನೆಂದರೆ ಪ್ರತಿಯೊಂದು ಡಿಪೋಗಳಲ್ಲಿಯೂ ಕೂಡ ಸ್ಪೇರ್ ಪಾರ್ಟ್ಸ್, ಟೈರ್ ಟ್ಯೂಬ್‌ಗಳನ್ನು ಇಟ್ಟಿರಬೇಕು. ಏಕೆಂದರೆ ಒಂದು ಬಸ್ ಕೆಟ್ಟರೆ ಇನ್ನೊಂದು ಬಸ್ ಬರುವವರೆಗೂ ಜನರು ಕಾಯುವುದು ಕಷ್ಟವಾಗುತ್ತದೆ. 10 ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಾಗಿದೆ. ಈ ಪರಿಸ್ಥಿತಿಗೆ ತಕ್ಕಂತೆ ಸರ್ಕಾರದವರು ಈ ಇಲಾಖೆಗೆ ಜಾಸ್ತಿ ಹಣವನ್ನು ಒದಗಿಸಬೇಕಾಗಿತ್ತು. ಈಗ ಇಟ್ಟಿರುವ ಹಣ ಸಾಲದು. ಜನರ ಬೇಡಿಕೆಗಳನ್ನು ಪೂರೈಸಲು ಇಷ್ಟು ಹಣ ಸಾಲುವುದಿಲ್ಲವಾದ್ದರಿಂದ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ನೋಡತಕ್ಕ ಪ್ರೇಕ್ಷಣೀಯ ಸ್ಥಳಗಳು ಬಹಳ ಇವೆ. ಈ ಎಂ. ಎಸ್. ಆರ್. ಟಿ. ಸಿ. ಯವರು ಒಂದು ಪ್ರೇಕ್ಷಣೀಯ ಸ್ಥಳದಿಂದ ಇನ್ನೊಂದು ಪ್ರೇಕ್ಷಣೀಯ ಸ್ಥಳಕ್ಕೆ ನೇರವಾಗಿ ಬಸ್‌ಗಳನ್ನು ಓಡಿಸಬೇಕು. ಈ ರೀತಿ ಮಾಡಿದರೆ ಪ್ರೇಕ್ಷಕರಿಗೆ ಅನುಕೂಲವಾಗುತ್ತದೆ. ನಮ್ಮ ರಾಯಚೂರು ಜಿಲ್ಲೆಗೆ ಒಂದು ಡಿವಿಜನ್ ಆಫೀಸ್ ಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇವೆ ಈ ವರ್ಷವಾದರೂ ಕೂಡ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಪ್ಪಳ, ಕುಷ್ಟಗಿ ಮತ್ತು ಸಿಂಧನೂರುಗಳಲ್ಲಿ ಕೂಡ ಒಂದೊಂದು ಬಸ್ ಡಿಪೋಗಳನ್ನು ಪ್ರಾರಂಭ ಮಾಡಬೇಕು. ಈಗ ಕೊಪ್ಪಳ—ಇಲ್‌ಕಲ್ ರೋಡ್ ಮತ್ತು ಕುಷ್ಟಗಿ-ಗಜೇಂದ್ರಗಡ ರಸ್ತೆಗಳು ಬಹಳ ಚೆನ್ನಾಗಿರುವುದರಿಂದ ಈ ರಸ್ತೆಗಳನ್ನು ರಾಷ್ಟ್ರೀಕರಣ ಮಾಡಬೇಕು. ನನ್ನ ಕ್ಷೇತ್ರವಾದ ಕುಷ್ಟಗಿ, ಬಿಜಾಪುರ, ಧಾರವಾಡ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಮಧ್ಯದಲ್ಲಿ ಇದೆ. ನನ್ನ ಕ್ಷೇತ್ರದಲ್ಲಿ ಬಸ್‌ಗಳ ಓಡಾಟ ಜಾಸ್ತಿ ಇರುವುದರಿಂದ ಅಲ್ಲಿಗೆ ಒಬ್ಬರು ಕಂಟ್ರೋಲರನ್ನು ನೇಮಕ ಮಾಡಬೇಕು. ತಾವರೇಗೆರೆ ಮತ್ತು ಕುಷ್ಟಗಿಯಲ್ಲಿ ಬಸ್‌ನಿಲ್ದಾಣಗಳನ್ನು ಕಟ್ಟಲು ಜಾಗವನ್ನು ನೋಡುತ್ತಿದ್ದಾರೆಂದು ತಿಳಿದುಬಂತು. ಈಗ ಜಮೀನು ಸಿಕ್ಕಿರಬಹುದೆಂದು ಕಾಣುತ್ತದೆ. ಆದಕಾರಣ ಈ ಎರಡು ಸ್ಥಳಗಳಲ್ಲಿ ತೀವ್ರಗತಿಯಿಂದ ಬಸ್‌ನಿಲ್ದಾಣಗಳನ್ನು ಕಟ್ಟಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಇನ್ನೊಂದು ಸೂಚನೆ ಏನೆಂದರೆ ರಾಜಧಾನಿಯಿಂದ ಪ್ರತಿಯೊಂದು ತಾಲ್ಲೂಕಿಗೂ ನೇರವಾದ ಬಸ್ ಸೌಕರ್ಯ ಇರಬೇಕು. ಅಂದರೆ ರಾಜಧಾನಿಯಿಂದ ಪ್ರತಿಯೊಂದು ತಾಲ್ಲೂಕಿಗೂ ಬಸ್‌ಗಳನ್ನು ಓಡಿಸಬೇಕೆಂದು ನಾನು ಹೇಳುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಗುಲ್ಬರ್ಗದಿಂದ ಬೆಂಗಳೂರಿಗೆ ಬರುವ ಬಸ್ ಮಧ್ಯೆ ಇರುವ ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ನಿಂತು ಬರಬೇಕೆಂದು ನನ್ನ ಅಭಿಪ್ರಾಯ. ಆದಕಾರಣ ರಾಜಧಾನಿಯಿಂದ ಹೊರಡುವ ಬಸ್‌ಗಳು ಪ್ರತಿ ತಾಲ್ಲೂಕ್‌ನಲ್ಲಿಯೂ ನಿಲ್ಲಬೇಕೆಂದು ಆಜ್ಞೆ ಹೊರಡಿಸಿ ಆ ಬಗ್ಗೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿ ತಾಲ್ಲೂಕ್‌ನಿಂದ ರಾಜಧಾನಿಗೆ ಬರುವ ಜನರು ಬಹಳ ಇರುತ್ತಾರೆ. ಈ ಜನರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಂದು ಬಸ್ ಹತ್ತುವುದಕ್ಕೆ ಬದಲು ನೇರವಾಗಿ ರಾಜಧಾನಿಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಪ್ರತಿ ಡಿವಿಜನ್‌ನಲ್ಲಿಯೂ ಕೂಡ ಬಸ್‌ಗಳು ಹೊರಡುವ ಮತ್ತು ಬರುವ ವೇಳಾ ಪತ್ರಿಕೆಗಳನ್ನು ಇಟ್ಟಿರುತ್ತಾರೆ. ಈ ವೇಳಾ ಪತ್ರಿಕೆಗಳನ್ನು ಈ ಮನೆಯ ಎಲ್ಲಾ ಸದಸ್ಯರಿಗೂ ಒದಗಿಸಿಕೊಡಬೇಕು ಮತ್ತು ಆ ಬಗ್ಗೆ ಏನಾ

(ಶ್ರೀ ಇ. ಪುಂಡಲೀಕಪ್ಪ)

ದರೂ ಬದಲಾವಣೆ ಮಾಡಿದರೆ ಅದನ್ನು ಸಹ ತಿಳಿಸಬೇಕೆಂದು ನನ್ನ ಸೂಚನೆ ಇದೆ. ಈ ಎಂ. ಎಸ್. ಆರ್. ಟಿ. ಸಿ. ಇಲಾಖೆ ಬಹಳ ಪ್ರಗತಿಯನ್ನು ಸಾಧಿಸಿದ್ದರೂ ಕೂಡ ಇನ್ನೂ ಪ್ರಗತಿ ಸಾಧಿಸಬೇಕಾಗಿದೆ. ನಾನು ಇದುವರೆಗೆ ಕೊಟ್ಟಂಥ ಸೂಚನೆಗಳನ್ನು ಅಮಲ್‌ನಲ್ಲಿ ತರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ವಿಶೇಷವಾಗಿ ಕಚ್ಚಾ ರಸ್ತೆಗಳು ಬಹಳ ಇವೆ. ಈ ರಸ್ತೆಗಳಲ್ಲಿ ಖಾಸಗೀ ಬಸ್‌ಗಳನ್ನು ಓಡಿಸಲು ಆರ್. ಟಿ. ಎ. ಆಫೀಸ್‌ನಿಂದ ಖಾಸಗೀಯವರಿಗೆ ಪರ್ಮಿಟ್ ಕೊಡಲಾಗುತ್ತಿದೆ. ಜನರ ಅನುಕೂಲಕ್ಕಾಗಿ ಆರ್. ಟಿ. ಓ. ಥೇರ್‌ಖಾನ್ ಅವರು ಕೇಳಿದ ಕಡೆಗೆಲ್ಲಾ ಪರ್ಮಿಟ್‌ಗಳನ್ನು ಕೊಡುತ್ತಿದ್ದಾರೆ. ಆದರೆ ಈ ಕಚ್ಚಾ ರಸ್ತೆಗಳನ್ನು ರಿಪೇರಿ ಮಾಡಿಸಲು ಗ್ರ್ಯಾಂಟ್ ಕೊಡುವ ಬಗ್ಗೆ ಸರ್ಕಾರದವರು ತಡ ಮಾಡುತ್ತಿದ್ದಾರೆ. ಇನ್ನು ಮುಂದೆ ಹಳ್ಳಿಗಳ ರಸ್ತೆಗಳನ್ನು ರಿಪೇರಿ ಮಾಡಿಸಲು ಗ್ರ್ಯಾಂಟನ್ನು ವಿಳಂಬಮಾಡದಂತೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕಚ್ಚಾ ರೋಡುಗಳ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿದ್ದಾರೆ. ಕೆಲವು ವೇಳೆ ಹೆಚ್ಚುವರಿ ಟ್ಯಾಕ್ಸನ್ನು ಅವರಿಗೆ ವಾಪಸ್ಸು ಕೊಡುವಾಗ ಬಹಳ ತಡವಾಗುತ್ತಿದೆ. ಮತ್ತು ಕೆಲವು ಕಡೆಗಳಲ್ಲಿ ಎರಡು ವರ್ಷದವರೆಗೂ ಮುಂದೂಡುತ್ತಾರೆ. ಇದರ ಬಗ್ಗೆ ಸರಕಾರದವರು ಪರಿಶೀಲನೆ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದು ಮುನಿಸಿಪಾಲಟಿಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ಹೇಳುವಾಗ ಕುಷ್ಟಗಿಯಲ್ಲಿ ನೀರಿನ ತೊಂದರೆ ಬಹಳ ಇದೆ. ಇದಕ್ಕಾಗಿ ಒಂದು ಯೋಜನಾ ಮಾಡಿ ಅದು ಈಗಾಗಲೇ ಸರಕಾರದ ಮುಂದೆ ಇದೆ ಎಂದು ಕೇಳುತ್ತೇನೆ. ಇದನ್ನು ತೀವ್ರವಾಗಿ ಆಗುವಂತೆ ಮಾಡಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ ಮತ್ತು ಅಧ್ಯಕ್ಷರು ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ಅಭಾರ ಮನ್ನಿಸುತ್ತೇನೆ.

† ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಮಾನ್ಯ ಅಧ್ಯಕ್ಷರೇ, ಡಿಮ್ಯಾಂಡುಗಳ ಬಗ್ಗೆ ಮಾತನಾಡಬೇಕು ಎಂದರೆ ಇಲ್ಲಿ ಮಿಸಲೇನಿಯಸ್ ಡಿಮ್ಯಾಂಡು, ಟ್ರಾನ್ಸ್‌ಪೋರ್ಟು ಮತ್ತು ಫುಡ್ ಇದರ ಜೊತೆಗೇ ಮುನಿಸಿಪಾಲಟಿಗಳ ಡಿಮ್ಯಾಂಡುಗಳನ್ನೂ ಸೇರಿಸಿದ್ದಾರೆ. ಮುನಿಸಿಪಾಲಟಿಗಳಿಗಾಗಿ ಸುಮಾರು ಆರು ಕೋಟಿಯಷ್ಟು ಹಣವನ್ನು ಸಾಲವಾಗಿ ಹಾಗೂ ಗ್ರ್ಯಾಂಟುಗಳ ಮೂಲಕ ಕೊಟ್ಟಿರುವುದರಿಂದ ಮುನಿಸಿಪಾಲಟಿಗಳನ್ನು ಡೆವಲಪ್ ಮಾಡುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇಂತಹ ಮುಖ್ಯವಾದ ಮುನಿಸಿಪಾಲಟಿಗಳ ವಿಚಾರವಾಗಿ ಸರಿಯಾಗಿ ಮಾತನಾಡಲು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳಿದರೂ ಅದನ್ನು ಕೇಳದೆ ಇಲ್ಲ ಆತುರಾತುರದಿಂದ ಪಾಸುಮಾಡಬೇಕೆಂದು ತಂದಿದ್ದಾರೆ. ಇದರ ಬಗ್ಗೆ ನಾವು ಹೇಳುವುದನ್ನು ಕೇಳಲು ಕಿವಿ ಇದ್ದರೂ ಸಹ ಕೇಳದಂತೆ ಕಣ್ಣಿದ್ದರೂ ಕಾಣದಂತೆ ಹೋಗುವ ಒಂದು ಸಂಭವ ಕಾಣಬರುತ್ತಿದೆ. ಇದೇ ಪ್ರಕಾರ ಇಲ್ಲಿ ನಡೆಯುತ್ತಿದೆ. ಇನ್ನೆಷ್ಟು ವರ್ಷಗಳ ಕಾಲ ಇದು ನಡೆಯುತ್ತದೆಯೋ ನೋಡಬೇಕಾಗಿದೆ. ಮುನಿಸಿಪಾಲಟಿಯ ಬಗ್ಗೆ ಕೆಲವು ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ. ಇದನ್ನು ಹೇಳುವುದಕ್ಕೆ ಮುಂಚೆ ಒಂದೇ ಒಂದು ವಿಷಯವನ್ನು ಟ್ರಾನ್ಸ್‌ಪೋರ್ಟು ಬಗ್ಗೆ ಹೇಳಿ ಮುಗಿಸುತ್ತೇನೆ. ಈ ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟು ಆಫೀಸರು, ಬ್ರೇಕ್ ಇನ್‌ಸ್ಪೆಕ್ಟರು ಮತ್ತು ಇತರ ಟ್ರಾನ್ಸ್‌ಪೋರ್ಟು ಆಫೀಸರುಗಳು ನಾಲ್ಕನೇ ವರ್ಗದಿಂದ ಹಿಡಿದು ಕ್ಲಾಸು ಎರಡು ಹಾಗೂ ಕ್ಲಾಸು ಒಂದನೇ ವರ್ಗದವರಿಗೆ ಎಷ್ಟು ಟೇಬಲ್‌ಗಳು ಮತ್ತು ಕುರ್ಚಿಗಳಿವೆಯೋ ಅಷ್ಟೂ ಸೇರಿಕೊಂಡರೆ ಒಬ್ಬೊಬ್ಬರಿಗೆ 12 ಕೈಗಳಾಗುತ್ತವೆ. ಪ್ರತಿಯೊಂದು ಟೇಬಲನಿಂದ ಟೇಬಲ್‌ಗೆ ಕಾಗದ ಹೋಗಬೇಕಾದರೆ ಲಂಚವಿಲ್ಲದೇ ಹೋಗುವುದೇ ಇಲ್ಲ. ಇದನ್ನು ಸತ್ಯವಾಗಿ ಧರ್ಮದಿಂದ ಹೇಳುತ್ತೇನೆ. ಇಲ್ಲಿರುವ ಪ್ರತಿಯೊಬ್ಬರೂ ಜುಲುಂನಿಂದ ಜಬರ್‌ದಸ್ತಿನಿಂದ ಕೆಲಸಮಾಡಿ ವಸೂಲುಮಾಡುತ್ತಿದ್ದಾರೆ. ಇಲ್ಲಿರುವ ಅಧಿಕಾರಿಗಳು ತಿಂಗಳೊಂದಕ್ಕೆ ಏನಿಲ್ಲ ಎಂದರೂ ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಮಾಮೂಲಿನಿಂದ ಸಂಪಾದನೆ ಮಾಡುತ್ತಿದ್ದಾರೆ. ಇದರಲ್ಲಿ ಎಲ್ಲರಿಗೂ ಪ್ರಪೋರ್ಷನೇಟಾಗಿ ಸಂಪಾದನೆಯಾಗುತ್ತಿರುತ್ತದೆ. ಇದರಲ್ಲಿ ಮ್ಯಾನೇಜರಿಗೆ ಇಷ್ಟು, ಕ್ಲಾರ್ಕುಗಳಿಗೆ ಇಷ್ಟು ಎಂದು ಇದರ ಪ್ರಪೋರ್ಷನ್ ಲೆಕ್ಕ ಮಾಡಿಕೊಂಡು ಮಾಮೂಲು ಬರುತ್ತಿದೆ. ಈ ಡಿಪಾರ್ಟುಮೆಂಟಿನಲ್ಲಿ ಲಂಚ ರುಷುವತ್ತುಗಳು ಜಾಸ್ತಿಯಾಗುತ್ತಿವೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದರೂ ಇದರ ಬಗ್ಗೆ ಅವರು ಹೇಳುವಾಗ ವಿರೋಧ ಪಕ್ಷದವರು ಸುಮ್ಮನೆ ಟೀಕೆ

ಮಾಡುವುದಕ್ಕಾಗಿ ಹೇಳುತ್ತಾರೆ ಎಂದು ತಿಳಿಸುತ್ತಾರೆ. ಮತ್ತು ಯಾರನ್ನಾದರೂ ಹಿಡಿದು ಕೊಡಬೇಕೆಂದು ಹೇಳುತ್ತಾರೆ. ನಾವೇ ಹಿಡಿದುಕೊಡಬೇಕಾದರೆ ವಿಜಿಲೆನ್ಸ್ ಇಲಾಖೆ ಹಾಗೂ ಕರಪ್ಷನ್ ಇಲಾಖೆ ಏಕೆ ಇರಬೇಕು ? ದೇವರು ನಿಮಗೆ ಕಣ್ಣು ಕೊಟ್ಟಿರುತ್ತಾನೆ. ಇದನ್ನು ಸರಿಯಾಗಿ ನೋಡಿಕೊಂಡು ಬರುವುದಕ್ಕಾಗುವುದಿಲ್ಲವೇ ? ಒಬ್ಬ ಆರ್. ಟಿ. ಓ. ಅವರು ಇಲ್ಲಿಗೆ ಬರುವುದಕ್ಕೆ ಮುಂಚೆ ಇವರಿಗೆ ಇದ್ದ ಆಸ್ತಿಗಳೇನು ಮತ್ತು ಇಲ್ಲಿಗೆ ಬಂದಮೇಲೆ ಇವರ ಸ್ವರೂಪವೇನು, ಎಷ್ಟು ಆಸ್ತಿಗಳನ್ನು ಮಾಡಿದ್ದಾರೆ ಎಷ್ಟು ರೆಫ್ರಿಜರೇಟರುಗಳು ಹಾಗೂ ಗೋಲ್ಡ್ ಎಷ್ಟು ಮಾಡಿದ್ದಾರೆ ಇವನ್ನೆಲ್ಲಾ ಲೆಕ್ಕ ಹಾಕಿಕೊಂಡು ನೋಡಿದರೆ ನಿಮಗೇ ಎಲ್ಲ ವಿಚಾರಗಳೂ ಗೊತ್ತಾಗುತ್ತವೆ. ಸರಕಾರಕ್ಕೆ ಇದನ್ನು ನೋಡುವುದಕ್ಕೆ ಕಣ್ಣು ಇದ್ದರೂ ಕಣ್ಣಿಲ್ಲದಂತೆ ಕಿವಿ ಇದ್ದರೂ ಕೇಳದವರಂತೆ ಹೋಗುತ್ತಿದ್ದಾರೆ. ಎಲ್ಲ ಕಡೆ ಇರುವ ಆರ್. ಟಿ. ಓ. ಆಫೀಸುಗಳ ಬಗ್ಗೆ ಇಂತಹ ದೂರುಗಳೂ ಬರುತ್ತಲೇ ಇವೆ ಮತ್ತು ಜನರಿಗೆ ಇಂತಹ ತೊಂದರೆಗಳು ಇದೆ ಎಂದು ಎಲ್ಲರಿಗೂ ಗೊತ್ತಿದೆ. ಈ ಆಫೀಸುಗಳಲ್ಲಿ ಇದು ಒಂದು ರೀತಿಯ ರ್‍ಯಾಕೆಟ್‌ನಂತೆ ನಡೆಯುತ್ತದೆ. ಇದನ್ನು ಪೂರ್ತಿ ಕೊಡೆದು ಹಾಕುವವರೆಗೂ ಯಾರಿಗೂ ಅನುಕೂಲವಾಗುವುದಿಲ್ಲ ಮತ್ತು ಈ ಡಿಪಾರ್ಟ್‌ಮೆಂಟಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಇವೊತ್ತು ನಾವು ಪೇಪರುಗಳಲ್ಲಿ ಅನೇಕ ಬಸ್ಸುಗಳ ಆಕ್ಸಿಡೆಂಟುಗಳು ಹಾಗೂ ಲಾರಿಗಳ ಆಕ್ಸಿಡೆಂಟುಗಳು ಆಗುತ್ತಿರುವುದನ್ನು ನೋಡುತ್ತಲೇ ಇರುತ್ತೇವೆ. ಇದಕ್ಕೆ ಕಾರಣ ಬ್ರೇಕ್ ಇನ್‌ಸ್ಪೆಕ್ಟರುಗಳು ಸರಿಯಾಗಿ ತನಿಖೆ ಮಾಡದೆ ಸರ್ಟಿಫಿಕೇಟುಗಳನ್ನು ಕೊಡುತ್ತಿರುವುದೇ ಆಗಿದೆ. ಇಂತಹ ಆಕ್ಸಿಡೆಂಟುಗಳಿಂದ ಎಷ್ಟೋ ಜನರು ಸಾಯುತ್ತಾರೆ ಮತ್ತು ಇದರಿಂದ ಜನಸಂಖ್ಯೆಯೂ ಕಡಿಮೆಯಾಗುತ್ತದೆ. ಸರಕಾರ ಜನಸಂಖ್ಯೆ ಕಡಿಮೆ ಮಾಡಬೇಕೆಂದು ಬೇಕಾದಷ್ಟು ಖರ್ಚು ಮಾಡುತ್ತಿದೆ. ಇಂತಹ ಆಕ್ಸಿಡೆಂಟುಗಳಿಂದಲೇ ಬಹಳ ಜನ ಸಾಯುತ್ತಿರುವಾಗ ಇದಕ್ಕೆ ಬೇರೆ ಒಂದು ಯೋಜನೆ ಏತಕ್ಕೆ ಮಾಡಬೇಕು ಎಂದು ಕೇಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಪ್ರತಿಯೊಂದೂ ಪಿಕ್ ಅಂಡ್ ಚೂಸ್ ಮತ್ತು ಫಿಸ್ ಅಂಡ್ ಫ್ಯಾನ್‌ಸೀಸ್ ತರಹ ಕೆಲಸಗಳು ನಡೆಯುತ್ತಿವೆ. ಯಾರು ಇಲ್ಲಿ ತಮಗೆ ಸರಿಯಾಗಿ ಅನುಕೂಲಮಾಡಿಕೊಂಡು ಅನುಸರಿಸಿಕೊಂಡು ಇರುತ್ತಾರೋ ಮತ್ತು ಸರಿಯಾದ ರೀತಿಯಲ್ಲಿ ಅವರಿಗೆ ಬರುವ ಮಾಮೂಲುಗಳನ್ನು ಸಂಪಾದಿಸಿಕೊಡುತ್ತಾರೋ ಅಂತಹವರು ಹತ್ತು ವರ್ಷಬೇಕಾದರೂ ಒಂದೇ ಜಾಗದಲ್ಲಿರಬಹುದು. ಅವರಿಗೇನೂ ತೊಂದರೆ ಬರುವುದಿಲ್ಲ ಮತ್ತು ಅಂತಹ ಖದೀಮರುಗಳಿಗೇ ಇಲ್ಲಿ ಸ್ಥಾನಗಳು ಮೀಸಲಾಗಿವೆ ಮತ್ತು ಕಮ್ಯೂನಲ್ ಭಾವನೆ ಎಷ್ಟು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ಯಾವುದಾದರೂ ಬಹುಮತ ಸಂಖ್ಯೆಯಲ್ಲಿರುವ ಜನಕ್ಕೆ ಅನುಕೂಲಗಳು ಸಿಗುತ್ತವೆ. ಮೈನಾರಿಟಿಯಲ್ಲಿರುವ ಜನಕ್ಕೆ ಯಾವ ಅನುಕೂಲಗಳೂ ಸಿಗುವುದಿಲ್ಲ ಮತ್ತು ಅವರಿಗೆ ಜಾಗವೂ ಇಲ್ಲ. ಈ ಸರಕಾರದಲ್ಲಿ ಯಾರಿಗೂ ಮಾನ ಇಲ್ಲ ಮರ್ಯಾದೆ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಮುನಿಸಿಪಾಲಿಟಿಗಳ ಬಗ್ಗೆ ಹೇಳುವಾಗ 1934ರಲ್ಲಿ ಆದ ಮುನಿಸಿಪಲ್ ಆಕ್ಟ್ ಏನಿದೆಯೋ ಅದನ್ನೇ ಇನ್ನೂ ಅನುಸರಿಸಿಕೊಂಡು ಬರುತ್ತಿದ್ದಾರೆ. ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ಕೂಡ ಈ ಮಂತ್ರಿಮಂಡಲದವರು ಇಂತಹ ಒಂದು ಹಳೇ ಆಕ್ಟನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಯೇ ಹೊರತು ಒಂದು ಯೂನಿಫಾರಂ ಆಕ್ಟ್ ಮಾಡಲಿಕ್ಕೆ ಇವರಿಗೆ ಬುದ್ಧಿ ಬರಲಿಲ್ಲ. ಇವರು ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದಾರೆ. ಎಲ್ಲ ಜವಾಬುದಾರಿಗಳನ್ನೂ ಸರಕಾರದವರೇ ಇಟ್ಟುಕೊಂಡಿದ್ದಾರೆ. ಅನೇಕ ಭಾಗಗಳು ಇಲ್ಲಿ ಸೇರಿರುವುದರಿಂದ ಈಗ ಇರುವ ಆಕ್ಟಿನಂತೆ ಪ್ರತಿಯೊಂದಕ್ಕೂ ಇಲ್ಲಿರುವ ಕಮಿಷನರ ಬಳಿಗೇ ಹೋಗಬೇಕಾಗಿದೆ. ಕಮಿಷನರು ಮಾಡುವ ತೀರ್ಮಾನದ ಮೇಲೆ ಅಪೀಲು ಹೋಗಬೇಕಾದರೆ ಡಿವಿಜನಲ್ ಕಮಿಷನರ ಕಡೆಗೆ ಹೋಗಬೇಕು, ಇಲ್ಲಿ ಹೈಕೋರ್ಟಿನ ಕಡೆಗೆ ಹೋಗಬೇಕು. ವಾಟರು ಚಾರ್ಜು ಹೆಚ್ಚಾಗಿದೆ, ಇದನ್ನು ಸರಿಪಡಿಸಿ ನ್ಯಾಯ ಕೊಡಬೇಕು ಎಂದು ಕೇಳಿದರೆ ಇದರ ಬಗ್ಗೆ ಸರಿಯಾದ ಆದೇಶ ಕೊಡುವುದಿಲ್ಲ. ಇಲ್ಲಿರುವ ಅಧಿಕಾರಿಗಳೆಲ್ಲಾ ಹರಿಶ್ಚಂದ್ರನ ಮಕ್ಕಳು ಇಲ್ಲವೇ ಮೊಮ್ಮಕ್ಕಳು ಎಂದು ಇವರು ಭಾವಿಸಿರುವಂತಿದೆ. ಇವರು ಹೇಳುವುದೆಲ್ಲಾ ಸತ್ಯ, ಬಾಕಿಯವರು ಹೇಳುವುದು ಅಲ್ಲ. ಮುನಿಸಿಪಾಲಿಟಿಯವರದೇ ಸತ್ಯ ಎಂದು ಹೇಳುವುದಾದರೆ ಮುನಿಸಿಪಾಲಿಟಿಗಳನ್ನು ನಡೆಸುವುದಕ್ಕೇ ಆಗುವುದಿಲ್ಲ. ಸ್ವಾತಂತ್ರ್ಯ ಬರುವುದಕ್ಕೆ ಪೂರ್ವ ಇದ್ದಂತಹ ಇಂತಹ ಅಯೋಗ್ಯವಾದ ಆಕ್ಟನ್ನು ಜಾರಿಗೆ ತಂದರೆ ಇದರಿಂದೇನು ಅನುಕೂಲಗಳು ಜನರಿಗೆ ದೊರೆಯುತ್ತವೆ ಎನ್ನುವುದನ್ನು ಯಾರೂ ಯೋಚನೆ ಮಾಡಿದಂತೆ ಕಾಣಲಿಲ್ಲ. ಇಂತಹ ಆಕ್ಟ್ ತಂದು ಇಲ್ಲಿರುವ ಕೌನ್ಸಿಲರುಗಳು ಅಧಿಕಾರಿಗಳ ಗುಲಾಮರಾಗಿ ಇರಲು ಬರಬೇಕೇನು ? ಇದು ಪ್ರಜಾಪ್ರಭುತ್ವದಲ್ಲಿ ತುಂಬಾ ಅವಮಾನವಾದ ವಿಚಾರ. ಯಾರು ಹೇಳಿದರೂ ಇವನ್ನು ಕೇಳುತ್ತಿಲ್ಲ. ಪ್ರಜಾ

(ಶ್ರೀ ಅಜೀಜ್ ಸೇಟ್)

ಪ್ರಭುತ್ವದಲ್ಲಿ ನಂಬಿಕೆ ಇರುವವರು ಇಂತಹ ಒಂದು ಆಕ್ಟಿಗೆ ಬೇಗನೇ ಒಂದು ಅಮೆಂಡುಮೆಂಟನ್ನು ಇದುವರೆಗೆ ಏಕೆ ಮಾಡುವುದಕ್ಕೆ ಮನಸ್ಸು ಮಾಡಲಿಲ್ಲ ?

ಇನ್ನು ಮೈಸೂರು ಬೆಂಗಳೂರಿನಲ್ಲಿ ಮುಸ್ಲಿಂ ಜನಾಂಗಕ್ಕೆ ಕಬರ್‌ಸ್ಥಾನ್, ಮಸೀದಿ ಹಾಗೂ–ಈದಿಗಾಕ್ಕೆ ಬೇಕಾದ ಜಾಗದ ಬಗ್ಗೆ ಹೈಕೋರ್ಟಿನಲ್ಲಿ ಈಚೆಗೆ ಒಂದು ರಿಟ್ ಹಾಕಿದ್ದಾರೆ. ಬಾಕಿ ಜನಾಂಗಕ್ಕೆಲ್ಲಾ ಸ್ಮಶಾನ ಇರಬಹುದು, ನಮ್ಮ ಜನಾಂಗದವರಿಗೆ ಇರಬಾರದು ಎಂತಲೋ? ಕಾನ್‌ಸ್ಟಿಟ್ಯೂಷನ್‌ಗೆ ವಿರುದ್ಧವಾಗಿ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ಈ ಅಧಿಕಾರಿಗಳಿಗೆ ವಿಶಾಲ ಮನೋಭಾವ ಎಂಬುದು ಇಲ್ಲ. ಇಂತಹ ಅಧಿಕಾರಿಗಳನ್ನು ಸರ್ಕಾರದವರು ಇಟ್ಟುಕೊಳ್ಳುವುದು ಸರಿಯಲ್ಲ. ಅವರನ್ನು ಮನೆಗೆ ಕಳಿಸಿಬಿಟ್ಟರೆ ಉತ್ತಮವೆಂದು ಹೇಳುತ್ತೇನೆ. ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. ಇಂತಹ ಅಧಿಕಾರಿಗಳನ್ನು ಮುನಿಸಿಪಾಲಿಟಿಗಳಲ್ಲಿ ಆಗಲೀ ಕಾರ್ಪೊರೇಷನ್‌ಗಳಲ್ಲಿ ಆಗಲೀ ಇಟ್ಟಿದ್ದೇ ಆದರೆ ಇವರು ಮಾಡತಕ್ಕಂಥ ಕೆಲಸದಿಂದ ಜನರ ಮನಸ್ಸು ನೊಂದು ಕೆಲವರು ಹೈಕೋರ್ಟಿಗೆ ರಿಟ್ ಹೋಗುವ ಸಂದರ್ಭ ಬರುತ್ತದೆ. ಮೈಸೂರು ನಗರದಲ್ಲಿ ಒಬ್ಬರಿಗೆ 40 ಗ್ಯಾಲನ್ ಕುಡಿಯುವ ನೀರನ್ನು ಒದಗಿಸಬೇಕೆಂದು ನಿಯಮವಿದ್ದರೂ ಕೂಡ ಈಗ 2 ಗ್ಯಾಲನ್ ನೀರನ್ನೂ ಕೂಡ ಒದಗಿಸುತ್ತಿಲ್ಲ. ನೀರನ್ನು ಸಪ್ಲೈ ಮಾಡುವ ಕೆಲಸವನ್ನು ಸರ್ಕಾರದವರು ಸುಯರೇಜ್ ಬೋರ್ಡಿಗೆ ವಹಿಸಿದ್ದಾರೆ. ಈ ಬೋರ್ಡ್ ಅಟಾನಮಸ್ ಬಾಡಿ ಎಂದು ಹೇಳುತ್ತಾರೆ. ಇಂತಹ ಬೋರ್ಡ್‌ಗಳನ್ನು ರಚನೆ ಮಾಡುವ ಉದ್ದೇಶವೇನೆಂದರೆ ಆ ಬೋರ್ಡ್‌ನಲ್ಲಿ ತಮಗೆ ಬೇಕಾದವರನ್ನು ಚೇರ್‌ಮನ್‌ರನ್ನಾಗಿ ಮಾಡುವ ಉದ್ದೇಶದಿಂದಲೇ ಹೊರತು ಇಂತಹ ಬೋರ್ಡ್‌ಗಳಿಂದ ಸಾಮಾನ್ಯ ಜನರಿಗೆ ಯಾವ ರೀತಿಯ ಅನುಕೂಲವೂ ಆಗುವುದಿಲ್ಲ. ಇವತ್ತಿನದಿವಸ ಮನಸ್ಸಿಗೆ ಬಂದಂತೆ ಕಂದಾಯವನ್ನು ಹಾಕುತ್ತಿದ್ದಾರೆ. ಯಾವತ್ತೂ ಕಂದಾಯವನ್ನು ಕೊಡುವವರು ಕೊಟ್ಟೇ ಕೊಡುತ್ತಾರೆ. ಕೊಡಲಿಕ್ಕೆ ಶಕ್ತಿ ಇಲ್ಲದವರು ಕಷ್ಟಪಡುತ್ತಲೇ ಇರುತ್ತಾರೆ. ಒಂದು ಮನೆಗೆ 5 ರೂಪಾಯಿ ಕಂದಾಯ ಇದ್ದ ಕಡೆ 60ರಿಂದ 100 ರೂಪಾಯಿಗಳವರೆಗೆ ಹೆಚ್ಚಿಸಿರುವುದರಿಂದ ಅವರು ಯಾವ ರೀತಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಮೈಸೂರಿನಲ್ಲಿ ಕೆಲವರು ಕಂದಾಯ ಕೊಟ್ಟಿದ್ದರೂ ಕೂಡ ಮುನಿಸಿಪಾಲಿಟಿಯ ಅಧಿಕಾರಿಗಳು ಪುಸ್ತಕದಲ್ಲಿ ನಮೂದು ಮಾಡಿರುವುದಿಲ್ಲ. ಕಂದಾಯ ಕೊಟ್ಟಿರುವವರ ಹತ್ತಿರವೇ ಮತ್ತೆ ಕಂದಾಯ ಕೇಳುವುದಕ್ಕೆ ಹೋಗುತ್ತಾರೆ. ಕೊಟ್ಟಿದ್ದೇವೆಂದು ಅವರು ಹೇಳಿದರೆ ರಶೀತಿ ತೋರಿಸಿ ಎಂದು ಅಧಿಕಾರಿಗಳು ಕೇಳುತ್ತಾರೆ. ಕಂದಾಯ ಕೊಟ್ಟ ತಕ್ಷಣ ರಶೀದಿ ಕೊಡದಿರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಈ ತೊಂದರೆಯನ್ನು ತಪ್ಪಿಸಲು ಮುನಿಸಿಪಾಲಿಟಿಯವರು ಸರಿಯಾಗಿ ಲೆಕ್ಕಪತ್ರವನ್ನು ಇಟ್ಟುಕೊಂಡು ಕಂದಾಯವನ್ನು ಪ್ರತಿಯೊಬ್ಬರೂ ಕೊಟ್ಟ ತಕ್ಷಣ ಅದನ್ನು ದಾಖಲೆಯಲ್ಲಿ ನಮೂದು ಮಾಡಬೇಕು. ಎಷ್ಟೋ ಕಡೆ ಆಡಿಟ್ ಬೇರೆ ಆಗಿಲ್ಲ. ಈ ರೀತಿಯಾಗಿ ದುಡ್ಡು ಕೊಟ್ಟ ಜನರ ಮೇಲೂ ಕೃಪಾ ತೆಗೆದುಕೊಂಡಿರುವ ಅನೇಕ ಉದಾಹರಣೆಗಳು ಉಂಟು. ಇವತ್ತಿನದಿವಸ ಜನರು ಹೇಳುವ ಮಾತಿಗೆ ಬೆಲೆಯೇ ಇಲ್ಲವಾಗಿದೆ. ಇವನ್ನೆಲ್ಲಾ ಸರಿಪಡಿಸಬೇಕಲ್ಲದೆ ಮುನಿಸಿಪಲ್ ಆಕ್ಟನ್ನು ಕೂಡ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಮುನಿಸಿಪಲ್ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಂಧಪಟ್ಟಂತೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಇನ್ನೂವರೆಗೆ ಮಾಡಿಲ್ಲವಾದ್ದರಿಂದ ಒಂದು ಕಡೆ ಕೆಲಸಕ್ಕೆ ಸೇರಿದವರು ರಿಟೈರ್ ಆಗುವವರೆಗೂ ಅಲ್ಲಿಯೇ ಇರಬೇಕಾದ ಪರಿಸ್ಥಿತಿ ಬಂದಿದೆ. ಈಗಿರುವ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಈ ನೌಕರರಿಗೂ ಕೂಡ ಅನ್ಯಾಯವಾಗುವಂತೆ ತಿದ್ದುಪಡಿ ಮಾಡಬೇಕು. ಇದರಿಂದ ಆಡಳಿತ ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಇನ್ನು ಅನೇಕ ಮುನಿಸಿಪಾಲಿಟಿಗಳಲ್ಲಿ ರೂಲಿಂಗ್ ಪಾರ್ಟಿಗೆ ಸೇರಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇದ್ದರೆ ಕಾಲಾವಧಿ ಮುಗಿದಿದ್ದರೆ ಅವರನ್ನೇ ಮುಂದುವರಿಸಿದ್ದಾರೆ. ವಿರೋಧ ಪಕ್ಷಕ್ಕೆ ಸೇರಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರುವ ಕಡೆಗಳಲ್ಲಿ ಅವರ ಕಾಲಾವಧಿ ಮುಗಿದ ತಕ್ಷಣ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡಿದ್ದಾರೆ. ಈ ಒಂದು ತಾರತಮ್ಯ ಸರಿಯಲ್ಲ. ಎಲ್ಲರಿಗೂ ಒಂದೇ ನಿಯಮ ಇರಬೇಕು. ನಮ್ಮ ಮುಖ್ಯ ಮಂತ್ರಿಗಳು ಮೈಸೂರು ದೇಶದ ಎರಡೂವರೆ ಕೋಟಿ ಜನರಿಗೂ ಕೂಡ ನಾಯಕರಾಗಿರುವುದರಿಂದ ಎಲ್ಲರನ್ನೂ ಕೂಡ ಒಂದೇ ದೃಷ್ಟಿಯಿಂದ ನೋಡಬೇಕು. ವಿರೋಧ ಪಕ್ಷದವರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರುವ ಕಡೆಗಳಲ್ಲಿ ಅವರ ಕಾಲಾವಧಿ ಮುಗಿದ ತಕ್ಷಣ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡುವುದಾದರೆ

ರೂಲಿಂಗ್ ಪಾರ್ಟಿಗೆ ಸೇರಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರುವ ಕಡೆಗಳಲ್ಲಿಯೂ ಕೂಡು ಅವರ ಆಡಳಿತದ ಕಾಲಾವಧಿ ಮುಗಿದ ತಕ್ಷಣ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡಬೇಕ. ಈಗ ಸಿರ್ಸಿ, ಮಂಡ್ಯ ಮುಂತಾದ ಕಡೆಗಳಲ್ಲಿ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್‌ಗಳನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ಲೋಕಲ್ ಸೆಲ್ಫ್ ಗೌರ್ನಮೆಂಟ್ ವಿಷಯದಲ್ಲಿ ಸೂಪರ್‌ಸೀಡ್ ಮಾಡುವ ಯೋಜನೆಯನ್ನು ಸರ್ಕಾರದವರು ಯಾವಾಗಲೂ ಮಾಡ ಬಾರದೆಂದು ಹೇಳುತ್ತೇನೆ. ತಾವು ಇದೇ ರೀತಿ ಆಡಳಿತವನ್ನು ನಡೆಸಿಕೊಂಡು ಹೋದರೆ ಜನರಲ್ಲಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊರಟುಹೋಗುತ್ತದೆ. ಅದಕ್ಕೆ ತಾವು ಅವಕಾಶ ಕೊಡಬೇಡಿ. ಯಾರೂ ಶಾಶ್ವತವಾಗಿ ಇರುವುದಿಲ್ಲ. ಮತ್ತು ಯಾರೂ ಶಾಶ್ವತವಾಗಿ ಅಧಿಕಾರದಲ್ಲಿ ಇರುವುದಕ್ಕೆ ಆಗುವುದಿಲ್ಲ. ತಾವು ಕಳೆದ 20 ವರ್ಷಗಳಿಂದ ಅಧಿಕಾರದಲ್ಲಿ ಇದ್ದೀರಿ. ತಮ್ಮ ಕೈಯಿಂದ ಅಧಿಕಾರ ಯಾವತ್ತು ಹೋಗುತ್ತದೋ ಗೊತ್ತಿಲ್ಲ. ಆದ್ದರಿಂದ ತಾವು ಅಧಿಕಾರದಲ್ಲಿ ಇರುವವರೆಗೆ ಒಳೆಯ ರೀತಿಯಲ್ಲಿ ಕೆಲಸ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ಸ್ವಾಗತ ಮಾಡಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಬಜೆಟ್ ಮೇಲೆ ಕೂಡ ಮಾತನಾಡಿದೆ. ಆರ್.ಟಿ.ಓ. ಆಫೀಸಿನಲ್ಲಿರುವ ಬ್ರೇಕ್ ಇನ್‌ಸ್ಪೆಕ್ಟರುಗಳು ಅನೇಕ ವರ್ಷಗಳಿಂದ ಇದ್ದಾರೆ. ಸುಮಾರು 20 ವರ್ಷಗಳಿಂದ ಈ ಅಧಿಕಾರಿಗಳು ಮಾಡುವ ಕೆಲಸವನ್ನು ನೋಡಿದ್ದೇನೆ. ಇವರು ಮಾಡುವ ಅನ್ಯಾಯವನ್ನು ಹೇಳಲು ಸಾಧ್ಯವಿಲ್ಲ. ಅಲ್ಲಿಗೆ ಲಾರಿಗಳು ಇನ್‌ಸ್ಪೆಕ್ಷನ್‌ಗೆ ಬರುತ್ತವೆ.

Sri S. SIVAPPA (Sravanabelgola).—Sir, on a point of procedure. Usually it is a practice in parliamentary democracy that the members belonging to the ruling party do not participate in the discussion on demands and cut motions. Most of the time is given to the Opposition members. It is so strange here that the Hon. Chair has divided the time for discussion for members on both the sides, plus the reply of the hon. Ministers concerned. This will hamper the progress of parliamentary democracy. At least in the fifty-fifty basis the reply of the Minister also should be included and the time divided.

Mr. SPEAKER.—I am just proceeding in accordance with the understanding between the parties here. Hon. Member Sri Nanjappa may continue his speech.

ಶ್ರೀ ಎ. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಈ ಬ್ರೇಕ್ ಇನ್‌ಸ್ಪೆಕ್ಟರುಗಳನ್ನು ತಕ್ಷಣ ಅಲ್ಲಿಂದ ತೆಗೆಯಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ. ನನಗೆ ಇದರ ಬಗ್ಗೆ ಸುಮಾರು 20 ವರ್ಷಗಳ ಅನುಭವವಿದೆ. ಲಾರಿಗಳನ್ನು ಮತ್ತು ಬಸ್ಸುಗಳನ್ನು ಸರಿಯಾಗಿ ಪರಿಶೀಲನೆ ಮಾಡದೆ ಮಾಮೂಲು ತೆಗೆದುಕೊಂಡು ಬ್ರೇಕ್ ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದಾರೆ. ಆರ್.ಟಿ.ಓ. ಆಫೀಸಿಗೆ ಹೋಗಿ ನೋಡಿದರೆ ಅಲ್ಲಿ ಎಷ್ಟು ಸ್ಥಳವಿದೆ ಎಂದು ಗೊತ್ತಾಗುತ್ತದೆ. ಅಲ್ಲಿ ಎಷ್ಟು ಜನರಿರುತ್ತಾರೆ. ಅಲ್ಲಿ ಕೆಲಸ ಹೇಗೆ ನಡೆಯುತ್ತದೆಂಬುದು ಗೊತ್ತಾಗುತ್ತದೆ. ಏಜೆಂಟ ರಿದ್ದಾರೆ, ಅವರ ಮೂಲಕ ಮಾಮೂಲು ಹೋಗುತ್ತದೆ. ಲಾರಿಗಳು ಮನೆಯಲ್ಲೇ ಇರುತ್ತವೆ, ಬ್ರೇಕ್ ಸರ್ಟಿಫಿಕೇಟ್ ಕೊಡುತ್ತಾರೆ, ಅದನ್ನು ಪಾಸ್ ಮಾಡುತ್ತಾರೆ. ಆದ್ದರಿಂದ ಈಗ ಇರುವ ಬ್ರೇಕ್ ಇನ್‌ಸ್ಪೆಕ್ಟರುಗಳನ್ನು ತಕ್ಷಣ ವರ್ಗ ಮಾಡಬೇಕೆಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇವರಿಂದ ನಮ್ಮ ಸರ್ಕಾರಕ್ಕೆ ಕೂಡ ಕೆಟ್ಟ ಹೆಸರು ಬರುತ್ತಿದೆ. ಅಲ್ಲಲ್ಲಿ ಲಾರಿ ಮತ್ತು ಬಸ್ಸುಗಳಿಂದ ಅಪಘಾತಗಳಾಗಿ ಜನ ಸಾಯುತ್ತಿದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ಈ ದಿನದ ಪತ್ರಿಕೆಯಲ್ಲಿ ನಾಲ್ಕು ಜನ ಸತ್ತಿದ್ದಾರೆ ಎಂದು ನೋಡಿದೆ. ವಾಹನಗಳನ್ನು ಪರೀಕ್ಷೆ ಮಾಡಲು ಬೇಕಾದ ಸ್ಥಳವಿಲ್ಲ. ಬ್ರೇಕ್ ಇನ್‌ಸ್ಪೆಕ್ಷನ್‌ಗಾಗಿ ಬರುವ ವಾಹನಗಳನ್ನು 40—45 ಮೈಲಿ ವೇಗದಲ್ಲಿ ಓಡಿಸಿ ಬ್ರೇಕ್ ಹಾಕಿದರೆ ಅದು ಎಷ್ಟು ದೂರದಲ್ಲಿ ನಿಲ್ಲುತ್ತದೆ ಎನ್ನುವುದು ಗೊತ್ತಾಗುತ್ತದೆ. ದುಡ್ಡು

(ಶ್ರೀ ಎ. ನಂಜಪ್ಪ)

ತೆಗೆದುಕೊಂಡು ಪಾಸ್ ಮಾಡುವುದರಿಂದ ಅಪಘಾತಗಳಿಗೆ ಇವರೇ ಕಾರಣರು ಎಂದು ಹೇಳ ಬಹುದು. ಇಂಥ ಅಧಿಕಾರಿಗಳನ್ನು ತಕ್ಷಣ ವರ್ಗ ಮಾಡಬೇಕು, ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು ಎಂದು ತಿಳಿಸುತ್ತೇನೆ.

ಬಿ.ಟಿ.ಎಸ್. ನಲ್ಲಿ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಕೆಳಮಟ್ಟದಲ್ಲಿರುವವರು ಸರಿಯಾಗಿ ಯಾವುದನ್ನೂ ಗಮನಿಸುವುದಿಲ್ಲ. ಬಸ್ಸುಗಳಲ್ಲಿ ಕುರಿ ತುಂಬಿದ ಹಾಗೆ ಜನರನ್ನು ತುಂಬುತ್ತಾರೆ. ಎಷ್ಟು ಸೀಟುಗಳಿವೆಯೋ ಅಷ್ಟು ಜನರನ್ನು ಕೂಡಿಸಬೇಕು ಮತ್ತು ಸ್ಟ್ಯಾಂಡಿಂಗ್ 10 ಜನರನ್ನು ನಿಲ್ಲಿಸಬಹುದು. ಹಾಗೆ ಮಾಡದೆ ಬಸ್ಸುಗಳಲ್ಲಿ ಜನರನ್ನು ತುಂಬಿ, ಕಂಡಕ್ಟರ್ ಟಿಕೆಟ್ ಕೊಡುವುದಕ್ಕೂ ಅವಕಾಶವಿಲ್ಲದಂತೆ ಮಾಡುತ್ತಾರೆ. ಇದನ್ನು ನಾನು ನೋಡಿದಾಗ ಸ್ಥಳದಲ್ಲಿರುವ ಇನ್‌ಸ್ಪೆಕ್ಟರಿಗೂ ತಿಳಿಸಿದ್ದೇನೆ. ಇದಲ್ಲದೆ ಕಂಡಕ್ಟರುಗಳು ಪ್ರಯಾಣಿಕರ ಹತ್ತಿರ ಟಿಕೆಟ್ ತೆಗೆದು ಕೊಳ್ಳುತ್ತಾರೆ. ಒಬ್ಬ ಕಂಡಕ್ಟರ್ ಹಾಗೆ ಮಾಡುತ್ತಿದ್ದುದನ್ನು ನಾನು ನೋಡಿ ಏಕೆ ಟಿಕೆಟ್ ತೆಗೆದುಕೊಳ್ಳುತ್ತೀ ಎಂದು ಕೇಳಿದ್ದಕ್ಕೆ ತೆಗೆದುಕೊಂಡರೆ ಏನು, ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದ. ನಾನು ಅದರ ಬಗ್ಗೆ ಡೆಪ್ಯುಟಿ ಜನರಲ್ ಮ್ಯಾನೇಜರ್ ಅವರಿಗೆ ಬರೆದೆ. ಸಂಬಂಧಪಟ್ಟ ಕಂಡಕ್ಟರ ಮೇಲೆ ಕ್ರಮ ತೆಗೆದುಕೊಂಡಿರುವುದಾಗಿ ಉತ್ತರ ಕೊಟ್ಟರು. ಏನು ಕ್ರಮ ತೆಗೆದು ಕೊಂಡರು ಎನ್ನುವುದು ನನಗೆ ಗೊತ್ತಿಲ್ಲ.

ಪ್ರಯಾಣಿಕರ ಬಸ್ಸುಗಳ ಮೇಲೆ ತರಕಾರಿ ಮೂಟೆ ಮತ್ತು ಇತರ ಮೂಟೆಗಳನ್ನು ತರುತ್ತಾರೆ. ಮೇಲೆ ವಿಪರೀತ ಮೂಟೆಗಳನ್ನು ತುಂಬಿರುವಾಗ ಏನಾದರೂ ಹೆಚ್ಚು ಕಡಿಮೆ ಆದರೆ ಅದಕ್ಕೆ ಜವಾಬ್ದಾರರು ಯಾರು ? ಒಂದು ಲಾರಿಯಲ್ಲಿ ತುಂಬುವಷ್ಟು ಮೂಟೆಗಳನ್ನು ಬಸ್ಸುಗಳ ಮೇಲೆ ಹಾಕಿಕೊಂಡು ಬರುತ್ತಾರೆ. ಯಾರಾದರೂ ಅಧಿಕಾರಿಗಳು ಅಥವಾ ಮಂತ್ರಿಗಳು ಹಳೇ ಮದ್ರಾಸು ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಮೈಸೂರು ರಸ್ತೆ ಇಂಥ ಕಡೆ ಹೋಗಿ ನೋಡಿದರೆ ಬಸ್ಸುಗಳ ಮೇಲೆ ಎಷ್ಟು ಮೂಟೆಗಳನ್ನು ಹಾಕಿಕೊಂಡು ಬರುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಪ್ರಯಾಣಿಕರಿಗೆ ಸಂಬಂಧಪಟ್ಟ ಟ್ರಂಕ್ ಹಾಸಿಗೆ ಇಂಥವುಗಳನ್ನು ಪ್ರಯಾಣಿಕರ ಬಸ್ಸಿನ ಮೇಲೆ ಹಾಕಿಕೊಂಡು ಬರಬಹುದು. ಮೂಟೆಗಳನ್ನು ಬಸ್ಸುಗಳ ಮೇಲೆ ಹಾಕುತ್ತ ಬಂದರೆ ಬಸ್ಸುಗಳು ಎಷ್ಟು ದಿನ ಕೆಲಸ ಮಾಡುತ್ತವೆ. ಇದು ಬಹಳ ಅನ್ಯಾಯ. ದಯವಿಟ್ಟು ನಾಳೆಯಿಂದ ಬಸ್ಸುಗಳ ಮೇಲೆ ಯಾರೂ ಮೂಟೆ ಹಾಕಬಾರದು ಎಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

ಕಂಟೋನ್ಮೆಂಟು ಕಡೆ ಬಸ್ಸುಗಳು ಸಾಲದು ಎಂದು ಹೇಳಿದ್ದಕ್ಕೆ ಅಧಿಕಾರಿಗಳು ಬಂದು ನೋಡಿದರು, ಉಪಮಂತ್ರಿಗಳವರೂ ನೋಡಿದರು. ಪ್ರಯಾಣಿಕರು ಕ್ಯೂನಲ್ಲಿ 400-500 ಅಡಿ ದೂರದವರೆಗೂ ನಿಂತಿರುತ್ತಾರೆ. 26 ಮತ್ತು 21 ಮಾರ್ಗಗಳಲ್ಲಿ ಒಂದೊಂದು ಬಸ್ಸು ಹೆಚ್ಚಾಗಿ ಕೊಟ್ಟರು. ನಮ್ಮ ಕಡೆ ಹಳೇ ಬಸ್ಸುಗಳನ್ನು ಹಾಕುತ್ತಾರೆ, ದಯವಿಟ್ಟು ಹೊಸ ಬಸ್ಸುಗಳನ್ನು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ. ಬಸವನಗುಡಿ, ಮಲ್ಲೇಶ್ವರ ಈ ಕಡೆಗಳಿಗೆ ಐದಾರು ನಿಮಿಷಕ್ಕೆ ಒಂದೊಂದು ಬಸ್ಸು ಹಾಕಿದ್ದಾರೆ. ನಮ್ಮ ಕಡೆ ಸರಿಯಾಗಿ ಬಸ್ಸುಗಳು ಬರುವುದಿಲ್ಲ. ನಮ್ಮ ಕಡೆ ಬರುವ ಬಸ್ಸುಗಳು ಹೊರಡುವ ಸ್ಥಳದಲ್ಲಿಯೇ ಭರ್ತಿಯಾಗಿ ಬರುವುದರಿಂದ ಮಧ್ಯದಲ್ಲಿರುವ ಸ್ಟಾಪುಗಳಲ್ಲಿ ಕಾದಿರುವ ಜನಗಳಿಗೆ ಸ್ಥಳ ಸಿಕ್ಕುವುದಿಲ್ಲ. ಆದ್ದರಿಂದ ಕಂಟೋನ್ಮೆಂಟ್ ಕಡೆ ಹೆಚ್ಚು ಬಸ್ಸುಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಹೋದ ವರ್ಷ ಹೇಳಿದ್ದಕ್ಕೆ ಸ್ವಲ್ಪ ಅನುಕೂಲ ಮಾಡಿದ್ದಾರೆ. ಜನಗಳ ಕಷ್ಟ ಸುಖವನ್ನು ಗಮನಿಸಿ, ನಾನು ಕೇಳಿರುವ ಅನುಕೂಲತೆಗಳು ಜನತೆಗೆ ದೊರೆಯುವಂತೆ ಮಾಡಬೇಕೆಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

ಆಹಾರದ ಬಗ್ಗೆ ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಒಂದು ವಾರ ರೇಷನ್ ಬರುತ್ತದೆ, ಇನ್ನೊಂದು ವಾರ ಬರುವುದಿಲ್ಲ. ಜನಗಳು ಕಾದು ಕಾದು ಮನೆಗಳಿಗೆ ಹೋಗುತ್ತಾರೆ. ಅನೇಕ ಕಡೆಗಳಲ್ಲಿ ರೇಷನ್ ಬರಲಿಲ್ಲವೆಂದು ಹೇಳುತ್ತಾರೆ. ಬರಬರುತ್ತ ಕೊಡುವ ರೇಷನ್ ಕಡಮೆ ಮಾಡಿದ್ದಾರೆ. ರೈತರಿಗೆ ಬಹಳ ಅನ್ಯಾಯವಾಗುತ್ತಿದೆ ಎಂದು ಸರ್ಕಾರದವರು ಹೇಳುತ್ತಾರೆ. ನಿಜ, ಒಪ್ಪಿಕೊಳ್ಳೋಣ. ಬೆಂಗಳೂರು ನಗರದಲ್ಲಿ ವರ್ತಕರು ಏನಿದ್ದಾರೆ, ದೊಡ್ಡ ದೊಡ್ಡ ಮಿಲ್ ಇಟ್ಟುಕೊಂಡಿರುವವರು ಏನಿದ್ದಾರೆ, ಅವರನ್ನೆಲ್ಲ ನಮ್ಮ ಆಹಾರ ಮಂತ್ರಿಗಳು ಕರೆಸಿ ಈ ತರಹ ಮಾರಾಟ ಮಾಡಬೇಕು ಎಂದು ಒಂದು ದರವನ್ನು ಏಕೆ ನಿಗದಿ ಮಾಡಿ ರೇಷನ್ ಪದ್ಧತಿಯನ್ನು ತೆಗೆಯಬಾರದು ? ಈಗಿರುವ ಪದ್ಧತಿಯಿಂದ ಇನ್‌ಸ್ಪೆಕ್ಟರುಗಳಿಗೆ ಬಹಳ ಅನುಕೂಲವಾಗಿದೆ. ಇನ್‌ಸ್ಪೆಕ್ಟರು ಚೆಕ್ ಮಾಡಿದಾಗ ಅವರು ಮಾಮೂಲು ತೆಗೆದುಕೊಂಡು ಹೋಗುತ್ತಾರೆ. ಬಡವರಿಗೆ ಒಂದೆರಡು ಕೆ.ಜಿ. ಅಕ್ಕಿ ಕೂಡ ಸಿಕ್ಕದ ಹಾಗೆ ಮಾಡುತ್ತಾರೆ. ಆಮೇಲೆ ಹೋದರೆ ಆಗಿಹೋಯಿತು

ಎಂದು ಹೇಳುತ್ತಾರೆ. ಕೆಳಗಿರುವ ಇನ್‌ಸ್ಪೆಕ್ಟರ್ ಚೆನ್ನಾಗಿ ಲಂಚ ಹೊಡೆಯುತ್ತಾರೆ. ಆದುದರಿಂದ ಎಲ್ಲಾ ವರ್ತಕರನ್ನೂ ಕರೆಸಿ ಸರಕಾರದ ನಿಗದಿಮಾಡಿ ಇನ್‌ಫಾರ್ಮಲ್ ರೇಷನಿಂಗ್ ತೆಗೆದುಹಾಕಬೇಕು. ಪ್ರತಿ ತಿಂಗಳೂ ಕೂಡ ರೇಷನ್ ಸರಿಯಾಗಿ ಕೊಡುತ್ತಿಲ್ಲ. ಮೊನ್ನೆ ಕೂಡ ಜನರು ದೂರು ಹೇಳಿದರು. ಬೆಂಗಳೂರಿನಲ್ಲಿರುವವರಿಗೆ ವಿಚಾರ ಗೊತ್ತಿರಬೇಕು. ಕೇಳಿದರೆ ಬಾಯಿಗೆ ಬಂದಹಾಗೆ ಅಂಗಡಿಯವರು ಮಾತನಾಡುತ್ತಾರೆ, ಅಧಿಕಾರಿಗಳೂ ಅಷ್ಟೆ. ಸಣ್ಣ ಅಧಿಕಾರಿಗಳು ಮಾಡುವ ತಪ್ಪಿಗೆ ದೊಡ್ಡವರಿಗೆ ಕೆಟ್ಟ ಹೆಸರು ಬರುತ್ತದೆ. ಆದುದರಿಂದ ದಯೆವಿಟ್ಟು ಕೂಡಲೆ ಮಂತ್ರಿಗಳು ವರ್ತಕರನ್ನು ಕರೆಸಿ ಒಂದು ದರ ನಿಗದಿಮಾಡಿ ಅಕ್ಕಿ ಕಂಟ್ರೋಲ್ ತೆಗೆಯಬೇಕು. ಸೀಮೆಯಣ್ಣೆ ಬಡವರಿಗೆ ಸಿಕ್ಕುವುದಿಲ್ಲ ಲೈಟ್ ಇಲ್ಲದಿರುವವರು ಅದನ್ನೇ ಉಪಯೋಗಿಸುತ್ತಾರೆ. ಅದನ್ನು ಕೆಲವರು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ದಯೆಯಿಟ್ಟು ಅದನ್ನು ಸರಿಯಾಗಿ ಹಂಚಲು ಅವಕಾಶ ಮಾಡಬೇಕು, ಜನರಿಗೆ ಬಹಳ ಕಷ್ಟವಾಗಿದೆ. ಬಡವರು ಅದನ್ನು ಉಪಯೋಗಮಾಡುತ್ತಿದ್ದಾರೆ.

ಮೂರನೆಯದು ಮುನಿಸಿಪಲ್ ಆಡಳಿತ. ನಮ್ಮ ಬೆಂಗಳೂರು ಜನರಿಗೆ ಈಗಿನ ಮುಖ್ಯ ಮಂತ್ರಿಗಳು ಮತ್ತು ಬಿ. ಎಂ. ಪಾಟೀಲರು ಬಂದಮೇಲೆ ಬಹಳ ಅನುಕೂಲಮಾಡಿದ್ದಾರೆ. ಮುಂಚೆ ಜನರಿಗೆ ಬಹಳ ಅನ್ಯಾಯವಾಗಿತ್ತು. ಹೇಳಿದಮೇಲೆ ಬೇರೆ ಅಧಿಕಾರಿಗಳನ್ನು ಹಾಕಿದ್ದಾರೆ. ಕಾರ್ಪೊರೇಷನ್ ಜನರ ಕಷ್ಟಸುಖ ತಿಳಿದುಕೊಂಡು ಸೈಕಲ್ ತೆರಿಗೆ ರದ್ದು ಮಾಡಿದ್ದಾರೆ ಮುಖ್ಯ ಮಂತ್ರಿಗಳು ಅದನ್ನು ತೆಗೆದರೆ ವಿಪರೀತ ನಷ್ಟವಾಗುವುದಿಲ್ಲ, ಬಡವರಿಗೆ ಅನುಕೂಲವಾಗುವುದು ಎಂದು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಹಾಗೆಯೇ ಉಚಿತವಾಗಿ ನೀರನ್ನು ಉಪಯೋಗಿಸಲು ಜನರಿಗೆ ತಿಂಗಳಿಗೆ 25 ಸಾವಿರ ಲೀಟರುಗಳವರೆಗೆ ಅವಕಾಶ ಮಾಡಿದ್ದಾರೆ. ಆದರೆ ನೀರು ಸರಿಯಾಗಿ ಬರದೆ ಆಗಾಗ್ಯೆ ಜನರಿಗೆ ತೊಂದರೆಯಾಗುತ್ತಿದೆ, ನಿನ್ನೆ ಮತ್ತು ಈ ದಿವಸ ಸಾಯಂಕಾಲ ನೀರು ಬರುವುದಿಲ್ಲ. ಪೈಪ್ ಒಡೆದುಹೋಗಿದೆ ಎಂದು ಆಗಾಗ್ಯೆ ನೀರನ್ನು ನಿಲ್ಲಿಸುತ್ತಾರೆ, ಉಗಾದಿ ಹಬ್ಬದ ದಿನವೂ ಕೂಡ ನೀರು ಬರಲಿಲ್ಲ. ತಿಂಡಿ ಇಲ್ಲದಿದ್ದರೂ ಇರಬಹುದು, ನೀರಿಲ್ಲದಿದ್ದರೆ ಹೇಗೆ ? ಏಕೆ ಹೀಗಾಗುವುದು ? ನೀರೆಲ್ಲಿ ಹೋಗುವುದು ? ಅನೇಕ ಕಡೆ ಪೈಪ್ ಕಟ್ಟುಹೋಗಿ ನೀರು ವೇಸ್ಟ್ ಆಗುವುದು. ವಾಟರ್ ಬೋರ್ಡ್ ಸಮಿತಿಯಲ್ಲಿದ್ದು ನಾನು ಅನೇಕ ಸಲಹೆ ಕೊಟ್ಟಿದ್ದೇನೆ. ಕೆಲವು ಕಡೆ ಎಷ್ಟು ದಿನಗಳಾದರೂ ಲಿಂಕ್ ಮಾಡಿ ಸರ್ವಿಸ್ ಕೊಟ್ಟಿಲ್ಲ. ನಾನು ಹೇಳಿದಮೇಲೆ ಲಿಸ್ಟ್ ಮಾಡಿಕೊಂಡಿದ್ದಾರೆ. ಪಬ್ಲಿಕ್ ಟ್ಯಾಪ್‌ಗಳನ್ನು ಅನೇಕ ಕಡೆ ತೆಗೆದುಹಾಕಿದ್ದಾರೆ. ನಾನು ಕೇಳಿದಾಗ ಜನವರಿ ಹತ್ತರೊಳಗೆ ಎಲ್ಲಾ ಕಡೆಗೂ ಸರ್ವಿಸ್ ಕೊಡುವುದಾಗಿ ಹೇಳಿದ್ದರು, ಆದರೆ 30 ನೆಯ ತಾರೀಖಾದರೂ ಆ ಕೆಲಸಮಾಡಲಿಲ್ಲ. ಹೀಗೆ ಅಧಿಕಾರಿಗಳು ಮಿಸ್‌ಗೈಡ ಮಾಡಿದರೆ ಜನರಿಗೆ ಹೇಗೆ ಅನುಕೂಲವಾಗುವುದು ? ಅವರು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಅವರನ್ನು ತೆಗೆದರು. ಪಬ್ಲಿಕ್ ಟ್ಯಾಪ್‌ಗಳು ಅನೇಕ ವರ್ಷಗಳಿಂದ ಇವೆ, ಅವನ್ನು ಬಡವರಿರುವ ಕಡೆ ಹಾಕಿದ್ದಾರೆ. ಹೊಸದಾಗಿ ಯಾವ ಪಬ್ಲಿಕ್ ಟ್ಯಾಪೂ ಕೊಟ್ಟಿಲ್ಲ, ಎರಡು ವರ್ಷ ಆಯಿತು. ಅಧಿಕಾರಿಗಳ ತಪ್ಪಿಗೆ ಕಾಂಗ್ರೆಸ್ಸಿನವರಾದ ನಾವು ಬಯ್ಯಿಸಿಕೊಳ್ಳಬೇಕಾಗಿದೆ, ಅಧಿಕಾರಿಗಳು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಮಾಡಬೇಕು. ನೀರು ವೇಸ್ಟ್ ಆಗುವುದನ್ನು ನೋಡುವುದಿಲ್ಲ, ಆದರೆ ಹಣ ಕಟ್ಟಬೇಕಾಗಿರುವವರು ಕಾರ್ಪೊರೇಷನ್‌ನವರು, ಪಬ್ಲಿಕ್ ಟ್ಯಾಪ್‌ಗಳು ಲೀಕ್ ಆಗುತ್ತಿದ್ದರೆ ನೋಡಿ ಜಾಗ್ರತೆ ಸರಿಪಡಿಸಬೇಕು. ಏಪ್ರಿಲ್ ಒಂದರಿಂದ ವಾಟರ್ ಬೋರ್ಡ್ ಈ ಕೆಲಸಮಾಡುವುದೆಂದು ಹೇಳುತ್ತಾರೆ, ಅದು ಇರುವ ಲೋಪದೋಷಗಳಿಗೆ ಗಮನಕೊಟ್ಟು ಜನರಿಗೆ ಅನುಕೂಲಮಾಡಬೇಕು ದೊಮ್ಮಲೂರಿಗೆ ನೀರಿನ ತೊಂದರೆಯಾಗಿ ಸೂಪರಿಂಟೆಂಡಿಂಗ್ ಎಂಜಿನಿಯರಿಗೆ ಫೋನ್ ಮಾಡಿ ಸೆಕ್ರೆಟರಿಯವರಿಗೂ ಹೇಳಿದೆ. ಈಗ ಬಿಸಿಲು ಕಾಲ ಹೆಚ್ಚು ಗಮನ ಕೊಟ್ಟು ನೀರು ಸಲೀಸಾಗಿ ಬರುವಂತೆ ಮಾಡಬೇಕು. ಎಂ.ಎಲ್.ಎ.ಗಳು ನಾಲ್ಕಾರು ಕಡೆಗಳಿಂದ ಬೆಂಗಳೂರಿಗೆ ಬಂದಿದ್ದಾರೆ. ಅವರು ನೀರಿನ ತೊಂದರೆ ನೋಡಿ ಅನ್ಯಥಾ ಭಾವಿಸುವಂತಾಗಬಾರದು. ಇದಲ್ಲದೆ ಜನರು ಹಣ ಕೊಡಲು ಸಿದ್ಧವಾಗಿದ್ದಾರೆ. ಆದರೆ ನೀರಿನ ಬಿಲ್ಲು ಸರಿಯಾಗಿ ಬರುವುದಿಲ್ಲ. ಬಿಲ್ಲು ಇಲ್ಲದೆ ಹಣ ಕಟ್ಟುವುದು ಹೇಗೆ ? ಹಣ ಕಟ್ಟುವುದಕ್ಕೆ ಹತ್ತಿರ ಕ್ಯಾಷ್ ಕೌಂಟರ್ ಇರಲಿಲ್ಲ, ಹೇಳಿದಮೇಲೆ 10 ತಿಂಗಳ ನಂತರ ಓಪನ್ ಮಾಡಿದ್ದಾರೆ. ವಾಟರ್ ಮೀಟರುಗಳನ್ನು ಇದ್ದಕ್ಕಿದ್ದಹಾಗೆ ತಂದುಬಿಡುತ್ತಾರೆ. ಪಾರ್ಟಿಗಳಿಗೆ ತಿಳಿಸುವುದೇ ಇಲ್ಲ, ಅದನ್ನು ಇಲಾಖೆಯವರು ತೆಗೆದುಕೊಂಡು ಹೋಗುವಾಗ ಒಂದು ರಸೀದಿ ಸಹ ಕೊಡುವುದಿಲ್ಲ. ಕೇಳಿದರೆ ಹಣ ಕಟ್ಟಿದಮೇಲೆ ಮೀಟರನ್ನು ಫಿಕ್ಸ್ ಮಾಡುವುದಾಗಿ ಹೇಳುತ್ತಾರೆ. ಈ ರೀತಿ ಮಾಡಬಾರದು. ಮೊದಲು ನೋಟೀಸ್ ಕೊಟ್ಟು ನಂತರ ಮೀಟರ್ ತೆಗೆಯಬೇಕು.

ಬಜಾರು ಬೀದಿಗಳಲ್ಲಿ ಕೇಳಿದರೆ ಷಾಪುಗಳಿಗೆ ಅವಕಾಶ ಕೊಡುವುದಿಲ್ಲ, ಲೈಸೆನ್ಸ್ ಮಂಜೂರಾಗಿದ್ದರೂ ರೀನ್ಯೂಯಲ್ ಕೇಳಿದರೆ ಕೊಡುವುದಿಲ್ಲ. ಮಂಜೂರು ಮಾಡುವಾಗ ಎಂಜನಿಯರಿಗೆ ಕೊಡಬಾರದೆಂದು ಗೊತ್ತಿರಲಿಲ್ಲವೇ ? ಹೀಗೆ ಕಾರ್ಪೊರೇಷನ್ನಿನವರು ಜನರಿಗೆ ಬಹಳ ಕಷ್ಟ ಕೊಡುತ್ತಿದ್ದಾರೆ. ನಾಳೆಯೇ ಮಂತ್ರಿಗಳು ಹೋಗಿ ಸಂಬಂಧಪಟ್ಟ ಕ್ಲಾರ್ಕುಗಳ ಬಳಿ ಎಷ್ಟು ಕಾಗದಗಳು

(ಶ್ರೀ ಎ. ನಂಜಪ್ಪ)

ಪೆಂಡಿಂಗ್ ಇವೆ ಎಂಬುದನ್ನು ನೋಡಬೇಕು. ಎಷ್ಟೋ ವರ್ಷಗಳಿಂದ ಇಟ್ಟುಕೊಂಡಿದ್ದಾರೆ. ಇದನ್ನು ಅನೇಕ ಸಲ ಹೇಳಿ ಸಾಕಾಗಿದೆ.

ಒಂದು ಗರ್ಲ್ಸ್ ಹೈಸ್ಕೂಲು ಆಸ್ಟಿನ್ ಟೌನ್, ಶಾಂತಿನಗರ ಮತ್ತು ಅಶೋಕನಗರಗಳಿಗೆ ಅನುಕೂಲವಾಗುವಂತೆ 1965 ರಲ್ಲಿ ಮಂಜೂರಾಯಿತು, ಅಲ್ಲಿ ಹರಿಜನರೇ ಇರುವುದು. ಇದು ವರೆಗೂ ಬಿಲ್ಡಿಂಗ್ ಕಟ್ಟಿಲ್ಲ, ಅನೇಕ ಸಲ ಹೇಳಿದ್ದೇವೆ, ಎರಡು ವರ್ಷದಿಂದ ತಿರಿಗಿ ಸಾಕಾಯಿತು, ಮುಖ್ಯ ಮಂತ್ರಿಗಳಿಗೂ ತೋರಿಸಿದೆ. ಮೊನ್ನೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿದಾಗ ಕಾಗದ ಬರೆಯಿರಿ, ಮಂಜೂರುಮಾಡುತ್ತಾರೆಂದು ಹೇಳಿದರು. ಆ ವಿಚಾರದಲ್ಲೇನು ಮಾಡಿದ್ದಾರೋ ತಿಳಿಯದು. ಈ ರೀತಿ ಮಾಡಿದರೆ ಹೇಗೆ? ಈ ನಗರದಲ್ಲಿ ನಾವು ತಲೆಯೆತ್ತಿಕೊಂಡು ನಮ್ಮ ಕ್ಷೇತ್ರದಲ್ಲಿ ತಿರುಗಾಡುವುದು ಹೇಗೆ? ಹೀಗೆ ಅನ್ಯಾಯಮಾಡಿದರೆ ನಿಜವಾಗಿಯೂ ಬಹಳ ಕಷ್ಟವಾಗುತ್ತದೆ. ಕಾಂಗ್ರೆಸ್ಸಿನವರು ಇದ್ದುಕೊಂಡು ಅನುಕೂಲಮಾಡಿಕೊಡದಿದ್ದರೆ ಚುನಾವಣೆ ಬಂದಾಗ ಚಾಡಿ ಹೇಳುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ಅಧಿಕಾರಿಗಳನ್ನು ಕರೆಸಿ ನಾಳೆಯೇ ಜನರಿಗೆ ಅನುಕೂಲ ಮಾಡಿಕೊಡುವಂತೆ ಹೇಳಬೇಕು. ಮಂತ್ರಿಗಳು ನಾಳೆಯಿಂದ ಒಂದೊಂದು ಡಿವಿಜನ್ನಿಗೆ ಹೋಗಿ ಜನರ ಕಷ್ಟಸುಖ ವಿಚಾರಿಸಬೇಕು, ಅವರು ಹೊಸದಾಗಿ ಬಂದಿದ್ದಾರೆ.

ಇನ್ನು ಹೆಲ್ತ್ ಇಲಾಖೆ ಇದೆ, ಕಸ ಸಾಗಿಸುವ ಲಾರಿ ಇದೆ. ಇಂದು ಲಾರಿಗಳಿಗೆ ಹಾಕುವ ಡೀಸಲ್ ಮತ್ತು ಪೆಟ್ರೋಲನ್ನು ಕದ್ದು ಮಾರಿಕೊಳ್ಳುತ್ತಿದ್ದಾರೆ, ಬೇಕಾದರೆ ತೋರಿಸುತ್ತೇನೆ. ದೊಮ್ಮಲೂರಿನ ಹತ್ತಿರ ಬೆಳಗಿನ ಹೊತ್ತು ಈ ಕೆಲಸ ಮಾಡುತ್ತಾರೆ. ಲಾರಿಗಳಲ್ಲಿ ಕಾಲು ಭಾಗ ಕೂಡ ಕಚಡ ಇರುವುದಿಲ್ಲ. ಇದನ್ನು ಕಮಿಷನರಿಗೆ ಹೇಳಿದ್ದೇನೆ.

ಈ ರೀತಿ ಮಾಡುತ್ತಾ ಇದ್ದಾರೆ ಇದನ್ನು ಬಂದೋಬಸ್ತು ಮಾಡಿ. ಹತ್ತುಮುಕ್ಕಾಲು ಗಂಟೆಗೆ ಹೋಗಬೇಕಾದ ಲಾರಿ ಎಂಟೂವರೆಗೆ ಹೊರಟು ಹೋಗಿರುತ್ತದೆ ಅದಕ್ಕೆ ಕಾರಣ ಡೀಸಲ್ ಮಾರಾಟ ಮಾಡುವುದಕ್ಕೆ ಈ ತರಹ ನಡೆಯುತ್ತಾ ಇದೆ ಇದನ್ನು ತಪ್ಪಿಸಬೇಕು. ಬೆಂಗಳೂರು ನಗರದಲ್ಲಿ ಕಾಂಗ್ರೆಸ್‌ನವರು ಎಲ್ಲಾ ಭಾಗವನ್ನೂ ಪರಿಶೀಲನೆ ಮಾಡಿ ಬೆಂಗಳೂರು ಕಾರ್ಪೊರೇಷನ್ನನ್ನು ಚೆನ್ನಾಗಿ ನಡೆಸಬೇಕೆಂದು ನಾಗರೀಕರಿಗೆ ಅನುಕೂಲಮಾಡಿ ಕೊಡಬೇಕೆಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಂದ ತಕ್ಷಣ ಎಲೆಕ್ಷನ್ ನಡೆಸಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಎಲೆಕ್ಷನ್ ಬರುತ್ತದೆ ಒಳ್ಳೆಯ ಕೆಲಸಗಳನ್ನು ಕಾಂಗ್ರೆಸ್‌ನವರು ಮಾಡಿಕೊಡುತ್ತಾರೆ ಎಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Mr. DEPUTY SPEAKER in the Chair]

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಮಂಡಿಸಿರುವ 4 ಕೇಳಿಕೆಗಳನ್ನು ವಿರೋಧ ಮಾಡುತ್ತಾ ಸಮಯದ ಅಭಾವ ಇದ್ದುದ್ದರಿಂದ ಆಹಾರದ ಇಲಾಖೆಯ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸ್ವಾಮಿ ಆಹಾರ ಇಲಾಖೆಯ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರು. ನಾವು ಅವರು ಆಹಾರ ಇಲಾಖೆಯನ್ನು ವಹಿಸಿಕೊಳ್ಳುವಾಗ ಅವರಿಂದ ಬಹಳಷ್ಟು ನಿರೀಕ್ಷೆ ಮಾಡಿದ್ದೆವು. ಏಕೆಂದರೆ ಅವರೊಬ್ಬ ರೈತನ ಮಗ, ರೈತನಿಗೆ ಹೆಚ್ಚಿನ ಸಹಾಯವಾಗಬಹುದು ಅವರಿಂದ ಅಂತ ಹೇಳಿ ನಮ್ಮ ನಿರೀಕ್ಷೆ ಬಹಳವಾಗಿತ್ತು. ಆದರೆ ಇದು ಏನಾಗಿದೆ ಎಂದರೆ ಪರ್ವತ ಪ್ರಸವವಾಗುತ್ತದೆ. ಬಂತು ಬಂತು ಬರುತ್ತದೆ ಅಂತ ಹೇಳುವಾಗ ಪರ್ವತದಿಂದ ಒಂದು ಸಣ್ಣ ಇಲಿ ಬಿಲದಿಂದ ಹೊರಗೆ ಬಂತಂತೆ. ಆನೆಯಂತಹ ಒಂದು ಪ್ರಾಣಿ ಬರಬಹುದು ಅಂತ ಬಹಳಷ್ಟು ಜನ ಎಣಿಸಿದ್ದರು, ಒಂದು ಸಣ್ಣ ಇಲಿ ಪರ್ವತದ ಬಿಲದಿಂದ ಬಂದಹಾಗೆ ಈ ಆಹಾರ ಇಲಾಖೆಯ ಮಂತ್ರಿಗಳ ಧೋರಣೆಯಾಗಿದೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಮಾನ್ಯ ಮಂತ್ರಿಗಳು ಈ ಸಭೆಯ ಸದಸ್ಯನಾಗಿ ಇರುವಾಗ ಬಹಳಷ್ಟು ಮಾತನಾಡಿದ್ದಾರೆ. ಆಹಾರ ಇಲಾಖೆಯ ಮೇಲೆ ಅದರಲ್ಲೂ ಲೆವಿ ವಿಷಯವಾಗಿ ಅವರು ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. 'ಈ ದೃಷ್ಟಿಯಿಂದ ಲೆವಿ ತೆಗೆದು ಹಾಕಿದರೆ ಒಳ್ಳೆಯದು ಮತ್ತು ಓಪನ್ ಮಾರ್ಕೆಟ್‌ನಲ್ಲಿ ಬೇಕಾದರೆ ಸರ್ಕಾರ ಬತ್ತವನ್ನು ಕೊಂಡು ಎಲ್ಲಿ ಅಕ್ಕಿಯ ಅಭಾವ ಇದೆಯೋ ಅಂತಹ ಕಡೆಗಳಿಗೆ ಹಂಚುವುದು ಒಳ್ಳೆಯದು ಎಂದು ನಾನು ಮಂತ್ರಿಗಳ ಅವಗಾಹನೆಗೆ ತರಲಿಚ್ಛಿಸುತ್ತೇನೆ ಎಂದು ಹೇಳಿದ್ದಾರೆ.' ಎಂದರೆ ಲೆವಿ ಬಗ್ಗೆ ಸರ್ಕಾರದವರು ಬಹಳ ಕಿರುಕುಳ ಕೊಡುತ್ತಾರೆ ಆದ್ದರಿಂದ ಲೆವಿ ಪದ್ಧತಿ ಹೋಗಬೇಕು ರೈತರಿಗೆ ಕಿರುಕುಳ ಹೋಗುತ್ತದೆ ಎಂದು ಒಂದು ಕಡೆ

ಹೇಳಿದ್ದಾರೆ. ಆದರೆ ಅವರು ಬಂದಮೇಲೆ ಏನು ಮಾಡಿದರು ಎಂದರೆ—ಈಗ ಈ ಲೆವಿ ಪದ್ಧತಿ ಎಷ್ಟು ಹೊಲಸಾಗಿದೆ ಎಂದರೆ ಇದು ನಮ್ಮ ಊರಿನ ವಿಷಯ ಬಾಕಿಕಡೆಯದು ನನಗೆ ಅಷ್ಟು ಚೆನ್ನಾಗಿ ಗೊತ್ತಿಲ್ಲ—ಯಾರು ಈ ದೇಶದ ಜನತೆಯನ್ನು ಉಣಿಸುವ ರೈತ ಇದ್ದಾನೋ ಆ ರೈತನ ಮನೆಗೆ ಪೋಲಿಸ್‌ನವರನ್ನು ಕರೆದುಕೊಂಡು ಹೋಗಿ, ಆಫೀಸರುಗಳ ಜಬರದಸ್ತಿನಿಂದ ಲೆವಿ ಕೊಡದಿದ್ದರೆ ಅರೆಸ್ಟ್ ಮಾಡುತ್ತೇವೆ ಅಂತ ಹೆದರಿಸಿದರು ಎಂದು ನನ್ನ ಹತ್ತಿರ 27 ಕೇಸುಗಳು ಬಂದಿದ್ದವು, ನನ್ನ ಕ್ಷೇತ್ರದಲ್ಲಿ ನೂರಕ್ಕಿಂತ ಹೆಚ್ಚು ಕೇಸುಗಳನ್ನು ದಾಖಲು ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಲೆವಿ ಕೊಡಲಿಲ್ಲ ಅಂತ ಹೇಳಿ ರೈತರನ್ನು ದಾರಿಯಲ್ಲಿ ಮೆರವಣಿಗೆ ಮಾಡ್ಸಿ ಪೋಲೀಸ್ ಸ್ಟೇಷನ್‌ಗೆ ಕೊಂಡೊಯ್ದಿದ್ದಾರೆ. ಒಳ್ಳೆಯ ಆಫೀಸರುಗಳು ಯಾರು ಹೆಚ್ಚು ಧಾನ್ಯ ಸಂಗ್ರಹ ಮಾಡುತ್ತಾರೆ ಅವರಿಗೆ ನೀವು ಪ್ರಮೋಷನ್ ಕೊಡುತ್ತೇವೆ, ಪ್ರೈಜ್ ಕೊಡುತ್ತೇವೆ. ಪ್ರಶಸ್ತಿ ಪತ್ರ ಕೊಡುತ್ತೇವೆ ಎಂದು ಹೇಳಿದ್ದೀರಿ. ಇದರಿಂದಾಗಿ ಅವರು ಈ ರೀತಿ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಲೆವಿ ವಸೂಲು ಮಾಡುತ್ತಾ ಇರುವುದು ದೇಶದಲ್ಲಿ ದರೋಡೆ ಮಾಡಿದ ಹಾಗಾಗುತ್ತದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರು ಜೈ ಕಿಸಾನ್ ಜೈ ಜವಾನ್ ಅಂತ ಹೇಳಿದರು, ದೇಶದ ಜನತೆಯಲ್ಲಿ 75 ಪರ್ಸೆಂಟ್ ರೈತರು ಇದ್ದಾರೆ. ರೈತ ಹೊಲದಲ್ಲಿ ಉಳುಮೆ ಮಾಡದಿದ್ದರೆ ದೇಶದ ಜನತೆ ಹಸಿದು ಹಸಿದು ಸಾಯಬೇಕು, ಅಂತಹ ಪರಿಸ್ಥಿತಿಯನ್ನು ತಾವು ಕಣ್ಣಾರೆ ನೋಡಿದ್ದೀರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ನೆರೆ ಬಂದಾಗ ಲೆವಿ ಹಾಕುವುದಿಲ್ಲ ಎಂದು ಹೇಳಿದರು, ನಾವು ಜನರಿಗೆ ಹೇಳಿದೆವು ನೋಡ್ರಪ್ಪ ನಮ್ಮ ಮಂತ್ರಿಗಳು ಬಹಳಷ್ಟು ಕರುಣೆಯಿಂದ ಇದ್ದಾರೆ ನಮ್ಮ ಮೇಲೆ ನೆರೆ ಹಾವಳಿಯಿಂದ ಬತ್ತ ಲೆವಿ ಹಾಕುವುದಿಲ್ಲ ಅಂತ ಆಫೀಸರು ಲೆಕ್ಕಾಚಾರ ಬರೆದುಕೊಂಡು ಹೋಗಿದ್ದಾರೆ ಅಂತ. ಆದರೆ ಕೊನೆಯಲ್ಲಿ ನೋಡುವಾಗ ಲೆವಿ ಕೊಡಬೇಕೆಂದು ನೋಟೀಸ್ ಬಂದು ಯಾರು ಲೆವಿ ಕೊಡಲಿಲ್ಲ ಅತನಿಗೆ ಪೋಲೀಸಿನವರು ಮನೆಗೆ ಬಂದಾಗ ಎಚ್ಚರವಾಯಿತು. ಇಂತಹ ಒಂದು ಲೆವಿ ಕಾನೂನನ್ನು ಇಟ್ಟಿದ್ದೀರಿ. ಇದು ಹೋಗಬೇಕು, ಓಪನ್ ಮಾರ್ಕೆಟ್‌ನಲ್ಲಿ ಬತ್ತವನ್ನು ಖರೀದಿ ಮಾಡಬೇಕು ಎಂದು ಹೇಳಿದ್ದನ್ನು ಮರೆತಿದ್ದೀರಿ. ಈಗ ತಾವು ಮಂತ್ರಿಗಳಾಗಿದ್ದೀರಿ ತಮಗೆ ಅಧಿಕಾರ ಇದೆ ಈ ಸಂದರ್ಭದಲ್ಲ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಈ ಲೆವಿ ಕಾನೂನು ಹೋಗಬೇಕು ಇಲ್ಲದೇ ಇದ್ದರೆ ಶ್ರೀಮಾನ್ ನಂಜೇಗೌಡರು ಹೇಳಿದ ಹಾಗೆ ತಾವು ರಾಜಿನಾಮೆ ಕೊಟ್ಟು ಮಂತ್ರಿಮಂಡಲದಿಂದ ಹೊರಗೆ ಬರಬೇಕು. ರೈತರಿಗೆ ಕಿರುಕುಳ ಆಗುತ್ತದೆ ಲೆವಿ ಹೋಬೇಕು ಎಂದು ಒಂದು ಕಡೆ ಹೇಳಿದ್ದೀರಿ, ಇನ್ನೊಂದು ಕಡೆ 45 ರೂಪಾಯಿ ಬಹಳ ಕಡಿಮೆ, 60 ರೂಪಾಯಿ ಆದರೂ ಕೊಡಬೇಕು ಎಂದು ಹೇಳಿದ್ದೀರಿ, ಈಗ ಅದು 60 ರೂಪಾಯಿ ಅಲ್ಲ 70 ರೂಪಾಯಿ ಆದರೂ ಕೊಡಬೇಕು, ತಾವು ಪ್ರಥಮ ಸಲ ಮಂತ್ರಿಗಳಾದ ಮೇಲೆ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ಉಡುಪಿಯಲ್ಲಿ ಹೇಳಿದೆ. ನಿಮ್ಮ ನೌಕರ ವರ್ಗ, ಲೆವಿ ಕಲಕ್ಷನ್‌ಗೆ ಜೀಪು ಉಪಯೋಗ ಮಾಡುವುದು ಇದನ್ನೆಲ್ಲ ಲೆಕ್ಕ ತೆಗೆದುಕೊಂಡರೆ ಲೆವಿ ವಸೂಲು ಮಾಡುವುದಕ್ಕಿಂತ ನಾಲ್ಕರಷ್ಟು ಆಗುತ್ತದೆ ಅದಕ್ಕೆ ಬದಲಾಗಿ ಓಪನ್ ಮಾರ್ಕೆಟ್‌ನಲ್ಲಿ ಬತ್ತವನ್ನು ಸಂಗ್ರಹಣೆ ಮಾಡಬಹುದು ಎಂದು. ನಾನು ವಿರೋಧ ಪಕ್ಷದವನಿದ್ದೇನೆ ಎಂದು ತಾತ್ಸಾರ ಭಾವದಿಂದ ಅದನ್ನು ಬಿಟ್ಟಿರಬಹುದು. ಆ ಲೆಕ್ಕಾಚಾರವನ್ನು ಈಗಲೂ ಬೇಕಾದರೆ ಕೊಡುತ್ತೇನೆ. ಆ ರೀತಿ ಮಾಡಬೇಕೆಂದು ತಮ್ಮಲ್ಲ ಪ್ರಾರ್ಥನೆ ಮಾಡುತ್ತೇನೆ.

4-30 P.M.

ಈ ಮಾರುಕಟ್ಟೆಯಲ್ಲಿ ಭತ್ತವನ್ನು ಮಾರಾಟ ಮಾಡತಕ್ಕ ರೇಟಿಗೂ ಮತ್ತು ಲೆವಿ ಮೂಲಕ ಭತ್ತವನ್ನು ಕೊಳ್ಳುವ ರೇಟಿಗೂ ಇರತಕ್ಕ ವ್ಯತ್ಯಾಸ ಬಹಳ ಕಡಮೆ. ಒಂದೆರಡು ರೂಪಾಯಿಗಳ ವ್ಯತ್ಯಾಸವಿರಬಹುದು. ಅಥವಾ ಅದೂ ಕೂಡ ಇಲ್ಲವೇ ಇಲ್ಲ ಎಂದರೂ ತಪ್ಪಿಲ್ಲ. ಏಕೆಂದರೆ ಈ ಲೆವಿ ಪದ್ಧತಿಯಲ್ಲಿ ಯಾರು ಹೆಚ್ಚು ಬತ್ತವನ್ನು ವಸೂಲ್ಮಾಡುತ್ತಾರೋ ಅಂಥವರಿಗೆ ಸರ್ಕಾರದವರು ಗೋಲ್ಡ್ ಮೆಡಲ್ ಮತ್ತು ಪ್ರಶಸ್ತಿಗಳನ್ನು ಕೊಡಲಾಗುತ್ತದೆಂದು ಸಾರಿದ್ದಾರೆ ಆ ಖರ್ಚನ್ನೂ ಸೇರಿಸಿದರೆ ಎರಡೂ ಕಡೆಗಳ ಧಾರಣೆಗಳಲ್ಲಿ ಏನೂ ವ್ಯತ್ಯಾಸವಿರುವುದಿಲ್ಲ. ನಾನು ಈ ಲೆವಿ ವಿಚಾರದಲ್ಲಿ ಸರ್ಕಾರದವರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾದ್ದಿದೆ—ಅದೇನೆಂದರೆ ಇವರು ಆದಷ್ಟು ಬೇಗ ಈ ಲೆವಿಯನ್ನು ರದ್ದುಮಾಡದಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರು ದೇಶದಲ್ಲಿ ದಂಗೆಯೇಳತಕ್ಕ ಪರಿಸ್ಥಿತಿ ಬರಬಹುದು ಎಂಬ ಎಚ್ಚರಿಕೆಯನ್ನು ನಾನಿಂದೇ ಕೊಡಬಯಸುತ್ತೇನೆ. ಮಾನ್ಯ ಸಚಿವರು ನನ್ನ ಜೊತೆಯಲ್ಲಿ ನನ್ನ ಕ್ಷೇತ್ರಕ್ಕೆ ಬರಲಿ ಅವರಿಗೆ ಯಾವ ಉದಾರಣೆ ಬೇಕಾದರೂ ನಾನು ತೋರಿಸಲಿಕ್ಕೆ ಸಿದ್ಧ ಅಲ್ಲಿ ಸುಗ್ಗಿಯಲ್ಲಿ ಸಂಗ್ರಹಣೆಮಾಡಿದ ಭತ್ತವನ್ನು ಮಳೆಗಾಲದಲ್ಲಿ ಹೈರೇಟಿಗೆ ಮಾರಿ ಕಳ್ಳಸಂತೆಯಲ್ಲಿ ಹೆಚ್ಚಿನ ಹಣಸಂಪಾದನೆ ಮಾಡಿಕೊಂಡು ಮತ್ತೆ ಭತ್ತದ ಬೆಳೆ ಬಂದಕೂಡಲೆ ಹೊಸ ಬತ್ತವನ್ನು ಕಡಮೆ ಬೆಲೆಗೆ ಕೊಂಡು ಅದನ್ನು ಸೊಸೈಟಿಗಳಿಗೆ ಹಂಚು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ತ್ತಿದ್ದಾರೆ. ಇದು ಆ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳು ಮಾಡುತ್ತಿರುವ ವ್ಯವಹಾರ. ಈ ದಿವಸ ಈ ಲೆವಿ ಸಿಸ್ಟಂ ಇರತಕ್ಕದ್ದು ಕೇವಲ ಜನರ ಉಪಕಾರಕ್ಕಾಗಿ ಅಲ್ಲ, ಕಳ್ಳಸಂತೆಕೋರರಿಗೆ ಬ್ಲಾಕಿನಲ್ಲಿ ಹಣವನ್ನು ಗಳಿಸಲಿಕ್ಕೆ ಇರುತ್ತದೆ. ಮಾತ್ರವಲ್ಲದೆ ಭತ್ತದ ಹಂಚಿಕೆಯಲ್ಲಾದರೂ ಒಂದು ಕ್ರಮ ಇದೆಯೇ ಎಂದರೆ ಅದಿಲ್ಲ. ಕೋಲಾರದಲ್ಲಿರತಕ್ಕ ಭತ್ತವನ್ನು ಸರಬರಾಯಿಮಾಡುವುದು ಎಲ್ಲಿಗೆ ಎಂದರೆ ಅದನ್ನು ದಕ್ಷಿಣಕನ್ನಡ ಜಿಲ್ಲೆಗೆ, ಮಂಡ್ಯದಲ್ಲಿರತಕ್ಕ ಬತ್ತವನ್ನು ಬಿಜಾಪುರಕ್ಕೆ ಮತ್ತು ಬಿಜಾಪುರದ ಬತ್ತವನ್ನು ಮಂಡ್ಯಾಕ್ಕೆ ಸರಬರಾಯಿ ಮಾಡಲಾಗುತ್ತಿದೆ. ಹೀಗಾಗಿ ಆ ಮಾರ್ಕೆಟಿಂಗ್ ಸೊಸೈಟಿಗಳವರು ಅವರಿಗೆ ಕೊಡತಕ್ಕ ಅಲಾಟ್‌ಮೆಂಟ್ ಬತ್ತ ಏನಿರುತ್ತದೆ ಅದನ್ನು ಅಲ್ಲಿರತಕ್ಕ ಓಪನ್ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿ ಲಾರಿ ಬಾಡಿಗೆಯನ್ನೂ ತೋರಿಸಿ ಅದನ್ನೂ ನುಂಗಿ ಹಾಕಿ ಮತ್ತು ಮಂಡ್ಯಾಕ್ಕೆ ಹೋಗಿ ಅಲ್ಲಿ ಓಪನ್ ಮಾರುಕಟ್ಟೆಯಲ್ಲಿ—ಅದರಲ್ಲಿ ಏನೇನು ಬೆರೆತಿರುತ್ತೆ ಎಂಬುದನ್ನು ಹೇಳಲಸದಳವಲ್ಲ—ಅದರಲ್ಲಿ ಕಲ್ಲು, ಮಣ್ಣು, ಕಸ ಹೀಗೇ ಏನೇನೊ ಮನುಷ್ಯರು ತಿನ್ನಬಾರದ ಸಾಮಾನುಗಳನ್ನೆಲ್ಲಾ ಬೆರೆತಿರುವುದನ್ನು ಅಂಥ ಅಕ್ಕಿಯನ್ನು ಚೀಪ್‌ರೇಟಿನಲ್ಲಿ ಖರೀದಿ ಮಾಡಿ ತಂದು ಅದನ್ನು ಜನರಿಗೆ ನಿಮ್ಮ ಫುಡ್ ಮಂತ್ರಿಗಳು ನಿಮಗೆ ತಿನ್ನಿಸಿ ಎಂದು ಹೇಳಿ ಸರಬರಾಯಿ ಮಾಡಿರತಕ್ಕ ಅಕ್ಕಿ ಇದು ಎಂದು ಜಾನುವಾರುಗಳು ಕೂಡ ಮುಟ್ಟದಂಥ ಅಕ್ಕಿಯನ್ನು ಜನರಿಗೆ ತಿನ್ನಿಸುತ್ತಿದ್ದಾರೆ. ಜಾನುವಾರುಗಳೂ ಕೂಡ ಮುಟ್ಟದಂಥ ಅಕ್ಕಿಯನ್ನು ಕೊಡುತ್ತಿದ್ದಾರೆ. ಹೀಗೆ ಈ ಒಂದು ಲೆವಿ ಪದ್ಧತಿಯಲ್ಲಿ ದೇಶಕ್ಕೆ ಆಗುತ್ತಿರುವ ಒಂದು ಮಹದುಪಕಾರ ಎಂದರೆ ಕೆಲವರಿಗೆ ಬ್ಲಾಕ್‌ಮಾರ್ಕೆಟ್ ಮಾಡಿ ಹಣ ಸಂಪಾದನೆಗೆ ಅವಕಾಶ ಮಾಡಿಕೊಡಬೇಕು ಎನ್ನುವುದೇ ಆಗಿದೆ. ನಮ್ಮ ಸರ್ಕಾರ ಈ ಲೆವಿ ಪದ್ಧತಿಯನ್ನು ಮುಂದುವರಿಸಬೇಕೆಂಬುದಕ್ಕೆ ಇದೇ ಮೂಲ ಕಾರಣ ; ಇದೇ ನಮ್ಮ ಸರ್ಕಾರದವರ ಮೂಲ ಧೋರಣೆ. ಆದರೆ ಇನ್ನು ನಾನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಶ್ರೀಮಾನ್ ಜತ್ತಿಯವರು ಆಹಾರ ಮಂತ್ರಿಗಳಾಗಿದ್ದಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಮಳೆಗಾಲದಲ್ಲಿ ಒಂದೆರಡು ಸಾರಿ ಉಪಕಾರ ಮಾಡಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರೇ ಆಹಾರ ಮಂತ್ರಿಗಳಾದಮೇಲೆ ಅಲ್ಲಿಗೆ ಮಳೆಗಾಲದಲ್ಲಿ ಒಂದು ಕೆ.ಜಿ. ಕೂಡ ಅಕ್ಕಿಯನ್ನು ಕೊಟ್ಟಿಲ್ಲ. ಹಳ್ಳಿಯವರಿಗೂ ಅಕ್ಕಿಯನ್ನು ಸರಬರಾಯಿ ಮಾಡುವುದಾಗಿ ಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ್ದರೂ ಇಲ್ಲಿಯತನಕ ಯಾವ ಹಳ್ಳಿಯವರಿಗೂ ನಮ್ಮಲ್ಲಿ ಒಂದು ಕಿಲೋ ಅಕ್ಕಿ ಸಹಾ ಕೊಟ್ಟಿರುವುದಿಲ್ಲ. ನನ್ನ ಕ್ಷೇತ್ರದಲ್ಲಿರತಕ್ಕ ಸುಮಾರು ಒಂದೂವರೆ ಲಕ್ಷ ಜನರು ಮಳೆಗಾಲದಲ್ಲಿ ಬತ್ತ ಇಲ್ಲದೆ ಬಹಳ ತೊಂದರೆ ಪಟ್ಟರು. ಅವರ ಕಷ್ಟವನ್ನು ಹೇಳತೀರದಾಗಿದೆ. ಅವರಿಗೆ ಕಲೆಕ್ಟರು ಬತ್ತವನ್ನು ಕೊಳ್ಳುವುದಕ್ಕೆ ಲೈಸೆನ್ಸನ್ನು ಕೊಟ್ಟಿದ್ದರೂ ಅದನ್ನು ಕೊಂಡು ಸಾಗಿಸತಕ್ಕ ವ್ಯವಹಾರದಲ್ಲಿ ಮಧ್ಯೆ ದಾರಿಯಲ್ಲಿ ಪೋಲೀಸರ ಬಕ್ಷೀಸು ಇತ್ಯಾದಿಗಳನ್ನೆಲ್ಲಾ ಕೊಟ್ಟು ಆ ತೊಂದರೆ ಅನುಭವಿಸುವುದಕ್ಕಾಗುವುದಿಲ್ಲ. ಹಳ್ಳಿಯವರು ಬೆಳೆದ ಬತ್ತವನ್ನು ಹಳ್ಳಿಯವರಿಂದ ಕಸಿದುಕೊಂಡಾಗ್ಯೂ ಅವರಿಗೆ ಮಳೆಗಾಲದಲ್ಲಿ ಒಂದು ಕಾಳು ಅಕ್ಕಿಯನ್ನೂ ಕೂಡ ಸರಬರಾಯಿ ಮಾಡಲಿಲ್ಲ. ನನ್ನ ಕ್ಷೇತ್ರದಲ್ಲಿ ಗಣೇಶಚೌತಿಯ ದಿನ ಆ ಬಡವರು ತಿಂದು ಸಾಯಲಿ ಎಂದು ಒಂದು ಕಿಲೋ ಅಕ್ಕಿ ಕೂಡ ಕೊಡಲಿಲ್ಲ. ಅಲ್ಲಿ ಒಂದು ಮಿಲ್ಲಿನಲ್ಲಿ ಸಾವಿರಾರು ಕಿಲೋ ಬತ್ತ ಕೆಟ್ಟು ಹಾಳಾಯಿತು ಹಾಗೆ ಕೆಟ್ಟು ಹಾಳಾದರೂ ಚಿಂತೆಯಿಲ್ಲ ಅದನ್ನು ಯಾರಿಂದ ತಂದಿದ್ದರೋ ಅವರಿಗೆ ಬಳಸುವುದಕ್ಕೆ ಕೊಡಬಾರದೆಂಬುದು ಸರ್ಕಾರದ ನೀತಿ. ಅನೇಕ ರೈತರು ತಮ್ಮ ಅನೇಕ ತಾಪತ್ರಯಗಳಿಗಾಗಿ ತಮ್ಮಲ್ಲಿದ್ದ ಬತ್ತವನ್ನು ಸುಗ್ಗಿಯಲ್ಲೇ ಮಾರಾಟ ಮಾಡಿಕೊಂಡಿದ್ದಾರೆ. ಅವರಲ್ಲಿ ಬತ್ತ ಇದ್ದುದೆಲ್ಲಾ ಮಾರಾಟವಾಗಿ ಅವರು ಬರಿಗೈಯಲಿರುತ್ತಾರೆ. ಅಂಥವರಿಗೆ ಮಳೆಗಾಲದಲ್ಲಿ ಬತ್ತಕ್ಕೆ ಬಹಳ ಡಿಮ್ಯಾಂಡಿರುತ್ತದೆ. ಆದರೆ ನಮ್ಮ ಮಾನ್ಯ ಸದಸ್ಯರಾದ ವಿನಿಫ್ರೆಡ್ ಫರ್ನಾಂಡೀಸ್ ಅವರು ಕುಂದಾಪುರದ ಒಂದು ಮಿಲ್ಲಿನಲ್ಲಿ 564 ಚೀಲ ಗೋಧಿ ಹಾಳಾಯಿತೆಂದು ಹೇಳಿದರು. ಅವರ ಕ್ಷೇತ್ರದಲ್ಲಿ ಜನತೆಗೆ ಒಂದು ಕೆ. ಜಿ. ಅಕ್ಕಿ ಕೂಡ ಕೊಡಲಿಲ್ಲಾ ಎಂಬುದಾಗಿ ನನ್ನಲ್ಲಿ ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು ಮಾಡಿರತಕ್ಕ ಭಾಷಣದ ಕಟ್ ಪೀಸುಗಳು ನನ್ನಲ್ಲಿ ಇರುತ್ತವೆ. ಆದರೆ ಕಾಲಾವಕಾಶ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರೇ ಈ ಲೆವಿ ಪದ್ಧತಿ ಜನಪ್ರಿಯದ್ದಲ್ಲ ಮತ್ತು ಗಡಿಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಇಟ್ಟುಕೊಂಡು ಚೆಕ್‌ಮಾಡತಕ್ಕ ಪದ್ಧತಿ ಏನಿದೆ ಅದು ಮೊದಲು ತೊಲಗಬೇಕು ಎಂಬುದಾಗಿ ಶ್ರೀ ಕೆ. ಕೆ. ಶೆಟ್ಟರು, ವಿಧಾನ ಪರಿಷತ್ತಿನ ಅಧ್ಯಕ್ಷರಾಗಿರತಕ್ಕವರು ಈ ಮಾತುಗಳನ್ನು ಹೇಳಿದ್ದಾರೆ. ಅದು ಯಾರಿಗೆ ಆ ಮಾತುಗಳನ್ನು ಹೇಳಿರುವುದು ? ಆಹಾರ ಮಂತ್ರಿಗಳಾದ ವಿಟ್ಠಲದಾಸ ಶೆಟ್ಟರಿಗೆ. ನಾವು ಇಲ್ಲಿ ವಿರೋಧಪಕ್ಷದಲ್ಲಿರತಕ್ಕವರು ಅಂಥ ಯಾವುದಾದರೂ ವಿಚಾರಗಳನ್ನು ಹೇಳಿದರೆ ಆಡಳಿತಪಕ್ಷಕ್ಕೆ ರುಚಿಸುರುವುದಿಲ್ಲ. ಇಲ್ಲಿ ನಾವು ಏನು ಹೇಳುತ್ತಿದ್ದೇವೋ ಅದೇ ಮಾತುಗಳನ್ನು ಅದೇ ಕಾಂಗ್ರೆಸ್‌ನಲ್ಲಿರತಕ್ಕ ಅದರಲ್ಲೂ ವಿಧಾನಪರಿಷತ್ತಿನ

ಅಧ್ಯಕ್ಷರ ಬಾಯಿನಲ್ಲಿ ಆ ಚೆಕ್‌ಪೋಸ್ಟ್‌ಗಳಿರತಕ್ಕದ್ದು ನಾಚಿಕೆಗೇಡು ಎಂದು ಹೇಳಿರುವಾಗ ಅದನ್ನೂ ಇವರು ಅಲಕ್ಷ್ಯ ಮಾಡಬಹುದೇ ? ಆ ದಿವಸ ನಮ್ಮ ಆಹಾರ ಸಚಿವರು ಏನು ಹೇಳಿದ್ದಾರೆಂದರೆ ನನಗೆ ಬೇಕಾದ ಪೋಲೀಸ್ ಸಿಬ್ಬಂದಿಯನ್ನು ಸರ್ಕಾರ ಕೊಟ್ಟಿದ್ದೇ ಆದರೆ ನಾನು ಈ ಕಳ್ಳಸಾಗಾಣಿಕೆಯನ್ನು 24 ಗಂಟೆಗಳಲ್ಲಿ ಸಂಪೂರ್ಣವಾಗಿ ನಿಲ್ಲಿಸಿಬಿಡುತ್ತೇನೆಂದು ಹೇಳಿದ್ದಾರೆ. ಅವರು ಹಾಗೆ ಹೇಳಿದ್ದರಲ್ಲಿ ಒಂದು ಗೂಢಾರ್ಥವಿದೆ. ಅವರಿಗೆ ಎಂಥ ಪೋಲಿಸರನ್ನು ಕೊಡಬೇಕು ಎಂದರೆ ಅಲ್ಲಿ ಎಷ್ಟು ಕಳ್ಳಸಾಗಾಣಿಕೆ ನಡೆದರೂ ಅಲ್ಲಿ ಅಂಥಾದ್ದೇನೂ ನಡೆದಿಲ್ಲ ಎಂದು ವರದಿಯನ್ನು ಬರೆದು ಕಳುಹಿಸತಕ್ಕಂಥ ಪೋಲೀಸ್ ಸಿಬ್ಬಂದಿಯನ್ನು ಅವರು ಕೇಳಿದ್ದಾರೆಂದು ನನಗೆ ಗೊತ್ತಾಗುತ್ತಿದೆ. ಮೊನ್ನೆ ತಾನೆ ಒಂದಾವರ್ತಿ ನನ್ನ ಕ್ಷೇತ್ರಕ್ಕೆ ಆಹಾರ ಮಂತ್ರಿಗಳು ಬಂದಿದ್ದರು. ಆಗ ಅವರ ಜೊತೆಯಲಿ ಕೆಲವು ಪೋಲಿಸರೂ ಬಂದಿದ್ದರು. ಅವರೇ ಅವರಿಗೆ ಬೇಕಾದಂಥ ಪೋಲೀಸರು ಇರಬೇಕೆಂದು ನನಗೆ ತಿಳಿದುಬರುತ್ತದೆ. ಆ ಪೋಲೀಸರು ಅಲ್ಲಿ ಏನೇ ಅಪರಾಧಗಳು ಅಕ್ರಮ್ಯಗಳು ನಡೆಯಲಿ, ಪೋಲೀಸಿನವರು ತಮ್ಮ ವರದಿಯಲ್ಲಿ ಅಲ್ಲೇನೂ ನಡೆಯಲಿಲ್ಲ—ಶ್ರೀಮಾನ್ ವಿಟ್ಠಲದಾಸಸೆಟ್ಟರ ಆಡಳಿತದಲ್ಲಿ ಮೈಸೂರು ರಾಜ್ಯ ರಾಮ ರಾಜ್ಯವಾಗಿತ್ತು ಎಂದು ವರದಿ ಬರೆದರೆ ಸಾಕು. ಇದೇ ವಿಚಾರದಲ್ಲಿ ಶ್ರೀ ಇವಿನಿಬ್ಬ ಅವರ ಒಂದು ಪ್ರಶ್ನೆಗೆ ಈ ತೆರನಾದ ಉತ್ತರ ಹೇಳಿದ್ದಾರೆ :

> "In addition 24 mobile police vans have also been sanctioned in the border district to work under the supervision of the Superintendent of Police of the district concernd. The regional centres have also been provided with jeep and additional staff of 2 Sub-Inspectors and 2 Head Constables have been sanctioned to the regional food cell at Mangalore."

ಸ್ವಾಮಿ, ಹಿಂದೆ ಕೇರಳಕ್ಕೇನಾದರೂ ಆ ಚೆಕ್‌ಪೋಸ್ಟ್‌ಗಳ ಮೂಲಕ ಅಕ್ಕಿ ಹೋಗಿದ್ದರೆ ಅದು ನೂರಕ್ಕೆ 10 ಇದ್ದರೆ ಹೆಚ್ಚಾಯಿತು. ಆದರೆ ಈ ದಿವಸ ಅದು ನೂರಕ್ಕೆ 75 ರಷ್ಟಕ್ಕೆ ಹೋಗಿದೆ. ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದಕ್ಕೆ ನಮ್ಮ ಮಾನ್ಯ ಆಹಾರ ಸಚಿವರು ಸ್ಪೆಷಲ್ ಮೆಜರ್ಸ್‌ನ್ನು ತಗೆದುಕೊಂಡಮೇಲೆ ಮೆಕನೈಜ್ಡ್ ಬೋಟುಗಳಲ್ಲಿ ಮೊದಲು ಶೇಕಡಾ 10 ಕಳ್ಳಸಾಗಾಣಿಕೆ ನಡೆಯುತ್ತಿದ್ದುದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿದ್ದರಲ್ಲಿ ಅದು ಸಂಪೂರ್ಣವಾಗಿ ನಿಲ್ಲದಿದ್ದರೆ ಹೋಗಲಿ ಅದು ಈ ದಿವಸ ನೂರಕ್ಕೆ 60—70 ರಷ್ಟು ಜಾಸ್ತಿಯಾಗಿದೆ. ಅಲ್ಲದೆ ಮೊದಲು ಹಾಗೂ ಹೀಗೂ ಪತ್ರಿಕೆಗಳಲ್ಲಾದರೂ ಆಗಾಗ್ಗೆ ಈ ಕಳ್ಳಸಂತೆ ವ್ಯವಹಾರವನ್ನು ಹಿಡಿದಂಥ ಪ್ರಸಂಗಳು ಬರುತ್ತಿದ್ದವು. ಇತ್ತೀಚೆಗೆ ಅದೂ ಕೂಡ ನಿಂತುಹೋಯಿತು. ಬಹುಶಃ ಇದೂ ಕೂಡ ನಮ್ಮ ಮಂತ್ರಿಗಳ ಪ್ರಭಾವವೇ ಇರಬಹುದು. ಅಂತೂ ಒಟ್ಟಿನಲ್ಲಿ ಈ ದಿವಸ ಕಳ್ಳಸಾಗಾಣಿಕೆ ಮೊದಲಿಗಿಂತಲೂ ಸರಾಗವಾಗಿ ಧಾರಾಳವಾಗಿ ಅಧಿಕ ಪ್ರಮಾಣದಲ್ಲಿ ನಡೆಯುವುದಕ್ಕೆ ಇಲಾಖೆ ಎಲ್ಲ ಸೌಕರ್ಯಗಳನ್ನೂ ಮಾಡಿಕೊಂಡಿದೆ.

ಸರ್ಕಾರದವರು ಒಂದು ಧೋರಣೆಯನ್ನು ಇಟ್ಟುಕೊಂಡಿದ್ದಾರೆ. ಏನೆಂದರೆ Co-operative Institutions should be agents at all stages of food operations, procurement, storage, milling of paddy, distribution, etc., ಆದರೆ ನಮ್ಮ ಆಹಾರ ಮಂತ್ರಿಗಳಿಗೆ ಕಾಂಗ್ರೆಸ್ಸಿನ ಸಮಾಜವಾದದಲ್ಲಿ ಅಷ್ಟು ನಂಬಿಕೆ ಇಲ್ಲ. ಅವರು ಮಂತ್ರಿಗಳು ಆದಮೇಲೆ ಈ ಸಮಾಜವಾದ ಬಿಟ್ಟಿದ್ದಾರೆ ಮತ್ತು ಬೇರೆ ವಾದವನ್ನು ಹೂಡುವುದು ಒಳ್ಳೆಯದು ಎಂದು ಹೇಳುತ್ತಾರೆ. Distribution of foodgrains at retail and wholesale level through Co-operative societies ನಿಂತುಹೋದಂತೆ ಕಾಣುತ್ತದೆ. ಅವರ ಏರಿಯಾದಲ್ಲಿ ಪೂನಚ್ಚ ಗ್ರಾಮ ಇದೆ. ಇದು "ಬೆಲ್ಟ್ ಏರಿಯಾ" ಆಹಾರಧಾನ್ಯ ವಿತರಣೆಗೆ ಕೋ ಆಪರೇಟಿವ್ ಸೊಸೈಟಿ ಡಿ. ಸಿ. ಪರ್ಮಿಟ್ ತೆಗೆದುಕೊಳ್ಳಬೇಕೆಂದಾಗ ಕೆಲವು ಸಮಯ ಗುದ್ದಾಟದ ನಂತರ ಅಲ್ಲಿಯ ಕೋಆಪರೇಟೀವ್ ಸೊಸೈಟಿಯು.........

ಶ್ರೀ ಬಿ. ವಿಠಲದಾಸ ಶೆಟ್ಟಿ.—ಅವರು ನಿಮ್ಮ ಪಕ್ಷದವರು.

ಶ್ರೀ ಬಿ. ಭಾಸ್ಕರಶೆಟ್ಟಿ.—ಆ ಸೊಸೈಟಿಯ ಪ್ರೆಸಿಡೆಂಟರು ತಮ್ಮ ಪಕ್ಷದವರು. ನನ್ನ ಪಕ್ಷದವರಿಗೆ ಕೊಡುವುದಿಲ್ಲವೆಂದು ಹೇಳಿ. ಹೇಗಾದರೂ ಆಗಲಿ, ನನ್ನ ಪಕ್ಷದವರು ಎಂದು ಆಹಾರಧಾನ್ಯಗಳನ್ನು ಕೊಟ್ಟಿಲ್ಲವೆಂದು ನನಗೆ ಕಾಣುತ್ತದೆ. ಡಿಸ್ಟ್ರಿಬ್ಯೂಷನ್ ಅರೆಂಜ್‌ಮೆಂಟ್ಸ್‌ಗೆ ಸೊಸೈಟಿ ಕೇಳಿದ್ದರೂ ಅವರಿಗೆ ಕೊಡಬೇಡಿ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿ. ಅಲ್ಲಿ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಯಾರು ಇಂಡಿವಿಜುಯಲ್ ಮರ್ಚೆಂಟ್ಸ್ ಇದ್ದಾರೆ, ಅಂತಹ ಮೂರು ಜನರಿಗೆ ಅಕ್ಕಿಯು ವಿತರಣೆ ಮಾಡಲು ಕೊಡಿಸಿದ್ದಾರೆ. ಆದರೆ ಸೊಸೈಟಿಯವರು ಎರಡು ತಿಂಗಳುಗಳಿಂದ ಕೇಳಿದರೂ ಕೊಡ ಕೊಡದೆ, ಕಡೆಗೆ ಒಂದು ಸಾರಿ ಡಿ. ಸಿ. ಅವರಿಗೆ ಕೊಡಬೇಕಾಗುತ್ತೆಂದು ಒಂದು ಆರ್ಡರ್ ಮಾಡಿದರು. ಸರ್ಕಾರದ ಪಾಲಿಸಿ ಪ್ರಕಾರ it is proposed to entrust distribution of rice and other foodgrains in the border areas of South Kanara only to the Panchayats and Co-operative Societies concerned dispensing with the private dealers. The Deputy Commissioner, S. K., may be intimated within a fortnight ಎಂದು ಡಿ. ಸಿ. ಸರ್ಕುಲರ್ ಹೊರಡಿಸಿದ್ದರು. ಇದಾದಮೇಲೆ ಪೂನಚ್ಚ ಗ್ರಾಮದ ಕೋಆಪರೇಟಿವ್ ಸೊಸೈಟಿಯವರು ಪುನಃ ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಬರೆದರು. ಜಿಲ್ಲಾಧಿಕಾರಿಗಳು ಪರವಾನೆ ಸಹ ಕೊಟ್ಟರು. ಆದರೆ ಯಾರು ಇಂಡಿವಿಜುಯಲ್ಸ್ ಇದ್ದಾರೋ ಅವರು ಮಂತ್ರಿಗಳಿಗೆ ಅಪೀಲು ಬರೆದುಕೊಂಡಾಗ ಸ್ವತಃ ಇವರ ಕೈಯಿಂದಲೇ ಆರ್ಡರ್ ಮಾಡಿದರು. "ಆಕೊ ಆಪರೇಟಿವ್ ಸೊಸೈಟಿಗೆ ಪರವಾನೆ ಕೊಡಬಾರದು, ಸ್ಟಾಟಸ್ಕೊ ಮೇಂಟೇನ್ ಮಾಡಬೇಕೆಂದು" ಇವರಲ್ಲಿ ಒಂದು ತತ್ವ ಇದ್ದರೆ ನಾನು ಒಪ್ಪುತ್ತೇನೆ. ಅದೇ ಸೊಸೈಟಿಗೆ ಕೊಡಬಾರದು ಎಂಬುದಾಗಿ ಇವರೇ ಬರೆದರೆ ಇನ್ನೊಬ್ಬರು ಅಪೀಲು ಮಾಡಿದಾಗ, ಆಗ ಮಂತ್ರಿಗಳು ಏನು ಹೇಳಿದರೆಂದರೆ, ನನಗೆ ಅಧಿಕಾರವಿಲ್ಲ, ಈ ಅಪೀಲು ಪ್ರಾಪರ್ ಅಧಿಕಾರಿಗಳಿಗೆ ಆಗಬೇಕು ಎಂಬುದಾಗಿ ಹೇಳಿದರು. ಅಪೀಲು ಮಾನ್ಯ ಶ್ರೀ ಬಿ. ಗೋವಿಂದಭಟ್ ಅವರ ಫೇರ್ ಪ್ರೈಸ್ ಷಾಪಿಗೆ ಸಂಬಧಪಟ್ಟದ್ದು. The order appealed against is in respect of an authorised agency for selling foodgrains. ಇದರ ಬಗ್ಗೆ ನನಗೇನೂ ಅಧಿಕಾರ ವಿಲ್ಲ. You may, therefore, approach the Director of Food in the matter if so advised. ನೀವು ಡೈರೆಕ್ಟರ್ ಅವರಿಗೆ ಬೇಕಿದ್ದರೆ ಬರೆಯಬಹುದೆಂದು ಹೇಳಿದರು. ಆದರೆ S. M. G. ಕೇಸಿನಲ್ಲಿ ಇವರೇ ಆರ್ಡರ್ ಮಾಡಿದರು. ಅದು ಈ ರೀತಿ ಇದೆ. I am directed to state that your petition has been considered by the Government and the Director of Food Supplies has been requested to direct the D C., S. K., to restore Status quo ante. ಇದು ಸರ್ಕಾರದ ಆರ್ಡರ್. ಅವರು ಹೇಳಿದರೆ ಸತ್ಯ. ಯಾರಾದರೂ ಬೇರೆ ಪಾರ್ಟಿ ಎಂದು ಹೇಳುವುದಕ್ಕೆ ಅವರೇನೂ ದೇವ ಲೋಕದಿಂದ ಬಂದರೇ? ಬೇರೆಯವರಿಗೆ ಕೊಡಬಾರದು. ಅವರ ಹಿಂಬಾಲಕರಿಗೆ ಕೊಟ್ಟು ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. ಆದರೆ ಅನ್ಯಾಯ ಮಾಡಬೇಡಿ. ಸರ್ಕಾರದ ಧ್ಯೇಯ ಧೋರಣೆ ಹಾಗೂ ಸರ್ಕಾರದ ಕಾನೂನಿಗೆ ವಿರೋಧವಾಗಿ ತಾವು ಮಾಡುತ್ತಿದ್ದೀರಿ. ಇದು ಅಧಿಕಾರದ ದುರುಪಯೋಗವೆಂದು ಈ ಸಮಯದಲ್ಲಿ ಹೇಳುತ್ತೇನೆ. ಇಂತಹ ಸಣ್ಣ ಸಣ್ಣ ಕೆಲಸಗಳಿಗೆ ಆಹಾರ ಮಂತ್ರಿಗಳು ಕೈಹಾಕಬಾರದು. ಆದ್ದರಿಂದ ಇವರು ಸರ್ಕಾರದ ಧೋರಣೆ ಏನಿದೆಯೋ ಅದಕ್ಕನು ಗುಣವಾಗಿ ಏನಾದರೂ ಒಂದು ದೊಡ್ಡ ಬುದ್ಧಿಯನ್ನು ಇಟ್ಟುಕೊಂಡು ಕೆಲಸಕಾರ್ಯಗಳನ್ನು ಮಾಡ ಬೇಕೆಂದು ಕೇಳಿಕೊಂಡು, ತಾವು ಇಷ್ಟು ಹೊತ್ತು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ರಸ್ತೆಸಾರಿಗೆ, ಆಹಾರ ಮತ್ತು ಮುನಿಸಿಪಾಲಿಟಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸಿ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಆಶಿಸುತ್ತೇನೆ. ಇವತ್ತು ರೋಡ್ ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಸರ್ಕಾರದವರು ಮೇಲಿಂದಮೇಲೆ ನೀತಿಯನ್ನು ಬದಲಾಯಿಸುವುದು ಅಷ್ಟೊಂದು ಉಚಿತವಾಗಿರತಕ್ಕ ನೀತಿಯಲ್ಲವೆಂದು ಸಾರ್ವಜನಿಕರ ಅಭಿಪ್ರಾಯ ಬಹಳವಾಗಿ ಕಂಡುಬರುತ್ತಾ ಇದೆ. ಕೆಲವು ಕಡೆ ಜಿಲ್ಲಾವಾರು ರಾಷ್ಟ್ರೀಕರಣ ಮಾಡಬೇಕೆಂದು, ಇನ್ನು ಕೆಲವುಕಡೆ ಒಂದೊಂದು ಸ್ಟೇಜಿನಲ್ಲಿ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳು ತ್ತಿದ್ದಾರೆ. ಈ ಕೆಲಸವನ್ನು ಬಿಟ್ಟರೆ, ಇನ್ನು ಕೆಲವು ಕಡೆ ಏನೋ ಇವರ ಹತ್ತಿರ ಕೈವಾಡ ನಡೆಸುವ ಕಾರಣದಿಂದ ಆ ಏರಿಯಾ ಮಾತ್ರ ಬಿಟ್ಟು ಬೇರೆ ಏರಿಯಾ ಕವರ್ ಮಾಡುತ್ತೇವೆಂದು ಹೇಳಿ ಅವರದೇ ಸಂಪೂರ್ಣವಾಗಿ ಮನಾಪಲಿಯಾಗಿದೆಯೆಂದು ಹೇಳಬಹುದು. ನಾವು ಬೇರೆ ಕಡೆಯಿಂದ ಬಂದಾಗ ನಮ್ಮಲ್ಲಿ ಸರ್ಕಾರದ ಬಸ್ಸುಗಳಿವೆ, ನಿಮ್ಮಲ್ಲಿ ಖಾಸಗೀ ಬಸ್ಸುಗಳಿವೆ ಎಂಬ ಟೀಕೆ ಟಿಪ್ಪಣಿಗಳನ್ನು ಪ್ರತಿದಿವಸವೂ ನಾವು ಕೇಳುತ್ತಿದ್ದೇವೆ. ಈ ಕಡೆ ಶಿವಮೊಗ್ಗಾ ಮತ್ತು ಇನ್ನೂ ಹರಿಹರ ಸ್ಟೈಡ್ ಇದೆ. ಇವೆಲ್ಲವನ್ನೂ ತೆಗೆದುಕೊಂಡು ಆಗುಂಬಿ ಮತ್ತು ಶೃಂಗೇರಿ ಲೈನುಗಳನ್ನು ಸಂಪೂರ್ಣವಾಗಿ

ಕೈಬಿಟ್ಟರು. ಇನ್ನು ಚಿಕ್ಕಮಗಳೂರು ಮತ್ತು ಮಂಗಳೂರನ್ನು ತೆಗೆದುಕೊಂಡರೆ ಮಧ್ಯದಲ್ಲಿರುವ ಕೆಲವು ಪ್ರದೇಶಗಳನ್ನು ಮಾತ್ರ ಉಳಿಸಿದ್ದಾರೆ. ಇದರಿಂದ ನಮಗೆ ವಿಪರೀತ ಟೀಕೆಗಳು ಆಗುತ್ತಿರುವುದು ಆಗಿದೆ. ಹೆಚ್ಚಿಗೆ ಬಸ್ಸುಗಳನ್ನು ಉಪಯೋಗಿಸುವ ವ್ಯವಸ್ಥೆ ಚಿಕ್ಕಮಗಳೂರು ಮತ್ತು ಶಿವಮೊಗ್ಗಾದಲ್ಲಿ ಇದೆ. ಅದೇ ಬಸ್ಸುಗಳನ್ನು ಕೇವಲ 50 ಮೈಲಿಗಳವರೆಗೂ ಪೂರ್ತಿಮಾಡಿದರೆ ಬಹಳ ಚೆನ್ನಾಗಿರುತ್ತದೆ. ಆ ಏರಿಯಾ ಬಿಟ್ಟಿರುವುದು ಜನಗಳಿಗೆ ವಿಪರೀತವಾಗಿ ಟೀಕೆಗೆ ಕಾರಣವಾಗಿದೆ. ಹಾಗೆ ಯೋಚನೆಮಾಡಿದರೆ ಕೆಲವು ಸರ್ವಿಸ್‌ಗಳನ್ನು ನೋಡಿದರೆ, ಕೆಲವೊಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೆ ನಮ್ಮ ದೇಶದಲ್ಲಿ ಬಸ್ ಸೌಕರ್ಯ ಬಹಳ ಅಗತ್ಯವಿದೆಯೆಂಬುದಾಗಿ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಮಾಡಬೇಕು ನರಸಿಂಹರಾಜಪುರ ನನ್ನ ಕ್ಷೇತ್ರ. ಅಲ್ಲಿಂದ ಭದ್ರಾ ಪ್ರಾಜೆಕ್ಟ್ ಹತ್ತಿರ 4, 4¼ ಘಂಟೆಗೆ ಬಸ್ ನಿಲ್ಲುತ್ತದೆ. ಅಲ್ಲಿಂದ 40 ಮೈಲಿಗಳ ದೂರದಲ್ಲಿರುವ ಪ್ರದೇಶಗಳಿಗೆ ಹೋಗಬೇಕಾದರೆ ಆರ್.ಟಿ.ಓ. ಅವರು ಅವಕಾಶ ಕೊಡಲಿಲ್ಲ. ಸರ್ಕಾರದವರು ಕೇಳಿದ ಸಂದರ್ಭದಲ್ಲಿ ಅಲ್ಲಿರತಕ್ಕ ಡಿ. ಸಿ., ಪೋಲೀಸ್ ಸೂಪರಿಂಟೆಂಡೆಂಟ್, ಎಗ್ಜಿಕ್ಯುಟೀವ್ ಇಂಜಿನಿಯರ್, ಆರ್. ಟಿ. ಓ., ಒಬ್ಬರು ಖಾಸಗೀ ಸದಸ್ಯರು, ನಮಗೆ ಅವಕಾಶ ಸಿಗಲಿಲ್ಲವೆಂದು ಹೇಳಿದರೆ ಸರ್ಕಾರ ಬಸ್ಸುಗಳಿಗೆ ಅಲ್ಲಿ ಪ್ರವೋಷನ್ ಸಿಗಲಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಮೈಸೂರಿನಲ್ಲಿ ಬರತಕ್ಕ ಬಸ್ಸು 4–4½ ಗಂಟೆಗೆ ಶೃಂಗೇರಿಯಲ್ಲಿ ನಿಲ್ಲುತ್ತದೆ. ಶೃಂಗೇರಿ ಒಂದು ದೊಡ್ಡ ಕ್ಷೇತ್ರವೆಂಬುದು ಎಲ್ಲರಿಗೂ ಗೊತ್ತಾಗಿದೆ. ಅಲ್ಲಿಂದ ಬಂದ ಬಸ್ಸು ಸುಮಾರು 36 ಮೈಲಿಗಳ ದೂರ ಹೋಗಿ ನಿಲ್ಲುತ್ತದೆ. ಈ ಶೃಂಗೇರಿಗೆ ಬಹಳ ಜನರು ಬರುತ್ತಾರೆ, ಮತ್ತು ಹೋಗುತ್ತಾರೆಂದು ಹೇಳಿದರೂ ಅದರ ಬಗ್ಗೆ ಯಾವ ಕ್ರಮವನ್ನೂ ಸರಕಾರದವರು ತೆಗೆದುಕೊಳ್ಳಲಿಲ್ಲ ಇದರ ಬಗ್ಗೆ ನಾನು ಬರೆದು ಒಂದು ಒಂದೂವರೆ ತಿಂಗಳುಗಳಾಗಿವೆ. ನಾನು ಹೆಚ್ಚಿಗೆ ಬಸ್ಸುಗಳು ಬೇಕೆಂದು ಮಾತನಾಡುತ್ತಾ ಇಲ್ಲ. ಇರುವ ಬಸ್ಸುಗಳನ್ನೇ ಉಪಯೋಗಿಸಿ ಸಂಪಾದನೆ ಜಾಸ್ತಿ ಮಾಡುವ ಅವಕಾಶ ಉಂಟು. ಬಸ್ಸುಗಳು ಎಲ್ಲೆಲ್ಲಿವೆ, ಎಷ್ಟು ದೂರ ಮುಂದುವರಿಯುವುದಕ್ಕೆ ಸಾಧ್ಯವಿದೆ ಎಂಬುದನ್ನು ರೋಡ್ ಟ್ರಾನ್ಸ್‌ಪೋರ್ಟ್‌ನವರು ಹೇಳಬೇಕಾಗುತ್ತದೆ. ಅದಕ್ಕೆ ಆರ್.ಟಿ.ಓ.ನಲ್ಲಿ ಪರ್ಮಿಶನ್ ತೆಗೆದುಕೊಳ್ಳಬೇಕು. ಅಲ್ಲಿ ಮ್ಯಾನೇಜ್‌ಮೆಂಟ್ ಇನ್ನೂ ಚೆನ್ನಾಗಿ ನಡೆಯಬೇಕು. ಮೊನ್ನೆ 21ನೇ ತಾರೀಖಿನಲ್ಲಿ ನಾನು ಊರಿಗೆ ಹೋಗಿ ಚಿಕ್ಕಮಗಳೂರಿಗೆ ಬಂದೆ. ಸುಮಾರು 6 ಬಸ್ಸುಗಳು ಅಲ್ಲಿ ನಿಂತಿದ್ದುವು. 6 ಗಂಟೆಗೆ ಬೆಳಿಗ್ಗೆ ಒಂದು ಬಸ್ಸು ಹೊರಡಬೇಕಾಗಿತ್ತು. ಆದರೆ 6¼ ಗಂಟೆಗೆ ವಿತೌಟ್ ಬೋರ್ಡ್ ಬಸ್ ಒಂದು ಬಂತು. ಜನರ ಓಡಿಹೋಗಿ ಅದರಲ್ಲಿ ಕೂತರು. ಎಲ್ಲರನ್ನೂ ಕೆಳಗಡೆ ಇಳಿಸಿಬಿಟ್ಟರು. ಅಷ್ಟರಲ್ಲಿ ಇನ್ನೊಂದು ಬಸ್ ಬಂತು. ಅದರಲ್ಲಿ ಹೋಗಿ ಒಬ್ಬ ಕುಳಿತುಬಿಟ್ಟ. ಆಗ ಎಲ್ಲರೂ ಕೂತುಬಿಟ್ಟರು. 6 ಗಂಟೆಗೆ ಹೊರಡಬೇಕಾದ ಬಸ್ ಆರೂವರೆ ಗಂಟೆಯಾದರೂ ಬಸ್ಸು ಹೊರಡಲಿಲ್ಲ. ಯಾರು ಅದರ ಇನ್ ಚಾರ್ಜ್ ಇದ್ದಾರೆಂದು ಕೇಳಿದರೆ, ಯಾರೂ ಇಲ್ಲವೆಂದು ಹೇಳಿದರು ನನಗೂ ಅವರು ಆ ರೀತಿ ಹೇಳಿದರು. ಬಹುಶಃ ನಾನು ಎಂ.ಎಲ್.ಎ. ಎಂದು ಅವರಿಗೆ ಗೊತ್ತಿಲ್ಲ. ಯಾರೋ ಒಬ್ಬ ಹೇಳಿಯೇ ಬಿಟ್ಟ, 'ಏನು ಮಾಡುವುದು, ನಾವು ಎಲ್ಲಾ ನಮ್ಮ ಸದಸ್ಯರನ್ನು ಚುನಾವಣೆ ಮಾಡಿ ಕಳಿಸುತ್ತೇವೆ, ಈಗ ಈ ಪರಿಸ್ಥಿತಿ ಬಂದಿದೆ, ಯಾರು ಕೇಳುವವರೂ ಇಲ್ಲ ; ಎಂದು'

ಇನ್ನು ತಾವು ಬಸ್ಸಿನಲ್ಲಿ ಫಸ್ಟ್ ಎಯಿಡ್ ಬಾಕ್ಸ್ ಎಂದು ಇಟ್ಟಿದ್ದೀರಿ. ಅದರೊಳಗೆ ಏನೂ ಇರುವುದಿಲ್ಲ. ಅದರ ಕನ್ನಡಿಯನ್ನಾದರೂ ತೆಗೆದು, ಮರದ ಕವರನ್ನಾದರೂ ಹಾಕಿ. ಇಲ್ಲದಿದ್ದರೆ ಸರ್ಕಾರವನ್ನು ಸುಮ್ಮನೆ ಅವಹೇಳನ ಮಾಡುವುದಕ್ಕೆ ಅವಕಾಶವಾಗುತ್ತದೆ. ಅಥವಾ ಇದನ್ನು ಅಧಿಕಾರಿಗಳು ಬೇಕೆಂದೇ ಸರ್ಕಾರದವರನ್ನು ದೂಷಣೆ ಮಾಡಲಿ ಎಂಬ ಉದ್ದೇಶದಿಂದ ಹಾಕಿದ್ದಾರೋ ?

ಇನ್ನು ಟೂರಿಸ್ಟ್ ಬಸ್ಸುಗಳ ವಿಚಾರದಲ್ಲಿ ಸಾಕಷ್ಟು ಅಪಾದನೆ ಮಾಡಿದ್ದಾರೆ. ಸರ್ಕಾರದವರು ಸರಿಯಾದ ಸಮಯಕ್ಕೆ ಬಸ್ ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಆನಂದ ರಾಯರ ಸರ್ಕಲಿಂದ ಟೂರಿಸ್ಟ್ ಬಸ್ಸುಗಳು ಹೊರಡುತ್ತಿವೆ. ಅದರಲ್ಲಿ ಟೈಯರ್ಸ್, ಟ್ಯೂಬ್ಸ್, ಜವಳಿ ಎಲ್ಲಾ ತೆಗೆದುಕೊಂಡು ಹೋಗುತ್ತಿದ್ದಾರೆ, ಅದರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಇದನ್ನೆಲ್ಲಾ ತಡೆಗಟ್ಟುವುದಕ್ಕೆ ಇಲಾಖೆಯವರು ಸಂಪೂರ್ಣವಾಗಿ ಟೂರಿಸ್ಟ್ ಬಸ್ಸುಗಳನ್ನು ತೆಗೆದುಕೊಂಡು ಓಡಿಸುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಇದರ ಬಗ್ಗೆ ಸರ್ಕಾರದವರು ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರದ ವಿಚಾರದಲ್ಲಿ ಈಗ ಸಾಕಷ್ಟು ಜನರು ಮಾತನಾಡಿದರು. ಈಗ ಇರುವಂತಹ ರೀತಿ ಬಹಳ ಚಾತುರ್ಯದ್ದು ಎಂದು ಹೇಳಬಹುದು. ಕೆಲವರಿಗೆ ಸಾವಿರಾರು ಪಲ್ಲ ಭತ್ತ ಗೇಣಿ ಬರುತ್ತದೆ ಅದರ ಲೆಕ್ಕವಿಲ್ಲ. ಆದರೆ ಒಬ್ಬ ನಾಲ್ಕು ಎಕರೆಯಲ್ಲಿ ಬೆಳೆದರೆ ಅದರ ಲೆಕ್ಕ ಉಂಟು.

(ಶ್ರೀ ಕೆ. ಎಚ್. ವೀರಪ್ಪಗೌಡ)

ನನಗೆ ಇವತ್ತು ಸಾವಿರಾರು ಖಂಡುಗ ಭತ್ತ ಗೇಣಿ ಬಂದರೆ, ಅದಕ್ಕೆ ಲೆಕ್ಕವೇ ಇಲ್ಲ. ನಾನು ಬೆಳೆದರೆ ಇದೆ. ಎಷ್ಟೋ ಸಲ ರೈತ ಕೋರ್ಟಿಗೆ ಹೋಗಬೇಕಾದ ಪ್ರಸಂಗ ಬರುತ್ತದೆ. ಕೇಸಿಗೆ ಕೋರ್ಟಿನಲ್ಲಿ ಹೋಗುವವರು ಎಷ್ಟು ಜನರು ಬಡವರು ಇದ್ದಾರೆ, ಶ್ರೀಮಂತರು ಎಷ್ಟು ಜನರು ಇದ್ದಾರೆ ಎಂಬುದನ್ನೆಲ್ಲಾ ನೋಡಿದರೆ, 10 ಕ್ವಿಂಟಲಿಗೂ ಕೇಸ್ ಇದೆ, ಎರಡು ಕ್ವಿಂಟಲಿಗೂ ಕೇಸ್ ಇದೆ. ಇದನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲವೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಲೆವಿ ವಸೂಲಿ ಯಾವ ಕ್ರಮದಲ್ಲಿ ನಡೆಯುತ್ತದೆ, ಎಷ್ಟು ಮಟ್ಟಿಗೆ ನಡೆದಿದೆ ಎಂಬುದನ್ನು ಸರ್ಕಾರದವರು ವಿಮರ್ಶೆ ಮಾಡಿ ಸರಿಪಡಿಸಬೇಕು. ಯೋಚನೆ ಮಾಡಿ ನೋಡಿದರೆ, ಈ ಲೆವಿಯು ಅವಶ್ಯಕತೆಯೇ ಇಲ್ಲ. ಜನವರಿ ಫೆಬ್ರುವರಿ ತಿಂಗಳಲ್ಲಿ ಓಪನ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡುವುದಾದರೆ, ಇವತ್ತಿನ ದಿವಸ ಯಾವ ರೇಟ್ ಫಿಕ್ಸ್ ಮಾಡುತ್ತೀರಿ, ಅದಕ್ಕಿಂತ ಕಡಿಮೆ ರೇಟಿಗೆ ಭತ್ತ ಸಿಗುತ್ತದೆ. ಈ ಲೆವಿ ಪದ್ಧತಿ ಮಾಡಿ ರೈತನನ್ನು ಹಿಂಸೆಗೆ ಗುರಿ ಮಾಡಿ, ಅಧಿಕಾರಿಯಿಂದ ತಪ್ಪಿಸಿಕೊಂಡು ಓಪನ್ ಮಾರ್ಕೆಟಿನಲ್ಲಿ ಮಾರತಕ್ಕ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದರಿಂದ ನಿಮಗೆ ಅನುಕೂಲವಾಗಲಿ, ರೈತರಿಗೆ ಅನುಕೂಲವಾಗಲಿ ಇಲ್ಲ. ಆದ್ದರಿಂದ ಲೆವಿ ಪದ್ಧತಿಯನ್ನು ತೆಗೆದು ಹಾಕಿ. ನಿಮಗೆ ಬೇಕಾಗಿದ್ದರೆ ಓಪನ್ ಮಾರ್ಕೆಟಿನಲ್ಲಿ ಕೊಂಡು ಕೊಳ್ಳತಕ್ಕದ್ದು ಒಳ್ಳೆಯದು ಮತ್ತು ರೈತರಿಗೆ ಕೊಡತಕ್ಕ ಕಿರುಕುಳವನ್ನು ತಪ್ಪಿಸಬೇಕು. ಇನ್ನು ಕೆಲವು ಕಡೆ ಜಿಲ್ಲಾ ಬಾರ್ಡರುಗಳು ಇವೆ. ಉದಾಹರಣೆಗೆ ಆಗುಂಬೆ ಗಡಿಯಲ್ಲಿ, ಅಲ್ಲಿ ಇಬ್ಬರು ಕಂಟ್ರಾಕ್ಟರು ಇದ್ದಾರೆ, ಅವರ ಹೆಸರು ಹೇಳಿದರೆ ಯಾರೂ ಭತ್ತ ತೆಗೆದುಕೊಂಡು ಹೋಗಬಹುದು. ಯಾರ ಭತ್ತ ಎಂದರೆ, ಆ ಎಜೆಂಟರ ಹೆಸರು ಹೇಳಿದರೆ ತೆಗೆದುಕೊಂಡು ಹೋಗಬಹುದು. ಅದಕ್ಕೆ ಕೇಸ್ ಹಾಕುತ್ತಿಲ್ಲ. ಇವತ್ತು ರೈತನು ಅವನ ಭತ್ತ ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಆ ತೊಂದರೆಯನ್ನು ತಪ್ಪಿಸಬೇಕು. ಮತ್ತು ಗೇಣಿದಾರನು ಏನು ಭತ್ತ ಕೊಡುತ್ತಾನೆ, ಅದರಲ್ಲಿ, ಸಾಮಾನ್ಯವಾಗಿ 50 ಖಂಡುಗ ಬಂದರೆ ಬಿಟ್ಟು ಬಿಡಿ. ಅದರ ಮೇಲೆ ಇದ್ದರೆ, ಲೆವಿ ವಸೂಲು ಮಾಡಿ.

ಇನ್ನು ಮುನಿಸಿಪಾಲಿಟಿಯ ಬಗ್ಗೆ ಹೇಳುವುದಾದರೆ, ನಾವು ಏನು ಪ್ರಜಾಪ್ರಭುತ್ವವೆಂದು ಹೇಳುತ್ತಿದ್ದೇವೆ, ಅದು ಇದರಲ್ಲಿ ಹೋಗಿಬಿಟ್ಟಿದೆ, ಇವತ್ತು ಅಲ್ಲಿ ಒಬ್ಬ ಅಧ್ಯಕ್ಷರೆಂದು ಮಾಡಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೆ ಎಲ್ಲಾ ಅಧಿಕಾರ ಕೊಟ್ಟಿದ್ದೀರಿ. ಈ ವಿಚಾರದಲ್ಲಿ ಸಾಕಷ್ಟು ಮನವಿಗಳನ್ನು ಮಾಡಿದ್ದೇವೆ. ಆದರೂ ಇಲ್ಲಿಯವರೆಗೆ ಯಾವ ಅಮೆಂಡ್‌ಮೆಂಟ್ ಪ್ರೊಪೋಸಲ್ ಬರಲಿಲ್ಲ. ನಮ್ಮ ಮಾನ್ಯ ಮಂತ್ರಿಯವರು ಯುವಕರು, ಉತ್ಸಾಹಶಾಲಿಗಳು, ಎಲ್ಲರಿಗೂ ಅನುಕೂಲವಾಗಿರತಕ್ಕಂತಹ ಒಂದು ತಿದ್ದುಪಡಿಯನ್ನು ಜಾರಿಗೆ ತರುತ್ತಾರೆಂದು ಭಾವಿಸುತ್ತೇನೆ. ಇನ್ನು 10 ಸಾವಿರ ಸಂಖ್ಯೆಗೆ ಒಳಗಿರತಕ್ಕಂತಹ ಮುನಿಸಿಪಾಲಿಟಿಗೆ ಆದಾಯ ಬಹಳ ಕಡಿಮೆ. ಆದರೆ ಅಲ್ಲಿಂದ ಇನ್‌ಕಮ್ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ಇತ್ಯಾದಿ ಸರ್ಕಾರಕ್ಕೆ ನೇರವಾಗಿ ಬರುತ್ತದೆ. ಇದರಲ್ಲಿ 50 ಪರ್‌ಸೆಂಟಾದರೂ ಮುನಿಸಿಪಾಲಿಟಿಯವರಿಗೆ ಕೊಡಬೇಕು. ಇಂದು ಮುನಿಸಿಪಾಲಿಟಿಯವರಿಗೆ ಬರಬೇಕಾಗಿದ್ದ ಸಾಲ ಎಷ್ಟೋ ಇದೆ. ಬರೇ ರಿಪೋರ್ಟು ಕೊಟ್ಟರೆ, ಅದರಲ್ಲಿ ತೀರ್ಮಾನವಾಗುವುದಿಲ್ಲ. ಆದ್ದರಿಂದ 10 ಸಾವಿರ ಪ್ರಜಾಸಂಖ್ಯೆಗಿಂತ ಕೆಳಗಿರತಕ್ಕಂತಹ ಮುನಿಸಿಪಾಲಿಟಿಗಳಿಗೆ ಸರ್ಕಾರಕ್ಕೆ ಬರತಕ್ಕದ್ದರಲ್ಲಿ ತಾಲ್ಲೂಕು ಬೋರ್ಡುಗಳಿಗೆ ಎಲ್ಲಾ ಹೇಗೆ ಕೊಡುತ್ತಿದ್ದೀರಿ, ಹಾಗೆ ಇಲ್ಲಿಯೂ 50 ಪರ್‌ಸೆಂಟ್ ಆದರೂ, ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್‌ನಿಂದ ಮುನಿಸಿಪಾಲಿಟಿಯವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದೃಷ್ಟಿಯಲ್ಲಿ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಿ ಮುನಿಸಿಪಾಲಿಟಿಗಳಲ್ಲಿ ನಿಜವಾದ ಪ್ರಜಾಪ್ರಭುತ್ವವನ್ನು ಜಾರಿಗೆ ತರತಕ್ಕಂಥ ರೀತಿಯಲ್ಲಿ ಹಣ ಸಹಾಯವನ್ನು ಒದಗಿಸತಕ್ಕಂಥಾದ್ದು ಬಹಳ ಅಗತ್ಯ ಎಂದು ನಾನು ಹೇಳುತ್ತಿದ್ದೇನೆ.

5–00 P.M.

ಆಕ್ಟ್ರಾಯ್ ವಜಾ ಮಾಡತಕ್ಕ ವಿಷಯದಲ್ಲಿ ಎಲ್ಲಾ ಮುನಿಸಿಪಾಲಿಟಿಗಳ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು. ಅದರಿಂದ ಬರತಕ್ಕಂಥ ಹಣವನ್ನು ತುಂಬಿಕೊಳ್ಳಲು ಯಾವ ರೀತಿಯ ತೆರಿಗೆಯನ್ನು ವಿಧಿಸಬೇಕು ಎಂಬುದನ್ನೂ ಯೋಚನೆ ಮಾಡಬೇಕಾಗುತ್ತದೆ. ಹೌಸ್ ಟ್ಯಾಕ್ಸ್ ಹಾಕಿದರೆ ವ್ಯಾಪಾರಸ್ಥರೇನೋ ಕೊಡುತ್ತಾರೆ, ಆದರೆ ರೈತರು ಮತ್ತು ಬಡ ಕೂಲಿಗಾರರು ಒಂದಕ್ಕೆ ಎರಡರಷ್ಟು ಹೌಸ್ ಟ್ಯಾಕ್ಸ್ ಕೊಡಬೇಕೆಂದರೆ ಆಗ ಅವರ ಗತಿ ಏನಾಗಬಹುದು ಎಂಬುದನು

ಯೋಚನೆ ಮಾಡಬೇಕಾಗುತ್ತದೆ. ನೇರವಾಗಿ ಮುನಿಸಿಪಾಲಿಟಿಯು ಒಳಗಡೆ ಇರತಕ್ಕವರಮೇಲೆ ಈ ಒಂದು ಆಕ್ಟ್ರಾಯ್ ಬೀಳುತ್ತದೆ. ಆದರೆ ಎಲ್ಲರೂ ಆಕ್ಟ್ರಾಯ್ ಕೊಡಬೇಕೆಂದರೆ ಅವರು ಕೊಡುತ್ತಾರೆಯೇ ಎಂಬುದನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ದೊಡ್ಡ ಮುನಿಸಿಪಾಲಿಟಿಗಳಿಗೇನೋ ಪರವಾಯಿಲ್ಲ. ಆದರೆ ಸಣ್ಣ ಮುನಿಸಿಪಾಲಿಟಿಗಳ ದೃಷ್ಟಿಯಿಂದ ಈ ಆಕ್ಟ್ರಾಯ್ ವಜಾ ಮಾಡುವುದರಿಂದ ಯಾವ ರೀತಿಯ ಪರಿಣಾಮವುಂಟಾಗುತ್ತದೆ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುವುದು ಆಗತ್ಯ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum). Mr. Chairman, Sir, I rise to oppose the demands moved by the three Hon'ble Ministers before this august House. I want to speak first on Municipal Administration. I restrict myself to Belgaum and Nipani Municipalities. The Mysore Government have superseded these municipalities 4 years ago. The reason is that these municipalities are dominated by Marathi people and they are ruling these two municipalities. That is why the Government superseded them. The Government wanted to change the records of these Marathi municipalities. During the last 4 years they have tried their level best to change the records of these municipalities in Kannada. They appointed so many Kannada people as servants in these two municipalities. This year the Mysore Government published the calendar of events for election. 23rd of December was the date for filing of nominations and 19th January was the date of polling. The Mysore Government tried their best to form the constituencies in such a way that only Kannada people and Congress people are elected, and yet we Maharashtrians have won the municipality in Belgaum and in Nipani though the Nipani Municipal election case is pending in the Supreme Court. When the calendar of events was announced, it is worth seeing what the Administrator did in the Belgaum Municipality. He disposed of all the plots in the Mala Maruthi site by calling for applications for these plots. He called for applications on 30th of December. When did he dispose of the applications for plots. After the election to the municipality and before the taking over of the Municipal charge. To whom these plots were disposed of? To the Kannada people only. There was an Advisory Body for the disposal of the sites. It consisted of 9 persons. Out of the 9 persons, three were non-official members and all the three were Kannada people. One is M.L.A. from Belgaum Taluka who has nothing to do with Belgaum City. One is a person who contested against me and was defeated. He is a Kannada man. One is a Deputy Commissioner who is residing in Belgaum and has come there from Hubli. Such a person is given a chance on the Advisory Committee. No local M.L.A. has been appointed on that Committee because the local M.L.A. is a Maharashtrian belonging to M.E.S. I want to ask why they disposed of all the sites before the new Councillors took over control of the Municipality. I am very sorry that this should have been done, by the elected popular body.

There was a jeep accident in Belgaum. The jeep belonged to the Municipality. The jeep went outside the municipality and met with an accident near Mache. 4 Municipal servants in the jeep died on the

(SRI B. B. SAYANAK)

spot. Why did the jeep go outside the municipal limits? Who is responsible for it? It is the responsibility of the Administrator and so I call upon the Administrator to give compensation to these 4 persons who died in the accident. The accident took place on the 25th of last month, which was a holiday for Belgaum Municipality. Such things are going on in the municipality. The administration of the municipality has gone from bad to worse. Same is the case in the maintenance of roads, sanitation, etc. Everything is worse there. The only thing done is that 14 revenue persons have been appointed and they are getting Rs. 1 lakh every year as a salary from the Belgaum Municipality. They do not know the municipal laws and they do not care for the welfare of the municipality. They care only for their salary.

One dead body was found in the water pipe in Rataskope. The water was polluted in the pond, but nobody cared to enquire how it happened. People are asking how the water is polluted. The skeleton of the dead body was found near the water pipe. The municipal officers went there and they asked where the skeleton came from, but they did not care for the dead body. The murder took place at Rataskope. Such things are going on in the municipality under the rule of the Administrator.

SRI G. CHANDRAKANT (Bidar).—Why dont't you speak about the Siva Sena resulution passed by the Belgaum Municipality?

SRI B. B. SAYANAK.—Because the Siva Sena people supported the cause of the M.E.S. for solving the Maharashtra-Mysore border dispute. After its election to the Municipality have passed this resolution. What is the harm in that?

As regards road transport, the buses are very irregular. The bus which is scheduled to start from Belgaum at 7·30 starts at 8 o'clock. What is the reason? There are several breakdowns on the way. Between the 19th, the 20th, of this month there were breakdowns in 4 buses coming from Panjim and Gadag and Dharwar and Belgaum. Sir, in Hubli Bus-stand, there are some latrines. But, night soil is not removed from the latrines. It is rather a difficult problem. So many passengers are asking as to why there are no latrines in Dharwar Bus-stand. A man who eases in the latrine is charged 5 nP. This has to be stopped. In Hubli Bus-stand there is a waiting room for ladies. It was surprising that four persons were sleeping in that Waiting Room. I have brought this to the notice of the Controller. Is it not shameful on the part of the Controller not to have taken action on my complaint? There are latrines near Hubli Controller's office, and dirty smell is coming. I cannot understand how the Controller is sitting there in his office. These latrines must be removed from that place.

About the levy system, in my area only the poor peasants are harassed for the levy. The rich and influencial persons never pay a

single bag of paddy. Only the poor people, who own one or two acres of land, are harassed and are prosecuted in the Court. Therefore, I submit that the Government must take a decision that atleast persons owning two acres of land must be exempted from the levy. That is my request to the Government and the Government must take a decision in this respect early. There are so many cases pending in the Courts, and those cases must be withdrawn by the Government immediately.

Thank you.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ಇಲ್ಲಿ ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಇವತ್ತು ಬಸ್ಸುಗಳ ವಿಚಾರದಲ್ಲಿ ನಾವು ಮಾತನಾಡುವುದು ಇದ್ದರೆ ನಾವು ಒಂದು ವಿಚಾರವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಸ್ವಾತಂತ್ರ್ಯ ಬಂದಮೇಲೆ, ಈ ಬಸ್ಸುಗಳ ರಾಷ್ಟ್ರೀಕರಣವಾಗಬೇಕು ಎನ್ನುವುದು ಸಾರ್ವಜನಿಕ ಅಭಿಪ್ರಾಯವಾಗಿದೆ. ಈ ರಾಷ್ಟ್ರೀಕರಣಕ್ಕೆ ನನ್ನ ವಿರೋಧವಿಲ್ಲ. ಆದರೆ ರಾಷ್ಟ್ರೀಕರಣ ಮಾಡಿದಮೇಲೆ ಅದು ಯಶಸ್ವಿಯಾಗಬೇಕು, ಮತ್ತು ಪರಿಣಾಮಕಾರಿಯಾಗಬೇಕು ಅದರಿಂದ ಜನತೆಗೆ ಉಪಯೋಗ ಸಿಗಬೇಕು. ರಾಷ್ಟ್ರೀಕರಣ ಆಗುವುದಕ್ಕಿಂತ ಮುಂಚೆ ಇದ್ದ ಅನುಕೂಲತೆಗಳು ರಾಷ್ಟ್ರೀಕರಣ ಮಾಡಿದಮೇಲೆ ಇಲ್ಲದೆ ಹೋದರೆ ಅದರಿಂದ ದೇಶಕ್ಕೂ, ಜನತೆಗೂ ತುಂಬಾ ಹಾನಿಯಾಗುತ್ತದೆ ಎಂದು ಹೇಳತಕ್ಕವನು ನಾನು. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಸ್ಸುಗಳು ರಾಷ್ಟ್ರೀಕರಣವಾಗಿವೆ. ನಾನು ಅಲ್ಲಿ ಕಂಡಿರತಕ್ಕಂತಹ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಮೊದಲು ಬಸ್ಸುಗಳನ್ನು ಬೇರೆ ಬೇರೆ ಜನರು ಬಹಳ ಸ್ಪರ್ಧೆಯಿಂದ ಓಡಿಸುತ್ತಿದ್ದರು; ಮತ್ತು ಜನತೆಗೂ ಉಪಕಾರವಾಗುವ ರೀತಿಯಲ್ಲಿ ಓಡಿಸುತ್ತಿದ್ದರು. ರಾಷ್ಟ್ರೀಕರಣ ಆದಮೇಲೆ ಎಲ್ಲಿ ನೋಡಿದರೂ ಬಸ್ಸುಗಳು ಸಿಗುವುದಿಲ್ಲ. ಇನ್ನೂ ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಬೇಕೆನ್ನುವ ಮಾತನ್ನು ನಾವು ಅಲ್ಲಲ್ಲಿ ಕೇಳುತ್ತಿದ್ದೇವೆ. ರಾಷ್ಟ್ರೀಕರಣವಾದ ಮೇಲೆ ನಾವು ನಮ್ಮ ಇಲಾಖೆಗೂ ಒಳ್ಳೆಯ ಹೆಸರನ್ನು ತರಬೇಕು. ಎಲ್ಲಿ ತೊಂದರೆಗಳು ಅನ್ಯಾಯಗಳು ಇವೆಯೋ, ಅವುಗಳನ್ನು ನಿರ್ನಾಮ ಮಾಡಬೇಕು ಎನ್ನುವ ಪ್ರತಿಜ್ಞೆಯನ್ನು ಮಾಡಬೇಕು. ಈಗ ಅಲ್ಲಿಯೂ ನಮ್ಮ ಜನರು ಏನು ಹೇಳುತ್ತಿದ್ದಾರೆಂದರೆ, ಖಾಸಗಿಯವರು ಬಸ್ಸುಗಳನ್ನು ಓಡಿಸುವಾಗ ಸಿಗುತ್ತಿದ್ದ ಸವಲತ್ತುಗಳು ಈಗ ಸಿಕ್ಕುತ್ತಾ ಇಲ್ಲ. ಸಮಯಕ್ಕೆ ಸರಿಯಾಗಿ ಬಸ್ಸುಗಳು ಹೊರಡುವುದಿಲ್ಲ, ಕಂಡಕ್ಟರ್ಸ್ ಪ್ರಯಾಣಿಕರನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಬಸ್ಸುಗಳು ದಾರಿಯಲ್ಲಿ ಹಾಳಾದರೆ, ಬೇಗನೇ ರಿಲೀಫ್ ಬಸ್ಸುಗಳು ಬರುವುದಿಲ್ಲ. ಒಂದು ವೇಳೆ ಬರುವಾಗ ಕಾಡಿನಲ್ಲೇ ಆಗಲಿ, ಬಸ್ಸು ಹಾಳಾದರೆ, ಬೇರೆ ಬಸ್ಸುಗಳು ಸಮಯಕ್ಕೆ ಬಾರದೆ, ಜನರು ಅಲ್ಲೇ ಮಧ್ಯದಲ್ಲೇ ನಿಲ್ಲಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಜನರು ಹೇಳುತ್ತಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರದವರು ಪ್ರಯತ್ನ ಮಾಡಬೇಕು. ರಾಷ್ಟ್ರೀಕರಣ ಬಹಳ ಯಶಸ್ವಿಯಾಗಬೇಕು. ಈಗ ನಮ್ಮ ಮಂಗಳೂರಿನಲ್ಲಿ ರಾಷ್ಟ್ರೀಕರಣವಾದ ಮೇಲೆ ಬಸ್ಸುಗಳ ದರ ಕೂಡ ಹೆಚ್ಚಾಗಿದೆ. ಹಿಂದೆ ಖಾಸಗಿಯವರು ಬಸ್ಸುಗಳನ್ನು ಓಡಿಸುತ್ತಿದ್ದ ಕಾಲದಲ್ಲಿ ದರ ಕಡಿಮೆ ಇತ್ತು. ಇಲಾಖೆಯವರು ಯಾವುದೋ ಲೆಕ್ಕಾಚಾರ ಹಾಕಿ ಜಾಸ್ತಿ ಮಾಡಿದ್ದಾರೆ; ಎಂದು ಜನರು ಹೇಳುತ್ತಿದ್ದಾರೆ. ಇದನ್ನು ಆಲೋಚನೆ ಮಾಡಬೇಕು. ಮೊದಲು ಖಾಸಗಿಯವರು ಎಷ್ಟು ದರ ಇಟ್ಟಿದ್ದರೋ, ಅಷ್ಟು ದರವನ್ನು ಇಡಲಿಕ್ಕೆ ಯೋಚನೆ ಮಾಡಬೇಕು. ಹಿಂದೆ ಮಂಗಳೂರಿನಲ್ಲಿ ಬಸ್ ಆಫೀಸಿಗೆ ಪ್ರಯಾಣಿಕರು ಬಂದರೆ, ಖಾಸಗಿಯವರು ಪ್ರೇಮ, ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅದರಂತೆ ಈಗಲೂ ಪ್ರಯಾಣಿಕರನ್ನು ಒಳ್ಳೆಯ ರೀತಿಯಲ್ಲಿ ಮಂಗಳೂರು ಬಸ್ ಆಫೀಸಿನಲ್ಲಿ ನೋಡಿಕೊಳ್ಳುವಂತೆ ಮಾಡಬೇಕು. ಇನ್ನು ಬಸ್ಸುಗಳಲ್ಲಿ ನಿಂತು ಬರತಕ್ಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. 10-12 ಜನರಿಗೆ 200-300 ಮೈಲಿವರೆಗೆ ನಿಂತು ಬರುವುದಕ್ಕೆ ಅಸ್ಪದ ಕೊಟ್ಟಿದ್ದಾರೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದು ಒಳ್ಳೆಯದೆಂದು ನಾನು ಈ ಸಮಯದಲ್ಲಿ ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಕೆಲವೊಂದು ಸಂದರ್ಭಗಳಲ್ಲಿ ಮಹಿಳೆಯರು, ಗರ್ಭಿಣಿಯರು ನಿಂತುಕೊಂಡು ಬರುವ ಪರಿಸ್ಥಿತಿಯೂ ಇದೆ. ಇದು ಬಹಳ ಅನ್ಯಾಯ, ಇದನ್ನು ನಿಲ್ಲಿಸಿದರೆ ಒಳ್ಳೆಯದು. ಇನ್ನು ಪ್ರೌಢಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ಹೋಗತಕ್ಕ ಮಕ್ಕಳಿಗೆ ಬಸ್ಸುಗಳು ಬೇಕಾಗುತ್ತದೆ. ಅವರು ಬಸ್ಸುಗಳನ್ನು ನಿಲ್ಲಿಸಿ ತಡೆಹಿಡಿಯುತಕ್ಕಂತಹ ವಿಚಾರವನ್ನು ನೋಡಿದ್ದೇನೆ. ಆದ್ದರಿಂದ ಕಾಲೇಜು ಮತ್ತು ಹೈಸ್ಕೂಲುಗಳು ಇರುವಲ್ಲಿ ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಬೇಕೆಂದು ಸರ್ಕಾರದವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ಲಗ್ಸುರಿ ಬಸ್ಸುಗಳ ವಿಚಾರ. ಈಗ ಇರುವಂತಹ ಲಗ್ಸುರಿ ಬಸ್ಸುಗಳಲ್ಲಿ ಕೂತು ಕೊಳ್ಳುವ ಸವಲತ್ತು ಏನೂ ಸಾಲದು. ಒಂದೆರಡು ರೂಪಾಯಿ ಜಾಸ್ತಿ ದರ ಮಾಡಿದರೂ ದೋಷವಿಲ್ಲ. ರಾತ್ರಿ ಹೊತ್ತು ಹೋಗುವಾಗ ಆರಾಮವಾಗಿ ಕಾಲು ನೀಡುವ ಪರಿಸ್ಥಿತಿ ಇರಬೇಕು. ಅದಕ್ಕಾಗಿ ಒಳ್ಳೆಯ ರೀತಿಯಲ್ಲಿ ಸೀಟಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಲಗ್ಸುರಿ ಬಸ್ಸುಗಳನ್ನು ಬೆಳಿಗ್ಗೆ ಆರುಮುಕ್ಕಾಲು ಗಂಟೆಗೆ ಹೋಗುವುದನ್ನು ತಪ್ಪಿಸಿ ಮಧ್ಯಾಹ್ನ ಇಟ್ಟರೆ ಒಳ್ಳೆಯದು. ಇದನ್ನು ಕೂಡ ಸಂಬಂಧಪಟ್ಟವರು ಆಲೋಚನೆ ಮಾಡಬೇಕು.

ಇನ್ನು ಆರ್.ಟಿ.ಒ. ಆಫೀಸಿನ ವಿಚಾರದಲ್ಲಿ ಅನೇಕ ಸದಸ್ಯರು ಹೇಳಿದ್ದಾರೆ. ಮಂಗಳೂರಿನಲ್ಲಿ ಆರ್. ಟಿ. ಒ. ಆಫೀಸಿನಲ್ಲಿ ಅನ್ಯಾಯವಾಗುತ್ತಿರುವುದನ್ನು ಆಗಲೇ ಎಲ್ಲರೂ ನೋಡುತ್ತಿದ್ದಾರೆ ಯಾವ ಲೈಸೆನ್ಸ್ ಆಗಬೇಕಾದರೂ, ಅದು ಲಾರಿಗಾಗಲೀ, ಕಾರಿಗಾಗಲೀ, ಯಾವುದಕ್ಕಾದರೂ, ಹೋದಾಗ ಸಂಬಂಧಪಟ್ಟ ಅಧಿಕಾರಿಗಳು ಉಪದ್ರ ಕೊಡುತ್ತಿದ್ದಾರೆ. ಅಲ್ಲಿ ಭ್ರಷ್ಟಾಚಾರ ಬೇಕಾದಷ್ಟು ನಡೆಯುತ್ತಿದೆ. ಇದಕ್ಕೆ ಇಲಾಖೆಯವರು ಸ್ಪೆಶಲ್ ಸಿ.ಐ.ಡಿ. ಇಟ್ಟು ಸಂಪೂರ್ಣವಾಗಿ ನಿಲ್ಲಿಸಿದರೆ, ಸರ್ಕಾರಕ್ಕೂ ಒಳ್ಳೆಯದು, ನಮಗೂ ಒಳ್ಳೆಯದು. ಎಲ್ಲರಿಗೂ ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ ಆರ್.ಟಿ.ಒ. ಆಫೀಸಿನ ಮೇಲೆ ಹೆಚ್ಚು ನಿಗಾ ಇಡಬೇಕೆಂದು ಹೇಳುತ್ತೇನೆ.

ಇನ್ನು ಪ್ರೈವೇಟ್ ಕಾರುಗಳ ಬಗ್ಗೆ ಹೇಳುವುದಾದರೆ ಇದರಿಂದ ಬಹಳ ದೊಡ್ಡ ಅನ್ಯಾಯ ಗಳಾಗುತ್ತಿವೆ ಮತ್ತು ಸರಕಾರಕ್ಕೂ ನಷ್ಟವಾಗುತ್ತಿದೆ, ಪ್ರೈವೇಟು ಕಾರುಗಳಲ್ಲಿ ಪ್ರಯಾಣಿಕ ರನ್ನು ಬೇರೆ ಊರುಗಳಿಗೆ ನಿರಾಯಾಸವಾಗಿ ಕರೆದುಕೊಂಡು ಹೋಗುತ್ತಿದ್ದಾರೆ. ಉದಾಹರಣೆಯಾಗಿ ನಮ್ಮ ಮಂಗಳೂರು ಬಸ್ಸು ನಿಲ್ದಾಣದಲ್ಲೇ ಇಂತಹ ಖಾಸಗಿಯವರ ಪ್ರೈವೇಟು ಕಾರುಗಳ ಓಡಾಟ ಜಾಸ್ತಿಯಾಗಿರುವುದನ್ನು ನಾವು ನೋಡುತ್ತಾ ಬರುತ್ತಿದ್ದೇವೆ. ಇದರಿಂದ ಸರಕಾರಕ್ಕೆ ಬರುವ ಟ್ಯಾಕ್ಸ್ ಕೂಡ ಸರಿಯಾದ ರೀತಿಯಲ್ಲಿ ಬರುತ್ತಿಲ್ಲ. ಇಂತಹ ಪ್ರೈವೇಟು ಕಾರುಗಳಿಂದ ಆಗುವ ತೊಂದರೆಗಳನ್ನು ತಪ್ಪಿಸಲು ಸಿ.ಐ.ಡಿ. ಇಲಾಖೆಯ ಮೂಲಕ ಸರಿಯಾದ ತನಿಖೆ ಮಾಡಿಸಬೇಕೆಂದು ಸರಕಾರದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಆರ್.ಟಿ ಒ. ಆಫೀಸಿನಲ್ಲಿರುವ ಮೇಲಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಕೆಳಗಿನ ಅಧಿಕಾರಿಗಳು ಕೆಲವು ಕಡೆಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದು ಹೇಗಿದೆ ಎಂದರೆ ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತೆ ಮೇಲಿರುವ ಅಧಿಕಾರಿಗಳು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದರೂ ಕೆಳಗಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಇಲಾಖೆಗೆ ಒಂದು ಕೆಟ್ಟ ಹೆಸರು ಬರಲು ಕಾರಣವಾಗಿದೆ.

ಎರಡನೆಯದು, ಆಹಾರದ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗಿದೆ. ನಾನು ಆ ಕ್ಷೇತ್ರದಲ್ಲಿಯೇ ಇರುವವನಾಗಿರುವುದರಿಂದ ಚೆಕ್‌ಪೋಸ್ಟುಗಳ ಸಮೀಪದಲ್ಲೇ ಇರುವುದರಿಂದ ಹಾಗೂ ಬೆಲ್ಟ್ ಏರಿಯಾದಿಂದ ಬರತಕ್ಕವನೂ ಆಗಿರುವುದರಿಂದ ನನ್ನ ಬಳಿಗೆ ದಿನವೂ ನೂರಾರು ಕಾಗದಗಳು ಇದರ ಬಗ್ಗೆ ಬರುತ್ತಿರುತ್ತವೆ ಮತ್ತು ಇವೆಲ್ಲಾ ನನ್ನ ಕ್ಷೇತ್ರದ ಆಹಾರ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಬರುತ್ತಿವೆ. ಆಹಾರದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗುರ್ರೆಡ್ಡಿಯವರು ಹೇಳಿರುವ ಮಾತನ್ನು ಪುಷ್ಟೀಕರಿಸುತ್ತೇನೆ. ಅವರು ಹೇಳಿದಂತೆ ಜಿಲ್ಲೆಗಳಿಂದ ಜಿಲ್ಲೆಗಳಿಗೆ ಇರುವ ತಡೆ ಗಳನ್ನು ತೆಗೆದುಹಾಕಬೇಕೆಂದು ಸಲಹೆಮಾಡುತ್ತೇನೆ. ಬಂದರು ಏರಿಯಾದಲ್ಲಿ ಇನ್ನೂ ಸ್ವಲ್ಪ ಬಲವಾದ ಪೋಲೀಸು ಬಂದೋಬಸ್ತು ಇಟ್ಟು ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಹೋಗಕೂಡದು ಎನ್ನುವ ನಿರ್ಬಂಧವನ್ನು ತೆಗೆದರೆ ಬಹಳ ಜನಕ್ಕೆ ಅನುಕೂಲವಾಗುತ್ತದೆ. ಮತ್ತು ಆಹಾರ ಧಾನ್ಯಗಳು ಎಲ್ಲ ಜಿಲ್ಲೆಗಳಿಗೂ ಲೀಲಾಜಾಲವಾಗಿ ಹೋಗಲು ಅವಕಾಶವಾಗುತ್ತದೆ, ಬೆಲೆಗಳೂ ಇಳಿಯುತ್ತವೆ. ಜಿಲ್ಲೆಗಳಲ್ಲಿ ಎಲ್ಲಿ ಗಡಿಗಳಿವೆಯೋ ಅಂತಹ ಕಡೆಗಳಲ್ಲಿ ಸ್ವಲ್ಪ ಹೆಚ್ಚು ಬಂದೋಬಸ್ತು ಮಾಡಿ ಜಿಲ್ಲೆ ಯಿಂದ ಜಿಲ್ಲೆಗೆ ಆಹಾರ ಧಾನ್ಯಗಳು ಹೋಗಕೂಡದು ಎನ್ನುವ ನಿರ್ಬಂಧವನ್ನು ಸರಕಾರ ಕೂಡಲೇ ತೆಗೆಯಬೇಕೆಂದು ಸೂಚನೆ ಮಾಡುತ್ತೇನೆ. ಮುಖ್ಯವಾಗಿ ಇರುವ ಜೋನಲ್ ಸಿಸ್ಟಂನ್ನು ಪೂರ್ತಿ ಯಾಗಿ ತೆಗೆದುಹಾಕಬೇಕು ಎಂದು ನಾನು ಸರಕಾರದಲ್ಲಿ ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಜೋನಲ್ ಸಿಸ್ಟಂ ಇರುವುದರಿಂದ ಎಷ್ಟೋ ಅನ್ಯಾಯಗಳಾಗುತ್ತವೆ. ಇದನ್ನು ತಪ್ಪಿಸುವುದೂ ಕಷ್ಟವಾಗುತ್ತವೆ. ಅದೂ ಅಲ್ಲದೆ ಜೋನಲ್ ಸಿಸ್ಟಂ ಎಂದು ಮಾಡಿರುವುದರಿಂದ ಪೋಲೀಸರ ಮೂಲಕ ಇಲ್ಲಿ ಭ್ರಷ್ಟಾಚಾರ ಮಾಡಲಿಕ್ಕೆ ಅವಕಾಶ ಕಲ್ಪನೆ ಮಾಡಿಕೊಟ್ಟಂತಾಗುತ್ತದೆ. ಭ್ರಷ್ಟಾ ಚಾರ ಮಾಡುವುದು ತಪ್ಪು ಎಂದು ಹೇಳುತ್ತಿದ್ದರೂ ಇದು ಕೆಲವು ಕಡೆ ನಡೆಯುತ್ತಿದೆ. ಆದರೆ

ಜನಸಂಖ್ಯೆ ದಾವಾಷಾ ಮೇಲೆ ನೋಡಿದರೆ ಇಂತಹ ಕೇಸುಗಳು ಸುಮಾರು ಶೇಕಡಾ 10 ರಿಂದ 11ರ ವರೆಗೆ ಇಲ್ಲ. ಆದುದರಿಂದ ಈ ವಲಯ ಪದ್ಧತಿಯನ್ನು ತೆಗೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಸಲಹೆ ಮಾಡುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರಕಾರಕ್ಕೆ ಸೂಕ್ತವಾದ ಶಿಫಾರಸನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿ ಅದರಂತೆ ಅವರಲ್ಲಿ ಒತ್ತಾಯಮಾಡಿ ಈ ವಲಯ ಪದ್ಧತಿಯನ್ನು ಪೂರ್ತಿಯಾಗಿ ತೆಗೆಯಬೇಕೆಂದು ಹೇಳುತ್ತೇನೆ. ಇದರಿಂದ ನಿಮಗೂ ಶ್ರೇಯಸ್ಸಾಗುತ್ತದೆ ಮತ್ತು ಒಳ್ಳೆಯ ಹೆಸರೂ ಬರುತ್ತದೆ. ಇಲ್ಲದೇ ಇದ್ದರೆ ಇದರಿಂದ ಜನಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನು ಪೂರ್ತಿ ತೆಗೆಯಬೇಕು ಎಂದು ಸೂಚನೆ ಮಾಡುತ್ತೇನೆ.

ಇನ್ನು ಸಕ್ಕರೆ ವಿಚಾರ ಹೇಳಬೇಕಾಗಿದೆ. ಈಗಲೇನೋ ನಗರಗಳಲ್ಲಿ 600 ಗ್ರಾಂ ಎಂದು, ಗ್ರಾಮಾಂತರಗಳಲ್ಲಿ 50 ಗ್ರಾಂ ಇದ್ದುದನ್ನು 75 ಗ್ರಾಂ ಎಂದೂ ಮಾಡಿದರು. ಇದನ್ನು ಹಿಂದೆ ಆಹಾರ ಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಮಾಡಿದ್ದು. ಈ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರು ಹೆಚ್ಚು ಸಕ್ಕರೆ ಕೊಡಬೇಕೆಂದು ಹೇಳುತ್ತಿದ್ದರೂ ಕೊಡದೆ ಒಂದು ದೊಡ್ಡ ತಪ್ಪು ಮಾಡಿದರು. ಆದರೆ ಈಗ ಬಂದಿರತಕ್ಕ ಆಹಾರ ಮಂತ್ರಿಗಳು ಬಹಳ ಸಹಾಯ ಮಾಡಬೇಕೆಂದು ಗ್ರಾಮಾಂತರ ಜನರಿಗೆ 150 ಗ್ರಾಂ ವರೆಗೆ ಸಕ್ಕರೆ ಕೊಡಲು ಸಹಾಯ ಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಇದನ್ನು ಪುನಃ 250 ಗ್ರಾಂ ವರೆಗೆ ಹೆಚ್ಚು ಮಾಡಿ ಗ್ರಾಮಾಂತರದ ಜನರಿಗೆ ಸಿಗುವಂತೆ ಸಹಾಯ ಮಾಡಬೇಕು. ಏಕೆಂದರೆ ಗ್ರಾಮಾಂತರದಲ್ಲಿನ ಜನರು ಚಾ ಹಾಗೂ ಕಾಫೀ ಕುಡಿಯಲು ಆರಂಭ ಮಾಡಿದ್ದಾರೆ. ಇವರ ಮನೆಗಳಿಗೂ ನೆಂಟರು ಇಷ್ಟರು ಹೆಚ್ಚಾಗಿ ಬರುತ್ತಿದ್ದಾರೆ, ಇವರಿಗೆಲ್ಲಾ ಕಾಫೀ ಟೀ ಇತ್ಯಾದಿಗಳನ್ನು ಕೊಡಬೇಕಾದರೆ ಇವರಿಗೆ ಸಕ್ಕರೆ ಹೆಚ್ಚು ಬೇಕಾಗುತ್ತದೆ. ಆದುದರಿಂದ ನಮ್ಮ ಆಹಾರ ಮಂತ್ರಿಗಳು ಗ್ರಾಮಾಂತರ ವಲಯಗಳಲ್ಲಿ ಇನ್ನು ಮುಂದೆ 250 ಗ್ರಾಂ ಸಕ್ಕರೆ ಕೊಡುವಂತೆ ಮಾಡಬೇಕೆಂದು ಕೇಳುತ್ತೇನೆ.

ಇನ್ನು ಗಡಿಯಲ್ಲಿ ಆಹಾರ ಪದಾರ್ಥಗಳು ಹೆಚ್ಚಾಗಿ ದಾಟಿ ಹೋಗುತ್ತಿವೆ. ಇದಕ್ಕಾಗಿ ಚೆಕ್ ಪೋಸ್ಟುಗಳನ್ನು ಹೆಚ್ಚು ಮಾಡಬೇಕು ಎಂದು ನಾವು ಹೇಳುತ್ತಲೇ ಇದ್ದೆವು. ನಮ್ಮ ಆಹಾರ ಮಂತ್ರಿಗಳು ಇಷ್ಟು ಒತ್ತಾಯ ಮಾಡಿದಮೇಲೆ ಈಚೆಗೆ ನಮ್ಮ ಕಡೆ ಇರುವ ಗಡಿ ಭಾಗದಲ್ಲಿ ಮೂರು ನಾಲ್ಕು ಚೆಕ್ ಪೋಸ್ಟುಗಳನ್ನು ಹೆಚ್ಚುಮಾಡಿ ಬಿಗಿ ಮಾಡಿದ್ದಾರೆ. ಹೀಗೆ ಮಾಡಿರುವುದರಿಂದ ಗಡಿಯಿಂದ ಹೊರಕ್ಕೆ ಹೋಗುವ ಆಹಾರ ಧಾನ್ಯಗಳ ಸಾಗಾಣಿಕೆ ಕಡಿಮೆಯಾಗಲು ಅವಕಾಶವಾಗುತ್ತಿದೆ. ಜನರಿಗೆ ಇದರಿಂದ ಮೊದಲು ಬಹಳ ಅನ್ಯಾಯವಾಗುತ್ತಿತ್ತು. ಚೆಕ್ ಪೋಸ್ಟುಗಳನ್ನು ಮಾಡಿದಮೇಲೆ ಹೆಚ್ಚು ಆಹಾರ ಧಾನ್ಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದು. ಇದೇ ರೀತಿ ಕಳ್ಳ ಸಾಗಾಣಿಕೆ ಜಲ ಮಾರ್ಗದಲ್ಲೂ ಹೋಗುತ್ತಿದೆ. ಇದನ್ನು ಹಿಡಿಯಲು ತಕ್ಕ ದೋಣಿ ಇತ್ಯಾದಿ ಶಿಬ್ಬಂದಿಗಳನ್ನು ಒದಗಿಸಿ ಇದಕ್ಕ ಕೆಲವು ಪೋಲೀಸು ಸಬ್ ಇನ್ಸ್‌ಪೆಕ್ಟರು ಹಾಗೂ ಇನ್ನೂ ಕೆಲವು ಅಧಿಕಾರಿಗಳನ್ನು ಕೊಟ್ಟಿದ್ದಾರೆ. ಇವರು ಬಹಳ ಚೆನ್ನಾಗಿ ನಮ್ಮ ಕಡೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲೂ ನಮ್ಮ ಭಾಗದಲ್ಲಿರುವ ಒಬ್ಬರು ಸಬ್ ಇನ್ಸ್‌ಪೆಕ್ಟರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಒಬ್ಬರು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಇತರ ಅಧಿಕಾರಿಗಳೂ ಅದೇ ರೀತಿ ಕೆಲಸ ಮಾಡುತ್ತಾರೆ. ಇಲ್ಲಿರುವ ಸಬ್ ಇನ್ಸ್‌ಪೆಕ್ಟರು ತನಿಖೆ ವಿಚಾರದಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಒಂದು ಸಾರಿ ಭಟ್ಕಲ ಬಂದರು ಮೂಲಕ ಸುಮಾರು 300 ಕ್ವಿಂಟಾಲ್ ಅಕ್ಕಿಯನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾಗ ಒಂದು ದೋಣಿ ಮೇಲೆ ಹೋಗಿ ಇವರನ್ನು ಹಿಡಿದಾಗ ಅದರಲ್ಲಿನ ಜನ ಇವರಮೇಲೆ ಕತ್ತಿ ಹಾಗೂ ತಲವಾರುಗಳನ್ನು ಬೀಸಿದರೂ ಲೆಕ್ಕಿಸದೇ ತಮ್ಮಲ್ಲಿದ್ದ ರೈಫಲ್ ಮೂಲಕ ಹೆದರಿಸಿ ಕಷ್ಟಪಟ್ಟು ಆ ಬೋಟನ್ನು ಹಿಡಿದು ಬಂದರಿಗೆ ತಂದು ಪೋಲೀಸು ಠಾಣೆಗೆ ಒಪ್ಪಿಸಿದರು. ಹೀಗೆ ಇಷ್ಟು ಕಷ್ಟಪಟ್ಟು ಇಲ್ಲಿನ ಸಬ್ ಇನ್ಸ್‌ಪೆಕ್ಟರು ಕೆಲಸಮಾಡುತ್ತಿದ್ದಾರೆ. ಇಂತಹ ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿ ಸಹಾಯ ಮಾಡಬೇಕು. ಆದರೆ ಮಂಗಳೂರು ಬಂದರಿನಲ್ಲಿರುವ ಒಬ್ಬರು ಪೋಲೀಸು ಇನ್ಸ್‌ಪೆಕ್ಟರವರು ಇವರಂತೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಮತ್ತು ಇವರಿಗೆ ಸಹಾಯಕವಾಗಿಲ್ಲ. ಹಾರ್ಬರಿನಲ್ಲಿರುವ ಪೋಲೀಸು ಇನ್ಸ್‌ಪೆಕ್ಟರವರು ಇನ್ನು ಮುಂದೆ ಸ್ವಲ್ಪ ಸರಿಯಾದ ಗಮನ ಇಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಶ್ರೀಮಾನ್ ಭಾಸ್ಕರಶೆಟ್ಟರು ಇಲ್ಲಿ ಮಾತನಾಡುತ್ತಾ ಕಾಂಗ್ರೆಸ್‌ನವರಲ್ಲದ್ದವರಿಗೇ ಅನ್ಯಾಯವಾಗುತ್ತಿದೆ, ಕಾಂಗ್ರೆಸ್ಸಿನವರಿಗೇ ಅನುಕೂಲಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಬಿ. ಭಾಸ್ಕರಶೆಟ್ಟಿ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಆಹಾರದವುಟ್ಟಿಗೆ ಎಲ್ಲರೂ ಒಂದೇ ರೀತಿ ಇರಬೇಕು. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ರೀತಿ ಬೇರೆ ಕಡೆಗಳಲ್ಲಿ ಒಂದು ರೀತಿಯಾಗಿ ಎಲ್ಲೂ ಆಗುತ್ತಿಲ್ಲ. ಆದುದರಿಂದ ನಾನು ಹೇಳುವುದು ಚೆಕ್ ಪೋಸ್ಟುಗಳನ್ನು ಇನ್ನೂ ಸ್ವಲ್ಪ ಬಿಗಿ ಮಾಡಿ ತಕ್ಕ ಬಂದೋಬಸ್ತು ಮಾಡಬೇಕಾದುದು ಅಗತ್ಯ. ಈ ವಿಚಾರದಲ್ಲಿ ಸರಕಾರ ಸೂಕ್ತ ಗಮನ ಕೊಟ್ಟು ಇನ್ನೂ ಹೆಚ್ಚು ಬಂದೋಬಸ್ತನ್ನು ಈ ಪ್ರದೇಶಗಳಲ್ಲಿ ಇಡಬೇಕು. ಇದಕ್ಕಾಗಿ ಇನ್ನೂ 10-20 ಪೋಲೀಸು ಅಧಿಕಾರಿಗಳನ್ನು ಬೇಕಾದರೂ ಇಡಬಹುದು. ಇವೊತ್ತು ಎಲ್ಲರಿಗೂ ಮುಖ್ಯವಾಗಿರುವುದು ಅಕ್ಕಿ. ಇಂತಹ ಅನ್ನವನ್ನು ಕೊಡುವುದರ ಕಡೆಗೆ ಸರಕಾರ ಗಮನ ಕೊಡಬೇಕು.

'ಅನ್ನ ಬ್ರಹ್ಮನ ದೇಗುಲದಲ್ಲಿ' ಎಂದು ಒಬ್ಬ ಕವಿ ಹೇಳಿದಂತೆ ನಮ್ಮ ಕಡೆ ಅಕ್ಕಿ ಬಹಳ ಹೆಚ್ಚಾಗಿ ಇದೆ ಮತ್ತು ಸಾಕಷ್ಟು ಅಕ್ಕಿ ಕೂಡ ಉಂಟು. ಇದನ್ನು ಬೇರೆ ಜಿಲ್ಲೆಗಳಿಗೂ ಕಳುಹಿಸಿ ಕೊಡಬಹುದು. ಇದರಿಂದ ಜನರ ಕಷ್ಟಗಳೂ ಕಡಿಮೆಯಾಗುತ್ತವೆ. ನಮ್ಮ ಆಹಾರ ಮಂತ್ರಿಗಳು ಬಂದು ಇನ್ನೂ ಕೇವಲ ಎಂಟು ತಿಂಗಳಾಗಿವೆ. ಇದರಿಂದ ಇವರು ಎಲ್ಲ ಜನರ ಮೆಚ್ಚುವಿಕೆಗೆ ಅನುಸಾರವಾಗಿ ಕೆಲಸ ಮಾಡಲು ಆಗುತ್ತಿಲ್ಲ. ಆಹಾರ ಮಂತ್ರಿಗಳೇನೋ ಅನೇಕ ವಿಚಾರಗಳಲ್ಲಿ ಬಹಳ ಚೆನ್ನಾಗಿ ಒಂದು ರೀತಿಯ ಉತ್ಸಾಹದಿಂದ ಕೆಲಸ ಮಾಡುವವರು ಆಗಿದ್ದಾರೆ. ಆದುದರಿಂದ ನಾನು ಅವರನ್ನು ಕೇಳುವುದು ಆಹಾರದ ಸಾಗಾಣಿಕೆಯಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಲೀಲಾ ಜಾಲವಾಗಿ ಹೋಗುವಂತೆ ಮಾಡಬೇಕು ಮತ್ತು ಈಗಿರುವ ನಿರ್ಬಂಧವನ್ನು ತೆಗೆಯಬೇಕು ಎಂದು ಸೂಚನೆ ಮಾಡುತ್ತೇನೆ. ಎಳೆಂಟು ತಿಂಗಳಲ್ಲಿ ಅವರು ಹೆಚ್ಚು ಕೆಲಸ ಮಾಡಲು ಅವಕಾಶ ಸಾಲದು. ಇವರು ಇನ್ನೂ ಹೆಚ್ಚುಕಾಲ ಇದ್ದರೆ ಆಗ ಜನತೆಗೆ ಹೆಚ್ಚು ಸಹಾಯ ಸೌಕರ್ಯಗಳನ್ನು ಮಾಡಲಿಕ್ಕೆ ಅವಕಾಶ ಉಂಟು. ನಾನು ಅವರಿಗೆ ಸೂಚಿಸುವುದು ಸಾಮ, ದಾನ, ಭೇದ ಹಾಗೂ ದಂಡ ಎಂಬ ನಾಲ್ಕು ಉಪಾಯಗಳಲ್ಲಿ ಮೂರು ಉಪಾಯಗಳಿಂದ ಯಾವ ಕೆಲಸವೂ ಆಗುತ್ತಿಲ್ಲ. ಇದಕ್ಕಾಗಿ ದಂಡವನ್ನು ತೆಗೆದುಕೊಂಡೇ ಸರಿಯಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಆದಷ್ಟು ಎಲ್ಲರಿಗೂ ಅನುಕೂಲವಾಗುವಂತೆ ಕೆಲಸಗಳನ್ನು ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಎಂ. ಎಸ್. ಕೃಷ್ಣನ್.—ಸಾಮಾನ್ಯ ಸಭಾಪತಿಗಳೇ, ಇವತ್ತು ಮೂರು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆ. ಆದರೆ ಈ ಮೂರು ಕೇಳಿಕೆಗಳ ಬಗ್ಗೆ ಮಾತನಾಡುವುದು ಬಹಳ ಕಷ್ಟ. ಸಮಯ ಜಾಸ್ತಿ ಇಲ್ಲವೆಂಬುದು ತಮಗೆಲ್ಲರಿಗೂ ಗೊತ್ತಿದೆ. ನಾನು ನಗರಾಡಳಿತದ ಬಗ್ಗೆ ಮಾತ್ರ ಕೆಲವು ವಿಷಯಗಳನ್ನು ಮತ್ತು ಸಾರಿಗೆ ವಿಷಯದಲ್ಲಿ ಎರಡು ವಿಚಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸಬೇಕೆಂದಿದ್ದೇನೆ. ಹೋದವರ್ಷಕ್ಕೂ ಮತ್ತು ಈ ವರ್ಷಕ್ಕೂ ಒಂದು ವ್ಯತ್ಯಾಸ ಈಗ ಕಂಡುಬರುತ್ತಾ ಇದೆ. ಹೋದವರ್ಷ ಒಬ್ಬ ಪಾಟೀಲರನ್ನು ಕಂಡಿದ್ದೆವು. ಈ ವರ್ಷ ಇನ್ನೊಬ್ಬ ಪಾಟೀಲರನ್ನು ಕಾಣುತ್ತಾ ಇದ್ದೇವೆ. ಆ ಪಾಟೀಲರಿಗೂ ಮತ್ತು ಈ ಪಾಟೀಲರಿಗೂ ಎಷ್ಟೋ ವ್ಯತ್ಯಾಸವಿದೆ. ಒಂದನೇದು ಆಕಾರದಲ್ಲಿ ವ್ಯತ್ಯಾಸ ಎರಡನೆಯದು ಮಾತಿನ ಧೋರಣೆಯಲ್ಲಿ ವ್ಯತ್ಯಾಸ, ಮೂರನೆಯದು ಗುಣದಲ್ಲಿಯೂ ವ್ಯತ್ಯಾಸ ಇದ್ದಹಾಗೆ ಕಾಣುತ್ತದೆ. ಆದರೆ ಇವರಲ್ಲಿ ಸ್ವಲ್ಪ ಸೌಮ್ಯತೆ ಕಂಡುಬರುತ್ತಾ ಇರುವುದರಿಂದ ಇವರೊಡನೆ ಚರ್ಚೆ ಮಾಡುವ ಅವಶ್ಯಕತೆ ಇದೆಯೆಂದು ನನಗೆ ಅಭಿಪ್ರಾಯ ಬರುತ್ತಾ ಇದೆ. ನಮ್ಮ ಮುಂದಿರುವ ಕೆಲವು ವಿಷಯಗಳ ಬಗ್ಗೆ ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ಶಾಮಣ್ಣನವರು ಮಾತನಾಡಿದ್ದಾರೆ. ಮೊದಲನೆಯ ಪ್ರಶ್ನೆ ನನಗೆ ಕಾಡಿಸುತ್ತಾ ಇರುವುದು ಅಂದರೆ, ಬೆಂಗಳೂರು ನಗರದ ಸುತ್ತ ಮುತ್ತಲೂ ತಮಗೆಲ್ಲರಿಗೂ ಗೊತ್ತಿರುವ ವಿಷಯ ನೀರಿನ ಪ್ರಶ್ನೆ. ಒಂದು ನೀರಿನ ದರದ ಪ್ರಶ್ನೆ, ಇನ್ನೊಂದು ನೀರಿನ ಸರಬರಾಜು ಪ್ರಶ್ನೆ. ನೀರಿನ ದರದ ಬಗ್ಗೆ ಈಗಾಗಲೇ ಒಂದು ಅಂದಾಜು ಸಮಿತಿ ಏನಿದೆ ಅದು ಚರ್ಚೆ ನಡೆಸಿ ಒಂದು ವರದಿಯನ್ನು ಸಲ್ಲಿಸಿ ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಇದು ಅನೇಕಸಾರಿ ಹೋರಾಟ ಮಾಡಿದ ಫಲದಿಂದ ಹಾಗೂ ಬೆಂಗಳೂರು ನಗರದ ಜನಗಳ ತ್ಯಾಗದ ಫಲವಾಗಿ ಬಂದಂಥ ತೀರ್ಮಾನವೆಂದು ನಾನು ಭಾವಿಸುತ್ತೇನೆ. ನನ್ನ ಮಾನ್ಯ ಸ್ನೇಹಿತರಾದಂಥ ಮಾನ್ಯ ಶ್ರೀ ನಂಜಪ್ಪನವರು ಇದು ಕಾಂಗ್ರೆಸ್‌ನವರೇ ಮಾಡಿದ್ದು ಕಾಂಗ್ರೆಸ್‌ನವರಿಂದಲೇ ಸ್ಪೆಷಲ್ ತೆರಿಗೆ ರದ್ದಾಯಿತು ಎಂದು ಹೇಳಿದರು.

ಶ್ರೀ ಎ. ನಂಜಪ್ಪ.—ಹೌದು.

ಶ್ರೀ ಎಂ. ಎಸ್. ಕೃಷ್ಣನ್ —ನನಗೆ ಗೊತ್ತಿದೆ, ಕಾಂಗ್ರೆಸ್ಸಿಗರು ಅದನ್ನು ಹೇಳಬೇಕು. ಆದರೆ ಬೆಂಗಳೂರು ಜನತೆಗೆ ಗೊತ್ತಿದೆ. ಅದು ಯಾರ್‍ಯಾರಿಂದ ಬಂತೆಂಬುದನ್ನು ಬೆಂಗಳೂರು ಜನರು ತೀರ್ಮಾನ ಮಾಡಿದ್ದಾರೆ. ಅದು ಬೆಂಗಳೂರು ಜನತೆಗೆ ಬಹಳ ಸ್ಪಷ್ಟವಾಗಿ ಗೊತ್ತಿದೆ. ಕಾಂಗ್ರೆಸ್‌ನವರಿಂದ ಇದುವರೆಗೂ ಅನ್ಯಾಯವಾಗಿದೆಯೇ ಹೊರತು ಅನುಕೂಲವಾಗಿಲ್ಲ. ಕಾಂಗ್ರೆಸ್‌ನವರಿಂದ ಹೆಚ್ಚು ಅನ್ಯಾಯವಾಗಿದೆಯೆಂದು ಬೆಂಗಳೂರು ಜನತೆಗೆ ಗೊತ್ತು. ಇದೇ ಕಾಂಗ್ರೆಸ್ ಜನ ಸ್ಪೈಕರ್ ತೆರಿಗೆ ರದ್ದು ಮಾಡಬಾರದೆಂದು ಹಿಂದೆ ಹೇಳಿದರು.

ಶ್ರೀ ಎ. ನಂಜಪ್ಪ.—1953ರಲ್ಲಿಯೇ ಅದನ್ನು ತೆಗೆಯಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಜನ ಸ್ಪೈಕರ್ ತೆರಿಗೆ ರದ್ದಾಗಬೇಕೆಂದು ಹೇಳಿದಾಗ ನಮ್ಮ ಜೊತೆಯಲ್ಲಿ ಇವರು ಸೇರಲಿಲ್ಲ. ಒಳಗೇ ಪಾಲಿಷ್ ಮಾಡುತ್ತಿದ್ದರು. ಬೆಂಗಳೂರಿನ ಜನರಿಂದ ನೀರಿನ ದರದ ಬಗ್ಗೆ ಹೋರಾಟ ನಡೆದಾಗ, ನಾವು ಜೈಲಿನಲ್ಲಿದ್ದುಕೊಂಡು ಸೊಳ್ಳೆ ಕೈಯಿಂದ ಕಡಿಸಿಕೊಂಡಾಗ ಇವರು ಎಲ್ಲಿ ಅವಿತುಕೊಂಡಿದ್ದರೋ ಗೊತ್ತಿಲ್ಲ. ಆಗ ಬೆಂಗಳೂರಿನ ಜನತೆ ನಮ್ಮ ಪರವಾಗಿ ಸಹಾನುಭೂತಿಯನ್ನು ತೋರಿಸಿದರು. ಅಂದಮೇಲೆ ಈಗ ಇದು ನಮ್ಮಿಂದಾಯಿತು ಎಂಬುದಾಗಿ ಅವರು ಬೆನ್ನುತಟ್ಟಿಕೊಂಡರೆ ಏನಾಯಿತು ? ಇವರ ಪ್ರತಾಪ ಮತ್ತು ಹಣೆಯಬರಹ ಚುನಾವಣೆ ಬಂದಾಗ್ಗ ಗೊತ್ತಾಗುತ್ತದೆ. ಸರ್ಕಾರದವರು ಈಗ ಎಸ್ಟಿಮೇಟ್ ಕಮಿಟಿಯವರ ತೀರ್ಮಾನವನ್ನು ಒಪ್ಪಿಕೊಂಡಮೇಲೆ ನೀರಿನ ದರ ಕಡಿಮೆಯಾಗಿದೆ. ಆದರೆ ನೀರಿನ ದರವನ್ನು ರಿಟ್ರಾಸ್ಪೆಕ್ಟಿವ್ ಆಗಿ ಕಡಿಮೆಮಾಡಿ ಕೊಡಬೇಕು. ಆದರೆ ಅದನ್ನು ಅಂದಾಜು ಸಮಿತಿ ಹೇಳಲಿಲ್ಲ. ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಅದನ್ನು ಸೇರಿಸಿ ಇರಲಿಲ್ಲವೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರು ಯಾರು ಇಲ್ಲಿ ಕುಳಿತ್ತಿದ್ದಾರೋ ಅವರಿಗೂ ಅದು ಗೊತ್ತಿರಲಿಲ್ಲ. ಅದು ಸರ್ಕಾರದ ಒಂದು ಅಡ್ಮಿನಿಸ್ಟ್ರೇಟಿವ್ ಫಂಕ್ಷನ್ ನಾವು ಅದನ್ನು ತೀರ್ಮಾನಮಾಡುವ ಪ್ರಶ್ನೆಯಲ್ಲವೆನ್ನುವ ಅಭಿಪ್ರಾಯ ಬಂದು ಎಲ್ಲರೂ ಅದನ್ನು ಬಿಟ್ಟಿದ್ದಾರೆ. ಒಟ್ಟಿನಲ್ಲಿ ಬೆಂಗಳೂರಿನ ಜನಗಳಿಗೆ ನೀರಿನ ದರದ ಬಗ್ಗೆ ಹಿಂದಿನಿಂದಲೂ ರಿಯಾಯಿತಿ ಕೊಡಬೇಕು.

ಎರಡನೆಯದಾಗಿ, ನೀರು ಸರಬರಾಜು ಪ್ರಶ್ನೆ. ಇದರ ವ್ಯವಸ್ಥೆ ನೋಡಿದರೆ ಬಹಳ ವ್ಯಸನವಾಗುತ್ತದೆ. ನನ್ನ ಕ್ಷೇತ್ರವಾದ ಮಲ್ಲೇಶ್ವರದೊಳಗೆ ನೀರು ಸರಬರಾಜು ತೀರಾ ಅನ್ಯಾಯವಾಗುತ್ತಿದೆ. ಅಲ್ಲಿನ ಜನ, ನನ್ನನ್ನು ಈ ಮನುಷ್ಯ ಚುನಾವಣೆಯಾದಮೇಲೆ ಇಲ್ಲ ನೀರೇ ಇಲ್ಲ. ಹೋದ ಯುಗಾದಿಯಲ್ಲಿ ನೀರಿಲ್ಲ ಈ ಯುಗಾದಿ ದಿವಸವೂ ನಿಲ್ಲಿಸಿದ್ದಾರೆ. ಇದರಿಂದಾಗಿ ಜನಗಳಿಗೆ ಬಹಳ ಕಷ್ಟವಾಗಿದೆ ಎಂಬುದಾಗಿ ಹೇಳುತ್ತಿದ್ದಾರೆ. ನಾವು ಬೆಂಗಳೂರಿನ ಜನಗಳಿಗೆ ನೀರು ಕೊಡಬೇಕೆಂದು ಹೇಳಿದರೆ, ಕಾವೇರಿಯಿಂದ ನೀರು ಬರುತ್ತದೆ, ಅಲ್ಲಿಯವರೆಗೂ ಕಾಯಿರಿ, ಅಮೇಲೆ ಬೆಂಗಳೂರಿನಲ್ಲಿ ಎಷ್ಟು ಬೇಕಾದರೂ ಜನತೆಗೆ ನೀರು ಸಿಗುತ್ತದೆಂಬುದಾಗಿ ಆಶ್ವಾಸನೆ ಕೊಡುತ್ತಾರೆ. ಅದು ನನಗೂ ಗೊತ್ತು. ಅದು ಬರುವವರೆಗೂ ಜನ ಮಣ್ಣು ತಿನ್ನಬೇಕೇ ? ಅದರ ಬಗ್ಗೆ ಸ್ಪಷ್ಟವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ನಗರದ ಸುತ್ತ ಮುತ್ತಲೂ 34 ಹಳ್ಳಿಗಳನ್ನು ಸೇರಿಸಿದ್ದಾರೆ. ಅದರಿಂದ ಸಚಿವರು ಅಲ್ಲಿ ಬಾವಿಗಳಿವೆ ಎಂದು ಉತ್ತರ ಹೇಳಿದ್ದಾರೆ. ನೀರು ಅವುಗಳಿಂದ ತೆಗೆದುಕೊಳ್ಳಬೇಕು, ಬೇಕಾದರೆ ಪೈಪು ಹಾಕಿಸುತ್ತೇವೆಂದು ಹೇಳುತ್ತಾರೆ. ಆದರೆ ಬಾವಿಗಳು ಎಲ್ಲಾ ಹಳ್ಳಿಗಳಲ್ಲಿ ಇಲ್ಲ. ಅಗ್ರಹಾರದಲ್ಲಿ ಒಂದು ಬಾವಿ ಇದೆ. ಬಹಳ ಆಳವಾಗಿದೆ. ಬಂಡೆ ಇದೆ, ನೀರಿಲ್ಲ. ಶಿವನಹಳ್ಳಿಯಲ್ಲಿ ಬಾವಿ ಇದೆ, ನೀರಿಲ್ಲ. ಬರೀ ಬಾವಿಗಳಿವೆ. ಆದರೆ ನೀರೇ ಇಲ್ಲ. ಆದ್ದರಿಂದ ಇವರು ಸುಮ್ಮನೆ ಜಂಭ ಕೊಚ್ಚಿಕೊಂಡು ಹೋಗುವ ಪ್ರವೃತ್ತಿಗೆ ಹೋಗುವುದು ಸರಿಯಲ್ಲ. ಅಲ್ಲಿಗೆಲ್ಲಾ ಅಧಿಕವಾಗಿ ನೀರನ್ನು ಒದಗಿಸುವ ಜವಾಬ್ದಾರಿ ಈ ಸರ್ಕಾರಕ್ಕಿದೆ. 1964ನೇ ಬೆಂಗಳೂರು ವಾಟರ್ ಸಪ್ಲೈ ಆಕ್ಟ್ 32ನೇ ವಿಧಿ ಪುಟ 896ರಲ್ಲಿ ಡೊಮೆಸ್ಟಿಕ್ ಕನ್‌ಸಂಪ್ಷನ್ನಿಗೆ ನೀರನ್ನು ವಾಟರ್ ಸಪ್ಲೈ ಬೋರ್ಡಿನವರು ಕೊಡಬೇಕೆಂದಿದೆ. ಅದನ್ನು ನೀವು ಕೊಡುತ್ತಿದ್ದೀರಾ ? ಅವರು ಕೇಳುತ್ತಿರುವುದನ್ನು ನೀವು ಏತಕ್ಕೆ ಕೊಟ್ಟಿಲ್ಲ ? ನಮ್ಮಲ್ಲಿ ಹಣವಿಲ್ಲವೆಂದು ಏನೋ ಒಂದು ಕಾರಣವನ್ನು ಹೇಳುತ್ತೀರಿ. ಇವರೇ ಒಂದು ಇಲ್ಲಿ ಶಾಸನ ಮಾಡಿದಮೇಲೆ ಕಾನೂನುಬದ್ಧವಾಗಿ ಅದನ್ನು ಕೊಡಬೇಕೇ ವಿನಹ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವಹಾಗಿಲ್ಲ. ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ ಎಂದು ಹೇಳಿದರೆ, ಹೇಗೆ ? ಇನ್ನು ಎರಡು ವರ್ಷಗಳಲ್ಲಿ ಕೊಡುವುದಾದರೆ, ಕಂದಾಯ ವಸೂಲು ಮಾಡಬೇಡಿ, ಕಂದಾಯ ಕೊಡಬೇಡಿ ಎಂಬುದಾಗಿ ಹೇಳಬೇಕಾಗುತ್ತದೆ. ಇದರಿಂದ ಕಂದಾಯ ಬಹಳ ಕಡಿಮೆ ವಸೂಲಾಗುತ್ತದೆ. ಈಗ ಅನೇಕ ಕಡೆಗಳಲ್ಲಿ ಸರಿಯಾದಂಥ ಒಂದು ರಸ್ತೆ ಇಲ್ಲ, ಡ್ರೈನೇಜ್ ಇಲ್ಲ, ನೀರಿಲ್ಲ ಲೈಟ್ ಇಲ್ಲ, ಅಂದಮೇಲೆ ಕಂದಾಯ ಕೊಡಿ ಎಂದು ಹೇಳಿದರೆ, ಯಾರುತಾನೆ ಕೊಡುತ್ತಾರೆ ? ಆದ್ದರಿಂದ ಈ ಗ್ರಾಮಗಳಿಗೆ ಅದಷ್ಟು ಜಾಗ್ರತೆಯಾಗಿ

(ಶ್ರೀ ಎಂ. ಎಸ್. ಕೃಷ್ಣನ್)

ನೀರನ್ನು ಒದಗಿಸಿಕೊಡುವ ಸಲುವಾಗಿ ಹಣವನ್ನು ಯಥೇಚ್ಛವಾಗಿ ಕೊಡಬೇಕು. ಈ ಹಣ ಕೊಡುವಾಗ ಸ್ವಲ್ಪಮಟ್ಟಿಗೆ ತಾರತಮ್ಯ ಬರುತ್ತದೆಯೋ ಏನೋ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಇವರು ಒಂದು ಪ್ಲಾನ್ ಇಟ್ಟುಕೊಂಡಿದ್ದಾರೆ. ಫೇಸ್ಡ್ ಪ್ರೋಗ್ರಾಂ ಎಂದು ಇಟ್ಟುಕೊಂಡಿದ್ದಾರೆ. ಅದು ಹೇಗಿದೆಯೆಂದರೆ, ಒಂದು ಹಳ್ಳಿಯಲ್ಲಿ ಕೆಲಸ ಷುರು ಮಾಡುತ್ತಾರೆ, ಆಗಲೇ ಇನ್ನೊಂದು ಹಳ್ಳಿಯಲ್ಲಿ ಕೆಲಸವಾಡುವುದಕ್ಕೆ ಬರುತ್ತಾರೆಂದು ಅಧಿಕಾರಿಗಳೇ ಹೇಳಿದರು. ಅದು ಸರಿಯಲ್ಲ. ಕಡೆಯ ಹಳ್ಳಿಗೆ ಬರುವಷ್ಟರೊಳಗೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರ ಮತ್ತು ಶ್ರೀ ಶಾಮಣ್ಣನವರ ಹಾಗೂ ನನ್ನ ಬೇಡಿಕೆಗಳ ತಕ್ಕಂತೆ ನೀರಿನ ಸೌಕರ್ಯಗಳನ್ನು ಒದಗಿಸಲು ನಿಮಗೆ ನೀರೇ ಇರುವುದಿಲ್ಲ. ಆಗ ಜನಗಳು ಪರಿತಪಿಸುತ್ತಾರೆ. ಆದ್ದರಿಂದ ಇದು ಎಷ್ಟು ದಿವಸಗಳಲ್ಲಿ ಆಗುತ್ತದೆಂಬುದನ್ನು ಯೋಚನೆಮಾಡಬೇಕು. ಪ್ರತಿಯೊಂದು ಹಳ್ಳಿಗೂ ಒಂದೇ ರೀತಿಯಾಗಿ ಸಬ್‌ಮಯಿನ್‌ಗಳನ್ನು ಮಾಡಿಸಿ 2—3 ಟ್ಯಾಪ್‌ಗಳನ್ನು ಹಾಕಿಸಿ ಪ್ರತಿಯೊಂದು ಮನೆಗೂ ನೀರಿನ ಸೌಕರ್ಯವುಂಟಾಗುವಂತೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು.

ಇನ್ನೊಂದು ವ್ಯವಸ್ಥೆಮಾಡಿದ್ದಾರೆ. ಲಾರಿಗಳಲ್ಲಿ ನೀರು ತೆಗೆದುಕೊಂಡು ಬರುವುದು, ಇದು ತೀರಾ ಅಸಮರ್ಪಕವಾಗಿದೆ. ಯಶವಂತಪುರದಲ್ಲಿ ಒಂದು ಬಕೆಟ್ ನೀರಿಗೆ 25 ಪೈಸೆಯನ್ನು ಕೊಟ್ಟು ಕಾರ್ಪೊರೇಷನ್ ಲಾರಿಗಳಿಂದ ನೀರು ಪಡೆಯುತ್ತಿದ್ದಾರೆ. ಇಂತಹ ಚಿಂತಾಜನಕವಾದ ಪರಿಸ್ಥಿತಿ ಈಗ ಇಲ್ಲಿದೆ. ಒಟ್ಟಿನಲ್ಲಿ ಸರ್ಕಾರದವರು ಕೂಡಲೇ ಡ್ರೈನೇಜುಗಳ, ರಸ್ತೆಗಳ, ನೀರು ಮತ್ತು ಲೈಟಿನ ವ್ಯವಸ್ಥೆ ಬಗ್ಗೆ ತಕ್ಕ ಕ್ರಮಗಳನ್ನು ಎಲ್ಲಾ ಕಡೆಗಳಲ್ಲಿ ತೆಗೆದುಕೊಳ್ಳಬೇಕೆಂದೂ, ಅದಕ್ಕೆ ಆದಷ್ಟು ಜಾಗ್ರತೆಯಾಗಿ ಗಮನಕೊಡಬೇಕೆಂದೂ ನಾನು ಹೇಳುತ್ತೇನೆ.

ಅತಿ ಮುಖ್ಯವಾದ ವಿಷಯವೇನೆಂದರೆ ವಾಟರ್ ಸಪ್ಲೈ ಬೋರ್ಡ್ ಇರುವುದು ಏಕೆ ಎನ್ನುವುದು. ನನಗೆ ತಿಳಿದಮಟ್ಟಿಗೆ ಕಾವೇರಿ ನೀರನ್ನು ಬೆಂಗಳೂರಿಗೆ ಒದಗಿಸುವುದಕ್ಕೆ ವರ್ಲ್ಡ್ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬರುವ ಉದ್ದೇಶದಿಂದ. ವರ್ಲ್ಡ್ ಬ್ಯಾಂಕಿನವರು ಬೋರ್ಡ್ ಮಾಡಿದರೆ ಮಾತ್ರ, ಒಂದೊಂದು ತೊಟ್ಟು ನೀರಿಗೂ ದುಡ್ಡು ವಸೂಲು ಮಾಡುವ ಹಾಗೆ ಇದ್ದರೆ ಮಾತ್ರ ಸಾಲ ಕೊಡುತ್ತೇವೆಂದು ಹೇಳಿದರು. ಈಗ ಆ ಪರಿಸ್ಥಿತಿ ಇಲ್ಲ, ವರ್ಲ್ಡ್ ಬ್ಯಾಂಕಿನವರು ಸಾಲ ಕೊಡದೆ ಇದ್ದರೂ ಕಾವೇರಿ ಯೋಜನೆಯನ್ನು ಮುಂದೂಡುವುದಿಲ್ಲವೆಂದೂ, 22 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾಗಿ ಹೇಳಿದ್ದರು, ತಾವೂ ಕೂಡ ಹೇಳಿದ್ದೀರಿ. ಏನು ತೊಂದರೆಯಾಗಿದೆ ಎಂದರೆ, ನೀರಿನ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ವಾಟರ್‌ಸಪ್ಲೈ ಬೋರ್ಡಿಗೆ ಹೋಗಬೇಕು, ನೀರಿನ ದುಡ್ಡು ಕಾರ್ಪೊರೇಷನ್‌ನವರು ಕೊಡಬೇಕು ಎಂದು ಹೇಳುತ್ತಾರೆ. ಯೋಜನೆಯನ್ನು ತಯಾರು ಮಾಡುವವರು ಕಾರ್ಪೊರೇಷನ್‌ನವರು, ಎಕ್ಸಿಕ್ಯೂಷನ್ ಮಾಡುವವರು ಬೋರ್ಡಿನವರು. ಎರಡು ಏಜೆನ್ಸಿ ಇರುವುದರಿಂದ ತಿಕ್ಕಾಟ ಘರ್ಷಣೆ ನಡೆದು ಜನಗಳಿಗೆ ತೊಂದರೆ ಜಾಸ್ತಿಯಾಗಿದೆ. ನನ್ನ ಅಭಿಪ್ರಾಯದಲ್ಲಿ ಕಾವೇರಿ ಯೋಜನೆಗೋಸ್ಕರ, ಅದನ್ನು ಕಾರ್ಯಗತ ಮಾಡುವುದಕ್ಕೆ ವಾಟರ್‌ಸಪ್ಲೈ ಬೋರ್ಡ್ ಇಟ್ಟುಕೊಳ್ಳಿ. ಬೆಂಗಳೂರು ನಗರದಲ್ಲಿ ನೀರನ್ನು ಎಲ್ಲರಿಗೂ ಒದಗಿಸುವುದಕ್ಕೆ ಮತ್ತು ಸ್ಯೂಯರೇಜ್ ವಿಚಾರ ಹಿಂದೆ ಇದ್ದ ಹಾಗೆ ಕಾರ್ಪೊರೇಷನ್ನಿಗೇ ಕೊಡಿ. ಅವರಿಂದ ಹಣ ಪಡೆಯುವುದೇನು, ಅವರು ಎಕ್ಸಿಕ್ಯೂಷನ್ ಮಾಡುವುದೇನು ? ಅದರಿಂದ ಜನ ತೊಂದರೆಪಡುವುದೇನು ? ಒಂದುಕಡೆ ವಾಟರ್‌ಸಪ್ಲೈ ಬೋರ್ಡಿನವರು ನಲ್ಲಿಗಳನ್ನು ಕಿತ್ತುಕೊಂಡು ಹೋಗಿ ಮನೆಗಳಲ್ಲಿಟ್ಟುಕೊಂಡು, ಅಲ್ಲಿನ ಜನಗಳಿಂದ ಒಂದೊಂದು ರೂಪಾಯಿ ವಸೂಲು ಮಾಡಿ ಅದನ್ನೇ ತಂದು ಹಾಕುವುದು, 15 ದಿನ ಬಿಟ್ಟು ಮತ್ತೆ ತೆಗೆದುಕೊಂಡು ಹೋಗಿ ಪುನಃ ತಂದು ಹಾಕುವುದು ಹೀಗೆಲ್ಲ ಮಾಡುತ್ತಾರೆ. ನಾನು ಕಾರ್ಪೊರೇಷನ್ ಕಮಿಷನರಿಗೆ ಇದರ ಬಗ್ಗೆ ಬರೆದರೆ ಅವರಿಂದ ಉತ್ತರ ಬಂದಿರುವುದು ಹೀಗಿದೆ. ಅದನ್ನು ನಾವು ಪರಿಶೀಲನೆ ಮಾಡಿದ್ದೇವೆ, ನಿಜಾಂಶವಿದ್ದಹಾಗೆ ಕಾಣುತ್ತದೆ ಎಂದು ಬರೆದಿದ್ದಾರೆ. ನಿಜಾಂಶವಿದ್ದ ಹಾಗೆ ಕಾಣುತ್ತದೆ ಎಂದರೆ ಅದಕ್ಕಿಂತ ನಿಜಾಂಶ ಬೇಕೇ ? ಕಾರ್ಪೊರೇಷನ್‌ನವರು ವಾಟರ್ ಸಪ್ಲೈ ಬೋರ್ಡ್ ಜವಾನ ಈ ರೀತಿ ಮಾಡುತ್ತಿದ್ದಾನೆ ಎನ್ನುವ ರೀತಿ ಹೇಳುವುದಾದರೆ ಡ್ಯೂಯಲ್ ಫಂಕ್ಷನ್ ಬೇಡ, ಕಾವೇರಿ ನೀರನ್ನು ಒದಗಿಸುವುದಕ್ಕೆ ಮಾತ್ರ ಬೋರ್ಡ್ ಇಟ್ಟುಕೊಳ್ಳಿ, ಮಿಕ್ಕದ್ದಕ್ಕೆ ವಿಸರ್ಜನೆ ಮಾಡಿ ಎಂದು ನಾನು ಹೇಳುತ್ತೇನೆ.

ಟ್ರಸ್ಟ್ ಬೋರ್ಡ್ ವಿಷಯ. ನಮ್ಮ ಏರಿಯಾದಲ್ಲಿ ಮತ್ತು ಬೇರೆ ಕಡೆ ಟ್ರಸ್ಟ್ ಬೋರ್ಡಿಗೆ ಸೇರಿದ ಹಲವಾರು ವಿಭಾಗಗಳಿವೆ. ಅದನ್ನು ಕಾರ್ಪೊರೇಷನ್ನಿಗೆ ಇನ್ನೂ ಕೊಟ್ಟಿಲ್ಲ. ಅಲ್ಲಿ ರಸ್ತೆಗಳಿಲ್ಲ, ಚರಂಡಿಗಳಿಲ್ಲ, ನೀರಿನ ವ್ಯವಸ್ಥೆ ಇಲ್ಲ. ಅವರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತಾರೆ. ಅವರನ್ನು ಕೇಳಿದರೆ ನಾವು ಏನು ಮಾಡುವುದು, ನಾವು ಲಾಭನಷ್ಟ ಇಲ್ಲದ ರೀತಿಯಲ್ಲಿ

ಈ ಕೆಲಸವನ್ನೆಲ್ಲ ಮಾಡುತ್ತಿದ್ದೇವೆ, ಇತರ ಕೆಲಸಗಳನ್ನು ಕೂಡ ಮಾಡಿ ಎಂದರೆ ಹೇಗೆ ಮಾಡುವುದಕ್ಕಾಗುತ್ತದೆ, ನಾವು ಟಾರ್ ರಸ್ತೆ ಹೇಗೆ ಮಾಡಿಸಲು ಆಗುತ್ತದೆ ಎಂದು ಹೇಳುತ್ತಾರೆ ಕಾರ್ಪೊರೇಷನ್‌ನವರನ್ನು ಕೇಳಿದರೆ ನಮಗೆ ಕೊಡಲಿ, ಆಮೇಲೆ ಯೋಚನೆ ಮಾಡುತ್ತೇವೆಂದು ಹೇಳುತ್ತಾರೆ. ಅವರು ಕೊಡುವುದಕ್ಕೆ ತಯಾರಾಗಿಲ್ಲ. ಇವರು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಇಂಥ ಕಣ್ಣುಮುಚ್ಚಾಲೆ ಆಟ ನಡೆಯುತ್ತಿದೆ. ಸುಬ್ರಹ್ಮಣ್ಯನಗರ, ಪ್ರಕಾಶನಗರ, ಮಾರಪ್ಪನ ಪಾಳ್ಯ, ಇಂಡಸ್ಟ್ರಿಯಲ್ ಎಸ್ಟೇಟ್ ಈ ಎಲ್ಲ ಕಡೆಯೂ ನಡೆಯುತ್ತ ಇದೆ. ರಾಜಾಜಿನಗರದ ಅನೇಕ ಕಡೆ ಹೀಗೆ ನಡೆಯುತ್ತಿದೆ. ಯಾವ ಯಾವ ಕಡೆ ಲೇ ಔಟ್ ಆಗಿ, ಮನೆಗಳು ಬಂದಿವೆ ಅದನ್ನೆಲ್ಲ ಕಾರ್ಪೊರೇಷನ್ನಿಗೆ ಕೊಡಬೇಕು. ಆಗ ಅವರಾದರೂ ಜನಗಳಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡುತ್ತಾರೆ. ಆದ್ದರಿಂದ ಈ ಡ್ಯೂಯಲ್ ಕಂಟ್ರೋಲ್ ಹೋಗಿ ಜನಗಳಿಗೆ ಕಷ್ಟ ತಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

ಆಹಾರದ ಇಲಾಖೆಯ ಬಗ್ಗೆ ಒಂದೇ ಒಂದು ವಿಷಯ ಹೇಳುತ್ತೇನೆ. ಏನೆಂದರೆ ಲೆವಿ, ಲ್ಯಾಂಡ್ ರೆವೆನ್ಯೂ ಅರಿಯರ್ಸ್, ತಕಾವಿ ಅರಿಯರ್ಸ್ ಇವನ್ನು ಬಹಳ ಫೋರ್ಸ್‌ಮಾಡಿ ಒತ್ತಾಯ ಮಾಡಿ, ಹರಾಜು ಹಾಕಿ ವಸೂಲ್ಮಾಡುತ್ತಿದ್ದಾರೆಂದು ನನ್ನ ಸ್ನೇಹಿತರಾದ ವಿ. ಎನ್. ಪಾಟೀಲರು ಹೇಳುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಬೇಕು.

ಹುಮ್ನಾಬಾದ್ ಮುನಿಸಿಪಾಲಿಟಿಯವರು ಆಕ್ಟ್ರಾಯಿ ದರಗಳನ್ನು ರಿವೈಸ್ ಮಾಡಲು ನಿರ್ಣಯ ಮಾಡಿರುವುದನ್ನು ಜಿಲ್ಲಾಧಿಕಾರಿಗಳು ಮತ್ತು ಡಿವಿಜನಲ್ ಕಮಿಷನರು ರೆಕಮೆಂಡ್ ಮಾಡಿದ್ದಾರೆ. ಅದು ಒಂದು ವರ್ಷದಿಂದ ಕೊಳೆಯುತ್ತಿದೆ. ಇದರ ಬಗ್ಗೆ ತೀರ್ಮಾನ ಮಾಡಿಲ್ಲ. ಏತಕ್ಕೋಸ್ಕರ ತೀರ್ಮಾನ ಮಾಡಿಲ್ಲ ಎನ್ನುವುದು ಸಮಸ್ಯೆಯಾಗಿದೆ. ಕಮ್ಯೂನಿಸ್ಟರು ಆ ಮುನಿಸಿಪಾಲಿಟಿಯ ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವ ಕಾರಣದಿಂದ ತೀರ್ಮಾನ ಮಾಡಲಿಲ್ಲವೇ ಎಂದು ಕೇಳಬೇಕಾಗುತ್ತದೆ. ಹಾಗೆ ತಾರತಮ್ಯ ಮಾಡದೆ ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇನೆ.

ಬಸ್ಸುಗಳ ಬಗ್ಗೆ ಕೇಳಿಕೊಳ್ಳುವುದೇನೆಂದರೆ, ರಾಜಾಜಿನಗರ ಭಾಗದಲ್ಲಿ ಬಸ್ ವ್ಯವಸ್ಥೆ ಬಹಳ ಮೋಸವಾಗಿದೆ. ರಾಜಾಜಿನಗರ ಮತ್ತು ಯಶವಂತಪುರ ಭಾಗಗಳಲ್ಲಿ ಬಸ್ ವ್ಯವಸ್ಥೆ ಚೆನ್ನಾಗಿ ಮಾಡಬೇಕು. ಮಿಕ್ಕ ವಿಷಯಗಳನ್ನು ಮಾನ್ಯ ಸದ್ಯಸರಾದ ಶಾಮಣ್ಣನವರು ಹೇಳಿದ್ದಾರೆ. ನಾನು ಅದನ್ನು ಪುನಃ ಹೇಳುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ದಾಸನಕೊಪ್ಪ (ಧಾರವಾಡ ನಗರ).—ಅಧ್ಯಕ್ಷರೇ, ಡಿಮಾಂಡ್ ನಂಬರ್ 4, 15, 53, 39 ಇದಕ್ಕೆ ನನ್ನ ಬೆಂಬಲ ಕೊಡುತ್ತ ಕೆಲವು ವಿಷಯಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ.

ಮೊಟ್ಟಮೊದಲು ನಾನು ಸಾರಿಗೆ ವ್ಯವಸ್ಥೆ ಬಗ್ಗೆ ಮಾತನಾಡುತ್ತೇನೆ. ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ನಲ್ಲಿ, ಹುಬ್ಬಳ್ಳಿ ಸಿಟಿ ಬಸ್ ಸ್ಟಾಂಡ್ ಮತ್ತು ಧಾರವಾಡ ಸಿಟಿ ಬಸ್ ಸ್ಟಾಂಡ್ ಹಾಗೂ ಧಾರವಾಡ ಡಿಪೋ ಸಲುವಾಗಿ ಜಾಗ ತೆಗೆದುಕೊಂಡಿರುವುದಕ್ಕಾಗಿ ಸಾರಿಗೆ ಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಇನ್ನು ನಮ್ಮ ಮಾಗಣಿ ಏನೆಂದರೆ ಧಾರವಾಡದಲ್ಲಿ ನೂರಾರು ಬಸ್ಸುಗಳು ಬರುತ್ತವೆ. ಒಂದು ಬಸ್ಸು ಕೆಟ್ಟು ಹೋದರೆ ಹುಬ್ಬಳ್ಳಿಯಿಂದ ಫೋನ್‌ಮಾಡಿ ತರಿಸಬೇಕಾಗುತ್ತದೆ. ಅದರ ಸಲುವಾಗಿ ಧಾರವಾಡದೊಳಗೆ ಒಂದು ಡಿಪೊ ಮಾಡಬೇಕೆಂದು ಸಾರಿಗೆ ಮಂತ್ರಿಗಳಿಗೆ ಬೇಡಿಕೊಳ್ಳುತ್ತೇನೆ.

ಅದೇ ಪ್ರಕಾರವಾಗಿ ನಮ್ಮ ತಾಲ್ಲೂಕಿನ ಕೆಲವು ಮುಖ್ಯ ಸ್ಥಳಗಳಲ್ಲಿ ಎಂದರೆ ಉಪ್ಪಿನ ಬೆಟಗೇರಿ, ಅಳ್ನಾವರ ಇಂಥ ಕಡೆ ಬಸ್ ಸ್ಟಾಂಡ್ ಮಾಡಬೇಕೆಂದು ನಾನು ಸಾರಿಗೆ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಧಾರವಾಡ ಯೂನಿವರ್ಸಿಟಿ ಇರುವ ಸ್ಥಳವಾದುದರಿಂದ ಅಲ್ಲಿ ಟೂರಿಸ್ಟ್ ಬಸ್ ಇಡುವ ಪ್ರಯತ್ನ ಮಾಡಿದರೆ ಜನರಿಗೆ ಹೋಗುವುದಕ್ಕೆ ಮತ್ತು ಅಡ್ಡಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ನಾನು ತಮ್ಮಲ್ಲಿ ಬಿನ್ನೈಸಿಕೊಳ್ಳುವುದೇನೆಂದರೆ ಧಾರವಾಡ ಮತ್ತು ಹುಬ್ಬಳ್ಳಿ ನಡುವೆ ಸರ್ಕಾರಿ ನೌಕರು ಜನರು ಅಡ್ಡಾಡುತ್ತಾರೆ. ಅವರಿಗೆ ರಿಯಾಯಿತಿ ತೋರಿಸಬೇಕು.

ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಸಂಬಂಧದಲ್ಲಿ ಸರ್ಕಾರದವರು ಮುನಿಸಿಪಾಲಿಟಿಗೆ ಗ್ರಾಂಟ್ ಕೊಡುತ್ತಾರೆ ಕೇಂದ್ರ ಸರ್ಕಾರದವರು ನೇಮಿಸಿದ್ದ ರೂರಲ್ ಅರ್ಬನ್ ರಿಲೇಷನ್‌ಷಿಪ್ ಕಮಿಟಿ

(ಶ್ರೀ ಕೆ. ಎಂ. ದಾಸನಕೊಪ್)

ಒಂದು ರಿಪೋರ್ಟ್ ಕೊಟ್ಟಿದೆ. ಅದನ್ನು ಕಾರ್ಯಗತ ಮಾಡಬೇಕು ಎಂದು ನಾನು ಸಾರಿಗೆ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ. ಅಜಿತ್ ಪ್ರಸಾದ್ ಜೈನ್ ಅವರು ಅಧ್ಯಕ್ಷರಾಗಿದ್ದ ರೂರಲ್ ಅರ್ಬನ್ ರಿಲೇಷನ್‌ಷಿಪ್ ಕಮಿಟಿಯವರು ಅವರ ವರದಿಯಲ್ಲಿ ಒಗೆ ಹೇಳಿದ್ದಾರೆ.

REPORT OF THE RURAL URBAN RELATIONSHIP COMMITTEE REPORT

SRI AJIT PRASAD JAIN–Chairman.

"The Motor Vehicles Tax Act of 1939 took away the power of the local bodies to levy taxes on mechanically propelled vehicles. Many States Governments are however compensating localbodies by the payment of a fixed sum based on average recovery during the three years proceeding.

While some States have increased this sum, others continue to make the grants on the basis fixed 30 years ago.

The motor vehicles tax has increased many times. In West Bengal the receipt under this item has increased from 18.46 lakhs to 500.86 lakhs during the decade ending 1961-62 but the grants to local bodies have remained stationary at 4.5 lakhs. In Mysore the revenue has risen from 56.80 lakhs to 570 lakhs during the same period. But the compensation amount to local bodies has been more or less steady at 6.91 lakhs......."

During this period there has been heavy increase in the number of vehicles in the municipal roads and the costs of maintenance of the roads have raised enormously, But the contribution of the State Government to the local bodies have not. The Committee are of the view that ..After giving full thought to the question of sharing, the Committee recommend 25 per cent of the receipt from these sources."

ಈ ಒಂದು ರೆಕಮೆಂಡೇಷನ್ ಮಾಡಿದ್ದಾರೆ. ಆ ಪ್ರಕಾರ ಕಾರ್ಯಗತಮಾಡಬೇಕೆಂದು ಹೇಳುತ್ತೇನೆ. ಮತ್ತು ಈಗ ಸಿಟಿ ಬಸ್ಸುಗಳಲ್ಲಾಗಲಿ ಅಥವ ಸರಕಾರಿ ಬಸ್ಸುಗಳಾಗಲಿ ಸತತವಾಗಿ ಲೈಟಿರುವುದಿಲ್ಲ, ಅವಕ್ಕೆ ಗಮನ ಕೊಡಬೇಕು. ಒಂದೊಂದು ಬಸ್ಸಿನಲ್ಲೂ ಮಣ್ಣಿರುತ್ತದೆ, ಅದರಿಂದ ಪ್ರಯಾಣಿಕರ ಬಟ್ಟೆ ಗಲೀಜಾಗುವುದು. ಆದರ ಸಲುವಾಗಿ ಅದನ್ನು ಚೊಕ್ಕಟಮಾಡಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಮೋಟಾರು ವೆಹಿಕಲ್ಸ್ ಆಕ್ಟ್ ಪ್ರಕಾರ ಲಕ್ಷಾಂತರ ರೂಪಾಯಿ ರೀಫಂಡ್ ಆಗದೆ ಹಾಗೆಯೇ ನಿಂತಿದೆ, ಈ ರೀಫಂಡ್ ತೀವ್ರವಾಗಿ ಮಾಲೀಕರಿಗೆ ದೊರಕಿಸಬೇಕು.

ಇದಾದಮೇಲೆ ಆಹಾರ ಇಲಾಖೆ ಬಗ್ಗೆ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಯಾವಾಗ ಕೇಂದ್ರ ಸರಕಾರದ ಬಜೆಟ್ ಮಂಡಿಸಲಾಯಿತೋ ಅನಂತರ ಪೇಟೆಗಳಲ್ಲಿ ಕ್ರೂಡ್ ಆಯಿಲ್ ಮತ್ತು ಸೀಮೆಎಣ್ಣೆ ಬ್ಲಾಕ್‌ಮಾರ್ಕೆಟ್ ಆಗುತ್ತಿದೆ. ಕ್ರೂಡ್ ಆಯಿಲ್ ಧಾರಣೆ ಬ್ಯಾರಲ್‌ಗೆ 90 ರೂಪಾಯಿಂದ ಈಗ 130 ರೂಪಾಯಿಗೆ ಏರಿದೆ. ಸೀಮೆಎಣ್ಣೆ ಸರಿಯಾಗಿ ದೊರೆಯುತ್ತಿಲ್ಲ, ತೀವ್ರವಾಗಿ ಸರಬರಾಯಿ ಮಾಡಬೇಕು. ಕೇಳಿದರೆ ಸರಬರಾಯಿ ಇಲ್ಲವೆಂದು ಹೇಳುತ್ತಾರೆ. ಧಾರವಾಡದಲ್ಲಿ ಈ ಪರಿಸ್ಥಿತಿ ಇದೆ. ಇದರ ಸಲುವಾಗಿ ಆಹಾರ ಮಂತ್ರಿಗಳು ಗಮನಕೊಟ್ಟು ಜನರ ಕಷ್ಟವನ್ನು ನಿವಾರಣೆ ಮಾಡಬೇಕು. ಇದೇ ಪ್ರಕಾರ ಕಾರ್ಪೊರೇಷನ್ ಪ್ರದೇಶದಲ್ಲಿರುವವರಿಗೆ ಯಾರಿಗೆ

ಜಮೀನಿದೆ ಅವರು ಬತ್ತ ಬೆಳೆದರೆ ಅಕ್ಕಿ, ಗೋಧಿ ಕೊಡುವುದಿಲ್ಲ. ಅವರಿಗೆ ಬತ್ತ ಬೆಳೆದರೆ ಗೋಧಿ ಮತ್ತು ಜೋಳ ಕೊಡಬೇಕು. ಕಳ್ಳ ಸಾಗಾಣಿಕೆಯಾಗುತ್ತಿದೆ, ಅಲ್ಲಲ್ಲಿ ಚೆಕ್‌ಪೋಸ್ಟ್‌ಗಳಿವೆ ಎಂದು ಹೇಳುತ್ತಿದ್ದರೂ ಅದರಿಂದ ಸಾಕಷ್ಟು ಪ್ರಯೋಜನವಾಗಿಲ್ಲ. ಹೊರಗೆ ಸಾಗಿಸಿ ಮಾರಿಕೊಳ್ಳುತ್ತಿದ್ದಾರೆ, ನಮ್ಮ ಪ್ರಾಂತದಿಂದ ಟ್ರಕ್ಕುಗಳಲ್ಲಿ ಧಾನ್ಯ ಹೊರಕ್ಕೆ ಹೋಗುತ್ತಿದೆ, ಬಿಜಾಪುರ, ಸೊಲ್ಲಾಪುರದ ಕಡೆ, ಬೆಳಗಾಂ, ನಿಪ್ಪಾಣಿ ಕಡೆ ಹೊರಕ್ಕೆ ಸಾಗಿಸುವುದನ್ನು ತಡೆಗಟ್ಟಬೇಕು.

ಮತ್ತೊಂದು ವಿಚಾರವನ್ನು ಮುನಿಸಿಪಲ್ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಹುಬ್ಬಳ್ಳಿ-ಧಾರವಾಡದಲ್ಲಿ ಡ್ರೈನೇಜ್ ಕೆಲಸ ಕೈಕೊಂಡು ಬಹಳ ದಿವಸವಾಯಿತು. 20-30 ಲಕ್ಷ ರೂಪಾಯಿ ಮುನಿಸಿಪಾಲಿಟಿ ಮತ್ತು ಸರಕಾರ ಖರ್ಚುಮಾಡಿವೆ, ಇನ್ನೂ ಅರ್ಧ ಕೆಲಸವಾಗಬೇಕಾಗಿದೆ. ಅದಕ್ಕೆ ಫಂಡಿಲ್ಲ. ರಾಜ್ಯ ಸರಕಾರ ಗ್ಯಾರಂಟಿ ಕೊಡುವುದಿಲ್ಲ, ಬ್ಯಾಂಕುಗಳೂ ಹಣ ಕೊಡುವುದಕ್ಕೆ ತಯಾರಿಲ್ಲ. ಇದಕ್ಕೆ ಸರಕಾರದವರೇ ಸಹಾಯಮಾಡಿ ಡ್ರೈನೇಜ್ ಕೆಲಸ ಮಾಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ಅಕ್ಟ್ರಾಯಿ ತೆಗೆಯಬೇಕೆಂದು ಸರಕಾರ ನಿರ್ಣಯ ಮಾಡಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಅಕ್ಟ್ರಾಯಿ ತೆಗೆಯಬಾರದು, ಅದರ ಅಗತ್ಯವಿದೆ. ಏಕೆಂದರೆ ತೆಗೆದರೆ ಕೋಟಿಗಟ್ಟಲೆ ಸರಕಾರಕ್ಕೆ ತೆರಿಗೆ ರೂಪದಲ್ಲಿ ಅಥವ ಮಾರಾಟ ತೆರಿಗೆ ರೂಪದಲ್ಲಿ ಬರಬೇಕಾಗುತ್ತದೆ, ಅದನ್ನು ಹಾಕಬೇಕಾಗುತ್ತದೆ. ಇದರ ಸಲುವಾಗಿ ಅಕ್ಟ್ರಾಯನ್ನು ಇರುವ ಹಾಗೇ ಇಡಬೇಕು ಎಂದು ಸೂಚಿಸುತ್ತೇನೆ.

ಮತ್ತೊಂದು ಸೂಚನೆ. ಕೃಷ್ಣಾದಿಂದ 28 ಮೈಲಿಯಿಂದ ನೀರು ತರಬೇಕೆಂಬ ಯೋಜನೆ ಇದೆ, ಅದರ ಸಲುವಾಗಿ ಹೊಸದಾಗಿ ಬಂದ ಶ್ರೀ ಬಿ. ಎಂ. ಪಾಟೀಲರು 8 ಲಕ್ಷ ರೂಪಾಯಿ ಉಳಿಸಬೇಕೆಂದು ಟೆಕ್ನಿಕಲ್ ಹ್ಯಾಂಡ್ಸ್ ನೇಮಕಮಾಡಿದ್ದಾರೆ. ಇದಕ್ಕಾಗಿ ಧನ್ಯವಾದಗಳು. ಮತ್ತೊಂದು ಸೂಚನೆ 28 ಮೈಲಿಯಿಂದ ನೀರು ತೆಗೆದುಕೊಳ್ಳುವಾಗ ದಾರಿಯಲ್ಲಿ ಸಿಕ್ಕುವ ಹಳ್ಳಿಗಳಿಗೂ ಕೂಡ ನೀರು ಪೂರೈಕೆ ಮಾಡಿದ್ದೇ ಆದರೆ ಉತ್ಪತ್ತಿಮಾಡಿಕೊಳ್ಳುವುದಕ್ಕೆ ಅನುಕೂಲವಿದೆ, ಹಾಗೆ ಮಾಡಬೇಕು.

ಮೈಸೂರು ಮುನಿಸಿಪಾಲಿಟಿ ಆಕ್ಟ್ 1864, ಸಿಟಿ ಆಫ್ ಬೆಂಗಳೂರು ಕಾರ್ಪೊರೇಷನ್ ಆಕ್ಟ್, 1949 ಮತ್ತು ಬಾಂಬೆ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ 1949 ಇವುಗಳ ಪ್ರಕಾರ ಮೆಂಬರುಗಳಿಗೆ ಪಗಾರ ಇಲ್ಲ, ಸಿಟಿಂಗ್ ಫೀಜಿಲ್ಲ. ಬೇರೆ ಪ್ರಾಂತಗಳಲ್ಲಿ ಸಿಟಿಂಗ್ ಫೀಜು ಕೊಡುವುದಿದೆ. ಅದರ ಸಲುವಾಗಿ ಪಗಾರ ಅಥವ ಸಿಟಿಂಗ್ ಫೀಜು ಕೊಡಲು ತಿದ್ದುಪಡಿ ತರಬೇಕೆಂದು ಸೂಚಿಸಿ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಆಭಾರಿ ಆಗಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ ಅಧ್ಯಕ್ಷರೇ, ತಮ್ಮ ಮೂಲಕ ಸಾರಿಗೆ ಸಚಿವರ ಮುಂದೆ ಕೆಲವು ಬೇಡಿಕೆಗಳನ್ನಿಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಸಂಸ್ಥಾನದ ಮತ್ತು ಸರಕಾರದ ಗೌರವ ರಕ್ಷಣೆಯ ದೃಷ್ಟಿಯಿಂದ ಅವರು ನಾನು ನಮೂದಿಸುವ 7 ಬೇಡಿಕೆಗಳನ್ನು ನಡೆಸಿಕೊಟ್ಟರೆ ಸಂಸ್ಥಾನದ ಜನರು ಸಾರಿಗೆ ಸಚಿವರಿಗೆ ಚಿರಋಣಿಯಾಗಿರುತ್ತಾರೆಂದು ಕಳಕಳಿಯಿಂದ ಮನವಿಮಾಡುತ್ತೇನೆ. ಒಂದನೆಯ ಬೇಡಿಕೆ ಅಲಕ್ಷ್ಯ ಮತ್ತು ಅತಿ ಕೆಳಮಟ್ಟದ ಅಸಮರ್ಪಕವಾದ ಆಡಳಿತ ನೀತಿಯಿಂದ ರಾಷ್ಟ್ರೀಕರಣ ತತ್ವಕ್ಕೆ ಕಳಂಕ ಬಾರದಂತೆ ಕಾಪಾಡಿ, ಎರಡನೆಯದು ಎಲ್ಲಾ ಸಮರ್ಪಕವಾಗಿದ್ದರೆ ಮಾತ್ರ ಬಸ್ ನಡೆಸಿ, ರಸ್ತೆಗಳಲ್ಲಿ ಕೆಟ್ಟು ನಿಲ್ಲುವಂತೆ ಮಾಡಿ ರಾಷ್ಟ್ರೀಕರಣಕ್ಕೆ ಅವಮಾನ ಮಾಡಬಾರದು. ಮತ್ತು ಪ್ರಯಾಣಿಕರಿಗೆ ತೊಂದರೆ ಕೊಡಬೇಡಿ. ಮೂರನೆಯದು ಸಮರ್ಪಕವಾಗಿ ಮತ್ತು ಹಠಾತ್ತನೆ ಚೆಕ್ ಮಾಡುವ ಪದ್ಧತಿಯನ್ನು ಜಾರಿಗೆ ತಂದು ಕಂಡಕ್ಟರು, ಡ್ರೈವರು ಮತ್ತು ಚೆಕಿಂಗ್ ಇನ್‌ಸ್ಪೆಕ್ಟರು ಹಣ ಲೂಟಿ ಮಾಡಿ ಸರಕಾರಕ್ಕೆ ನಷ್ಟವಾಗದಂತೆ ಮತ್ತು ಹಣ ಪೋಲಾಗದಂತೆ ನೋಡಿಕೊಳ್ಳಿ. ನಾಲ್ಕನೆಯದು ಬಸ್ಸನ್ನು ಓಡಿಸುವಾಗ ಅದನ್ನು ಆಗಾಗ್ಗೆ ಕ್ಲೀನ್ ಮಾಡಿಸಿ, ಐದನೆಯದು ಪ್ರಯಾಣಿಕರನ್ನು ಸೌಜನ್ಯ ರೀತಿಯಲ್ಲಿ ಕಾಣುವಂತೆ ಅಧಿಕಾರ ವರ್ಗಕ್ಕೆ ಸೂಚನೆ ಕೊಡಿ. ಆರನೆಯದು ಬಸ್ಸನ್ನು ದಯೆಯಿಟ್ಟು ನಿಯಮಿತ ಕಾಲಕ್ಕೆ ಹೊರಡಿಸಿ. ಏಳನೆಯದು ಪ್ರತಿಯೊಂದು ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ನೆರಳು ಮತ್ತು ಆಧುನಿಕ ರೀತಿಯ ಶೌಚಗೃಹ ಒದಗಿಸಿ. ಇಷ್ಟು ಹೇಳಿ ಇದನ್ನು ನಡೆಸಿಕೊಟ್ಟರೆ ನಿಜವಾಗಿಯೂ ಸಂಸ್ಥಾನದ ಜನರು ನಿಮಗೆ ದೀರ್ಘ ಕಾಲ ಚಿರಋಣಿ ಆಗಿರುತ್ತಾರೆ ಎಂದು ಹೇಳಿ ಸಾರಿಗೆ ಇಲಾಖೆಯ ಮೇಲಿನ ಭಾಷಣವನ್ನು ಮುಗಿಸುತ್ತೇನೆ.

ಆಹಾರ ಇಲಾಖೆ ಬಗ್ಗೆ ತಮ್ಮ ಮೂಲಕ ಕೆಲವು ಸಲಹೆ ಕೊಡುತ್ತೇನೆ. ಕೆಲವು ಸೊಸೈಟಿಗಳಿಗೆ ರೈತರು ಲೆವಿ ತಂದುಕೊಡುತ್ತಾರೆ, ಬಹುಶಃ ನಂಜನಗೂಡು ಸೊಸೈಟಿಯಲ್ಲಿ ಇದು ನಡೆಯುತ್ತಿದೆ. ಮೇಲ್ಮನೆಯ ಕಾಂಗ್ರೆಸ್ ಸದಸ್ಯರು ಅದರ ಅಧ್ಯಕ್ಷರು. ಪ್ರತಿಯೊಬ್ಬ ರೈತನಿಂದ 7 ರಿಂದ 10 ಕೆಜಿಗಳವರೆಗೆ ಹೆಚ್ಚು ಬತ್ತ ವಸೂಲು ಮಾಡುತ್ತಾರೆ.

(ಶ್ರೀ ಎಲ್. ಶ್ರೀಕಂಠಯ್ಯ)

ಅದಕ್ಕೆ ನಿದರ್ಶನ ಬೇಕೆಂದರೆ ನಮ್ಮ ಸದಸ್ಯಣಿಯರಾದ ಶ್ರೀಮತಿ ನಾಗರತ್ನಮ್ಮನವರ ಎವಿಡೆನ್ಸ್ ಇದೆ. ಇದನ್ನು ತಪ್ಪಿಸುತ್ತೀರಿ ಎಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಎಂ. ಎನ್. ರಾಮಣ್ಣ.—ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದಿರತಕ್ಕ ಡಿಮ್ಯಾಂಡ್ ನಂಬರ್ 4, 15, 39, 53 ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಹಲವಾರು ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸರ್ಕಾರದವರು ಈ ರಾಷ್ಟ್ರೀಕರಣ ನೀತಿಯನ್ನು ಹಾಕಿ ಅದರಿಂದ ಸಾರ್ವಜನಿಕರಿಗೆ ಯಾವುದೇ ವಿಧವಾದ ಅನುಕೂಲವಾಗಿಲ್ಲ ಎಂದರೆ ತಪ್ಪಾಗುವುದಿಲ್ಲ. ಯಾವುದೇ ಒಂದು ರಾಷ್ಟ್ರೀಕರಣ ಮಾಡಿದರೂ ಕೂಡ ಅದರಲ್ಲೂ ಪ್ರಯಾಣಿಕರಿಗೆ ಸೌಲಭ್ಯವನ್ನು ಮಾಡಬೇಕಾದರೆ ಉತ್ತಮವಾದ ಒಂದು ವಾಹನ ಸೌಕರ್ಯವನ್ನು ಕೊಡಬೇಕು ಮತ್ತು ಕಡಿಮೆ ದರ ಇರಬೇಕು. ನಮ್ಮ ರಾಷ್ಟ್ರೀಕರಣ ಹೇಗೆ ಇದೆ ಎಂದರೆ ಪ್ರೈವೇಟ್ ಬಸ್ ಮಾಲೀಕರು ಏನು ಒಂದು ದರ ವಸೂಲು ಮಾಡುತ್ತಾರೆ ಅದಕ್ಕಿಂತ ಜಾಸ್ತಿ ದರವನ್ನು ಕೊಟ್ಟು, ಕ್ಷಾಲಕ್ಕೆ ಸರಿಯಾಗಿ ಹೋಗವೆ, ಹೊರಟ ಊರನ್ನು ತಲುಪುವ ಹಾಗಿಲ್ಲ, ಇದ್ದ ಊರಿನಲ್ಲಿ ಇರುವ ಹಾಗಿಲ್ಲ, ಮೇಲೂ ಇಲ್ಲ, ಕೆಳಗೂ ಇಲ್ಲ ಅಂತರಿಕ್ಷದಲ್ಲಿ ಇರುವ ಹಾಗೆ ಇರಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ನನಗೆ ಇದರ ಅನುಭವ ಇದೆ, ಶಿವಮೊಗ್ಗ ಪಾಕೆಟನ್ನು ರಾಷ್ಟ್ರೀಕರಣ ಮಾಡಿದ್ದೀರಿ ನನ್ನ ಈ 9 ತಿಂಗಳ ಅನುಭವದಲ್ಲಿ ಹೇಳುವುದಾದರೆ ಹಿಂದಿನ ಕಾಲದವರು ಗಾಡಿಯಲ್ಲಿ ಹೊರಟರೆ ಒಂದು ದಿವಸದಲ್ಲಿ ಅಲ್ಲದೇ ಹೋದರೆ 4 ದಿವಸದಲ್ಲಾದರೂ ಸುಖವಾಗಿ ಹೋಗಬೇಕಾದ ಸ್ಥಳವನ್ನು ತಲುಪುತ್ತಾ ಇದ್ದರು. ಈಗ ಅದೂ ಕೂಡ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ನಿಮ್ಮ ಕೈಯಲ್ಲಿ ಇದನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಮೆಷಿನರಿ ಮೇಲೆ ಈ ದುಡ್ಡನ್ನು ಹಾಕುವುದರಿಂದ ಏನು ಪ್ರಯೋಜನ? ಸಾರ್ವಜನಿಕರಿಗೆ ಅನುಕೂಲವಾಗದೇ ಇರುವ ಕೆಲಸದ ಮೇಲೆ ಹಾಕುವುದರ ಬದಲು ಅದೇ ಹಣವನ್ನು ಉತ್ತಮವಾದ ನೀರಾವರಿ ಯೋಜನೆಗಾದರೂ ಹಾಕಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಮುಂದೆ ರಾಷ್ಟ್ರೀಕರಣ ಮಾಡಬೇಡಿ ಮತ್ತು ಈಗ ಮಾಡಿರುವುದನ್ನು ಕೈ ಬಿಡುವುದಕ್ಕೆ ಸಾಧ್ಯವಿದ್ದರೆ ದಯವಿಟ್ಟು ಕೈ ಬಿಡಿ ಎಂದು ಬಹಳ ವಿನಯದಿಂದ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಬಸ್‌ನಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೆ ಬಹಳ ತೊಂದರೆ ಕೊಡುತ್ತಾರೆ. ನಮ್ಮ ದೇಶದ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ, ಟಿಕೆಟ್ ಕೊಡದೇ ಕಂಡಕ್ಟರು ದುಡ್ಡು ಇಸಕೊಂಡರೆ ಪ್ರಯಾಣಿಕರನ್ನು ಕೋರ್ಟಿನ ಮುಂದೆ ನಿಲ್ಲಿಸುವ ವ್ಯವಸ್ಥೆ ಮಾಡಿದ್ದೀರಿ. ಸರ್ಕಾರದ ದುಡ್ಡನ್ನು ಅವನು ದುರುಪಯೋಗ ಮಾಡಿದ್ದಾನೆ ಅಂತ ಹೇಳಿ ಅವನನ್ನು ಶಿಕ್ಷೆಗೆ ಗುರಿಮಾಡುವಂತಹ ಒಂದು ಪ್ರೊವಿಜನ್ ಕಾನೂನಿನಲ್ಲಿ ಇದೆ. ಅದೇ ನಿಮ್ಮ ಅಧಿಕಾರಿ ಯಾವನು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅವನನ್ನು ಕೋರ್ಟಿನ ಮುಂದೆ ನಿಲ್ಲಿಸತಕ್ಕ ಶಕ್ತಿ ನಿಮಗೆ ಇಲ್ಲ ಎಂದರೆ ಇದಕ್ಕಿಂತ ಅನ್ಯಾಯ ಬೇರೆ ಇಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ನನ್ನ ವೈಯುಕ್ತಿಕ ಅನುಭವದ ಒಂದು ಸಂಗತಿಯನ್ನು ಹೇಳಬೇಕಾಗಿದೆ, ಬ್ರೇಕ್‌ಡೌನ್ ಬಸಸ್ ಅಂತ ಹೇಳಿ ಇಟ್ಟಿದ್ದೀರಿ. ಎಲ್ಲಿ ಬಸ್ಸು ಕೆಟ್ಟುಹೋದರೆ ಅಲ್ಲಿಗೆ ಕಳುಹಿಸುತ್ತೀರಿ. 15 ದಿವಸದ ಕೆಳಗೆ ನಡೆದ ಒಂದು ಸಂಗತಿಯನ್ನು ಹೇಳಿದರೆ ತಪ್ಪಾಗುವುದಿಲ್ಲ ತುಮಕೂರಿನಿಂದ ಚಂದ್ರಶೇಖರಪುರಕ್ಕೆ ಹೋಗಬೇಕಾಗಿತ್ತು, ಒಬ್ಬ ಬಡ ಉಪಾಧ್ಯಾಯ ಅವನ ಮಗಳ ಮದುವೆ, 20 ಜನ ಬಸ್ ಸ್ಟ್ಯಾಂಡ್‌ನಲ್ಲಿ ನಿಂತಿದ್ದರು. 2 ಗಂಟೆಗೆ ಹೊರಡಬೇಕಾಗಿದ್ದ ಬಸ್ಸು 4—5 ಗಂಟೆಯಾದರೂ ಬರಲಿಲ್ಲ, ಅಲ್ಲಿದ್ದವನನ್ನು ಕೇಳಿದರೆ ನನಗೆ ಗೊತ್ತಿಲ್ಲ ಸ್ವಾಮಿ ಅಂತ ಅಂದ. ಕೊನೆಗೆ ಟ್ಯಾಕ್ಸಿ ಮಾಡಿಕೊಂಡು ಮದುವೆಗೆ ಹೋಗತಕ್ಕ ಜನ ಹೋಗುವಂತಹ ಪರಿಸ್ಥಿತಿ ಅವತ್ತು ಬಂತು. ಇದು ನಿಮ್ಮ ರಾಷ್ಟ್ರೀಕರಣದ ನೀತಿಯಾಗಿದೆ. ನನ್ನ ಪ್ರಾರ್ಥನೆ ಇಷ್ಟೆ ಇದನ್ನು ನೀವು ನಡಸಲೇಬೇಕೆಂಬ ಅಭಿಪ್ರಾಯ ನಿಮಗೆ ಇದ್ದರೆ ಇದನ್ನೆಲ್ಲಾ ಸರಿಮಾಡಿ ನಿಮ್ಮಲ್ಲಿ ಬಾಗಿಲು ಇಲ್ಲದೇ ಇರುವ ಮೋಟಾರುಗಳನ್ನು ಕಂಡೆಂಮಾಡಿ ಹರಾಜು ಹಾಕಿ ಉತ್ತಮವಾದ ವಾಹನ ಸೌಕರ್ಯವನ್ನು ಒದಗಿಸಿ. ಅರಸೀಕೆರೆ ಡಿಪೋನಲ್ಲಿ ಇರುವ ಬಸ್ಸುಗಳಿಗೆ ಲಂಗು ಲಗಾಮು ಇರುವುದಿಲ್ಲ. ಲೈಟು ಇರುವುದಿಲ್ಲ, ಸ್ಟಾರ್ಟಿಂಗ್ ಟ್ರಬಲ್. ಎಲ್ಲಾದರೂ ನಿಂತು ಹೋದರೆ ಬಸ್ಸಿನಲ್ಲಿ ಕುಳಿತಿರುವ ನಮ್ಮನ್ನೇ ನೂಕಿ ಅಂತ ಅನ್ನುತ್ತಾರೆ, ಈತರಹ ನಡೆಸಿದ್ದೇ ಆದರೆ ಇದು ನಿಜವಾಗಿಯೂ ಬಹಳ

ಅನ್ಯಾಯ. ನಿಜವಾಗಿಯೂ ಯಾರು ದುಡ್ಡು ಕೊಟ್ಟು ಪ್ರಯಾಣ ಮಾಡುತ್ತಾರೆ ಅವರಿಗೆ ಬಹಳ ತೊಂದರೆಯನ್ನು ಉಂಟುಮಾಡುತ್ತಾ ಇದ್ದೀರಿ ಎಂಬುದನ್ನು ತಾವು ಮನಗಾಣಬೇಕು. ಇನ್ನು ಮುಂದಾದರೂ ಕೂಡ ಈ ರಾಷ್ಟ್ರೀಕರಣ ನೀತಿಯನ್ನು ಕೈ ಬಿಡುವುದು ಉತ್ತಮ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆಹಾರದ ಬಗ್ಗೆ ಒಂದು ಮಾತು. ಇಂಡಿಯಾ ಸರ್ಕಾರದವರು ಕೆಮಿಕಲ್ ಮೆನ್ಯೂರ್ ಮೇಲೆ, ಟ್ಯಾಕ್ಸ್ ಹಾಕಿದ್ದಾರೆ, ಎಲೆಕ್ಟ್ರಿಸಿಟಿ ಬೋರ್ಡಿನವರು ದರ ಜಾಸ್ತಿ ಮಾಡುತ್ತಾ ಇದ್ದಾರೆ. ನೀವು ಮಾತ್ರ ಬೆಳೆದಂತಹ ಬತ್ತವನ್ನು 45 ರೂಪಾಯಿನಂತೆ ಕೊಡಿ ಎಂದು ಕೇಳುವುದು ಯಾವ ನೀತಿ ಅನ್ನುವುದು ಅರ್ಥವಾಗುತ್ತಿಲ್ಲ. ಇದು ಸರಿಯಾದ ನೀತಿ ಅಲ್ಲ, ಬೇಕಾದರೆ ದಾಸ್ತಾನು ಮಾಡ ಬೇಕಾದರೆ ಓಪನ್ ಮಾರ್ಕೆಟಿನಲ್ಲಿ ಖರೀದಿ ಮಾಡಿ ಕಮ್ಮಿ ದರದಲ್ಲಿ ಯಾರು ಉಪಯೋಗ ಮಾಡುತ್ತಾರೆಯೋ ಅವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಆ ರೀತಿ ಮಾಡದೆ ರೈತನಿಗೆ ಯಾವುದೇ ಒಂದು ಸಹಾಯವನ್ನೂ ಮಾಡುತ್ತಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. 45 ರೂಪಾಯಿ ನಂತೆ ಕೊಡಿ ಅಂತ ಕೇಳುವುದು ಧರ್ಮವಲ್ಲ. ಇಲ್ಲವೇ ರೈತರಿಗೇ ಸರ್ಕಾರದವರು ಓಪನ್ ಮಾರ್ಕೆಟ್ ರೇಟನ್ನು ಕೊಟ್ಟು ಕೊಂಡುಕೊಳ್ಳಿ ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಈ ರಾಷ್ಟ್ರೀಕರಣದ ವಿಚಾರದಲ್ಲಿ ಕಡಮೆ ದುಡ್ಡಿನಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯವನ್ನು ಸಾಧಿಸತಕ್ಕ ಅವಕಾಶವಿದ್ದರೆ ಅದನ್ನು ಮಾಡಿ. ಹಾಗಿಲ್ಲದೆ ಜಾಸ್ತಿ ದುಡ್ಡನ್ನು ಕೊಟ್ಟು ಮೈನೋವು ಮಾಡಿಕೊಳ್ಳುವುದಾಗಿದ್ದರೆ ಅಂಥ ಪ್ರಯತ್ನವನ್ನು ಸರ್ಕಾರ ದವರು ದಯವಿಟ್ಟು ಕೈಬಿಡಬೇಕೆಂದು ಸವಿನಯದಿಂದ ಪ್ರಾರ್ಥಿಸಿ ನಾನು ನನ್ನ ಎರಡು ಮಾತು ಗಳನ್ನು ಮುಗಿಸುತ್ತೇನೆ.

Sri H. M. CHANNABASAPPA (Periyapatna).—Mr. Speaker, Sir, I do not think that there is any difference of opinion on the various defects and deficiencies and administrative lapses pinpointed by members on both sides of the House. I do not think there is any difference of opinion amongst members of this House that all is not well with the administration, but the only difference appears to be that some are bound to support the Government willy-nilly, no matter whether the Government is going on the right lines or not. We have now to find out what exactly are the root causes for these defects and deficiencies in administration. Today the demands that are before the House are Transport and Food.

Speking about Transport, the previous speaker gave a not of warning to do some re-thinking on the nationalisation policy. When I was speaking on the Agriculture Demand, I made out a case that we are seriously suffering from want of right policies in administration. Here also I say with some convication that the nationalisation policy on Road Transport has not yielded any profit either to the people or to the State Exchequer. When nationalisation was introduced for the first time, I was in office and at that time I did forecast that this is not going to bring the desired results and even force-warned that we will run into difficulties. Well, eight years have passed and it has come true. I know that the Transport Minister Sri Mohamed Ali is a conscientious man, but the point is whether he can rise to the level of re-thinking on this issue which is in grave trouble. It is not as though he does not want it, but it is because there are forces working which prevent him from taking action to do some re-thinking in the matter. It is not as though Government is not conscious of all these defects and deficiencies.

(SRI H. M. CHANNABASAPPA)

But the point is that they are not capable or rising to the occasion. That is the whole difficulty. I would only draw the attention of the Government as to why was nationalisation resorted to. It was because we wanted to give the best of services to the people at minimum cost and get the best return to the State's Exchequer. Now, have you realised it? Are you getting adequate return on your investments? Are you giving better comforts to the people and have the resources, nearly Rs. 21 crores, that we have invested for this purpose brought the desired results to the nation. I dare say that the Hon'ble Minister cannot contradict when I say that it is not so. The facts are otherwise. Here is a bulletin which speaks volumes. The nationalised system has grown by leaps and bounds but at the same time the defects and deficiencies in the administration have also grown by leaps and bounds with the result that we are in peril. I would therefore suggest that Government should do some re-thinking in this matter in which we have sunk nearly Rs. 21 crores with absolutely no adequate comforts to the travellers and no adequate returns on the capital invested.

Sri MOHAMED ALI.—Is not 8 per cent enough?

Sri H. M. CHANNABASAPPA.—I know the Government will somehow or other be able to make out a case to defend themselves. I have also run the Government and I know how on many an occasion knowing fully well that they are in the wrong they defend themselves. Otherwise, they cease to be Government. I do not want the Hon'ble Minister to do that because he is a good man. I want him to say what exactly he feels about it. I shall quote one figure which speaks volumes about it. There has been increased earnings per kilo meter. It has grown from 71.8 paise in 1960-61 to about 105.6 paise in 1965-66. The annual growth is about 4 to 5 per cent or 5 to 6 per cent. In the year 1956 you raised the rate by 10 per cent. Naturally we expected that the earnings per kilo meter would have gone up by 10 per cent.

Sri MOHAMED ALI.—But the cost of operation has also gone up.

Sri H. M. CHANNABASAPPA.—I expected that reply. The gross income per kilo meter was 105.6 paise in 1965 and it has gone to 112 paise in 1966 *i.e.* 6 per cent. This 5 to 6 per cent is a normal growth from year to year right from 1960-61. I naturally expected 10 per cent increase in the gross income in addition to this 6 per cent. That is to say, it should have gone to 16 per cent or 15 per cent or 12 per cent or at least 10 per cent. But it has not gone up even to that extent. What does it indicate? Where is the money gone? I want the Hon'ble Minister to kindly apply his mind to this question. Money has gone underground but where it has gone, it is for you to find out. I need hardly say that mal-practices of all conceivable kinds and in all conceivable magnitude are now prevalent in the M. S. R. T. C. I do not want to go into the details. You know it but I am sure as Government you

cannot say it unless you are prepared to resign. I do not want you to resign because you are a good man. So, what I would advise you is: please do not stand on ideological grounds. Let us face facts. If something is good for the country, let us adopt it. If by experience it is found that it has not only resulted in losses to the State and is not bringing adequate return to the State and is also not serving the people properly and that if the same amount of Rs. 21 crores could as well be diverted and utilised with advantage for more productive purposes like major irrigation project, we should not hesitate to do that.

The other day the Chief Minister said that if only he had money he would straightaway execute the major irrigation projects with great speed. Now if you go back on your proposals you will invite the money that is now practically cornered and that will come into play in the economic field and people wi l get better service and our monies could as well be diverted to more productive functions like irrigation development and things of that kind. Therefore I would appeal to this House and also to those who are in office, "Please do some re-thinking in the matter." I am glad that re-thinking has started because Mr. Nijalingappa said in regard to prohibition that some re-thinking is necessary. But that was a worng step and I am suggesting here a right step for a right cause and therefore I would appeal to the Government to do some re-thinking. The Finance Minister who is now faced with the task of finding about Rs. 40 crores should do this re-thinking and take the cue from me and I hope he will staraightway jump at this suggestion.

Coming to food, the less said about it the better. I know the Food Minister is very enthusiastic. He started very well. His very first statement, if I remember, was most palatable to farmers, but as he gradually got into the groove of the Ministery the bubbling enthusiasm is gradually dying. I want him to beware of it and raise to the occasion.

Now the agricultural policy and the food policy are in major trouble in this country. The other day I gave details how the agricultural policy is a lopsided policy, it is not production-oriented and it is only consumer-oriented. I repeat the same here for the benefit of the Minister for Food. Why was this food policy initiated long back? This food policy was brought into being on account of scarcity conditions in the country. If only our food policy had been production-oriented and enough production was there, all these difficulties would not have been there. If you only read the criticism right from 1950 onwards on the working of the Food Department, it is practically a repetition of the same complaints from that day till today. Now what have done? I know you will make the usual defence just as we people are accustomed to make the usual criticisms. It is not so and we should be in a mood to reconstruct the country on sound lines. It is this food policy that has demoralised the national character and the administration in this country. This demoralisation started when controls came into being. In 1952 my friend Sri Hunumanthaiah declared that controls should go forthwith whatever may be advantage or disadvantage, because they

(SRI H. M. CHANNABASAPPA)

have demoralised our people. Credit should really go to him for that. Can I expect our Minister for Food to raise to the stature of Sri Hanumanthaiah ? I am sure he has got the necessary enthusiasm and he will rise to the occasion. I think he will just now rise and say 'I am happy to do away with all controls', but unfortunately there are all round fetters on him. Our Minister is locked up in a situation from which he cannot get out. Everybody knows how things are going on in the Food Department. I want to ask where is the need for the Food Department ? Its function is procurement, storage and distribution. Apart from this, I do not think it has any other work. How do they make procurement ? You want the co-operative societies to procure, you want the Food Corporation to procure and you want the Food Department to procure. Why do you want so many agencies ? There should be only one agency. I can straightway declare that Government is not the proper organisation for carrying on commercial operations of foodgrains because it has not got the trained personnel and equipment and it has not got the experience and the necessary background for carrying on commercial operations. Corruption has crept in throughout the length and breadth of this country on account of this food policy. We all say that corruption is rampant. Corruption is a widespread disease in our country and it has reached the bone of our body politic and it is not merely in the flesh. If it is only in the flesh it could be cured, but now since it has gone to the bone it is difficult to cure it and so some re-thinking is necessary on this.

As regards levy, what right have you to take levy either moral or legal and ask the farmer to give you foodgrains at presribed price ? The price is prescribed by you and he has no hand in it. What is done in America, Japan and elsewhere ? Here our farmers are incapable of get the prices raised because you are bringing them under the pressure of regimentation and asking them to give levy at Rs. 40 or 50 per quintal. He is also in need of watches, clothes, shoes, etc. Are you giving these things to him at controlled prices ? No, because you have no control over the manufacturers and if you dare to control them your existence will be at stake. So I submit you have no moral and legal right to take levy from the farmers at prices prescribed by you unilaterally.

The next point that I would like to stress is that you should conduct all your operations through the Food Corporation who have got the necessary experience and the necessary trained personnel and equipment. Instead of doing that, you are trying to have your own organisation and we hear all sorts of allegations of corruption from top to bottom. Allegations are made of corruption from the Minister down to the lowest officer. The other day our Chief Minister stated that he would do everything to wipe out corruption and he said corruption must rooted out. So I would appeal to the Chief Minister who is

anxious to root out corruption. He asked us to bring specific cases to his notice, cases of corruption indulged in by his Ministers. But I would tell him, unless he acts in a manner in which he should act differently from his Ministers, what is the point in our making allegations and his making enquiries into those cases against persons in whom he is interested. When an allegation against a Minister comes, it is the third party which has got to go into the matter and find out whether there is a prima facie case or not. Therefore, the Chief Minister saying at the State level and the Prime Minister saying at the Central level that 'I will look into the matter' has absolutely no meaning. I would appeal to the Chief Minister that instead of saying 'I will look into the matter', to have the courage of conviction to refer the matter to High Court Judge to find out if there is a prima facie case, and if there is a prima facie case to appoint a Commission to go into the matter and prosecute the person under the law.

6-30 P.M.

Though I wanted to say many more things, I would close because the Speaker is feeling a little irksome about the time.

Sri MOHAMED ALI.—I cannot say at this stage how and when orders have been placed with different firms. There is no question of getting any commission. If we place orders with the local dealers, 11 per cent sales tax will accrue to the Government of Mysore. If we place orders directly with either Telco or Leyland only 3 per cent sales tax would have been saved, but there would be a loss of 11 per cent sales tax to the State Government. In order to see that the State Government is benefited, we are placing orders with local dealers, as far as possible.

Sir, as I already suggested, if the audit report of the Road Transport Corporation is placed before this House, I think, that would provide a good scope for detailed discussions of all these things. I have no mind to set-aside such discussion on technical grounds.

Sri H. N. NANJE GOWDA.--You have not told anything about the implementation of various reports.

Sri MOHAMED ALI.—Sir, the Corporation Board is going to take a decision about the implementation of those reports, at its meeting to be held on 28th of this month. The entire question and the proposals made thereunder have been examined by all the Heads of the Departments and also by the General Manager and the Vice-Chairman. The Report are being placed before the Corporation's Board on 28th of this month. But I don't think on 28th the Corporation will be able to take decisions, because we will give a note to them on that day which they have to consider. Therefore, I am thinking of fixing a special meeting for the consideration of these Reports some time during next month.

Sir, hon. Member Sri Gureddy said that more buses should be provided. In this connection one difficulty I would like to mention to the House is that we have purchased buses in 1956-57 and we have depreciated at the cost which we have purchased. We purchased at Rs. 42,000 and to-day we have to replace them after spending about Rs. 75,000. This had created a very difficult situation for the Transport Corporation. I do understand that there is great demand on the Corporation to start new trips, to increase schedules putting more buses etc. In addition to that, since the traffic has increased in areas which were nationalised about ten years back, there has been great demand from these areas also. In these areas the Traffic on the Road

(SRI MOHAMED ALI)

Transport has gone up by 4 hundred per cent. Therefore we have to put more buses there. For instance, mention had been made that no buses have been provided in Bidar which forms part of Gulbarga Division. In this connection, it is very significant to note that all the profit the Road Transport Corporation is getting is only after paying 6½ per cent interest to the Government. Even out of the 20 crores of Capital, 6 crores of rupees are from the internal resources of the Road Transport Corporation. Therefore, whatever is there is being ploughed back again. It is not that entire amount is going to be lost. We are allowing 10 per cent depreciation. When a bus is lost, we are not going to lose anything because we are taking out depreciation, Therefore, there is no question of any fear that there is going to be loss and the Road Transport Corporation is going to be liquidated. The hon. Members should appreciate our position. If there had not been any competition by the Road Transport Corporation with the private operators, what would have been the situation in the State.

SRI M. N. RAMANNA.—The performance of the Road Transport Corporation is very slow.

SRI MOHAMED ALI.—The question should not be viewed because of some roads have been taken over in the district of Tumkur. Whereever the Roads have not been nationalised, we have seen 50 per cent of the passengers inside the private bus and 50 per cent on the top of the bus. I have got a report from the Deputy Commissioner, Chitradurga, saying that 150 persons were found in a private bus.

SRI H. SIDDAVEERAPPA.—They used to go neither on the top nor inside the bus but they used to be on the ground only.

SRI MOHAMED ALI.—I was hearing with rapt attention what all the members spoke on this occasion about Transport demand. None of the Members have suggested any positive improvements. If they had made any suggestions or if they had suggested that more facilities should have been given, I would have been more happy. The Leader of the Opposition was saying this afternoon that he has seen wonderful bus service abroad. When he said that, I asked, did you bring any design.

SRI S. SIVAPPA.—I will get you.

SRI MOHAMED ALI.—Many members have said that I have not taken action against the misuse of the contract carriages. I have told several times what my difficulties are. Till now they have been checking all these buses 2 or 4 times. They have found a number of defaulters and the matter has been reported to the concerned R. T. Os and they have to take decision in the matter. In the meanwhile a decision has to be taken in this regard by the Appellate Court.

SRI B. L. NARAYANASWAMY (Srinivasapura).—How is the Government justified in increasing the rates ?

Sri MOHAMED ALI.—What is unanimously agreed upon and implemented cannot be lowered in the case of Kolar District.

Sri B. L. NARAYANASWAMY.—Unfortunately the people of the State have been disappointed. The people were expecting something good after nationalisation. But everything has gone contrary. For 60 miles distance, the Government is charging Rs. 3.20. Is it justified ?

Sri MOHAMMED ALI.—It is applicable to all the Districts with all my sympathy, I tell you that it will not be possible for me to help you in the matter.

Sri B. L. NARAYANASWAMY.—It is not correct to say that you are getting more profit at this high rate.

Sri MOHAMED ALI.—Complete account they have given. As far as private operators are concerned, they themselves are drivers, conductors, cleaners and they are everything and in Corporation there are very heavy over heads.

Sri B. L. NARAYANASWAMY.—Anyhow, it is disappointing.

Sri MOHAMED ALI.—We have to appoint and maintain the ratio of staff. Then, many of the members, especially from Bangalore, were complaining that the number of buses that are put on the road are not sufficient and therefore more number of buses should be introduced and they should be made to run in time. They complained that huge crowds are seem in every bus stops and it is absolutely necessary to put more number of buses. I have certainly taken note of it and I will try to see that services in Bangalore are rationalised. I have appointed a committee of officials to enquire into this question and to suggest ways and means to reduce loss in so far as the Bangalore Transport Service is concerned and to rationalise the services. I have to mention here that except B. T. S. there has been no loss in any Division in the previous year. I do not know from where the hon. Member Sri Chandrakanth got the information that we have incurred a loss of Rs. 40 lakhs in Gulbarga Division. Before closing I want to say one thing. Hon. Member Sri Sadashiva Patil was telling that while re-employing the conductors there has been communal bias. It is rather very unfortunate and painful for me to hear this from him. The total number of conductors appointed by me after receiving the mercy petitions, were 36. Out of these 36 the majority of them belong to other communities and not mine. If any discrimination is done and if any policy helping one community is adopted in re-appointing these people, the remarks of the Hon. member would have some weight. These conductors were appointed in Hyderabad Karnatak area and in Bangalore when there was Transport Department. They were all appointed by the General Manager and dismissed by the Divisional Controller which is wrong. All these people gave mercy petitions. I have given them fresh appoinments. This has gone to the advantage of the Corporation as no back wages were given and since there is decision of High-Court in their favour.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ನಾನು ಬರೇ ಕಂಡಕ್ಟರ ಬಗ್ಗೆ ಹೇಳಿಲ್ಲ ಇಡೀ ಎಂ. ಎಸ್. ಆರ್. ಟಿ. ಸಿ. ಎಂಪ್ಲಾಯೀಸ್ ಬಗ್ಗೆ, ಡಿಸ್‌ಮಿಸ್ ಆದವರು, ಎಷ್ಟು ಮಂದಿ, ರೀಯಿನ್‌ಸ್ಟೇಟ್ ಎಷ್ಟು ಮಂದಿ ಆಗಿದ್ದಾರೆ ಎಂದು ಹೇಳಿದ್ದೇನೆ. ಅದರಲ್ಲಿ ನಾನು ಯಾವ ಒಂದು ಇಂಟೆಶನ್ ಇಟ್ಟುಕೊಂಡು ಹೇಳಿಲ್ಲ.

Sri MAHOMED ALI.—The only matter and I think the Leader of the Opposition also will agree with me in that in some cases we have to take a human attitude. Mysore administration is known for its human touch. Mr. Sadasiva Patil must know that even before he was born, I was fighting cammunalism at the risk of my life. This Assembly should not become a place where any Hon'ble Member can say anything and get away with it. At that rate, assembly will become a very dangerous place. After all, it is not that all of a sudden we have emerged in political life. We have been actually in political life for three decades. We have been subscribed and associated with certain ideologies. I have fought communalism and if necessary, I am going to fight communalism in future also. Any how, I must humbly submit that this sort of an aspersion is very painful and is very much distressing.

Before I close Sir, I thank all those Members who have actually participated in the discussions.

Sri B. GANGANNA (Kallambella).—May I know why the consultative committees should have been formed and why they are not functioning. We have received some notifications saying that some members of this House are made members of the Consultative Committee of the Road Transport Corporation.

Sri MOHAMED ALI.—Any how, Hon'ble Members have made very valuable suggestions and I am really happy that they have taken so much interest on this subject. I will keep all the suggestions in my mind and see that whatever suggestions have been given in order to help the travelling public and improve the administration of the Road Transport Corporation and Motor Vehicles Department will be kept in view. I do appreciate, and I do hope the Hon'ble Members will be pleased to vote all the Demands without any opposition.

† ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸಭಾಧ್ಯಕ್ಷರೇ, ನಾನು ಈ ಮನೆಯ ಮುಂದೆ ಇಟ್ಟಿರುವಂಥಾ ಬೇಡಿಕೆಯನ್ನು ಕುರಿತು ಹಲವಾರು ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಭಾಸ್ಕರ ಶೆಟ್ಟರು ಮಾತನಾಡುತ್ತಾ ನಾನು ರೈತನ ಮಗ ಆದ್ದರಿಂದ ನನ್ನಿಂದ ರೈತರು ಒಳ್ಳೆಯದನ್ನು ಅಪೇಕ್ಷಿಸಿದ್ದರು, ಆದರೆ ನಾನು ಆಹಾರ ಶಾಖೆಯ ಮಂತ್ರಿ ಆದನಂತರ ಏನೂ ಅನುಕೂಲ ಆಗಿಲ್ಲ, ರೈತರು ಏನು ನನ್ನಿಂದ ಅಪೇಕ್ಷಿಸಿದ್ದರೋ ಅದು ಏನೂ ಆಗಿಲ್ಲ ಎಂದು ಹೇಳಿದರು. ನಾನು ರೈತನ ಮಗ ಎಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ನಾವು ರೈತರ ಮಕ್ಕಳಾಗಿ ರೈತರಲ್ಲದವರಿಗೆ ಅನ್ಯಾಯ ಮಾಡಬಾರದು. ಆ ರೀತಿ ಮಾಡಿದರೆ ಅದು ರೈತರಿಗೆ ಅವಮಾನ ಆದೀತು ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ಸರ್ಕಾರದ ಧೋರಣೆಯನ್ನು ಪರಿಶೀಲನೆ ಮಾಡಿದರೆ ಅದು ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಶ್ರೀಮಾನ್ ಭಾಸ್ಕರ ಶೆಟ್ಟರು ಮತ್ತು ಇತರ ನನ್ನ ಗೆಳೆಯರು ಹೇಳಿದರು ಆಹಾರ ಇಲಾಖೆಯಲ್ಲಿ ಏನೂ ಹೊಸದು ಆಗಿಲ್ಲ ಎಂದು. ಲೆವಿ ಮೂಲಕ ವಸೂಲು ಮಾಡತಕ್ಕ ಬತ್ತಕ್ಕೆ ಒಂದು ಕ್ವಿಂಟಾಲಿಗೆ 45 ರೂಪಾಯಿಗಳನ್ನು ಕಳೆದ ಸಾರಿ ಕೊಡುತ್ತಿತ್ತು. ಅದನ್ನು ಹೆಚ್ಚು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಅದರಂತೆ ಒಂದು ಕ್ವಿಂಟಾಲ್ ಬತ್ತಕ್ಕೆ 3 ರೂಪಾಯಿಗಳನ್ನು ನಾವು ಹೆಚ್ಚು ಮಾಡಿದ್ದೇವೆ. ಲೆವಿಯನ್ನು ನಿರ್ದಿಷ್ಟವಾದ ಕಾಲಕ್ಕೆ ಕೊಟ್ಟಂತಹ ರೈತರಿಗೆ 2 ರೂಪಾಯಿಗಳನ್ನು

ಜಾಸ್ತಿ ಕೊಟ್ಟಿದ್ದೇವೆ. ಶ್ರೀಮಾನ್ ಭಾಸ್ಕರ ಶೆಟ್ಟರ ಲೆವಿ ಕೊಡುವುದಿಲ್ಲ ಎಂದು ಕಾಣುತ್ತದೆ. ಇಲ್ಲದಿದ್ದರೆ ಅವರಿಗೆ ಇದು ಗೊತ್ತಿರಬಹುದಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾನೂ ಇದಕ್ಕೆ ಡಿಲ್ಲಿಯ ವರೆಗೂ ಹೋಗಿ ಇದನ್ನು ಸಾಧನೆ ಮಾಡಿದ್ದೇವೆ. ಯಾವುದೇ ಸಮಸ್ಯೆ ಇರಲಿ, ದೇಶದಲ್ಲಿ ಆಹಾರ ಸಮಸ್ಯೆ ಮಾತ್ರ ಸಮಗ್ರ ಭಾರತಕ್ಕೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಯಾವುದಾದರೂ ಒಂದು ಸಮಸ್ಯೆಯನ್ನು ಬಗೆಹರಿಸಬೇಕಾದರೆ, ಒಂದು ಯೋಜನೆಯನ್ನು ರೂಪಿಸಬೇಕಾದರೆ ಅದು ನಮ್ಮ ರಾಜ್ಯ ಸರ್ಕಾರಕ್ಕೇ ಸಂಬಂಧ ಬರುವುದಿಲ್ಲ. ಅದು ಇಡೀ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ. ಅದು ಕೇಂದ್ರ ಸರ್ಕಾರಕ್ಕೆ ಒಳಪಡುವಂಥಾದ್ದು. ಅದನ್ನು ಬರೀ ಒಂದು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಪರಿಶೀಲನೆ ಮಾಡುವುದಕ್ಕೆ ಬರುವುದಿಲ್ಲ. ಈ ವಿಚಾರವನ್ನು ಮಾನ್ಯ ಸದಸ್ಯರು ಮನಗಂಡಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದುವರೆಗೆ ನಾವು ಮಾಡಿರುವಂಥಾದ್ದನ್ನು ಏನೂ ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ರೈತರಿಗೆ ಆಗುವಂತಹ ದುಃಖದ ವಿಚಾರವನ್ನು ನಾನು ಬಲ್ಲೆ. ನಾನು ಹುಟ್ಟು ರೈತ. ರೈತರಿಗೆ ಆಗುವಂತಹ ಕಷ್ಟಗಳಿಗೆ ಯಾವ ರೀತಿಯಲ್ಲಿ ಪರಿಹಾರ ಮಾಡಬೇಕು, ಮತ್ತು ರೈತನಿಗೆ ಯಾವರೀತಿ ಉತ್ತೇಜನ ಕೊಡಬೇಕು ಎನ್ನತಕ್ಕ ವಿಚಾರಗಳನ್ನು ನಾವೆಲ್ಲರೂ ಪರಿಶೀಲನೆಮಾಡಿದ್ದೇವೆ. ಆದರೆ ರೈತನ ಕಷ್ಟವನ್ನು ಪರಿಹರಿಸುವಂತಹ ಕಾಲದಲ್ಲಿ ಇನ್ನೊಬ್ಬರಿಗೆ ತೊಂದರೆಯಾಗಬಾರದು. ರೈತರಿಗೆ ಸಮಾಜದಲ್ಲಿ ಏನೊಂದು ಪ್ರಾಮುಖ್ಯತೆ ಇದೆ, ಅದೇ ರೀತಿ ಇನ್ನೊಂದು ವರ್ಗಕ್ಕೂ ಪ್ರಾಮುಖ್ಯತೆ ಇದೆ. ಮುಜದೂರರು ಇರಲಿ, ನೌಕರರೇ ಇರಲಿ ಅಥವಾ ಯಾವ ವರ್ಗದವರೇ ಇರಲಿ ಅವರೂ ಸಹ ಈ ದೇಶದಲ್ಲಿ ಈ ಸಮಾಜದಲ್ಲಿ ಪ್ರಾಮುಖ್ಯವಾದ ವ್ಯಕ್ತಿಗಳು ಎಂಬುದನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ಬರೀ ರೈತರ ದೃಷ್ಟಿಯನ್ನು ಇಟ್ಟುಕೊಂಡು ಹಣ ಸಹಾಯವನ್ನು ಮಾಡಬೇಕು, ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರೆ, ಆ ರೀತಿ ಒಂದೇ ದೃಷ್ಟಿಯಲ್ಲಿ ಪರಿಶೀಲನೆ ಮಾಡಿದರೆ ಅದು ತಪ್ಪು ಆಗಬಹುದು. ಒಂದು ವೇಳೆ ನಾಳೆ ಅದು ತಪ್ಪು ಎಂದು ಹೇಳುವಂಥಾ ಪರಿಸ್ಥಿತಿಗೆ ಬರಬಹುದು.

ಈಗ ಇನ್‌ಫಾರ್‌ಮಲ್ ರೇಷನಿಂಗ್ ಇರುವುದು ಬೆಂಗಳೂರು ಮತ್ತು ಕೆ. ಜಿ. ಎಫ್.ಗಳಲ್ಲಿ. ಈ ಮನೆಯ ಮಾನ್ಯ ಸದಸ್ಯರೊಬ್ಬರು ಈಗ ಇರುವಂಥಾ ಇನ್‌ಫಾರ್‌ಮಲ್ ರೇಷನಿಂಗ್ ಪದ್ಧತಿಯನ್ನು ಕಿತ್ತುಹಾಕಿ ಎಂದು ಹೇಳಿದರು. ಈ ವಿಷಯವನ್ನು ಈ ಮನೆಯವರು ಒಪ್ಪಿದರೆ ಅದು ಬಹುಶಃ ಸರ್ಕಾರದವರು ಪರಿಶೀಲಿಸಬಹುದಾದಂತಹ ವಿಷಯ.

ಕಾನೂನಿನ ಬಲವನ್ನು ಇಟ್ಟುಕೊಂಡು ಯಾವುದೇ ಕಂಟ್ರೋಲ್ ಅಥವಾ ಕೆಲವು ನಿಯಮಗಳನ್ನು ಪರಿಪಾಲಿಸುವುದಕ್ಕೆ ಆಗುವುದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಯಾರೇ ಆಗಲೀ ಕಾನೂನಿಗೆ ವಿರುದ್ಧವಾಗಿ ನಡೆದಾಗ, ನಿಯಮವನ್ನು ಉಲ್ಲಂಘನೆ ಮಾಡಿದಾಗ ಅಂಥವರ ಮೇಲೆ ಕೇಸು ಹಾಕುತ್ತೇವೆ, ಮತ್ತು ಅಂಥಾ ಅನೇಕ ಕಾರ್ಯಕ್ರಮಗಳನ್ನು ನಾವು ಈಗಾಗಲೇ ಕೈಗೊಂಡಿದ್ದೇವೆಂದು ನಾನು ಮಾನ್ಯ ಸಭೆಗೆ ಹೇಳಬಯಸುತ್ತೇನೆ.

ಆಹಾರಧಾನ್ಯಗಳು ಸಕಾಲದಲ್ಲಿ ಸರಿಯಾಗಿ ವಿತರಣೆಯಾಗುವುದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಎಲ್ಲಾ ವ್ಯಾಪಾರಸ್ಥರನ್ನು ಕರೆದು ನೀವು ಇಷ್ಟೇ ಬೆಲೆಗೆ ಹೀಗೆಯೇ ಮಾರಬೇಕು ಎಂದು ಹೇಳುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈಗ ನಾವು ವ್ಯಾಪಾರಸ್ಥರನ್ನು ನಂಬಿಕೊಂಡು ಅಕ್ಕಿಯೇ ಆಗಲಿ, ಗೋಧಿಯೇ ಆಗಲೀ, ಅಥವಾ ಜೋಳವೇ ಆಗಲೀ ಇವುಗಳ ಮೇಲಿನ ಕಂಟ್ರೋಲನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ. ಕೆಲವು ವರ್ಷಗಳ ಕೆಳಗೆ ಸಕ್ಕರೆ ಮೇಲಿನ ಕಂಟ್ರೋಲನ್ನು ಒಂದು ಭಾಗ ಮಾತ್ರ ತೆಗೆದುದರಿಂದ ಪರಿಸ್ಥಿತಿ ಏನಾಯಿತು, ಬೆಲೆ ಎಷ್ಟು ಹೆಚ್ಚಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಈ ಒಂದು ದೃಷ್ಟಿಯಿಂದ ಸಮಾಜಕ್ಕೆ, ದೇಶದ ಸಾಮಾನ್ಯ ಜನರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯನ್ನು ಇಟ್ಟುಕೊಂಡು ಈ ಕಂಟ್ರೋಲನ್ನು ಮುಂದುವರಿಸುತ್ತಿದ್ದೇವೆ. ಈ ಮೂಲಕ ರೈತರಿಗೆ ತೊಂದರೆ ಕೊಡಬೇಕೆಂದು ನನ್ನ ಅಭಿಪ್ರಾಯವಲ್ಲ. ರೈತರಿಗೂ ಸಹ ಸರ್ಕಾರದವರು ಹೆಚ್ಚಿನ...

8–30 P.M.

ಶ್ರೀ ಎಚ್. ಸಿದ್ದವೀರಪ್ಪ.—ಲೆವಿ ಶೇಖರಣೆ ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಓಪನ್ ಮಾರ್ಕೆಟ್ಟಿನಲ್ಲಿ ಕೊಂಡು ಶೇಖರಣೆ ಮಾಡಿದರೆ ರೈತರಿಗೆ ಅನುಕೂಲ ಮಾಡಿದಂತಾಗುತ್ತದೆ. ಈಗ ರೈತರಿಂದ ಕ್ವಿಂಟಾಲಿಗೆ 45 ರೂಪಾಯಿನಂತೆ ಲೆವಿ ವಸೂಲುಮಾಡುತ್ತಿರುವುದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ.

ಶ್ರೀ ಎಸ್. ಶಿವಪ್ಪ.–ಯಾವುದೋ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಕ್ವಿಂಟಾಲ್ ಸಕ್ಕರೆಗೆ 400 ರೂಪಾಯಿಗಳಂತೆ ಎರಡು ವರ್ಷದವರೆಗೆ ತೆಗೆದುಕೊಳ್ಳುತ್ತೇವೆಂದು ತಾವು ಕರಾರುಮಾಡಿಕೊಂಡಿರ ರಲಿಲ್ಲವೇ, ಅದೇ ರೀತಿ ರೈತರಿಗೂ ಕೂಡ ಏತಕ್ಕೆ ಪ್ರೋತ್ಸಾಹ ಕೊಡಬಾರದು?

ಶ್ರೀ ಬಿ. ಭಾಸ್ಕರಶೆಟ್ಟಿ.—ಪೋಲೀಸರ ನೆರವನ್ನು ಪಡೆದುಕೊಂಡು ಲೆವಿ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ನಾನು ನನ್ನ ಭಾಷಣವನ್ನು ಚುಟುಕದಲ್ಲಿ ಹೇಳಿ ಮುಗಿಸಿ ಬಿಡುತ್ತೇನೆ. ನಾನು ಪೂರ್ತಿ ಉತ್ತರ ಕೊಡುವವರೆಗೂ ತಾವುಗಳು ದಯವಿಟ್ಟು ಮಾತ ನಾಡಬಾರದು. ನಾನು ಪೂರ್ತಿ ಹೇಳಿದಮೇಲೆ ಬೇಕಾದರೆ ಪ್ರಶ್ನೆ ಹಾಕಿದರೆ ಉತ್ತರ ಕೊಡು ತ್ತೇನೆ. ಲೆವಿ ವಸೂಲಿಯಲ್ಲಿ ಯಾವ ಒಂದು ಮಾರ್ಪಾಡನ್ನೂ ಸರ್ಕಾರದವರು ಮಾಡಿಲ್ಲ ಎಂದು ಮಾನ್ಯ ಸದಸ್ಯರುಗಳನೇಕರು ಹೇಳಿದ್ದರು. ಈಗ ಹೊಸದಾಗಿ ಕೆಲವು ಮಾರ್ಪಾಡು ಗಳನ್ನು ಮಾಡಲಾಗಿದೆ. ನಾಲ್ಕಾಣೆಗಿಂತ ಕಡಿಮೆ ಬೆಳೆಯಾಗಿದ್ದರೆ ವಸೂಲಿಮಾಡುವುದನ್ನು ಪೂರ್ತಿಯಾಗಿ ಮನ್ನಾ ಮಾಡಿದ್ದೇವೆ. 4 ಆಣೆಯಿಂದ 6 ಅಣೆಯವರಿಗೆ ಬೆಳೆಯಾಗಿದ್ದರೆ 50 ಪರ್‌ಸೆಂಟ್ ಲೆವಿಯನ್ನು ಮನ್ನಾ ಮಾಡಿದ್ದೇವೆ. ಆರಾಣೆಯಿಂದ ಎಂಟಾಣೆಯವರೆಗೆ ಬೆಳೆ ಯಾಗಿದ್ದರೆ 25 ಪರ್‌ಸೆಂಟ್ ಲೆವಿಯನ್ನು ರಿಯಾಯಿತಿ ತೋರಿಸಿದ್ದೇವೆ; ಮತ್ತು ಒಂದು ಎಕರೆ ತನಕ ಬತ್ತ, ಜೋಳ ಯಾವ ಬೆಳೆಯನ್ನೇ ಬೆಳೆದಿರಲಿ, ಲೆವಿ ವಸೂಲಿ ಬಗ್ಗೆ ಲೆಕ್ಕಕ್ಕೆ ತೆಗೆದು ಕೊಳ್ಳುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಆಣೆವಾರಿ ಲೆಕ್ಕವನ್ನೇ ಬರೆದಿಲ್ಲ, ಇನ್ನು ರಿಯಾಯಿತಿ ತೋರಿಸುವುದು ಎಲ್ಲಿ ಬಂತು.

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ಅದು ಬೇರೆ ಪ್ರಶ್ನೆ; ಲೆವಿ ವಸೂಲಿಯ ಬಗ್ಗೆ ಅನೇಕ ವರ್ಷ ಗಳಿಂದ ಒಂದೇ ಧೋರಣೆಯನ್ನು ನೋಡುತ್ತಾ ಬಂದಿದ್ದೇವೆಂದು ಶ್ರೀ ಚೆನ್ನಬಸಪ್ಪನವರು ಹೇಳಿದರು. ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ, ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಆಹಾರ ಸಮಸ್ಯೆಯ ವಿಚಾರದಲ್ಲಿ ಮಾತ್ರ ಯಾವ ಪಕ್ಷದವರೇ ಆಡಳಿತ ನಡೆಸುತ್ತಿರಲಿ, ಅಪಾಯಕಾರಿಯಾದಂಥ ಧೋರಣೆಯನ್ನು ತಳೆಯುವುದಕ್ಕಾಗುವುದಿಲ್ಲ: ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಇದೇ ಬೆಂಗಳೂರು ಸಿಟಿಯಲ್ಲಿ ಯಾವುದಾದರು ಒಂದು ದಿವಸ ರೇಷನನ್ನು ಅರ್ಧ ಭಾಗ ಕಟ್ ಮಾಡಿದರೆ ಜನರು ದೊಡ್ಡ ಮೆರವಣಿಗೆ ಬರುತ್ತಾರೆ. ಮೊನ್ನೆ ಒಂದು ಸಲ ಇದೇ ರೀತಿಯ ಮೆರವಣಿಗೆ ನನ್ನ ಮನೆಯ ಬಳಿ ಬಂದಾಗ ಪೋಲಿಸರ ಸಹಾಯ ತೆಗೆದುಕೊಳ್ಳ ಬೇಕಾಯಿತು. ಸಿಟಿಗಳಲ್ಲಿ ವಾಸ ಮಾಡುವ ಜನರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಈ ಕಂಟ್ರೋಲನ್ನು ಮುಂದುವರೆಸುತ್ತಿದ್ದೇವೆ. ಈ ಕಾರಣದಿಂದ ರೈತರಿಗೆ ತೊಂದರೆ ಕೊಡ ಬೇಕೆಂಬ ಇಚ್ಛೆ ಸರ್ಕಾರಕ್ಕೆ ಇಲ್ಲ. ಪೋಲೀಸರ ಸಹಾಯ ತೆಗೆದುಕೊಂಡು ರೈತರಿಗೆ ಕೈಕೋಳ ಹಾಕಿಸಿ ಲೆವಿ ವಸೂಲಿ ಮಾಡುತ್ತಿದ್ದಾರೆಂದು ಶ್ರೀ ಭಾಸ್ಕರ ಶೆಟ್ಟರು ಹೇಳಿದರು. ಈ ವಿಚಾರದಲ್ಲಿ ನಾನು ಕೇವಲ ಸದಸ್ಯನಾಗಿದ್ದರೆ ಚೆನ್ನಾಗಿ ಉತ್ತರ ಕೊಡುತ್ತಿದ್ದೆ. ಆದರೆ ನಾನು ಮಂತ್ರಿ ಯಾಗಿರುವುದರಿಂದ ಸರ್ಕಾರದ ದೃಷ್ಟಿಯಿಂದ ಆ ರೀತಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಈ ಬಗ್ಗೆ 25 ಕೇಸ್‌ಗಳು ನನ್ನ ಹತ್ತಿರ ಬಂದಿತ್ತು. ಜವಾಬ್ದಾರಿಯುಳ್ಳ ಸದಸ್ಯರುಗಳು ಈ ವಿಚಾರ ದಲ್ಲಿ ಸತ್ಯಕ್ಕೆ ದೂರವಾದುದನ್ನು ಹೇಳಬಾರದು. ಈ ರೀತಿ ಹೇಳಿದರೆ ಹೊರಗಡೆ ಇರುವ ಜನರು ಇದು ಸತ್ಯ ಇರಬಹುದೇನೋ ಎಂದು ತಿಳಿದುಕೊಳ್ಳಬಹುದು. ಆದಕಾರಣ ಸಮಾಜಕ್ಕೆ ಒಂದು ರೀತಿಯ ತಪ್ಪು ತಿಳಿವಳಿಕೆ ಕೊಡಬಾರದೆಂದು ನಾನು ಮಾನ್ಯ ಸದಸ್ಯರುಗಳಲ್ಲಿ ಕೇಳಿಕೊಳ್ಳುತ್ತೇನೆ. ಲೆವಿ ಕೊಡದವರ ಬಗ್ಗೆ ಕೇಸ್ ಹಾಕಿರುವ ಸಂಬಂಧದಲ್ಲಿ ಒಂದು ಸ್ಟೇಟ್‌ಮೆಂಟ್ ಕೂಡ ತರಿಸಿದ್ದೇನೆ.

		1966-67	*1967-68*	*1968-69*
ಕೂರ್ಗ್	...	6	ಕೇಸ್ ಇಲ್ಲ	ಕೇಸ್ ಇಲ್ಲ
ಗುಲ್ಬರ್ಗ	...	...	4	ಕೇಸ್ ಇಲ್ಲ
ಬಿಜಾಪುರ	...	...	3	ಕೇಸ್ ಇಲ್ಲ
ಕೋಲಾರ	...	...	...	1 ಕೇಸ್
ಬೆಳಗಾಂ	...	...	26	ಕೇಸ್ ಇಲ್ಲ
ತುಮಕೂರು	...	...	113	ಕೇಸ್ ಇಲ್ಲ
ಶಿವಮೊಗ್ಗ	...	...	3	20

ಲೆವಿ ಕೊಡಬಾರದೆಂಬ ಬಗ್ಗೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ರೀತಿಯ ಆಂದೋಳನ ಒಂದು ರೀತಿಯ ಚಳುವಳಿ ನಡೆದಿದೆ. ಅದೂ ಸರ್ಕಾರಕ್ಕೆ ವಿರುದ್ಧವಾಗಿ ನಡೆದಿದೆ.

	1966-67	1967-68	1968-69
ಮೈಸೂರು	... ...	63	ಕೇಸ್ ಇಲ್ಲ
ಮಂಡ್ಯ	... ...	150	ಕೇಸ್ ಇಲ್ಲ
ಹಾಸನ	... ...	94	29

Sri H. N. NANJE GOWDA.—I rise on a point of order, Sir. I know definitely that instructions are being issued to the Tahsildars to file cases per hobli. In my taluk I know that 25 cases have been filled.

ಶ್ರೀ ಎಸ್. ಶಿವಪ್ಪ.—ಹಾಸನ ತಾಲ್ಲೂಕಿನಲ್ಲಿ ಕ್ಷಾಮ ಇದೆ ಎಂದು ಸರ್ಕಾರದವರು ಒಪ್ಪಿ ಕೊಂಡಿದ್ದಾರೆ. ಆದಾಗ್ಯೂ ಕೂಡ 29 ಕೇಸ್‌ಗಳನ್ನು ಹಾಕುವುದಕ್ಕೆ ಕಾರಣವೇನು ?

Sri B. VITTALDAS SHETTY.—That is a different issue altogether I will reply to it later. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೋದ ವರ್ಷ 61 ಕೇಸ್ ಇದ್ದರೆ ಈ ವರ್ಷ ಒಂದೂ ಇಲ್ಲ. ನಾರ್ತ್‌ಕೆನರಾ ಜಿಲ್ಲೆಯಲ್ಲಿ ಹೋದ ವರ್ಷ 46 ಕೇಸ್ ಇದ್ದರೆ ಈ ವರ್ಷ ಒಂದೂ ಇಲ್ಲ. ರಾಯಚೂರು ಜಿಲ್ಲೆಯಲ್ಲಿ ಹೋದ ವರ್ಷ 24 ಕೇಸ್ ಇದ್ದರೆ ಈ ವರ್ಷ ಒಂದೂ ಇಲ್ಲ. ಧಾರವಾಡ ಜಿಲ್ಲೆಯಲ್ಲಿ ಹೋದ ವರ್ಷ 8 ಕೇಸ್‌ಗಳು ಇದ್ದರೆ ಈ ವರ್ಷ ಒಂದೂ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಹೋದ ವರ್ಷ 124 ಕೇಸ್‌ಗಳು ಇದ್ದರೆ ಈ ವರ್ಷ ಒಂದೂ ಇಲ್ಲ. ಸೌತ್‌ಕೆನರಾ ಜಿಲ್ಲೆಯಲ್ಲಿ ಅಂದರೆ ಶ್ರೀ ಭಾಸ್ಕರಶೆಟ್ಟರ ಜಿಲ್ಲೆಯಲ್ಲಿ 1966-67ರಲ್ಲಿ 318 ಕೇಸ್‌ಗಳು ಇದ್ದರೆ 1967-68ರಲ್ಲಿ 353 ಕೇಸುಗಳು ಇದ್ದವು. ಆದರೆ 1968-69ರಲ್ಲಿ ಒಂದೂ ಕೇಸ್ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಂತ್ರಿಗಳು ನನ್ನ ಜಿಲ್ಲೆಯಲ್ಲಿ ಒಂದೂ ಕೇಸ್ ಇಲ್ಲವೆಂದು ಹೇಳುತ್ತಿದ್ದಾರೆ. ಲೆವಿ ಕೊಡದ ರೈತರನ್ನು ಪೋಲಿಸಿನವರು ಅರೆಸ್ಟ್ ಮಾಡಿ ರಸ್ತೆಗಳಲ್ಲಿ ಮೆರವಣಿಗೆ ಮಾಡಿಸಿದ್ದಾರೆ. ಆದ್ದರಿಂದ ಪೋಲೀಸಿನವರು ಲೆವಿ ವಿಚಾರದಲ್ಲಿ ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆ ಎಂಬುದನ್ನು ಮಂತ್ರಿಗಳು ಹೇಳಬೇಕು. ಜವಾಬ್ದಾರಿಯಿಂದ ಮಾತನಾಡಬೇಕೆಂದು ಮಾನ್ಯ ಮಂತ್ರಿಗಳು ನನಗೆ ಹೇಳುತ್ತಾರೆ. ನಾನು ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ. ಆ ಬಗ್ಗೆ ನನ್ನ ಹತ್ತಿರ ರೆಕಾರ್ಡ್ಸ್ ಸಹ ಇದೆ. ನಾನು ಹೇಳುವುದು ತಪ್ಪಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದರೆ ತಾವು ರಾಜೀನಾಮೆ ಕೊಡುತ್ತೀರಾ ?

ಶ್ರೀ ವಿಠಲದಾಸಶೆಟ್ಟಿ.—ನಾನೂ ಜವಾಬುದಾರಿ ಇಲ್ಲ ಎಂದು ಹೇಳಲಿಲ್ಲ. ಇಲ್ಲಿ ರಾಜೀ ನಾಮೆ ಕೊಡುವ ಪ್ರಸಂಗವೇನಿಲ್ಲ.

ಬೆಂಗಳೂರು ನಿಲ್, ಚಿತ್ರದುರ್ಗ ನಿಲ್ ಮತ್ತು ಬೀದರ್ ನಿಲ್.

ಶ್ರೀ ಭಾಸ್ಕರಶೆಟ್ಟಿ.—ನಾನು ಇಲ್ಲಿ ಜವಾಬುದಾರಿಯಿಂದ ಹೇಳುತ್ತಿರುವಾಗ ತಾವು ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು. ಅನುಮಾನ ಇರುವ ರೀತಿಯಲ್ಲಿ ಹೇಳಿ ಅದನ್ನು ಒಪ್ಪಬೇಕೆಂದು ಹೇಳುತ್ತಾರೆ. ಪೋಲೀಸಿನವರು ಕೋರ್ಟಿನಲ್ಲಿ ಕರೆದುಕೊಂಡು ಹೋಗಿ ಪೋಲೀಸು ಸ್ಟೇಷನ್ನಿನಲ್ಲಿ ಕೇಸು ಹಾಕಿದ್ದಾರೆ.

ಶ್ರೀ ಬಿ. ವಿಠಲದಾಸಶೆಟ್ಟಿ.—ಕೇಸು ಹಾಕಿದ್ದಾರೆ ಎಂದು ಮಾನ್ಯ ಸದಸ್ಯರು ಇಲ್ಲಿ ಅರ್ಥ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸಚಿವರು ಹೇಳುತ್ತಿರುವ ಅಂಕೆಗಳು ಅಹಾರದ ಸಂಬಂಧ ವಾಗಿ ಹಾಕಿರುವ ಕೇಸುಗಳು.

ಶ್ರೀ ಬಿ. ಭಾಸ್ಕರಶೆಟ್ಟಿ.—ತಾವು ಕೊಡುತ್ತಿರುವ ಲಿಸ್ಟು ಸರಿಯಾದುದಲ್ಲ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ನಾನು ಸುಳ್ಳನ್ನು ಯಾವುದೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಬಿ. ಕಲಮನ್‌ಕರ್ (ಅಲಂದ್).—ಅಲಂದ ತಾಲ್ಲೂಕಾದಲ್ಲಿ ಕೂಡ ಪೋಲೀಸರು ಕೇಸು ಹಾಕಿದ್ದಾರೆ. ಸುಮಾರು 700 ಕೇಸುಗಳು ಆಗಿವೆ. ಇಂತಹದರಲ್ಲಿ ಮಾನ್ಯ ಮಂತ್ರಿ ಗಳು ಹೇಳುತ್ತಿರುವುದು ಎಷ್ಟುಮಟ್ಟಿಗೆ ಸರಿಯಾಗಿದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಕೆ. ಎಚ್. ರಂಗನಾಥ್.—ದಾವಣಗೆರೆ ತಾಲ್ಲೂಕಿನಲ್ಲಿ ಸಹಿತ ತಹಶೀಲುದಾರರು ಪೋಲೀಸಿನವರೊಡನೆ ಸೇರಿಕೊಂಡು ಬೇಕಾದಷ್ಟು ಫ್ರೊಕ್ಯೂರುಮೆಂಟು ಕೇಸುಗಳನ್ನು ಹಾಕಿದ್ದಾರೆಂದು ನನಗೂ ಕಾಗದ ಬಂದಿದೆ, ಇದೇ ಕಾಗದ ಪ್ರತಿ ಮಾನ್ಯ ಮಂತ್ರಿಗಳಿಗೂ ಕಳುಹಿಸಿದೆ. ಕೆಲವು ಕಡೆ ಚಾರ್ಜು ಷೀಟು ಹಾಕಿ ಕೇಸುಗಳನ್ನು ವಿತ್‌ಡ್ರಾ ಮಾಡಿಸಿಯೂ ಇದ್ದಾರೆ.

ಶ್ರೀ ಬಿ. ವಿಠಲದಾಸಶೆಟ್ಟಿ.—ಮಾನ್ಯ ಸದಸ್ಯರು ಬೇಕಾದರೆ ನನ್ನಮೇಲೆ ಪ್ರಿವಿಲೇಜು ಮೋಷನ್ ತರಲಿ. ನಾನು ಹೇಳುತ್ತಿರುವುದು ಕೋರ್ಟಿನಲ್ಲಿ ಹಾಕಿರುವಂತಹ ಕೇಸು ಬಗ್ಗೆ. ಅವು ನನ್ನ ಅಗಾಹನೆಗೆ ಬಂದಿವೆ. ಪೋಲೀಸರು ಎಷ್ಟು ಕೇಸು ಹಾಕಿದ್ದಾರೆ ಎಂದು ಹೇಳುವುದಕ್ಕೆ ನನಗೆ ಬರುವುದಿಲ್ಲ.

ಶ್ರೀ ಡಿ. ಬಿ. ಕಲ್‌ಮನ್‌ಕರ್.—ಸಚಿವರು ಹೌಸನ್ನು ಮಿಸ್‌ಲೀಡು ಮಾಡುತ್ತಿದ್ದಾರೆ. He is casting aspersion on the Members giving information.

Sri S. SIVAPPA.—The *bona fides* of Sri Bhaskar Shetty have been questioned by the hon. Minister for Food. He has been stating that the Members on this side are making irresponsible statement. He states that irresponsible statements should not be made. It is a serious matter.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪೋಲೀಸು ಕೇಸುಗಳ ಬಗ್ಗೆ ನಾನು ಹೇಳಿದ್ದು, ಕೋರ್ಟು ಕೇಸುಗಳನ್ನು ಹೇಳಲಿಲ್ಲ.

Sri D. B. KALMANKAR.—The Hon. Minister has been casting aspersions. The remarks made by the Hon. Minister against this Member should be expunged.

ಶ್ರೀ ಎಸ್. ಶಿವಪ್ಪ.—ಬೇಜವಾಬುದಾರಿ ಎಂದು ಹೇಳಿದಮೇಲೆ, He must prove it.

Mr. DEPUTY SPEAKER.—Why not the Hon. Member allow the Hon. Minister of State to speak ?

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ನಾನು ಹೇಳಿದ್ದು ಸುಳ್ಳಾದರೆ ನಾನು ಈ ಸಭೆ ಸದಸ್ಯತ್ವದಿಂದ ರಿಸೈನು ಮಾಡುತ್ತೇನೆ. ಅವರು ಹೇಳಿದ್ದು ಸುಳ್ಳಾದರೆ ಅವರ ರಿಸೈನ್ ಮಾಡುತ್ತಾರೋ ? Let him take a challenge.

Sri D. B. KALMANKAR.— The Minister cannot say that an hon. Member is speaking irresposibly. What he has stated must be expungd.

Mr. DEPUTY SPEAKER.—Why not the members hear the Hon. Minister first ? Let the Hon. Minister conclude.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಮಾತ್ರ ನಮ್ಮನ್ನು 'ಬೇಜವಾಬುದಾರಿ' ಎಂದು ಹೇಳಬಹುದು ನಾವು ಮಾತ್ರ ಬೇಜವಾಬುದಾರಿ ಎಂದು ಹೇಳಬಾರದೋ ?

Sri S. SIVAPPA.—It is a fact. It is not ಬೇಜವಾಬುದ್ದಾರಿ ಹೇಳಿಕೆ. police have registered cases. You must get all that information.

ಶ್ರೀ ಎಚ್. ಸಿದ್ದವೀರಪ್ಪ.—ಹೊಟ್ಟೆ ಹಸಿವಾಗಿರುವಾಗ ಅದಕ್ಕೇ ಇಷ್ಟು ಸಿಟ್ಟು ಬರುತ್ತಿದೆ. ಆದ್ದರಿಂದ ಅವರು ನಾಳೆ ಇದಕ್ಕೆ ರಿಪ್ಲೈ ಕೊಡಲಿ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ಕೋರ್ಟು ಗಳಲ್ಲಿ ಬಂದ ಕೇಸುಗಳನ್ನು ಹೇಳುತ್ತಿದ್ದೇನೆ. ಈಗ ಯಾರ್ಯಾರು ಏನೇನು ಹೇಳಿದ್ದಾರೆ ಎನ್ನುವುದು ರಿಕಾರ್ಡು ಆಗಿರುತ್ತದೆ, ಬೇಕಾದರ ನೋಡೋಣ. ನಾನು ಸ್ಪಷ್ಟಪಡಿಸುವುದೇನೆಂದರೆ ನನಗೆ ಬಂದಂತಹ ಇನ್‌ಫರ್ಮೇಷನ್ ಈಗ ಕೊಡುತ್ತಿರುವುದು.

ಶ್ರೀ ಎಸ್. ಶಿವಪ್ಪ.—ನಾನು ಸಜೆಸ್ಟು ಮಾಡುವುದು ಮಂತ್ರಿಗಳು ಇನ್‌ಫರ್‌ಮೇಷನ್ ತರಿಸಿ ಕೊಳ್ಳಲಿ. ಪೋಲೀಸಿನವರಿಗೆ ಬಂದಿರುವ ಕೇಸುಗಳು ಎಷ್ಟು ? ಕೋರ್ಟಿಗೆ ಹಾಕಿರುವ ಕೇಸುಗಳು ಎಷ್ಟು ?

ಉಪಾಧ್ಯಕ್ಷರು.—ಆ ಇನ್‌ಫರ್‌ಮೇಷನ್ ಬೇಕಾದರೆ ಆಮೇಲೆ ತರಿಸಿಕೊಡುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದಿದ್ದರೆ ನಾನು ಹೆಸರು ಹೇಳುತ್ತೇನೆ. ಅವರು ಬೇಕಾದರೆ ವೆರಿಫೈ ಮಾಡಲಿ. ಮೊನ್ನೆ ನಮ್ಮ ಊರಿನಲ್ಲಿ ಇಬ್ಬರನ್ನು ಅರೆಸ್ಟು ಮಾಡಿದ್ದಾರೆ ಕರೆದುಕೊಂಡು ಹೋಗಿದ್ದಾರೆ, ಇದು ಆಗಿರುವುದು ಕಾಪುವಿನಲ್ಲಿ. ಇರುವ ಪೋಲೀಸು ಔಟ್ ಪೋಸ್ಟಿಗೆ ಇಬ್ಬರನ್ನು ಕರೆದುಕೊಂಡು ಹೋಗಿದ್ದರು.

ಉಪಾಧ್ಯಕ್ಷರು.— ಈಗ ಬೇಡಿ. ಬೇಕಾದರೆ ಬರೆದುಕೊಡಿ.

ಶ್ರೀಮತಿ ಕೆ. ಲೀಲಾವತಿ ರೈ.—ಇವೆಲ್ಲ ಎಲ್ಲಿ ನಡೆದಂತಹವುಗಳು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಲ್ಲ ಕಡೆ ಇರುವ ಪೋಲೀಸು ಸ್ಟೇಷನ್‌ಗಳಲ್ಲೇ ಆಗುತ್ತಿವೆ. ಆದರೆ ನಾನು ಇಲ್ಲಿ ಇನ್‌ಸ್ಟೆನ್ಸ್ ಕೊಡುತ್ತಿರುವುದು ನನ್ನ ಕ್ಷೇತ್ರವಾದ ಕಾಪುವಿನ ಬಳಿ ಇರುವ ಪೋಲೀಸು ಸ್ಟೇಷನ್ನಿನಲ್ಲಿ ನಡೆದಿರುವುದರ ಬಗ್ಗೆ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇದನ್ನು ನಾನು ವಿಚಾರಿಸುತ್ತೇನೆ.

ಶ್ರೀ ಎಂ. ನಾಗಪ್ಪ.—ಸ್ವಲ್ಪ ಇದರಲ್ಲಿ ಯಾವ ಡೇಟಿನವರೆಗೆ ಇವೆಲ್ಲಾ ಸೀಮಿತವಾಗಿದೆ ಎನ್ನು ವುದನ್ನು ಹೇಳಬೇಕು. ನೀವು ಯಾವ ಪೀರಿಯಡ್‌ಗೆ ನಿಮ್ಮ ಲಿಸ್ಟ್‌ನಲ್ಲಿ ವಿವರಗಳು ಬಂದಿವೆ. ಇದರ ಕೊನೆಯ ತಾರೀಖು ಹೇಳಿಬಿಡಿ. ಏಕೆಂದರೆ ಆಮೇಲೆ ಮಂತ್ರಿಗಳು ಮುಂದೆ ಜಾರಿಕೊಳ್ಳಬಾರದು.

ಶ್ರೀ ಬಿ. ವಿಠಲದಾಸ ಶೆಟ್ಟಿ.—1ನೇ ಮಾರ್ಚ್ 1969ರ ವರೆಗೆ ಇದು. ಇನ್ನು ಕೆಲವರು ಬೇರೆ ವಿಚಾರಗಳನ್ನು ಹೇಳುತ್ತಾ ಚೆಕ್ ಪೋಸ್ಟ್‌ಗಳ ಬಗ್ಗೆ ಹೇಳಿದ್ದಾರೆ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು, ಮತ್ತು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಕ್ಕಿ ಅಥವಾ ಬೇರೆ ಆಹಾರ ಧಾನ್ಯಗಳನ್ನು ತೆಗೆದುಕೊಂಡು ಹೋಗಲಿಕ್ಕೆ ತೊಂದರೆಯಾಗಿದೆ ಎಂದು ಹೇಳಿದರು. ಇಂತಹ ತೊಂದರೆಗಳೇನೂ ಕಾಣುತ್ತಿಲ್ಲ. ನಾವು ಕಾನೂನು ಪ್ರಕಾರ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರ ಧಾನ್ಯವನ್ನು ತೆಗೆದುಕೊಂಡು ಹೋಗುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಆದರೆ ನಿರ್ಬಂಧ ಇರುವುದು ಹೋಲ್‌ಸೇಲ್ ಡೀಲರುಗಳು ಇನ್ನೊಂದು ಜಾಗದಲ್ಲಿರುವ ಹೋಲ್‌ಸೇಲ್ ಡೀಲರುಗಳಿಗೆ ತೆಗೆದುಕೊಂಡು ಹೋಗಿ ಮಾರಬೇಕಾದರೆ ಅವಗೆ ಕೆಲವು ನಿರ್ಬಂಧ ಗಳಿವೆ. ಇವರು ಡೆಪ್ಯುಟೀ ಕಮೀಷನರ ಕಡೆಯಿಂದ ಪರ್ಮಿಟ್‌ಗಳನ್ನು ತೆಗೆದುಕೊಂಡು ಹೋಗ ಬೇಕಾಗುತ್ತದೆ. ಆದರೆ ಕೆಲವು ಕಡೆಗಳಲ್ಲಿ ದವಸ ಬೆಳೆದವರು ಅವರ ದವಸವನ್ನು ತೆಗೆದುಕೊಂಡು ಹೋಗುವಾಗ ಪೋಲೀಸಿನವರು ಅವರುಗಳನ್ನು ತಡೆದು ತೊಂದರೆಯಾಗುತ್ತಿದೆ ಎಂದು ಹೇಳಿದರು. ಇಂತಹ ಯಾವುದಾದರೂ ಒಂದು ಸ್ಪೆಸಿಫಿಕ್ ನಿದರ್ಶನವನ್ನು ಸರಕಾರದ ಗಮನಕ್ಕೆ ತಂದರೆ ಇದನ್ನು ವಿಚಾರಿಸಿ ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ನಾನು ಹೇಳುತ್ತೇನೆ. ಮತ್ತು ಇದರಲ್ಲಿ ಇರುವ ಅಧಿಕಾರ ವರ್ಗದವರೆಲ್ಲಾ ಅವರು ಯಾರೇ ಆಗಲೀ ಪೋಲೀಸು ಕಾನ್‌ಸ್ಟೇಬಲ್ ಆಗಲೀ ಎಲ್ಲರೂ ಒಳ್ಳೆಯವರು ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ನಾನು ಹೇಳುವುದಿಲ್ಲ. ನೀವೂ ಒಪ್ಪುವುದಿಲ್ಲ. ಅಲ್ಲಿ ಇಲ್ಲಿ ಕೆಲವು ತಪ್ಪುಗಳು ಬರಬಹುದು. ಆದರೆ ಎಲ್ಲವನ್ನೂ ಕಾನೂನು ಪ್ರಕಾರ ಯಾರಾದರೂ ರೈತರು ತಾವು ಬೆಳೆದ ದವಸವನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ತೆಗೆದುಕೊಂಡು ಹೋಗಲು ಯಾವ ನಿರ್ಬಂಧವೂ ಇಲ್ಲ. ಹಾಗೇನಾದರೂ ಪೋಲೀಸಿ ನವರು ಎಲ್ಲಿಯಾದರೂ ತಡೆದರೆ ಇದರ ಬಗ್ಗೆ ಸರಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳು ವುದಕ್ಕೆ ಸದಾ ಸಿದ್ಧವಾಗಿದೆ ಎನ್ನುವ ಭರವಸೆಯನ್ನು ಇಲ್ಲಿ ಕೊಡಲಿಕ್ಕೆ ಇಚ್ಛಿಸುತ್ತೇನೆ. ಬೆಂಗಳೂರು ಸಿಟಿಯೊಳಗೆ ಸರಿಯಾಗಿ ರೇಷನ್ ಸಪ್ಲೈಯಾಗುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಗಳು ಹೇಳಿದರು. ಕೆಲವು ಸಂದರ್ಭಗಳಲ್ಲಿ ಹಾಗೆ ಆಗಿದೆ. ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಕಾರಣವೇನೆಂದರೆ ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ 4ಲಕ್ಷ ಟನ್ ಆಹಾರದ ಅಭಾವ ಸದಾ ಇರುತ್ತದೆ, ನಾವು ಅಕ್ಕಿ ಮತ್ತು ಇತರ ಆಹಾರಧಾನ್ಯಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರಕಾರದವರು ನಾವು ಕೇಳಿದಷ್ಟು ಆಹಾರಧಾನ್ಯವನ್ನು ಕೊಡಲಿಲ್ಲ. ಆ ಕಾರಣದಿಂದ ಬೆಂಗಳೂರು ಸಿಟಿಯೊಳಗೆ ಕೆಲವು ಸಂದರ್ಭಗಳಲ್ಲಿ ಆಹಾರಧಾನ್ಯಗಳ ಹಂಚಿಕೆ ಕಡಿಮೆ ಯಾಗುವ ಸಂಭವ ಬಂದಿತು. ಕೇಂದ್ರ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಅಕ್ಕಿಯನ್ನು ಕೊಡದ ಸಂದರ್ಭದಲ್ಲಿ ಬೆಂಗಳೂರು ಸಿಟಿಯಲ್ಲಿ ಅಕ್ಕಿಯ ಪಡಿತರವನ್ನು ಸಹ ಕಡಿಮೆ ಮಾಡುವ ಸಂದರ್ಭ

(ಶ್ರೀ ಬಿ. ವಿಠಲದಾಸ್ ಶೆಟ್ಟಿ)

ಬರುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ನಮಗೆ ಕಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ನಾವು ಸಾಕಷ್ಟು ಒತ್ತಾಯವನ್ನು ಆಗಿಂದಾಗ್ಗೆ ಮಾಡುತ್ತಾ ಬಂದಿದ್ದೇವೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳನ್ನು ಸಹ ಅಲ್ಲಿಗೆ ಕಳಿಸಿಕೊಟ್ಟಿದ್ದೇವೆ. ನಮ್ಮಲ್ಲಿ ಸ್ಟಾಕ್ ಎಷ್ಟಿದೆಯೋ ಅದನ್ನು ಸರಿಯಾಗಿ ವಿತರಣೆ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಈಗ ಅನೇಕ ಕೋ-ಆಪರೇಟಿವ್ ಸೊಸೈಟಿಗಳಿಗೆ ಮತ್ತು ಖಾಸಗೀ ವ್ಯಾಪಾರಸ್ಥರಿಗೆ ಈ ರೇಷನ್ ಪದಾರ್ಥಗಳನ್ನು ಹಂಚಿಕೆ ಮಾಡುವ ಕೆಲಸವನ್ನು ವಹಿಸಿದ್ದೇವೆ. ಹಲವಾರು ಜನರು ಈ ಹಂಚಿಕೆ ವಿಷಯದಲ್ಲಿ ವಂಚನೆ ಮಾಡುವ ಪ್ರಯತ್ನಗಳನ್ನು ಮಾಡಿದ್ದಾರೆ. ಅಂತಹವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಲಾಗಿದೆ. ಮತ್ತು ಅಂತಹವರ ವಿಚಾರದಲ್ಲಿ ಅನೇಕ ಕೇಸ್‌ಗಳನ್ನು ರಿಜಿಸ್ಟರ್ ಮಾಡಲಾಗಿದೆ. ಬೆಂಗಳೂರು ನಗರದಲ್ಲಿಯೇ ಎಷ್ಟೋ ಕೇಸ್‌ಗಳನ್ನು ಹಾಕಲಾಗಿದೆ ಎಂಬುದನ್ನು ಒತ್ತಿ ಹೇಳಬಹುದು.

ಶ್ರೀ ಎಸ್. ಶಿವಪ್ಪ.—ಎಷ್ಟು ಕೇಸ್‌ಗಳನ್ನು ಹಾಕಲಾಗಿದೆ ಎಂಬುದನ್ನು ಹೇಳಿ ?

ಶ್ರೀ ಬಿ. ವಿಠಲ್‌ದಾಸ್‌ಶೆಟ್ಟಿ.—ಕೇಸ್‌ಗಳ ಸಂಖ್ಯೆ ಜಾಸ್ತಿ ಇದೆ. ಈ ವಿಚಾರದಲ್ಲಿ ನಾವು ಸಾಧ್ಯವಾದಷ್ಟು ಬಿಗಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಎಷ್ಟೋ ಸಂದರ್ಭಗಳಲ್ಲಿ ಬರಹ ಮೂಲಕ ಕೊಟ್ಟಂತಹ ಅಪಾದನೆಗಳ ಮೇಲೆ ತನಿಖೆ ನಡೆಸಿದ್ದೇವೆ. ಮಾನ್ಯ ಸದಸ್ಯರುಗಳಿಂದ ಈ ವಿಚಾರದಲ್ಲಿ ಏನಾದರೂ ಅಪಾದನೆಗಳು ಬಂದರೆ ತಕ್ಷಣ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಏರ್ಪಾಡು ಮಾಡಿದ್ದೇವೆ. ಪೋಲೀಸರ ಮೂಲಕವೂ ಸಹ ಕೆಲವು ಕೇಸ್‌ಗಳ ಬಗ್ಗೆ ತನಿಖೆ ಮಾಡಿಸಿದ್ದೇವೆ. ಎಲ್ಲಿ ಸಾಧ್ಯವಾಗಿದೆಯೋ ಅಲ್ಲಿ ಸಂಬಂಧಪಟ್ಟವರಿಗೆ ಶಿಕ್ಷೆ ಕೊಟ್ಟು ಅವರಿಗೆ ಕೊಟ್ಟ ಲೈಸನ್ಸ್‌ನ್ನು ವಜಾ ಮಾಡಿ ಬೇರೆಯವರಿಗೆ ಕೊಡಲಾಗಿದೆ. ಆಹಾರದ ಹಂಚಿಕೆ ಮಾಡುವ ಕೋ-ಆಪರೇಟಿವ್ ಸೊಸೈಟಿಗಳು ತಪ್ಪು ಮಾಡಿದಾಗ ಅಂತಹ ಸೊಸೈಟಿಗಳ ಲೈಸನ್ಸ್‌ನ್ನು ಕೂಡ ರದ್ದುಮಾಡಿದ್ದೇವೆ. ಈ ದೃಷ್ಟಿಯಲ್ಲಿ ಆಹಾರಧಾನ್ಯದ ವಿತರಣೆ ಸರಿಯಾಗಿ ನಡೆಯುವ ಬಗ್ಗೆ ತಾವೆಲ್ಲರೂ ಕೂಡ ಸಹಕಾರ ನೀಡಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಭಾಸ್ಕರಶೆಟ್ಟರು ಆಹಾರ ಧಾನ್ಯದ ವಿತರಣೆ ಕೆಲಸವನ್ನು ಸೊಸೈಟಿಯವರಿಗೆ ಕೊಡಬೇಕೇ ವಿನಃ ಬೇರೆ ಖಾಸಗೀಯವರಿಗೆ ಕೊಡುವುದು ಸರಿಯಲ್ಲವೆಂದು ಹೇಳಿದರು. ಮತ್ತು ಆ ರೀತಿ ಕೊಡುವುದು ಸರ್ಕಾರದ ಧೋರಣೆಗೆ ವಿರುದ್ಧವಾಗಿ ನಡೆದುಕೊಂಡಂತಾಗುತ್ತದೆಂದು ಸಹ ಹೇಳಿದರು. ಈ ವಿಚಾರದಲ್ಲಿ ನಮ್ಮ ಧೋರಣೆಯನ್ನು ಸ್ವಲ್ಪ ಸಡಿಲಗೊಳಿಸಿ ಎಲ್ಲಿ ಕೋ-ಆಪರೇಟಿವ್ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೋ ಅಂತಹ ಕಡೆ ಲೈಸನ್ಸ್‌ನ್ನು ರದ್ದು ಮಾಡಿ ಬೇರೆಯವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಹಿಂದೆ ಸರ್ಕಾರದವರು ಅಂದರೆ 1968-69ರಲ್ಲಿ ಆಹಾರ ಧಾನ್ಯದ ವಿತರಣೆಯ ಬಗ್ಗೆ ಈ ರೀತಿ ಹೇಳಿದ್ದರು :

> "Co-operatives are the principles agents of Government at all stages of food operation, procurement, storage, milling of paddy and distribution of foodgrains at both wholesale, retail levels."

ಇದು ಆಹಾರದ ಮಂತ್ರಿಗಳಿಗೆ ಅನ್ವಯವಾಗುವುದಿಲ್ಲವೇ ?

ಶ್ರೀ ಬಿ. ವಿಠಲ್‌ದಾಸಶೆಟ್ಟಿ.—ಪ್ರಿಫರಬಲ್ ಎಂದು ಇದೆ. ಮಾನ್ಯ ವೀರಪ್ಪಗೌಡರು ಆಗುಂಬೆ ಘಾಟ್‌ನಲ್ಲಿ ಚೆಕ್‌ಪೋಸ್ಟ್ ಅನಾವಶ್ಯಕವೆಂದು ಹೇಳಿದರು. ಅದನ್ನು ಪರಿಶೀಲಿಸುತ್ತೇನೆ. ಅದರಿಂದ ಅನಾವಶ್ಯಕವಾಗಿ ತೊಂದರೆಯಾಗುತ್ತದೆ ಎಂದು ಸರ್ಕಾರಕ್ಕೆ ಮನವರಿಕೆಯಾದರೆ ಅಂತಹ ಚೆಕ್ ಪೋಸ್ಟ್‌ಗಳನ್ನು ಇಡುವ ಇಚ್ಛೆ ಸರ್ಕಾರಕ್ಕೆ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಇಳುವರಿ ವಿಷಯದಲ್ಲಿ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಕಳೆದ ಸಾರಿ ಇಳುವರಿಯು 69 ಇದ್ದುದು 70 ಮಾಡಿದ್ದೇವೆ. 70 ಇದ್ದುದನ್ನು 71 ಮಾಡಿದ್ದೇವೆ. ಇದರಿಂದಾಗಿ ಸಾಕಷ್ಟು ಲಾಭ ಸರ್ಕಾರಕ್ಕೆ ಬರುತ್ತಿದೆ.

ಇನ್ನು ಸಕ್ಕರೆ ಹಂಚಿಕೆ ವಿಚಾರದಲ್ಲಿ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ಸಿಟಿಯೊಳಗೆ ಎಷ್ಟು ಪ್ರಮಾಣದಲ್ಲಿ ಸಕ್ಕರೆಯನ್ನು ಹಂಚಲಾಗುತ್ತದೋ ಅಷ್ಟೇ ಪ್ರಮಾಣದಲ್ಲಿ ಹಳ್ಳಿಗಳಲ್ಲಿಯೂ ಕೂಡ ಹಂಚಬೇಕೆಂಬ ಸಲಹೆಯನ್ನು ಮಾನ್ಯ ಸದಸ್ಯರುಗಳು ಮಾಡಿದರು. ಇಷ್ಟರವರೆಗೆ ಏನು ಅಭಿಪ್ರಾಯ ಇತ್ತು ಎಂದರೆ, ಹಳ್ಳಿಯ ಜನ ಸಕ್ಕರೆ ತಿನ್ನುವುದು ಕಡಿಮೆ, ಬೆಲ್ಲ ಹೆಚ್ಚು ತಿನ್ನುತ್ತಾರೆ ಎಂಬುದು. ಈಗ ಹಳ್ಳಿಗಳಲ್ಲಿಯೂ ಕೂಡ ಕಾಫಿ, ಟೀ ಕುಡಿಯುವ ಜನರು ಸಕ್ಕರೆಯನ್ನು ಉಪಯೋಗಿಸುವ ಜನರು ಜಾಸ್ತಿಯಾಗಿದ್ದಾರೆ. ಈ ದೃಷ್ಟಿಯಿಂದ ಇನ್ನುಮುಂದೆ ಹಳ್ಳಿಗಳಿಗೂ ಕೂಡ ಸಕ್ಕರೆಯನ್ನು ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೋ ಅಷ್ಟನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಇನ್ನು ಹೊಸದಾಗಿ ಸೈಕಲ್ ಟೈರ್ಸ್, ಬಸ್, ಕಾರು ಮತ್ತು ಟ್ರಾಕ್ಟರ್‌ಗಳ ಟೈರ್ಸ್, ಟ್ಯೂಬ್ಸ್, ಆಟೋಮೊಬೈಲ್ ಪಾರ್ಟ್ಸ್ ಮುಂತಾದುವುಗಳನ್ನು ಹತೋಟಿಯಲ್ಲಿ ತರುವ ಬಗ್ಗೆ ಕೇಂದ್ರಸರ್ಕಾರದವರು ಒಂದು ಕಾನೂನನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ನಾನಾ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮಂತ್ರಿಗಳು ಆಹಾರದ ಮಂತ್ರಿಗಳಾಗುವುದಕ್ಕೆ ಮುಂಚೆ ಆಹಾರವನ್ನು ಓಪನ್‌ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಬೇಕು, ಲೆವಿ ಪದ್ಧತಿಯನ್ನು ತೆಗೆದು ಹಾಕಬೇಕೆಂದು ಹೇಳುತ್ತಿದ್ದರು, ಆದರೆ ಮಂತ್ರಿಗಳಾದ ಮೇಲೆ ಮೊದಲಿನ ಅಭಿಪ್ರಾಯವನ್ನು ಕೈಬಿಟ್ಟಿದ್ದಾರೆ, ಅದಕ್ಕೆ ಕಾರಣವೇನು ?

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ಮಾನ್ಯ ನಂಜೇಗೌಡರು ಹೇಳುತ್ತಿರುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಓಪನ್ ಮಾರ್ಕೆಟ್‌ನಲ್ಲಿ ಪರ್ಚೇಸ್ ಮಾಡಿ ಗ್ರಾಹಕರಿಗೆ ಕಡಿಮೆ ದರದಲ್ಲಿ ಹಂಚಿಕೆ ಮಾಡುವ ವಿಚಾರವನ್ನು ನಿಧಾನವಾಗಿ ಪರಿಶೀಲಿಸಬೇಕಾಗಿದೆ.

ಗ್ರಾಹಕರಿಗೆ ಕಡಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಕೊಡಬೇಕು ಎಂದರೆ ಸರ್ಕಾರ ಅದರಲ್ಲಿ ಆಗುವ ನಷ್ಟವನ್ನು ತುಂಬಿಕೊಡಬೇಕು. ಈಗ ಮದ್ರಾಸ್ ಸರ್ಕಾರ ಏಳೆಂಟು ಕೋಟಿ ರೂಪಾಯಿಗಳನ್ನು ತುಂಬಿಕೊಡುತ್ತಿದೆ. ಪ್ರಕೃತ ಆಹಾರ ಸರಬರಾಜು ವ್ಯವಸ್ಥೆ. ಧೋರಣೆಯಲ್ಲಿ ನೋ-ಪ್ರಾಫಿಟ್ ನೋ-ಲಾಸ್ ಆಧಾರದಮೇಲೆ ನಡೆಯುವಂಥದ್ದು ಆಗಿದೆ. ಇದು ಬಹಳ ದೊಡ್ಡ ವಿಚಾರ, ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

9-00 P.M.

ಶ್ರೀ ಎರ್. ಶ್ರೀಕಂಠಯ್ಯ.—ಬತ್ತ, ರಾಗಿ, ಜೋಳ ಬೆಳೆಯುವವರಿಂದ ಲೆವಿ ತೆಗೆದುಕೊಳ್ಳುತ್ತೀರಿ. ಕಬ್ಬು ಬೆಳೆಯುವವರ ಮೇಲೆ ಯಾವ ವಿಧವಾಗಿ ಲೆವಿ ಹಾಕುತ್ತೀರಿ? ನೆಲಗಡಲೆ ಬೆಳೆಯುವವರ ಮೇಲೆ ಹೇಗೆ ಲೆವಿ ಹಾಕುತ್ತೀರಿ? ಬತ್ತ ಬೆಳೆಯುವವರು ಕಬ್ಬು ಬೆಳೆ ತೆಗೆಯಲು ಅದಕ್ಕೆ ಬದಲಾಯಿಸಿಕೊಳ್ಳುವುದಕ್ಕೆ ಲೆವಿ ಪದ್ಧತಿಯಿಂದ ಉತ್ತೇಜನ ಕೊಟ್ಟಂತಾಗುವುದಿಲ್ಲವೇ ?

ಶ್ರೀ ವಿಠಲ್‌ದಾಸ ಶೆಟ್ಟಿ.—ಸಕ್ಕರೆಮೇಲೆ ಲೆವಿ ಹಾಕಿದ್ದೇವೆ. ಬೆಲ್ಲದಮೇಲೆ ಒಂದು ರೀತಿಯ ಹತೋಟಿ ಇಟ್ಟುಕೊಂಡಿದ್ದೇವೆ.

ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಪರಿಶೀಲಿಸಿ ಮುಂದಿನ ವರ್ಷದ ಧೋರಣೆಯಲ್ಲಿ ಅವುಗಳನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಕೊಟ್ಟ ಸಲಹೆಗಳಿಗೆ ನಾನು ಅಭಾರಿಯಾಗಿದ್ದೇನೆ.

†ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮಿತ್ರರನೇಕರು ಇಂದಿನ ದಿನ ನಗರಾಡಳಿತಕ್ಕೆ ಸಂಬಂಧಪಟ್ಟಂತೆ ಅನೇಕ ಸೂಕ್ತವಾದ ಸಲಹೆಗಳನ್ನು ಇತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾದುವನ್ನು ನಾನು ದಕ್ಷತೆಯಿಂದ ಆರಿಸಿದ್ದೇನೆ. ಅದರಲ್ಲಿ ಮೊದಲನೆಯದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟಂತೆ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಇನ್ನೂ ಏಕೆ ಕಾರ್ಯರೂಪಕ್ಕೆ ಬಂದಿಲ್ಲ ಎನ್ನುವುದು. ಈಗಾಗಲೇ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ನಿಯಮಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ ಅದಕ್ಕೆ ಆಕ್ಷೇಪಣೆಗಳೇನಾದರೂ ಇದ್ದರೆ ತಿಳಿಸಬೇಕೆಂದು ಕೇಳಲಾಗಿದೆ. ಆಕ್ಷೇಪಣೆಗಳೇನಾದರೂ ಇದ್ದು, ಅವು ಬಂದನಂತರ ಅವುಗಳನ್ನು ಪರಿಶೀಲಿಸಿ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

(ಶ್ರೀ ಬಿ. ಎಂ. ಪಾಟೀಲ್)

ಅದೇ ರೀತಿಯಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರ್ವಿಸ್ ಮಾಡಬೇಕು, ನಗರಾಡಳಿತ ಸೇವೆಯನ್ನು ನಿರ್ಮಿಸಬೇಕು, ರೂಪಿಸಬೇಕು, ಕಾರ್ಯರೂಪಕ್ಕೆ ತೀವ್ರ ತರಬೇಕು ಎಂದು ಮಾನ್ಯ ಸದಸ್ಯರನೇಕರು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಸಹ ತೀವ್ರವಾಗಿ ನಾಲ್ಕಾರು ತಿಂಗಳಲ್ಲಿ ಕಾರ್ಯರೂಪಕ್ಕೆ ತರಲು ಸರ್ಕಾರ ಆತುರವಾಗಿದೆ ಎಂದು ತಿಳಿಸಬಯಸುತ್ತೇನೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಯಾವ ರೀತಿ ಟ್ರಸ್ಟ್‌ಬೋರ್ಡುಗಳಿವೆಯೋ ಅದೇ ರೀತಿಯಲ್ಲಿ ನಗರಗಳ ಬೆಳವಣಿಗೆಯಾಗುವಾಗ ಸೈಟುಗಳ ಬೆಲೆ ಜಾಸ್ತಿಯಾಗಬಾರದು, ಯೋಗ್ಯವಾದ ದರಕ್ಕೆ ಸಿಕ್ಕಬೇಕು, ಪಟ್ಟಣ ಚೆನ್ನಾಗಿ ಆಗಬೇಕು ಎಂದು ಮತ್ತು ಅಲ್ಲಿಯೂ ಸಹ ಇಂಥ ಸಂಸ್ಥೆಗಳು ಆಗಬೇಕೆಂಬ ಅಭಿಪ್ರಾಯಗಳು ಬರುತ್ತಿವೆ. ಈಗಾಗಲೇ ಮೈಸೂರು ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಬಿಲ್ ಸೆಲೆಕ್ಟ್ ಸಮಿತಿಯ ಮುಂದೆ ಇದೆ. ಅದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಟ್ಟಾಗ ತೀವ್ರವಾಗಿ ಸರ್ಕಾರ ಅದನ್ನು ಕಾರ್ಯರೂಪದಲ್ಲಿ ತರಬೇಕೆಂಬ ಇಚ್ಛೆಯಿಂದ ಇದೆ ಎಂದು ತಿಳಿಸಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಬೆಂಗಳೂರು ಕಾರ್ಪೊರೇಷನ್ ಮತ್ತು ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ಗಳಿವೆ. ಇವೆರಡೂ ಕಾರ್ಪೊರೇಷನ್‌ಗಳು ಬೇರೆ ಬೇರೆ ಕಾಯಿದೆಗಳ ಮೂಲಕ ಕಾರ್ಯ ನಡೆಸಿಕೊಂಡು ಹೋಗುತ್ತಿವೆ. ಇವೆರಡಕ್ಕೂ ಅನ್ವಯಿಸುವಂಥ ಮತ್ತು ಮುಂದೆ ಬರಬಹುದಾದ ಯಾವುದಾದರೂ ಕಾರ್ಪೊರೇಷನ್‌ಗೂ ಅನ್ವಯಿಸುವಂತೆ ಏಕರೂಪವಾದ ಕಾರ್ಪೊರೇಷನ್ ಆಕ್ಟ್ ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ. ದಿ ಆಕ್ಟ್ ಸಭೆಯ ಮುಂದೆ ಬಂದಂಥ ಕಾಲದಲ್ಲಿ ಅದಕ್ಕೂ ಮಾನ್ಯ ಸಭೆ ಒಪ್ಪಿಗೆಯನ್ನು ಕೊಟ್ಟರೆ ಕಾರ್ಯರೂಪಕ್ಕೆ ತರಲು ಸರ್ಕಾರ ಆತುರವಾಗಿದೆ. ತುಟ್ಟಿಭತ್ಯದ ಸಲುವಾಗಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ನಲ್ಲಿ ಸ್ಕಾವೆಂಜರ್ಸ್ ಮತ್ತು ಸ್ವೀಪರ್ಸ್ ಹಾಗೂ ನಾಲ್ಕನೇ ದರ್ಜೆ ನೌಕರರಿಗೆ ಸರ್ಕಾರ ಜಾಸ್ತಿ ಮಾಡಿಕೊಡುವಂತೆಯೇ ತಮಗೂ ತುಟ್ಟಿಭತ್ಯವನ್ನು ಕೊಡಬೇಕೆಂದು ಅಲ್ಲಿ ಚಳುವಳಿ ಪ್ರಾರಂಭ ಮಾಡಿದರು. ತುಟ್ಟಿಭತ್ಯಕ್ಕಾಗಿ ಹೆಚ್ಚಾಗಿ ಖರ್ಚಾಗುವ ಹಣದಲ್ಲಿ ಸರ್ಕಾರ 50 ಭಾಗವನ್ನೂ ಕಾರ್ಪೊರೇಷನ್ ಅರ್ಧ ಭಾಗವನ್ನೂ ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಅದನ್ನು ಸರ್ಕಾರ ಈಗಾಗಲೇ ಕಾರ್ಯರೂಪಕ್ಕೆ ತರುತ್ತಿದೆ.

ಬೆಂಗಳೂರು ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ ಮಾನ್ಯ ಮಿತ್ರರನೇಕರು ಮಾತನಾಡಿದ್ದಾರೆ. ಕಾರ್ಪೊರೇಷನ್ ಚುನಾವಣೆಗಳನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಾರೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಲ ಹೇಳಿದ್ದಾರೆ. ನಾನೂ ಅನೇಕ ಸಲ ಈಗಾಗಲೇ ಹೇಳಿದ್ದೇನೆ. ಅಷ್ಟು ತೀವ್ರವಾಗಿ ಕಾರ್ಪೊರೇಷನ್ ಚುನಾವಣೆ ನಡೆಯಬೇಕು ಎಂದು ಸರ್ಕಾರ ಆತುರವಾಗಿದೆ. ಚುನಾವಣೆಗಳನ್ನು ನಡೆಸಬೇಕಾದರೆ ಕೆಲವು ನಿಯಮಗಳಿವೆ, ಕಾನೂನು ಪ್ರಕಾರ ಕೆಲವು ವಿಧಿಗಳಿವೆ. ಅವೆಲ್ಲ ಆದನಂತರ ಚುನಾವಣೆಗಳನ್ನು ಮಾಡಬೇಕು. ಚುನಾವಣೆಗಳನ್ನು ನಾಳೆಯೇ ಮಾಡುವುದಕ್ಕೆ ಬರುವುದಿಲ್ಲ. ಎಲೆಕ್ಟೋರಲ್ ರೋಲ್ ತಯಾರಾಗಬೇಕು, ಕಾನ್‌ಸ್ಟಿಟ್ಯುಯನ್ಸಿ ಡಿಲಿಮಿಟೇಷನ್ ಆಗಬೇಕು. ಇಷ್ಟೆಲ್ಲ ಕಾರ್ಯಕ್ರಮವನ್ನು ಹಾಕಿಕೊಂಡು ಚುನಾವಣೆಗಳನ್ನು ಮಾಡಬೇಕಾಗಿದೆ. ಅದಷ್ಟು ತೀವ್ರ ಚುನಾವಣೆಯನ್ನು ಮಾಡಬೇಕು ಎಂದು ಸರ್ಕಾರವೂ ಆತುರವಾಗಿದೆ. ಈಗಾಗಲೇ ಸರ್ಕಾರದವರು ಸಂಬಂಧಪಟ್ಟ ಕಾರ್ಪೊರೇಷನ್ ಅಧಿಕಾರಿಗಳಿಗೆ ಎಲೆಕ್ಟೋರಲ್ ರೋಲ್ ತಯಾರುಮಾಡಿ ಮುಂದುವರಿಯಲು ಆದೇಶ ನೀಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಈ ಎಲ್ಲ ಕಾರ್ಯಗಳೂ ಆದಮೇಲೆ ಚುನಾವಣೆಗಳನ್ನು ಯಾವಾಗ ನಡೆಸುತ್ತೀರಿ, ಮೂರು ತಿಂಗಳೋ, ಆರು ತಿಂಗಳೋ, ಒಂದು ವರ್ಷವೋ ಎಂದು ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಾಜ್.—ವರ್ಷವೋ ಶತಕವೋ ಎಂದು ಒಂದು ಅವಧಿ ಹೇಳಿ.

ಶ್ರೀ ಬಿ. ಎಂ. ಪಾಟೀಲ್—ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ಎಷ್ಟು ವರ್ಷ ಹೇಳಿ, ಎಷ್ಟು ಶತಕ ಎಂದು ಹೇಳಿ ಎಂದು ಕೇಳುತ್ತಿದ್ದಾರೆ. ಸ್ವಲ್ಪ ತಾಳ್ಮೆಯಿಂದ ಕೇಳಿದರೆ ವಿವರವಾಗಿ ಹೇಳಲಿಕ್ಕೆ ಸಿದ್ಧನಿದ್ದೇನೆ. ಮಧ್ಯೆ ಮಧ್ಯೆ ಏನಾದರೂ ಕೇಳಿಕೊಂಡು ಹೋದರೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ವಾಟಾಳ್ ನಾಗರಾಜ್ ಅವರಿಗೆ ಮದುವೆಯಾಗುವುದಕ್ಕೆ ಮುಂಚೆ ಕಾರ್ಪೊರೇಷನ್ ಚುನಾವಣೆಗಳನ್ನು ಮಾಡುತ್ತೇವೆ. (ನಗು)

ಶ್ರೀ ವಾಟಾಳ್ ನಾಗರಾಜ್.—ಹಾಗೆ ಆಗದೆ ಇದ್ದರೆ ರಾಜೀನಾಮೆ ಕೊಡುತ್ತೀರಾ? ಹಠಕ್ಕೆ ಬಂದರೆ ಇನ್ನು ಒಂದು ತಿಂಗಳಲ್ಲಿ ಮದುವೆಯಾಗುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮದುವೆಯಾದರೆ, ಮಗುವಾಗಿ ನಾಮಕರಣವಾಗಲಿ ಎಂದು ಹೇಳುತ್ತೇವೆ. (ನಗು)

ಶ್ರೀ ಬಿ. ಎಂ. ಪಾಟೀಲ್.—ಆಕ್ಟ್ರಾಯಿ ಸಲುವಾಗಿ ಮಾನ್ಯ ಸದಸ್ಯರು ಸರ್ಕಾರದ ನಿಲುವು ಏನು ಎಂದು ಕೇಳಿದ್ದಾರೆ. ಸರ್ಕಾರ ತನ್ನ ನಿಲುವನ್ನು ವಿಶದವಾಗಿ ಹೇಳಿದೆ. ಆಕ್ಟ್ರಾಯನ್ನು ಅವಸರದಿಂದ ತೆಗೆದುಹಾಕಬೇಕು ಎನ್ನುವ ನಿರ್ಧಾರಕ್ಕೆ ಸರ್ಕಾರ ಬಂದಿಲ್ಲ. ಅಂತಿಮವಾಗಿ ನಿರ್ಧಾರವನ್ನು ಸರ್ಕಾರ ಇನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಪುರಸಭೆಗಳ ಅಭಿಪ್ರಾಯ ಪಡೆಯಬೇಕೆಂದು ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಅದು ಸೂಕ್ತವೆಂದು ಕಾಣಿಸುತ್ತದೆ. ಸಂಬಂಧಪಟ್ಟ ಪುರಸಭೆಗಳ ಅಭಿಪ್ರಾಯ ಪಡೆಯುತ್ತೇವೆ, ಪುರಸಭೆಗಳು ಬೆಳೆಯಬೇಕಾದರೆ, ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಯಬೇಕಾದರೆ, ಅವು ದಷ್ಟಪುಷ್ಟವಾಗಿ ಬೆಳೆಯಬೇಕಾದರೆ—ಅದಕ್ಕೆ ಹಣ ಬೇಕು. ಪುರಸಭೆಗಳು ಚೆನ್ನಾಗಿ ಬೆಳೆದರೆ ನಮ್ಮ ನಾಡಿನ ಅಭಿವೃದ್ಧಿಯಾಗುತ್ತದೆ. ನಾಡಿನ ಅಭಿವೃದ್ಧಿಯಲ್ಲಿ ಪುರಸಭೆಗಳು ಮಹತ್ವವಾದ ಪಾತ್ರವನ್ನು ವಹಿಸಬೇಕು. ಈ ದೃಷ್ಟಿಯಿಂದ ಆಕ್ಟ್ರಾಯಿ ತೆಗೆಯುವುದರಿಂದ ಆಗುವ ನಷ್ಟವನ್ನು ಪುರಸಭೆಗಳಿಗೆ ಯಾವರೀತಿಯಲ್ಲಿ ತುಂಬಿಕೊಡಬೇಕು ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಯಾವರೀತಿ ಒದಗಿಸಬೇಕು ಎನ್ನುವುದನ್ನು ಪರಿಶೀಲಿಸಿ ಘಟನಾತ್ಮಕವಾಗಿ ತೀರ್ಮಾನ ಮಾಡಬೇಕಾಗುತ್ತದೆ. ಸೇಲ್ಸ್‌ಟ್ಯಾಕ್ಸ್ ಅಥವಾ ಮತ್ತೊಂದನ್ನು ಹೆಚ್ಚು ಮಾಡುವ ವಿಷಯದಲ್ಲಿ ಕೇಂದ್ರ ಸರ್ಕಾರದ ನಿಯಮವನ್ನು ಅನುಸರಿಸಿ ಯಾವರೀತಿಯಲ್ಲಿ ಆಕ್ಟ್ರಾಯಿನಿಂದ ನಷ್ಟವಾಗುವ ಹಣವನ್ನು ತುಂಬಿಕೊಳ್ಳಬೇಕು ಎನ್ನುವುದನ್ನು ಪರಿಶೀಲಿಸಿ ಸರ್ಕಾರ ಒಂದು ನಿರ್ಧಾರಕ್ಕೆ ಬರುತ್ತದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಕೆಲವು ಮಾನ್ಯ ಸದಸ್ಯರುಗಳು ಕಾರ್ಪೊರೇಷನ್ ಸಲುವಾಗಿ ಮಾತನಾಡಿದರು, ಸಿಬ್ಬಂದಿ ಬಹಳವಾಗಿ ಬೆಳೆಯುತ್ತಿದೆ ಮತ್ತು ಅದರಮೇಲೆ ಖರ್ಚು ಹೆಚ್ಚಾಗುತ್ತಿದೆ ಎಂದು ಹೇಳಿದರು. ಆದರೆ ಈಗ ಕಾರ್ಪೊರೇಷನ್ ಕಾರ್ಯವ್ಯಾಪ್ತಿಯೂ ಬೆಳೆಯುತ್ತಿದೆ, ಕೆಲವು ಹಳ್ಳಿಗಳು ಕಾರ್ಪೊರೇಷನ್ ವ್ಯಾಪ್ತಿಗೆ ಬರುತ್ತಿವೆ ಮತ್ತು ಇದಲ್ಲದೆ ಜನರಿಗೆ ಸೌಲಭ್ಯ ಒದಗಿಸಬೇಕಾಗಿದೆ, ಲೈಸೆನ್ಸ್ ಪಡೆಯುವಾಗ ಮತ್ತಿತರ ಕಾರ್ಯಗಳಾಗಬೇಕಾದಾಗ ತಡ ಬಹಳ ಆಗುತ್ತದೆ, ಅದಾಗಬಾರದು ತೀವ್ರ ಆಗಬೇಕು ಎಂದು ಆರು ಜೋನಲ್ ಆಫೀಸು ಬೇರೆಬೇರೆ ಮಾಡಿದರೆ ಜನರಿಗೆ ಅನುಕೂಲವಾಗಬಹುದು ಎಂದು ಅವನ್ನು ಮಾಡಲಾಗಿದೆ. ಮತ್ತು ರೀಆರ್ಗನೈಜೇಷನ್ ಮಾಡಿದೆ. ಕಾರ್ಪೊರೇಷನ್ ಸಿಬ್ಬಂದಿ ಅಷ್ಟೇನೂ ಬೆಳೆದಿಲ್ಲ. ಆಸ್ತಿ ತೆರಿಗೆ ಅಥವ ಆಕ್ಟ್ರಾಯಿಯನ್ನು ಎರಡು ವರ್ಷಗಳಲ್ಲಿ ಹೆಚ್ಚು ಹೆಚ್ಚು ಕೊಡಿಸುತ್ತಿದ್ದೇವೆ. ಅಂಕಿಸಂಖ್ಯೆಗಳನ್ನು ಹೇಳುವುದಾದರೆ 1965–66 ರಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಸುಮಾರು 73 ಲಕ್ಷ ಇತ್ತು, ಅದು 1967–68 ರಲ್ಲಿ 1 ಕೋಟಿ 44 ಲಕ್ಷವಾಗಿದೆ. ಆಕ್ಟ್ರಾಯಿ 1965-66 ರಲ್ಲಿ 1 ಕೋಟಿ 23 ಲಕ್ಷ ಇತ್ತು, 1967–68 ರಲ್ಲಿ ಅದು 1 ಕೋಟಿ 66 ಲಕ್ಷವಾಗಿದೆ, ಈ ವರ್ಷ ಸುಮಾರು 1 ಕೋಟಿ 80 ಲಕ್ಷವಾಗಬಹುದು. ಅದೇ ರೀತಿಯಿಂದ ಪ್ರಾಪರ್ಟಿ ಟ್ಯಾಕ್ಸ್ ಸಹ ಹೆಚ್ಚು ಬರುತ್ತಿದೆ. ಇವನ್ನೆಲ್ಲಾ ಕೂಡಿಸಿದರೆ ಕಾರ್ಪೊರೇಷನ್ನಿನ ಸ್ಥಿತಿ ಸಾಕಷ್ಟು ಉತ್ತಮವಾಗುತ್ತದೆ. ಈ ಪ್ರಮಾಣಕ್ಕನುಗುಣವಾಗಿ ಹೋಲಿಕೆಮಾಡಿದರೆ ಡಿಯರ್‌ನೆಸ್ ಅಲೋಯನ್ಸ್ ಹೆಚ್ಚಿರುವುದರಿಂದ ಖರ್ಚು ಕೂಡ ಬಹಳವಾಗಿ ಹೆಚ್ಚಾಗಿದೆ, ಡಿ. ಎ. ಒಂದೇ 18 ಲಕ್ಷಕ್ಕಿಂತ ಹೆಚ್ಚಾಗಿ ಕೊಡಬೇಕಾಗಿದೆ. 1963ರಿಂದ ಅವನ್ನು ಎಂಟು ಸಲ ಹೆಚ್ಚಿಸಲಾಗಿದೆ. ಆ ದೃಷ್ಟಿಯಿಂದ ಡಿ. ಎ. ರಿವೈಜ್ ಮಾಡಿರುವುದರಿಂದ ಹೆಚ್ಚು ಖರ್ಚು ಸಿಬ್ಬಂದಿಯ ಮೇಲೆ ಆಗುತ್ತಿರುವುದು. ಸಿಬ್ಬಂದಿ ಜಾಸ್ತಿಯಾಗುತ್ತಿಲ್ಲ. ಮಾನ್ಯ ಸದಸ್ಯರು ಸೌಲಭ್ಯ ಏನು ಕೊಡಲಾಗುತ್ತಿದೆ ಎಂದು ಕೇಳಿದರು ಆ ಬಗ್ಗೆ ಅಂಕಿಅಂಶ ಹೇಳುತ್ತೇನೆ. ಎಜುಕೇಷನ್ ಬಾಬಿಗೆ 1964-65ರಲ್ಲಿ 9 ಲಕ್ಷ ಖರ್ಚಾಗಿತ್ತು, ಇಂದು ಅದು 16 ಲಕ್ಷಕ್ಕೆ ಏರಿದೆ. ಪಬ್ಲಿಕ್ ಹೆಲ್ತ್‌ಗೆ 1964-65ರಲ್ಲಿ 54 ಲಕ್ಷ ಖರ್ಚಾಗಿತ್ತು, ಇಂದು 97 ಲಕ್ಷ ಖರ್ಚಾಗುತ್ತಿದೆ. ಪಬ್ಲಿಕ್ ವರ್ಕ್ಸ್‌ಗೆ 1964-65ರಲ್ಲಿ 114 ಲಕ್ಷ ಖರ್ಚಿದ್ದು ಇಂದು 149 ಲಕ್ಷ ಆಗುತ್ತಿದೆ. ಇದನ್ನು ನೋಡಿದಾಗ ಸಾಕಷ್ಟು ಸೌಲಭ್ಯ, ಅನುಕೂಲ ದೊರೆಯುತ್ತಿದೆ. ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂಬುದು ಗೊತ್ತಾಗುತ್ತದೆ. ಹೆಚ್ಚು ಶಾಲಾಕಟ್ಟಡ. ಪಾರ್ಕುಗಳು ಆಗುತ್ತಿವೆ, ಹೀಗೆ ಕಾರ್ಪೊರೇಷನ್ನಿನವರು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಸೌಲಭ್ಯ ಹೆಚ್ಚಿಸುತ್ತಿದ್ದಾರೆ.

(ಶ್ರೀ ಬಿ. ಎಂ. ಪಾಟೀಲ್)

ಇನ್ನು ಅನೇಕರು ಟ್ರಸ್ಟ್ ಬೋರ್ಡ್ ವಿಚಾರ ಹೇಳಿದರು. ಟ್ರಸ್ಟ್ ಬೋರ್ಡಿನವರು ಹರಿಜನರಿಗೆ ಸಾಕಷ್ಟು ಸೌಲಭ್ಯ ಕೊಡುತ್ತಿಲ್ಲ ಎಂದು ಹೇಳಿದರು. ಆದರೆ ಮಾನ್ಯ ಸಭೆಗೆ ಹೇಳುವುದು ಈಗಿನ ಪ್ರಕಾರ ನಾನೇನು ಟ್ರಸ್ಟ್ ಬೋರ್ಡ್ ಸೈಟುಗಳನ್ನು ಹಂಚುತ್ತೇವೆ. ಅದರಲ್ಲಿ ಸುಮಾರು ಶೇಕಡ 5 ರಷ್ಟು ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೊಡುತ್ತಿದ್ದೇವೆ ಮತ್ತು ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಅನೇಕ ಅನುಕೂಲ ಕಲ್ಪಿಸಿದ್ದೇವೆ. ಹಣ ಕೊಡಬೇಕಾದರೆ ಅವರು 6 ವರ್ಷದಲ್ಲಿ ಕಂತುಗಳಲ್ಲಿ ಕೊಡಬಹುದು, ಬಡ್ಡಿ ದರ ಸೇಕಡ 3 ಇದೆ. ಇತರರಿಗೆ ಸೈಟು ಅಲಾಟ್ ಮಾಡಿದರೆ ಮೊದಲು ಅವರು ಸೇಕಡ ಹನ್ನೆರಡೂವರೆಯಷ್ಟು ಬೆಲೆಯಾಗುವುದರಲ್ಲಿ ಕೊಡಬೇಕು. ಷೆಡ್ಯೂಲ್ ಕ್ಯಾಸ್ಟಿನವರು ಸೇಕಡ ಆರೂಕಾಲು ಕೊಟ್ಟರೆ ಸಾಕು. ಮೈಸೂರು ಟ್ರಸ್ಟ್ ಬೋರ್ಡಿನವರು ಬೈಲಾ ಮಾಡಿ ಅವರ ರೂಲ್ಸ್ ಪ್ರಕಾರ ಹರಿಜನರಿಗೆ ಕೊಡಬೇಕಾದ್ದನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಬೆಂಗಳೂರು ಟ್ರಸ್ಟ್ ಬೋರ್ಡಿನವರೂ ಕೂಡ ಬೈಲಾ ಮಾಡಿ ಪಿ. ಎಸ್. ಸಿ. ಕನ್‌ಕರೆನ್ಸಿಗೆ ಕಳಿಸಬೇಕೆಂದು ತಿಳಿಸಿದ್ದೇವೆ.

ಇನ್ನು ಶ್ರೀಮಾನ್ ಅಜೀಜ್‌ಸೇಟ್‌ರವರು ಮತ್ತು ಇತರರು ಈಗಿರುವ ಮುನಿಸಿಪಲ್ ಆಕ್ಟಿನಲ್ಲಿ ಬದಲಾವಣೆಯಾಗಬೇಕು, ಸಾಕಷ್ಟು ಅಧಿಕಾರ ಮುನಿಸಿಪಾಲಿಟಿಗಿಲ್ಲ ಎಂದು ಹೇಳಿದರು. ಇದಕ್ಕೆ ಸಂಬಂಧಪಟ್ಟ ಮುನಿಸಿಪಲ್ ಕೌನ್ಸಿಲರುಗಳ ಸಮ್ಮೇಳನ ಕರೆದು ಅವರ ಅಭಿಪ್ರಾಯ ಪಡೆದು ಪರಿಶೀಲಿಸುವುದು ಸೂಕ್ತ, ಹಾಗೆ ಮಾಡಿ ಈ ಸಭೆ ಒಪ್ಪಿಗೆಕೊಟ್ಟರೆ ನಂತರ ಅಧಿಕಾರ ಹೆಚ್ಚಿಸುವುದನ್ನು ವಿಚಾರ ಮಾಡುತ್ತೇವೆ ಎಂದು ಹೇಳುತ್ತೇನೆ.

ಇನ್ನು ಪಟ್ಟಣಗಳು ಚೆನ್ನಾಗಿ ಬೆಳೆಯಬೇಕು, ಅವುಗಳ ಅಭಿವೃದ್ಧಿಯಾಗಬೇಕು, ಅವು ಸಿಕ್ಕಿದ ಹಾಗೆ ಬೆಳೆಯಬಾರದು ಎಂದು ಈಗಾಗಲೇ ಟೌನ್ ಪ್ಲಾನಿಂಗ್ ಇಲಾಖೆಯನ್ನು ರಚಿಸಲಾಗಿದೆ, ಅದು ಒಳ್ಳೆಯ ರೀತಿಯಿಂದ ಪ್ಲಾನ್ ತಯಾರುಮಾಡುತ್ತಿವೆ. 1959ರಿಂದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಡೈರೆಕ್ಟರಿದ್ದರು, ಆರ್ಕಿಟೆಕ್ಟ್ ಇದ್ದರು. ಈಗ ಒಬ್ಬರೇ ಡೈರೆಕ್ಟರಿರುವುದರಿಂದ ಪ್ಲಾನಿಂಗ್ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಬೇರೆ ಬೇರೆ ಪಟ್ಟಣಗಳ ಸಲುವಾಗಿ ಮ್ಯಾಪ್ಸ್, ಔಟ್‌ಲೈನ್ ಡೆವಲಪ್‌ಮೆಂಟ್ ಪ್ಲಾನ್ಸ್, ಕಾಂಪ್ರಹೆನ್‌ಸಿವ್ ಡೆವಲಪ್‌ಮೆಂಟ್ ಪ್ಲಾನ್ಸ್ ಮಾಡಿದೆ. ಹೀಗೆ ಸುಮಾರು 15ರಿಂದ 20 ಪಟ್ಟಣಗಳಲ್ಲಿ ಯೋಜನೆ ಮಾಡಿದೆ. ಹೆಸರುಗಳನ್ನು ಹೇಳುವುದಕ್ಕೆ ಈಗ ಅವಕಾಶವಿಲ್ಲ. ಟೌನ್ ಪ್ಲಾನಿಂಗ್ ಇಲಾಖೆಯ ಕೆಲಸ ವಿಸ್ತಾರವಾಗಬೇಕು, ನಗರಗಳ ಅಭಿವೃದ್ಧಿ ಒಳ್ಳೆಯ ರೀತಿಯಿಂದ ಆಗಬೇಕು, ಸೈಂಟಿಫಿಕ್ಕಾಗಿ ಆಗಬೇಕು, ಹೀಗೆ ಮುಂದಿನ ವರ್ಷ ಮಾಡಲು ಕಾರ್ಯ ಕೈಗೊಳ್ಳಬೇಕು ಎಂಬ ಉದ್ದೇಶವಿದೆ.

ಪುರಸಭೆಗಳ ಆಡಳಿತ ಚೆನ್ನಾಗಿಲ್ಲ, ಲಂಚಕೋರತನ ಬಹಳವಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಲಂಚಕೋರತನ ಬೆಳೆಯುತ್ತಿದೆ ಎಂಬ ಮನೋಭಾವನೆಯಿಂದ ಉತ್ಪ್ರೇಕ್ಷೆ ಮಾಡುವುದು ಸರಿಯಲ್ಲ, ಇರುವುದನ್ನು ತಡೆಗಟ್ಟಲು ಕ್ರಮ ಕೈಕೊಳ್ಳಲಾಗಿದೆ. ಲಂಚಕೋರತನ ನಿರ್ಮೂಲವಾಗಬೇಕಾದರೆ ಇಂಟ್ರಾಸ್ಪೆಕ್‌ಷನ್ ಮಾಡಿಕೊಳ್ಳಬೇಕು, ಆತ್ಮಾನ್ವೇಷಣೆ ಮಾಡಿಕೊಳ್ಳಬೇಕು ಹಾಗಿಲ್ಲದೆ ಸುಮ್ಮನೆ ಆರೋಪ ಮಾಡುವುದು ಅಪಾಯಕಾರಿ ಎಂಬ ಭಾವನೆಯಿದೆ. ಒಂದು ದೃಷ್ಟಿಯಿಂದ ವೈಯಕ್ತಿಕವಾಗಿ ಇಂದು ಆತ್ಮಾನ್ವೇಷಣೆ ಮಾಡಿಕೊಂಡು ಯಾವ ರೀತಿ ತಡೆಹಾಕಬೇಕು ಎಂದು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದಲ್ಲಿ ಆ ರೀತಿ ಪುರಸಭೆಗಳ ಆಡಳಿತ ಬಿಗಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬಹುದು. ಪ್ರಜಾಸತ್ತೆಯಲ್ಲಿ ಟೀಕೆ ಮಾಡುವಾಗ ರಚನಾತ್ಮಕವಾಗಿ ಮಾಡಬೇಕು. ಹಾಗೆ ಮಾನ್ಯ ಸದಸ್ಯರು ಮಾಡಿ ಅಭಿಪ್ರಾಯ ಕೊಟ್ಟರೆ ಅದಕ್ಕೆ ಒಳ್ಳೆಯ ಗೌರವ ಕೊಡಬಹುದು. ಹಾಗಿಲ್ಲದೆ ಯಾವುದೋ ರಾಜಕೀಯ ದೃಷ್ಟಿಯಿಂದ ಅಭಿಪ್ರಾಯ ವ್ಯಕ್ತಮಾಡುವುದು ಸೂಕ್ತವಲ್ಲ. ಒಳ್ಳೆಯ ರೀತಿಯಲ್ಲಿ ರಚನಾತ್ಮಕವಾಗಿ ಅಭಿಪ್ರಾಯ ಕೊಟ್ಟರೆ ಪ್ರಜಾಸತ್ತೆಯು ಪುಷ್ಟವಾಗಿ ಬೆಳೆಯಲು ಅದು ಸಹಕಾರಿಯಾಗುವುದು. ಆಡಳಿತ ನಡೆಸುವುದಕ್ಕೆ, ವ್ಯವಹರಿಸುವುದಕ್ಕೆ ವಿರೋಧ ಪಕ್ಷ ಸಹ ಸಾಕಾದಷ್ಟು ಸರಿಯಾಗಿ ಪಾತ್ರ ವಹಿಸಿದರೆ ಅನುಕೂಲವಾಗುವುದು. ಹಾಗೆ ಮಾಡಿ ಆಡಳಿತ ಸರಿಯಾಗಿ ನಡೆಯಲು ಅವರು ಸಹಕಾರ ಮಾಡಬೇಕು, ಇಂದು ಸಮಸ್ಯೆಗಳಿರುವುದನ್ನು ಪರಿಹಾರ ಮಾಡಲು ವ್ಯಕ್ತಿ ದೂಷಣೆ, ಪಕ್ಷಗಳ ದೂಷಣೆ ಉಚಿತವಲ್ಲ, ಅದಕ್ಕೆ ಎಡೆ ಕೊಡಬಾರದು, ಯಾವುದೇ ಸಮಸ್ಯೆಯಿದ್ದರೂ ಮಾತನಾಡುವಾಗ ಸ್ವಲ್ಪ ಸಂಯಮದಿಂದ ಕೂಡಿ ರಚನಾತ್ಮಕವಾದ ಸಲಹೆಗಳನ್ನು ನೀಡಬೇಕು ಎಂದು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಸತ್ಯಕ್ಕೆ ದೂರವಾದ ಆಪಾದನೆ ಮಾಡುವುದನ್ನು, ವ್ಯಕ್ತಿ ದೂಷಣೆ ಮಾಡುವುದನ್ನು ನಿಲ್ಲಿಸಬೇಕು ಹಾಗೆ ಮಾಡಿದರೆ ಹಿತಸಾಧನೆಯಾಗುವುದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಪರಸ್ಪರ

ಅರಿತುಕೊಂಡು ಮುಂದುವರಿಯುವುದು ಉತ್ತಮ. ಮಾನ್ಯ ಸದಸ್ಯರು ಕೊಟ್ಟಿರುವ ಒಳ್ಳೆಯ ಸಲಹೆಗಳನ್ನು ಗಮನಿಸಿ ಪುರಸಭೆಗಳನ್ನು ಬೆಳೆಸುವುದಕ್ಕೆ ಮತ್ತು ಇರುವ ನ್ಯೂನತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಒಳ್ಳೆಯ ಸಲಹೆಗಳೇನಿವೆ ಅವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಇಷ್ಟು ಹೇಳಿ ಮಾನ್ಯ ಸಭೆಯ ಮುಂದಿರುವ ಬೇಡಿಕೆಗಳಿಗೆ ತಮ್ಮೆಲ್ಲರ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—Now, I will put all the demands to the vote of the House.

The question is:

> "That the respective sums not exceeding the amounts mentioned be granted to the Government to defray the charges which will come in course of payment during the financial year for the period ending with 31st day of March 1970 in respect of demand Nos. 4, 15, 39 and 53".

The Motion was adopted.

(As ordered by the Chair the motion for Demands for grants adopted by the house are repoduced below.)

DEMAND No. 4.—MOTOR VEHICLES ACTS—ADMINISTRATION.

11. Taxes on Vehicles

"That a sum not exceeding Rs. 22,70,000 be granted to the Government to defray the charges which will come in course of payment during the financial year for the period ending 31st day of March 1970, in respect of 'Taxes on Vehicles'."

DEMAND No. 15.—MISCELLANEOUS DEPARTMENTS.

26. Miscellaneous Departments

"That a sum not exceeding Rs. 2,38,75,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous Departments.'"

DEMAND No. 39.—MISCELLANEOUS.

71. Miscellaneous

"That a sum not exceeding Rs. 6,68,90,000 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous'."

(MR. DEPUTY SPEAKER)

DEMAND No. 53.— CAPITAL OUTLAY ON SCHEMES OF GOVERNMENT TRADING.

124. Capital Outlay on Schemes of Government Trading.

"That a sum not exceeding Rs. 30,31,04,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Schemes of Government Trading' ".

Mr. DEPUTY SPEAKER.—The House will now rise and meet again tomorrow at 1 P.M.

The House adjourned at Twenty-two Minutes past Nine of the Clock to meet again at One of the Clock on Wednesday the 26th March 1969.